

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-೨೦೧೬

## ಕರ್ನಾಟಕದಲ್ಲಿ ಹಕ್ಕು ಆಧಾರಿತ ಮಕ್ಕಳ ರಕ್ಷಣೆ



ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ
ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016

# ಕರ್ನಾಟಕದಲ್ಲಿ ಹಕ್ಕು ಆಧಾರಿತ ಮಕ್ಕಳ ರಕ್ಷಣೆ

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

ಸಿದ್ದರಾಮಯ್ಯ
ಮುಖ್ಯ ಮಂತ್ರಿ

ಸಿಎಂ/ಪಿಎಸ್/90/2016

ವಿಧಾನ ಸೌಧ
ಬೆಂಗಳೂರು – 560 001

ದಿನಾಂಕ 20-05-2016



**ಸಂದೇಶ**

ಸಾಮಾಜಿಕ ನ್ಯಾಯ ಹಾಗೂ ಸಮಾಜದ ಪೂರಕ ಬೆಳವಣಿಗೆಯನ್ನು ಒಳಗೊಂಡ ನಮ್ಮ ಸರ್ಕಾರ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸುತ್ತಿದೆ. ಅಲ್ಲದೆ, ಸದೃಢ ಸಮಾಜವನ್ನು ರೂಪಿಸುವಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ಸಮಾಜದಲ್ಲಿ ಮಕ್ಕಳ ಹಕ್ಕುಗಳನ್ನು ಗೌರವಿಸಲ್ಪಡುವ ಪರಿಸರ ನಿರ್ಮಾಣ ಮಾಡುವುದರೊಂದಿಗೆ ಮಕ್ಕಳಿಗೆ ಅಗತ್ಯವಾದ ಸುರಕ್ಷಿತ ವಾತಾವರಣ ಸೃಷ್ಟಿಸಿ, ರಕ್ಷಣೆಯನ್ನು ನೀಡಬೇಕಾದ ಗುರುತರ ಜವಾಬ್ದಾರಿ ನಮ್ಮ ಸರ್ಕಾರದ ಪ್ರಥಮಾದ್ಯತೆಯಾಗಿದೆ.

ಸರ್ಕಾರವು ಪ್ರತಿ ಮಗುವಿನ ಹಕ್ಕುಗಳ ರಕ್ಷಣೆ ಮಾಡುವುದು ಹಾಗೂ ಮಕ್ಕಳ ದುರುಪಯೋಗ, ನಿರ್ಲಕ್ಷತೆ ಹಾಗೂ ಶೋಷಣೆಯ ವಿರುದ್ಧ ಕಠಿಣ ಕ್ರಮದ ಜೊತೆಗೆ ರಕ್ಷಣೆ ಮತ್ತು ಸುರಕ್ಷತೆಯ ಅವಶ್ಯಕತೆಯನ್ನು ಮನಗಂಡು, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಪ್ರಥಮ ಹೆಜ್ಜೆಯೇ, **ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016** ಹಾಗೂ **ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಹಾಗೂ ಕಾರ್ಯವಿಧಾನಗಳು.**

ಸರ್ಕಾರದ ಈ ನೀತಿಯು **ದೇಶದಲ್ಲೇ ಪ್ರಪ್ರಥಮವಾಗಿದೆ.** ಲಿಂಗ, ಜಾತಿ, ಪ್ರದೇಶ, ಧರ್ಮ, ಭಾಷೆ, ಅಂಗವೈಕಲ್ಯತೆ ಅಥವಾ ರಾಷ್ಟ್ರೀಯತೆ ಇದ್ಯಾವುದರ ಬೇದ–ಭಾವವಿಲ್ಲದೇ ರಾಜ್ಯದಲ್ಲಿರುವ ಪ್ರತಿ ಮಗುವಿನ ಸರ್ವಾಂಗೀಣ ಸುರಕ್ಷಿತ ಬೆಳವಣಿಗೆಯ ಗುರಿಯನ್ನು ಹೊಂದಿರುತ್ತದೆ.

**ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016** ಹಾಗೂ ಇದಕ್ಕೆ ಪೂರಕವಾಗಿ ಶೈಕ್ಷಣಿಕ ಸಂಸ್ಥೆಗಳಿಗೆ ರಚಿಸಿರುವ ಕಾರ್ಯ ನಿರ್ವಾಹಕ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳ ವ್ಯಾಪ್ತಿಯಲ್ಲಿ ಮಕ್ಕಳು ಭಯರಹಿತ ವಾತಾವರಣದಲ್ಲಿ ಕಲಿಯಲು, ಘನತೆ ಹಾಗೂ ಗೌರವದಿಂದ ಬದುಕಲು ಸಹಕಾರಿಯಾಗಲಿದೆ.

ಈ ನೀತಿಯು ಮಕ್ಕಳ ಸರ್ವಾಂಗೀಣ ಬೆಳವಣಿಗೆಗಾಗಿ ಎಲ್ಲಾ ಇಲಾಖೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಸ್ಪಂದಿಸಲು ಸಾಧ್ಯವಾಗಲಿದೆ ಎಂದು ಆಶಿಸುತ್ತೇನೆ.

ಈ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾರ್ವಜನಿಕರು ಸರ್ಕಾರದೊಂದಿಗೆ ಸಹಕರಿಸಲಿ ಎಂಬುದೇ ನನ್ನ ಹಾರೈಕೆ.

(ಸಿದ್ದರಾಮಯ್ಯ)

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ : 22255282
22033469
ಕೊಠಡಿ ಸಂಖ್ಯೆ : 252, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು



## ಸಂದೇಶ

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016ರನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರಕಟಿಸುತ್ತಿರುವುದು ಸಂತೋಷದ ಸಂಗತಿ. ಈ ನೀತಿಯಡಿ ರಾಜ್ಯದ ಶೈಕ್ಷಣಿಕ ಸಂಸ್ಥೆಗಳು ಮಕ್ಕಳ ರಕ್ಷಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳು ಹಾಗೂ ಅನುಸರಿಸಬೇಕಾದ ಸಂಗತಿಗಳನ್ನು ಕುರಿತಂತೆ ಒಂದು ವಿಸ್ತೃತ ಮಾರ್ಗಸೂಚಿಯೊಂದನ್ನು ರೂಪಿಸಲಾಗಿದೆ. ಈ ಮಾರ್ಗಸೂಚಿಗಳನ್ನು ಇಂದು ಪ್ರಕಟಿಸಲಾಗುತ್ತಿದೆ.

ಇದನ್ನು ರಾಜ್ಯದ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳಬೇಕೆಂದು ಆದೇಶ ಹೊರಡಿಸಲಾಗುತ್ತಿದೆ. ಈ ಮಾರ್ಗಸೂಚಿಯ ಮೂಲಕ ರಾಜ್ಯದ ಮಕ್ಕಳು ಸುರಕ್ಷಿತ ವಾತಾವರಣದಲ್ಲಿ ಕಲಿಯುವಂತಾಗಬೇಕೆಂಬುದು ನಮ್ಮ ಆಶಯವಾಗಿದೆ. ಈ ಮಾರ್ಗಸೂಚಿಯನ್ನು ರೂಪಿಸುವ ಮೊದಲು ಸಮಾಜದ ವಿವಿಧ ವರ್ಗಗಳೊಂದಿಗೆ ಸಂವಾದ ನಡೆಸಿ ಅವರ ಅಭಿಪ್ರಾಯಗಳ ಸಲಹೆ ಸೂಚನೆಗಳನ್ನು ಪಡೆದು ಒಟ್ಟಾರೆ ಸಮಗ್ರವಾದ ಕಾರ್ಯಸೂಚಿಯನ್ನು ಅಳವಡಿಸಲಾಗಿದೆ. ಇದನ್ನು ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಗಂಭಿರವಾಗಿ ಪರಿಗಣಿಸಿ ಮಾರ್ಗಸೂಚಿಯನ್ನು ಅಳವಡಿಸಕೊಳ್ಳುತ್ತವೆ ಎಂದು ಭಾವಿಸಿದ್ದೇನೆ.

**ಮಕ್ಕಳ ಸುರಕ್ಷತೆಯೇ ನಮ್ಮ ಆದ್ಯತೆ.** ಆ ನಿಟ್ಟಿನಲ್ಲಿ ಈ ನೀತಿಯು ಅನುಕೂಲವಾಗಲಿದೆ ಎಂದು ಆಶಿಸುತ್ತೇನೆ.

**(ಉಮಾಶ್ರೀ)**

**ಕಿಮ್ಮನೆ ರತ್ನಾಕರ,** ಬಿ.ಎಸ್‌ಸಿ., ಎಲ್.ಎಲ್.ಬಿ.
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು
ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂ. : 22251639
22033009
ಕೊಠಡಿ ಸಂಖ್ಯೆ: 244, 245ಎ
2ನೇ ಮಹಡಿ, ವಿಧಾನ ಸೌಧ
ಬೆಂಗಳೂರು – 560 001

ಸಂಖ್ಯೆ: ಪ್ರಾ.& ಪ್ರೌ.ಸ./2265/2016

ದಿನಾಂಕ: 24-05-2016



## ಸಂದೇಶ


ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯ ಕುರಿತಂತೆ ಪುಸ್ತಕವನ್ನು ರಾಜಾದಾದ್ಯಂತ ಹಂಚಿಕೆ ಮಾಡಲು ಉದ್ದೇಶಿಸಿರುವುದು ಸಂತೋಷದ ವಿಷಯವಾಗಿರುತ್ತದೆ. ಶಾಲೆಗಳಲ್ಲಿ ಮಕ್ಕಳ ಶೈಕ್ಷಣಿಕ ಹಾಗೂ ಭೌದ್ಧಿಕ ಬೆಳವಣಿಗೆಗಾಗಿ ಸುರಕ್ಷಿತವಾದ ಪರಿಸರ ಇರಬೇಕಾಗಿರುತ್ತದೆ. ರಾಜ್ಯದ ಎಲ್ಲಾ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಅಳವಡಿಸಿಕೊಳ್ಳುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯಗತ್ಯವಾಗಿರುತ್ತದೆ. ಈ ದಿಸೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿ – 2016ರ ನೀತಿಯನ್ನು ರೂಪಿಸಿ ಪುಸ್ತಕ ರೂಪದಲ್ಲಿ ಮುದ್ರಿಸಲಾಗುತ್ತಿದ್ದು, ಈ ಪುಸ್ತಕವು ಶಾಲೆಗಳಲ್ಲಿ ಮಕ್ಕಳ ರಕ್ಷಣೆಗೆ ಉಪಯುಕ್ತವಾಗಲಿ ಎಂದು ಶುಭ ಕೋರುತ್ತೇನೆ.

(ಕಿಮ್ಮನೆ ರತ್ನಾಕರ)

**ARVIND JADHAV**
CHIEF SECRETARY
ಮುಖ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
GOVERNMENT OF KARNATAKA

ವಿಧಾನ ಸೌಧ ಬೆಂಗಳೂರು – 560 001
# 320, 3rd Floor, Vidhana Soudha
Bengaluru - 560 001
*e-mail : cs@karnataka.gov.in*
Phone : Off: +91-80-22252442 / 22253716
Fax : +91-80-22258913



## ಸಂದೇಶ

ಆರೋಗ್ಯವಂತ ಮಕ್ಕಳು ರಾಜ್ಯದ ಸಂಪತ್ತು. ಮಕ್ಕಳ ಪಾಲನೆ ಮತ್ತು ಯೋಗಕ್ಷೇಮ ರಾಜ್ಯದ ಜವಾಬ್ದಾರಿಯಾಗಿದೆ. ಆದುದರಿಂದ, ಭಾರತ ಸಂವಿಧಾನವು ಮಕ್ಕಳ ದುರ್ಬಲ ಪರಿಸ್ಥಿತಿಯನ್ನು ಹಾಗೂ ಅವರ ರಕ್ಷಣೆಯ ಹಕ್ಕನ್ನು ಗುರುತಿಸಿರುವುದರಿಂದ, ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸುವ ಸಂಬಂಧವಾಗಿ ರಾಜ್ಯವು ಅನೇಕ ಕಾಯ್ದೆಗಳನ್ನು ಜಾರಿಗೆ ತಂದಿದೆ. ಮಕ್ಕಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ಅವರ ಪರಿಸ್ಥಿತಿಯನ್ನು ಉತ್ತಮಪಡಿಸಲು ಹಲವಾರು ನೀತಿಗಳನ್ನು ರಚಿಸಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮಕ್ಕಳಿಗೆ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ವಿವಿಧ ದೃಷ್ಟಿಕೋನಗಳಿಂದ ಪರಿಶೀಲನೆ ನಡೆಸಿ ಹೊರತಂದಿರುವ ನೀತಿಯೇ "**ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ – 2016**" ಹಾಗೂ **ಶೈಕ್ಷಣಿಕ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಮಾರ್ಗಸೂಚಿ ಹಾಗೂ ಕಾರ್ಯವಿಧಾನಗಳು**. ಇದು ದೇಶದಲ್ಲಿಯೇ ಪ್ರಥಮವಾಗಿದ್ದು, ಈ ನೀತಿಯಲ್ಲಿ ಒಳಗೊಂಡಿರುವ ಎಲ್ಲಾ ಅಂಶಗಳನ್ನು ಅನುಷ್ಠಾನಗೊಳಿಸಲು ಬದ್ಧರಾಗಿರುವಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು, ಮಕ್ಕಳೊಂದಿಗೆ ಒಡನಾಟ ಹೊಂದಿರುವ ಎಲ್ಲಾ ಭಾಗಿದಾರ ಇಲಾಖೆಗಳನ್ನು ಹಾಗೂ ಸಂಘ ಸಂಸ್ಥೆಗಳನ್ನು ಕೋರುತ್ತೇನೆ.

ಅರವಿಂದ ಜಾಧವ್ 23.5.16.
[ಅರವಿಂದ ಜಾಧವ್]
ಮುಖ್ಯ ಕಾರ್ಯದರ್ಶಿ

**ಅಜಯ್ ಸೇಠ್,** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ದೂರವಾಣಿ : ಕಛೇರಿ : 080–22257334
ಫ್ಯಾಕ್ಸ್ : 080–22385545
6ನೇ ಮಹಡಿ, ಬಹುಮಹಡಿಗಳ ಕಟ್ಟಡ
ಗೇಟ್ ನಂ. 2, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು – 560 001
E-mail: prsprim-edu@karnataka.gov.in

ದಿನಾಂಕ: 17ನೇ ಮೇ 2016



## ಸಂದೇಶ

ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯ ಪುಸ್ತಕವನ್ನು ಹೊರತರುವುದು ಶ್ಲಾಘನೀಯ ವಿಷಯವಾಗಿದೆ. ಮಕ್ಕಳ ರಕ್ಷಣೆಯು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಮಕ್ಕಳ ರಕ್ಷಣೆಯನ್ನು ಅರ್ಥೈಸುವುದು, ಕಾನೂನನ್ನು ಅನ್ವಯಿಸುವಿಕೆ, ಆಡಳಿತಾತ್ಮಕ ತತ್ವಗಳು ಹಾಗೂ ನಿಗಧಿಪಡಿಸಿರುವ ಮಾನದಂಡಗಳು ಹಾಗೂ ಈ ನೀತಿಯನ್ನು ಅನುಷ್ಠಾನಗೊಳಿಸಿರುವುದರಿಂದ ಎದುರಿಸಬಹುದಾದ ಪ್ರಮುಖ ಸವಾಲುಗಳ ಬಗ್ಗೆ ವಿವರವಾಗಿ ಉಲ್ಲೇಖಿಸಿರುವುದರಿಂದ ಮಕ್ಕಳ ರಕ್ಷಣೆಗೆ ಪೂರಕವಾಗುತ್ತದೆಂದು ಆಶಯವಿದೆ. ಈ ನಿಟ್ಟಿನಲ್ಲಿ ಮಕ್ಕಳ ರಕ್ಷಣಾ ನೀತಿಯ ಪುಸ್ತಕವು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಲೆಂದು ಆಶಯಿಸುತ್ತೇನೆ.

(ಅಜಯ್ ಸೇಠ್)

**ಡಾ. ರಜನೀಶ್ ಗೋಯೆಲ್,** ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

ಫ್ಯಾಕ್ಸ್ : 22251011
ದೂರವಾಣಿ : 22353991
ಇ–ಮೇಲ್ : prlsecy-wc@karnataka.gov.in
dr.rajneesh1964@gmail.com
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, 1ನೇ ಮಹಡಿ
ಗೇಟ್–3, ಬೆಂಗಳೂರು – 560 001



## ಮುನ್ನುಡಿ

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016

ಮಕ್ಕಳು ನಮ್ಮ ಸಮಾಜದ ಅಮೂಲ್ಯ ಮತ್ತು ಮಹತ್ವದ ಸ್ವತ್ತಾಗಿದ್ದು, ರಾಜ್ಯ ಸರ್ಕಾರವು ಅವರ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಸಕಾರಾತ್ಮಕ ಹಾಗೂ ಪೂರಕ ವಾತಾವರಣವನ್ನು ಕಲ್ಪಿಸಲು ಬದ್ಧವಾಗಿದೆ. ರಾಜ್ಯದಲ್ಲಿರುವ ಪ್ರತಿಯೊಂದು ಮಗುವನ್ನು ದೌರ್ಜನ್ಯ, ಹಿಂಸೆ ಮತ್ತು ಶೋಷಣೆಗಳಿಂದ ರಕ್ಷಿಸುವ ಹೊಣೆಯನ್ನು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹೊಂದಿದೆ.

ಮಕ್ಕಳ ರಕ್ಷಣೆಗಾಗಿ ರಾಜ್ಯ ಸರ್ಕಾರದ ನಿರಂತರ ಪ್ರಯತ್ನಗಳ ಹೊರತಾಗಿಯೂ, ಅನೇಕ ಮಕ್ಕಳು ಶೋಷಣೆ ಮತ್ತು ಹಾನಿಗೊಳಗಾಗಿ ಬಲಿಪಶುಗಳಾಗಿರುವುದು ಇಂದಿನ ನೈಜ ಸ್ಥಿತಿಯಾಗಿದೆ. ಬಹುಪಾಲು ಮಕ್ಕಳು ತಮ್ಮ ಹೆಚ್ಚಿನ ಸಮಯವನ್ನು ಶಾಲೆಗಳಲ್ಲಿಯೇ ಕಳೆಯುವುದರಿಂದ ಅವರಿಗೆ ಸುರಕ್ಷಿತ ಮತ್ತು ಪೂರಕ ವಾತಾವರಣವನ್ನು ಕಲ್ಪಿಸುವುದರ ಅಗತ್ಯತೆಯನ್ನು ಮನಗಂಡು, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ನೀತಿ–2016 ರೂಪಿಸಿದ್ದು ಸದರಿ ನೀತಿಯಲ್ಲಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯ ವಿಧಾನಗಳನ್ನು ಒಳಗೊಂಡಿದೆ. ಸದರಿ ನೀತಿಯು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಮಂಡಳಿ/ಪ್ರಾಧಿಕಾರಗಳ ಸದಸ್ಯತ್ವವನ್ನು ಹೊಂದಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಅನ್ವಯಿಸುತ್ತದೆ.

ಮಕ್ಕಳ ರಕ್ಷಣಾ ನೀತಿ ಮತ್ತು ಕಾರ್ಯನಿರ್ವಹಣಾ ಮಾರ್ಗಸೂಚಿಗಳನ್ನು ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆಗಳ ಸಹಯೋಗದೊಂದಿಗೆ ಮತ್ತು ಯೂನಿಸೆಫ್‌ನ ತಾಂತ್ರಿಕ ಬೆಂಬಲ ಹಾಗೂ ಸಹಕಾರದೊಂದಿಗೆ ಹಾಗೂ ಜಿಲ್ಲೆ ಮತ್ತು ರಾಜ್ಯಮಟ್ಟದ ಸಮಾವೇಶಗಳ ಮೂಲಕ, ರಾಜ್ಯದ ಎಲ್ಲಾ ಭಾಗೀದಾರರುಗಳಿಂದ ಮಾಹಿತಿಯನ್ನು ಪಡೆದು ನೀತಿಯನ್ನು ರೂಪಿಸಲಾಗಿದೆ.

ಮಕ್ಕಳ ರಕ್ಷಣಾ ನೀತಿಯ ರಚನೆಯ ಪ್ರಕ್ರಿಯೆಯಲ್ಲಿ ವಿಶೇಷ ಅಗತ್ಯಗಳನ್ನುಳ್ಳ ಮಕ್ಕಳೂ ಸೇರಿದಂತೆ ವಿವಿಧ ಸಾಮಾಜಿಕ–ಆರ್ಥಿಕ ಹಿನ್ನೆಲೆಯುಳ್ಳ ಮಕ್ಕಳು ಮತ್ತು ವಿವಿಧ ಶಾಲೆಗಳ ಮಕ್ಕಳನ್ನು ತೊಡಗಿಸಿಕೊಂಡಿರುವುದು ಈ ನೀತಿಯ ಪ್ರಮುಖ ಅಂಶವಾಗಿದೆ. ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಯ ಕುರಿತು ಮಕ್ಕಳು ತಮ್ಮ ಕಾಳಜಿ, ಸಲಹೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಮತ್ತು ವ್ಯಕ್ತಪಡಿಸಲು 'ನಮ್ಮ ಸುರಕ್ಷತೆ ನಮ್ಮ ಧನಿ' ಎಂಬ ವೇದಿಕೆಯನ್ನು ಕಲ್ಪಿಸಲಾಗಿತ್ತು.

ಈ ನೀತಿಯು 'ಹಕ್ಕು' ಆಧಾರಿತ ವಿಧಾನ, ಕಲಿಕೆಯು ಭಯ ಮುಕ್ತ, ದೌರ್ಜನ್ಯ ಮುಕ್ತ ಹಾಗೂ ಪೂರಕ ವಾತಾವರಣದಿಂದ ಕೂಡಿರಬೇಕೆಂಬ ತತ್ತ್ವವನ್ನು ಆಧರಿಸಿದೆ. ಈ ವಿಧಾನವು ದೌರ್ಜನ್ಯ/ಹಿಂಸೆಗಳನ್ನು ತಡೆಯುವ ವ್ಯವಸ್ಥೆಯನ್ನು ಬಲಗೊಳಿಸುವ ಹಾಗೂ ಘಟನೆಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸುವ ಹಾಗೂ ಮಕ್ಕಳು ಎದುರಿಸುವ ಅಪಾಯಗಳನ್ನು ಕಡಿಮೆಮಾಡುವುದರ ಕಡೆ ಹೆಚ್ಚು ಕೇಂದ್ರೀಕೃತವಾಗಿದೆ. ಇದನ್ನು ರಾಜ್ಯದ ವ್ಯವಸ್ಥೆಗಳ ನಡುವೆ ಸಹಕಾರ ಮತ್ತು ಸಂಯೋಜನೆ, ಸಮುದಾಯಾಧಾರಿತ ರಕ್ಷಣಾ ಕಾರ್ಯತಂತ್ರಗಳನ್ನು ರೂಪಿಸುವುದು ಹಾಗೂ ಪ್ರಮುಖವಾಗಿ ಮಕ್ಕಳನ್ನು ಬದಲಾವಣೆಯ ಪಾಲುದಾರರನ್ನಾಗಿಸಿಕೊಂಡು ಸಾಧಿಸಲು ಕ್ರಮವಹಿಸಲಾಗಿದೆ.

ನೀತಿಯ ಪ್ರಮುಖ ಅಂಶವು ಕಾರ್ಯನಿರ್ವಹಣಾ ಮಾರ್ಗಸೂಚಿಗಳನ್ನು ಎಲ್ಲಾ ಶಾಲೆಗಳಲ್ಲಿ, ಸರ್ಕಾರಿ ಕಾರ್ಯವ್ಯವಸ್ಥೆ, ಎಲ್ಲಾ ಸಂಬಂಧಿಸಿದ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳು, ಶಾಸನಬದ್ಧ ಸಂಸ್ಥೆಗಳು ಹಾಗೂ ರಾಜ್ಯದಲ್ಲಿನ ಮಕ್ಕಳ ರಕ್ಷಣಾ ಕಾರ್ಯತಂತ್ರಗಳು ಅನುಷ್ಠಾನಗೊಳಿಸುವುದನ್ನು ಒಳಗೊಂಡಿದೆ.

ನೀತಿಯು ಮಕ್ಕಳ ರಕ್ಷಣೆಯ ಭಾಗೀದಾರರಾದ ಪ್ರಮುಖ ಕಾರ್ಯನಿರ್ವಾಹಕರು, ಪೋಷಕರು, ಶಿಕ್ಷಕರು, ಮಕ್ಕಳು, ಪೊಲೀಸ್ ಆರೋಗ್ಯ ಮತ್ತು ಕಾನೂನು ವೃತ್ತಿಪರರಿಗೆ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳಾದ ಹಿಂಸೆ, ಸುರಕ್ಷತಾ ಉಲ್ಲಂಘನೆಯನ್ನು ತಡೆಗಟ್ಟುವ, ಪ್ರತಿಕ್ರಿಯಾತ್ಮಕ ಮತ್ತು ನಿವಾರಣಾ ದೃಷ್ಟಿಕೋನವನ್ನು ಒದಗಿಸುತ್ತದೆ. ಇದು ಮಕ್ಕಳ ಗೌಪ್ಯತೆ ಮತ್ತು ಖಾಸಗೀತನವನ್ನು ರಕ್ಷಿಸಲು ಮಾಧ್ಯಮ ಮತ್ತು ಸಂಪರ್ಕದವರ ಪಾತ್ರವನ್ನು ನಿಯಂತ್ರಿಸಲು ಗಮನಹರಿಸಿದೆ.

ಸರ್ಕಾರ, ಸಂಬಂಧಿಸಿದ ಎಲ್ಲಾ ಇಲಾಖೆಗಳು ಮತ್ತು ಭಾಗೀದಾರರು ನೀತಿಯನ್ನು ಉತ್ತಮ ಹೊಣೆಗಾರಿಕೆ ಮತ್ತು ಬದ್ಧತೆಯಿಂಧ ನಿಜವಾದ ಉತ್ಸಾಹದಲ್ಲಿ ಕಾರ್ಯರೂಪಕ್ಕೆ ತಂದಲ್ಲಿ, ಎಲ್ಲಾ ಮಕ್ಕಳಿಗೂ ಸುರಕ್ಷಿತ ಮತ್ತು ರಕ್ಷಣಾತ್ಮಕ ವಾತಾವರಣವನ್ನು ಕಲ್ಪಿಸುವ ಧ್ಯೇಯವನ್ನು ಸಾಧಿಸಬಹುದಾಗಿದೆ.

ಈ ನಿಟ್ಟಿನಲ್ಲಿ ನೀತಿಯು ತನ್ನ ಧ್ಯೇಯವನ್ನು ಸಾಧಿಸಲು ಮತ್ತು ರಾಜ್ಯಮಟ್ಟದಿಂದ ಗ್ರಾಮಮಟ್ಟದವರೆಗೆ ರಚನೆಯನ್ನು ಹೊಂದಲು ಮೂರು ಪ್ರಮುಖ ತಂತ್ರಗಳನ್ನು ಹೊಂದಿದೆ. ಮೊದಲನೆಯದಾಗಿ, ಮಕ್ಕಳ ರಕ್ಷಣೆಯಲ್ಲಿ ತೊಡಗಿರುವ ಸಿಬ್ಬಂದಿ/ಮಾನವ ಸಂಪನ್ಮೂಲಗಳಿಗೆ ನಿರಂತರವಾದ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ನೀಡುವುದು; ಎರಡನೆಯದಾಗಿ, ಸಮಸ್ಯೆಗಳ ಮತ್ತು ನಿವಾರಣಾ ಕ್ರಮಗಳ ಬಗ್ಗೆ ಜನಸಾಮಾನ್ಯರಿಗೆ ವ್ಯಾಪಕವಾಗಿ ಅರಿವು ಮೂಡಿಸುವ ಮೂಲಕ ಸಕಾರಾತ್ಮಕ ಮನೋಭಾವವನ್ನು ಮೂಡಿಸುವುದು; ಮತ್ತು ಮೂರನೆಯದಾಗಿ ನೀತಿಯು ಒಳಗೊಂಡಿರುವ ಅನುಷ್ಠಾನದ ವ್ಯವಸ್ಥೆ, ತಂತ್ರಗಳು ಮತ್ತು ಭಾಗೀದಾರರುಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆಯನ್ನು ನಿಯಮಿತವಾಗಿ ಕೈಗೊಳ್ಳಲು ವ್ಯವಸ್ಥೆ ಮತ್ತು ಸಾಧನಗಳನ್ನು ಅಭಿವೃದ್ಧಿ ಪಡಿಸುವುದು.

ಮಕ್ಕಳ ರಕ್ಷಣೆಯು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆದ್ಯತೆಯ ಅಂಶವಾಗಿದ್ದು, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಮತ್ತು ಶೈಕ್ಷಣಿಕ ಸಂಸ್ಥೆಗಳ ಕಾರ್ಯನಿರ್ವಹಣಾ ಮಾರ್ಗಸೂಚಿ ರಾಜ್ಯದಲ್ಲಿನ ಪ್ರತಿಯೊಂದು ಮಗುವಿನ ಒಟ್ಟಾರೆ ಸುರಕ್ಷತೆ ಮತ್ತು ಕ್ಷೇಮವನ್ನು ಸಾಧಿಸಲು ಇಲಾಖೆಯ ಪ್ರಯತ್ನಗಳು ಮತ್ತು ಕ್ರಮಗಳನ್ನು ಇನ್ನಷ್ಟು ಬಲಗೊಳಿಸುವುದರೊಂದಿಗೆ, ಮಕ್ಕಳು ಅನುಕೂಲಕರ, ಹಿಂಸೆ ಮತ್ತು ಭಯಮುಕ್ತ ವಾತಾವರಣದಲ್ಲಿ ಕಲಿಯುವಂತಾಗುತ್ತದೆ ಎಂಬ ವಿಶ್ವಾಸವನ್ನು ನಾನು ಹೊಂದಿದ್ದೇನೆ.

ಸ್ಥಳ: ಬೆಂಗಳೂರು
ದಿನಾಂಕ: 01.05.2016

(ಡಾ. ರಜನೀಶ್ ಗೋಯಲ್, ಭಾ.ಆ.ಸೇ.)

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ

## ವಿಷಯಾನುಕ್ರಮಣಿಕೆ


| | | |
|---|---|---|
| | **ಅಧ್ಯಾಯ 1 : ಕಿರುನೋಟ** | |
| **1.1** | ರಾಜ್ಯದ ದೃಷ್ಠಿಕೋನ | 3 |
| **1.2** | ನೀತಿಯ ನಿರೂಪಣೆ | 3 |
| **1.3** | ರಾಜ್ಯದ ಧ್ಯೇಯ | 3–4 |
| **1.4** | ಸಹಭಾಗಿತ್ವದ ತತ್ವಗಳು | 4–5 |
| | **ಅಧ್ಯಾಯ 2: ಮಕ್ಕಳ ರಕ್ಷಣೆ** | |
| **2.1** | ಮಕ್ಕಳ ರಕ್ಷಣೆಯನ್ನು ಅರ್ಥೈಸುವುದು | 6 |
| **2.2** | ವ್ಯಾಖ್ಯಾನಗಳು | 6–8 |
| **2.3** | ಕಾನೂನಿನ ಅನ್ವಯಿಸುವಿಕೆ | 8–10 |
| **2.4** | ಆಡಳಿತಾತ್ಮಕ ತತ್ವಗಳು ಮತ್ತು ನಿಗಧಿಪಡಿಸಲಾದ ಮಾನದಂಡಗಳು | 10–11 |
| **2.5** | ಪ್ರಮುಖ ಸವಾಲುಗಳು | 12 |
| | **ಅಧ್ಯಾಯ 3: ಅನ್ವಯಿಸುವಿಕೆ ಮತ್ತು ಅನುಷ್ಠಾನ** | |
| **3.1** | ರಾಜ್ಯ ಮಕ್ಕಳಾ ರಕ್ಷಣಾ ನೀತಿಯ ವ್ಯಾಪ್ತಿ | 13 |
| **3.2** | ಅನುಷ್ಠಾನ | 13–15 |
| 3.3 | ರಾಜ್ಯ ಮಕ್ಕಳ ರಕ್ಷಣಾ ನೀತಿಯ ಪರಿಶೀಲನೆ ಮತ್ತು ಮೇಲ್ವಿಚಾರಣೆ | 15 |
| 3.4 | ಅನುಸರಣೆ | 15–16 |

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ

## ಅಧ್ಯಾಯ 1 : ಕಿರುನೋಟ

### 1.1 ರಾಜ್ಯದ ದೃಷ್ಟಿಕೋನ

ರಾಜ್ಯದಲ್ಲಿನ ಪ್ರತಿ ಮಗುವು ಸುರಕ್ಷಿತ, ರಕ್ಷಣಾತ್ಮಕ ಮತ್ತು ಸಶಕ್ತ ಪರಿಸರದಲ್ಲಿ ಬೆಳೆಯುವುದರೊಂದಿಗೆ, ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ಮಗುವು ತನ್ನ ಸಾಮರ್ಥ್ಯವನ್ನು ತಲುಪಲು ಅವಕಾಶಗಳನ್ನು ಒದಗಿಸುತ್ತದೆ. ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಲು ಮತ್ತು ಆನಂದಿಸಲು ಅನುಕೂಲಕರವಾದ ಪರಿಸರವನ್ನು ನಿರ್ಮಿಸಲು ರಾಜ್ಯದಲ್ಲಿನ ಎಲ್ಲಾ ಭಾಗೀದಾರರು ಅಂದರೆ, ಪೋಷಕರು, ಆರೈಕೆ ಸೇವೆಗಳನ್ನು ನೀಡುವವರು ಮತ್ತು ಸಮುದಾಯ ಒಟ್ಟುಗೂಡಿ ಕೆಲಸ ಮಾಡುವುದರೊಂದಿಗೆ ಮಕ್ಕಳ ಕುರಿತಾದ ತಾರತಮ್ಯಗಳನ್ನು ನಿವಾರಿಸುವ ಹಾಗೂ ಮಕ್ಕಳ ಭಾಗವಹಿಸುವಿಕೆ ಸಂಭಾಷಣೆ ಮತ್ತು ಅಭಿಪ್ರಾಯಗಳನ್ನು ಗೌರವಿಸುವುದರೊಂದಿಗೆ ಮಗುವಿನ ಘನತೆಯನ್ನು ಎತ್ತಿ ಹಿಡಿಯುವುದಾಗಿದೆ.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ (ಕೆಎಸ್‌ಸಿಪಿಪಿ)ಯು ಮಕ್ಕಳ ಅಧಿಪತ್ಯದ ತತ್ವವನ್ನಾಧರಿಸಿದ ಮಕ್ಕಳ ರಕ್ಷಣೆಯ ಒಂದು ಸಮಗ್ರ ಭಾಗವಾಗಿದೆ.

### 1.2 ನೀತಿಯ ನಿರೂಪಣೆ

ಕರ್ನಾಟಕ ರಾಜ್ಯ ಸರ್ಕಾರವು ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸಲು ಬಾಧ್ಯವಾಗಿರುವುದಲ್ಲದೆ, ರಾಜ್ಯದಲ್ಲಿನ ಪ್ರತಿಯೊಂದು ಮಗುವಿಗೂ (ಮಗುವು ಕರ್ನಾಟಕ ರಾಜ್ಯದ ಅಥವಾ ಭಾರತ ದೇಶದ ಅಥವಾ ಹೊರದೇಶದ ನಿವಾಸಿಯಾಗಿರಲಿ) ಎಲ್ಲಾ ಬಗೆಯ ದುರುಪಯೋಗ, ನಿರ್ಲಕ್ಷ್ಯ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯನ್ನು ನೀಡುತ್ತದೆ.

ಮತ್ತು

ಮಕ್ಕಳ ಭಾಗವಹಿಸುವಿಕೆಯೊಂದಿಗೆ ಅವರುಗಳು ಗೌರವಯುತ ಮತ್ತು ಅವರ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಸಲು ಪೂರಕವಾದ ಪರಿಸರವನ್ನು ಒದಗಿಸುವುದರೊಂದಿಗೆ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಮತ್ತು ಪ್ರಚಾರ ಮಾಡಲು ಸರ್ಕಾರವು ಬದ್ಧವಾಗಿದೆ.

### 1.3 ರಾಜ್ಯದ ಧ್ಯೇಯ

ಸರ್ಕಾರವು ರಾಜ್ಯದಲ್ಲಿನ ಮಕ್ಕಳ ರಕ್ಷಣೆಯನ್ನು ಹಕ್ಕುಗಳ ಆಧಾರಿತ ವಿಧಾನದಲ್ಲಿ ಒಧಗಿಸಲು ಬದ್ಧವಾಗಿರುವುದರೊಂದಿಗೆ, ಕಾನೂನಾತ್ಮಕವಾಗಿ ಗುರುತಿಸಲ್ಪಟ್ಟ ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಭಾಗವಹಿಸುವಿಕೆಯನ್ನು ಒಳಗೊಂಡಂತೆ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಯ ಕುರಿತಂತೆ ಪ್ರಚಾರ ಮಾಡುವುದಾಗಿದೆ. ರಾಜ್ಯದಲ್ಲಿನ ಪ್ರತಿಯೊಂದು ಮಗುವು ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ರೀತಿಯ ಹಿಂಸೆ, ನಿರ್ಲಕ್ಷ್ಯ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯನ್ನು ಹೊಂದಬೇಕಾಗಿದೆಯಲ್ಲದೇ, ಎಲ್ಲಾ ಸಾಮಾಜಿಕ ವಲಯಗಳು ವಿಶೇಷವಾಗಿ ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಭದ್ರತೆ ಮತ್ತು ಸಾಮಾಜಿಕ ನ್ಯಾಯ ಮಕ್ಕಳಿಗೆ ದೊರೆಯುವಂತಾಗಬೇಕು. ರಾಜ್ಯದಲ್ಲಿ ಲಿಂಗತ್ವ, ನಾಗರೀಕತೆಯೂ ಸೇರಿದಂತೆ, ಎಲ್ಲಾ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಅಥವಾ ಭೌಗೋಳಿಕ ತಾರತಮ್ಯಗಳನ್ನು ತೊಡೆದುಹಾಕಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯು ಮಕ್ಕಳ ರಕ್ಷಣಾ ಸೇವೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತದೆ.

ರಾಜ್ಯವು ಯಾವುದೇ ಮಗು, ಯಾವುದೇ ರೀತಿಯ ದೈಹಿಕ ಅಥವಾ ಮಾನಸಿಕ ಹಿಂಸೆ, ದೌರ್ಜನ್ಯ, ನಿರ್ಲಕ್ಷ್ಯ ಅಥವಾ ಶೋಷಣೆಗೆ ಸಿಲುಕಿರುವವರನ್ನು ಅಥವಾ ಒಳಗಾಗಬಹುದಾದವರನ್ನು ರಕ್ಷಿಸಲು ಮುಂಜಾಗ್ರತಾ ಮತ್ತು ಸುಧಾರಣೆಯ ಎರಡು ರೀತಿಯ ಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆ.

ಸರ್ಕಾರವು ರಾಜ್ಯದಲ್ಲಿನ ಎಲ್ಲಾ ಮಕ್ಕಳ ಕಾನೂನಾತ್ಮಕ ಹಕ್ಕುಗಳನ್ನು ರಕ್ಷಿಸುವುದರೊಂದಿಗೆ ಅವರ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಒಳಗೊಂಡಂತೆ ಅವರ ಸುರಕ್ಷತೆಯನ್ನು ಖಚಿತಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತದೆ.

ರಾಜ್ಯವು ವಿಶೇಷವಾಗಿ ದೌರ್ಜನ್ಯಕ್ಕೊಳಗಾದ ಮಕ್ಕಳು, ತುಳಿತಕ್ಕೊಳಗಾದ ಮತ್ತು ದುರ್ಬಲ ವರ್ಗದ ಮಕ್ಕಳು, ಅಂದರೆ ಹೆಣ್ಣು ಮಕ್ಕಳು, ಮೂರನೇ ಲಿಂಗದ ಮಕ್ಕಳು, ವಿಕಲಚೇತನ ಮಕ್ಕಳು, ವಿಶೇಷ ಅಗತ್ಯತೆವುಳ್ಳ ಮಕ್ಕಳು, ವಸತಿ ರಹಿತ ಮಕ್ಕಳು, ನೈಸರ್ಗಿಕ/ ಮಾನವ ನಿರ್ಮಿತ ಅವಘಡ ಮತ್ತು ಸಂಘರ್ಷಗಳಿಂದಾಗಿ ತೊಂದರೆಗೆ ಒಳಗಾದ ಮಕ್ಕಳು, ಹೆಚ್.ಐ.ವಿ ಸೋಂಕಿತ ಅಥವಾ ಬಾದಿತ ಮಕ್ಕಳು ಅಥವಾ ಧೀರ್ಘಾವಧಿ ಕಾಯಿಲೆಯಿಂದ ನರಳುವ ಮಕ್ಕಳ ಅಗತ್ಯತೆಗಳ ಬಗ್ಗೆ ಗಮನಿಸುವುದು.

ರಾಜ್ಯವು ಮಕ್ಕಳ ಅಭಿಪ್ರಾಯಗಳನ್ನು ಕೇಳಿಸಿಕೊಳ್ಳುವ (ಮಗುವಿನ ವಯಸ್ಸು ಮತ್ತು ತಿಳುವಳಿಕೆಯನ್ನು ಆಧರಿಸಿ) ಹಾಗೂ ಹಿರಿಯರು ಮತ್ತು ಮಕ್ಕಳ ನಡುವೆ ಪರಸ್ಪರ ಗೌರವಯುತ ಸಂವಹನಕ್ಕೆ ಅವಕಾಶ ನೀಡುವ ವಾತಾವರಣವನ್ನು ಕಲ್ಪಿಸಿಕೊಡುತ್ತದೆ.

ರಾಜ್ಯವು ಮಕ್ಕಳ ಸುರಕ್ಷತೆ ಮತ್ತು ರಕ್ಷಣೆಗಾಗಿ ಕಾನೂನು ಮತ್ತು ನೀತಿಗಳ ಸುಧಾರಣೆ, ಸಾಮರ್ಥ್ಯಾಭಿವೃದ್ಧಿ, ಯೋಜನೆ ಮತ್ತು ಅನುಷ್ಠಾನ, ಆಯವ್ಯಯ, ಮೇಲ್ವಿಚಾರಣೆ ಮತ್ತು ಮಕ್ಕಳ ಕುರಿತು ಮಾಹಿತಿ ವ್ಯವಸ್ಥೆಯನ್ನು ರೂಪಿಸಲು ಬದ್ಧವಾಗಿದೆ.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಮೂಲಕ ಕರ್ನಾಟಕ ಸರ್ಕಾರವು ಈ ಕೆಳಗಿನ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ

- ಪ್ರಸ್ತುತ ಇರುವ ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿನ ಕೊರತೆಗಳನ್ನು ನಿವಾರಿಸುವುದು
- ಮಗುವಿನ ಕುರಿತಾದ ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತಕ್ಕೆ ಪೂರಕವಾದ ಸಾಂಸ್ಥಿಕ ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವುದು.
- ಇಲಾಖೆ ಮತ್ತು ಸಂಸ್ಥೆಗಳ ನಡುವೆ ವಿವಿಧ ಚಟುವಟಿಕೆಗಳ ಸಂಯೋಜನೆ ಹಾಗೂ ಸಂಪರ್ಕಗಳನ್ನು ಬಲಪಡಿಸಲು ಉತ್ತೇಜಿಸುವುದು.

### 1.4 ಸಹಭಾಗಿತ್ವದ ತತ್ವಗಳು

ಸಮರ್ಥ ಮಕ್ಕಳ ರಕ್ಷಣಾ ವ್ಯವಸ್ಥೆಯು, ಮಕ್ಕಳ ಸಂಪರ್ಕವಿರುವ ಎಲ್ಲಾ ಭಾಗೀದಾರರಿಂದ ಮಕ್ಕಳಿಗೆ ರಕ್ಷಣೆಯನ್ನು ಒದಗಿಸುವ ವಾತಾವರಣ ಪರಿಕಲ್ಪನೆಯ ಬಗ್ಗೆ ಬದ್ದತೆಯನ್ನು ನಿರೀಕ್ಷಿಸುತ್ತದೆ. ಇದಕ್ಕೆ ಸರ್ಕಾರದ ಇಲಾಖೆಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಸಂಬಂಧಿತ ಸರ್ಕಾರೇತರ ಪ್ರತಿನಿಧಿಗಳು ಹಾಗೂ ಸ್ವತಃ ಮಕ್ಕಳನ್ನು ಒಳಗೊಂಡಂತೆ ಮಕ್ಕಳ ಒಳಿತಿಗಾಗಿ ಕಾರ್ಯನಿರ್ವಹಿಸುತ್ತಿರುವವರ ಮಧ್ಯೆ ಸಹಭಾಗಿತ್ವದ ಅವಶ್ಯಕತೆ ಇದೆ.

ರಾಜ್ಯ ಮಕ್ಕಳ ರಕ್ಷಣಾ ನೀತಿಯು, ಮಕ್ಕಳ ಸಂರಕ್ಷಣೆಯಲ್ಲಿ ನಿರತರಾಗಿರುವ ಭಾಗೀದಾರರುಗಳ ಪಾತ್ರ ಮತ್ತು ಜವಾಬ್ದಾರಿಗಳು ಮತ್ತು ಸಾಂಸ್ಥಿಕ ಹಾಗೂ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವ ಕುರಿತು ತಿಳಿಸುವುದರೊಂದಿಗೆ ಅದಕ್ಕಾಗಿ ರಾಜ್ಯವು ಒದಗಿಸಿದ ವಿವಿಧ ಸೇವೆಗಳನ್ನು ಪಡೆಯುವ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ರಾಜ್ಯದಲ್ಲಿನ ವಿವಿಧ ಇಲಾಖೆಗಳ ನಡುವೆ ಸಮಾನಾಂತರ ಸಂಪರ್ಕಗಳು ಹಾಗೂ ಕೇಂದ್ರ, ಜಿಲ್ಲೆ ಮತ್ತು ಪಂಚಾಯಿತಿ, ಗ್ರಾಮ/ ಪುರಸಭೆ ಮಟ್ಟಗಳಲ್ಲಿ ಲಂಬಾಂತರ ಸಂಪರ್ಕಗಳ ನಿರ್ಮಾಣದ ಸಹಭಾಗಿತ್ವ ತತ್ವದ ಆಧಾರದಲ್ಲಿ ರಚಿಸಲಾಗಿದೆ. ಸ್ಥಳೀಯ ಸಂಸ್ಥೆಗಳಾದ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಗ್ರಾಮ/ ವಾರ್ಡ್ ಸಭಾಗಳ ಮೂಲಕ ಅದರಲ್ಲೂ ವಿಶೇಷವಾಗಿ ಮಕ್ಕಳ ಗ್ರಾಮಸಭೆಗಳ ಮೂಲಕ ಸಕ್ರಿಯವಾಗಿ ತೊಡಗಿಸಿಕೊಳ್ಳುವುದಲ್ಲದೆ ಮಗುವನ್ನು ಒಬ್ಬ ವ್ಯಕ್ತಿಯನ್ನಾಗಿ ಮತ್ತು ಅವರುಗಳ ಹಕ್ಕುಗಳನ್ನು ಗುರುತಿಸಿ ಗೌರವಿಸಬೇಕು.

ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು, ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಧಿಸೂಚಿಸುತ್ತದೆ ಮತ್ತು ಈ ನೀತಿಯನ್ನು ಸಾರ್ವಜನಿಕ ಶಿಕ್ಷಣ, ಪೊಲೀಸ್, ಸಮಾಜ ಕಲ್ಯಾಣ, ನ್ಯಾಯಾಂಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಗಳು, ಜಿಲ್ಲಾಡಳಿತ ಹಾಗೂ ಸಂಬಂಧಿಸಿದ ಇತರೆ ಇಲಾಖೆ ಮತ್ತು ಸಂಸ್ಥೆಗಳು ಅಳವಡಿಸಿಕೊಂಡು ಅನುಷ್ಠಾನಗೊಳಿಸುತ್ತವೆ.

# ಅಧ್ಯಾಯ 2 ಮಕ್ಕಳ ರಕ್ಷಣೆ

## 2.1 ಮಕ್ಕಳ ರಕ್ಷಣೆಯನ್ನು ಅರ್ಥೈಸುವುದು

ಮಕ್ಕಳ ರಕ್ಷಣೆ ಎಂದರೆ ಮಗು ಯಾವುದೇ ವ್ಯಕ್ತಿ, ಸಂಸ್ಥೆ, ವ್ಯವಸ್ಥೆ ಅಥವಾ ಪ್ರಾಧಿಕಾರದ ಪೋಷಣೆಯಲ್ಲಿರುವಾಗ ನಿರ್ಲಕ್ಷ್ಯ ತಾರತಮ್ಯ, ಹಿಂಸೆ (ಮೌಖಿಕ ಮತ್ತು ದೈಹಿಕ), ನಿಂದನೆ (ಮಾನಸಿಕ ಮತ್ತು ದೈಹಿಕ), ಆರ್ಥಿಕ ಮತ್ತು ಲೈಂಗಿಕ ಶೋಷಣೆಗೆ ಒಳಗಾಗದಂತೆ ರಕ್ಷಿಸುವುದು ಮತ್ತು ಪ್ರತಿ ಮಗುವಿನ ಮೂಲಭೂತ ಹಕ್ಕುಗಳ ರಕ್ಷಣೆಯಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆಯು ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989 (UNCRC), ಭಾರತ ಸಂವಿಧಾನ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನೇಕ ಕಾಯಿದೆಗಳು ಮತ್ತು ರಾಷ್ಟ್ರೀಯ ಮಕ್ಕಳ ನೀತಿ 2013ರ ಅಂಶಗಳನ್ನು ಒಳಗೊಂಡಿದೆ.

ಶಾಸನಾತ್ಮಕವಾಗಿ ರೂಪಿಸಲಾದ ಮಕ್ಕಳ ಹಕ್ಕುಗಳು ಮಗುವು ವಾಸಿಸುವ ಸ್ಥಳ/ವಾತಾವರಣವು ರಕ್ಷಣಾತ್ಮಕವಾಗಿರುವುದಾಗಿಯೂ ಮತ್ತು ಮಗುವು ನಿರ್ಲಕ್ಷ್ಯ ತಾರತಮ್ಯ, ಹಿಂಸೆ, ನಿಂದನೆ, ಆರ್ಥಿಕ ಮತ್ತು ಲೈಂಗಿಕ ಶೋಷಣೆಗಳಿಂದ ಸುರಕ್ಷಿತವಾಗಿರುವುದರ ಬಗ್ಗೆ ಸರ್ಕಾರದ ಬದ್ಧತೆಯನ್ನು ಖಾತರಿಪಡಿಸುವುದಲ್ಲದೆ, ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು ಉತ್ತಮ ವಾತಾವರಣ ನಿರ್ಮಾಣಕ್ಕಾಗಿ ಸರ್ಕಾರವು ಮುಂಜಾಗ್ರತೆ ಮತ್ತು ಪ್ರತಿಕ್ರಿಯಾತ್ಮಕ ವ್ಯವಸ್ಥೆಯನ್ನು ಹೊಂದಬೇಕಾಗಿದೆ.

ಸರ್ಕಾರವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯಮಾವಳಿಗಳಿಗೆ ಬದ್ಧವಾಗಿರುವುದಾಗಿ ತಿಳಿಸಿದೆ. ಮಕ್ಕಳ ರಕ್ಷಣೆ ಮತ್ತು ರಕ್ಷಣಾತ್ಮಕ ಪರಿಸರ ನಿರ್ಮಾಣವನ್ನು ಖಾತರಿ ಪಡಿಸುವಲ್ಲಿ ನಿಯಮಾವಳಿಗಳು, ಮಕ್ಕಳಿಗಾಗಿ ಕಾರ್ಯಕ್ರಮಗಳು, ಮಕ್ಕಳ ಪೋಷಣೆಯಲ್ಲಿ ತೊಡಗಿರುವವರ ಅವಶ್ಯಕತೆಗಳನ್ನು ಸರ್ಕಾರವು ಗುರುತಿಸಿದೆ. ರಾಜ್ಯದಲ್ಲಿ ಮಕ್ಕಳ ಹಕ್ಕು ಮತ್ತು ರಕ್ಷಣಾತ್ಮಕ ಪರಿಸರವನ್ನು ಹೊಂದಿರುವುದನ್ನು ಖಾತರಿ ಪಡಿಸಲು ಮಕ್ಕಳ ರಕ್ಷಣಾ ನೀತಿಯು ಮಾನದಂಡಗಳನ್ನು ರೂಪಿಸಿರುವುದಲ್ಲದೇ, ವಿವಿಧ ಭಾಗೀದಾರರುಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ತಿಳಿಸುತ್ತದೆ.

## 2.2 ವ್ಯಾಖ್ಯಾನಗಳು

**ಎ.** 'ಮಗು' ಎಂದರೆ 18 ವರ್ಷದೊಳಗಿನ ಯಾವುದೇ ವ್ಯಕ್ತಿ, ಅಥವಾ ಬಾಲ ನ್ಯಾಯ (ಮಕ್ಕಳಪಾಲನೆ ಮತ್ತು ಸಂರಕ್ಷಣೆ) ಕಾಯ್ದೆ, 2000ದ ಕಲಂ 2(ಕೆ)ರ ಪ್ರಕಾರ ಹದಿನೆಂಟು ವರ್ಷ ವಯಸ್ಸು ಪೂರ್ಣಗೊಂಡಿರದೇ ಇರುವವರು.

ಬಿ. **'ಮಗುವಿನ ದುರುಪಯೋಗ':** ಮಗುವಿನ ಜವಾಬ್ದಾರಿಯನ್ನು ಹೊಂದಲಾಗಿದೆ, ಮಗುವಿನ ನಂಬಿಕೆಯನ್ನು ಗಳಿಸಲಾಗಿದೆ ಅಥವಾ ಮಗುವಿನ ಮೇಲೆ ಅಧಿಕಾರ ಹೊಂದಲಾಗಿದೆ ಎಂದು ತಿಳಿಯಲಾದ ಸಂದರ್ಭಗಳಲ್ಲಿ 'ಮಗುವಿನ ದುರುಪಯೋಗ'ಅಥವಾ 'ಕೆಟ್ಟದಾಗಿ ನಡೆಸಿಕೊಳ್ಳುವುದು' ಎಂಬುದು ಎಲ್ಲಾ ರೀತಿಯಿಂದಲೂ ಮಗುವನ್ನು ದೈಹಿಕ ಅಥವಾ ಭಾವನಾತ್ಮಕವಾಗಿ ಅಲಕ್ಷ್ಯ, ನಿರ್ಲಕ್ಷ್ಯವಾಗಿ ನಡೆಸಿಕೊಳ್ಳುವುದು, ಲೈಂಗಿಕ ಶೋಷಣೆ (ದುರ್ಬಳಕೆ) ಅಥವಾ ವ್ಯಾವಹಾರಿಕ ಅಥವಾ ಇತರೆ ಶೋಷಣೆಗಳನ್ನು ಒಳಗೊಂಡಿದ್ದು, ಈ ಕಾರಣಗಳಿಂದಾಗಿ ಮಗುವಿನ ಆರೋಗ್ಯ, ಅಸ್ತಿತ್ವ, ಬೆಳವಣಿಗೆ ಮತ್ತು ಘನತೆಗೆ ಹಾನಿಯುಂಟಾಗುವುದನ್ನು ಮಗುವಿನ ದುರುಪಯೋಗ ಎನ್ನಲಾಗಿದೆ[1].

---

[1] ವಿಶ್ವ ಆರೋಗ್ಯ ಸಂಸ್ಥೆ ನೀಡಿರುವ ವ್ಯಾಖ್ಯಾನ

ಸಿ. "**ಮಗುವಿನ ಹಕ್ಕುಗಳ ಸ್ನೇಹಿ**": ಎಂದರೆ ಮಕ್ಕಳ ಹಿತದೃಷ್ಟಿಯಿಂದ ಉತ್ತಮ ಎಂದು ಭಾವಿಸಲಾದ ಯಾವುದೇ ಕ್ರಿಯೆ, ಮನೋಭಾವ, ಉಪಚಾರ ಮತ್ತು ಪರಿಸರವು ಮಾನವೀಯ, ವಿವೇಚನಾತ್ಮಕ ಮತ್ತು ತಾರತಮ್ಯ ರಹಿತವಾಗಿರುವುದಾಗಿದೆ.

**ಡಿ. "ಮಗು ಸೂಕ್ಷ್ಮ ಪರಿಸರ":** ಎಂದರೆ ಯಾವುದೇ ಒಂದು ಸ್ಥಳದ ಸುತ್ತಮುತ್ತಲಿನ ಪರಿಸರವು ಮಗುವಿಗೆ ಹಿತಕರ ಭಾವನೆಯನ್ನು ಮೂಡಿಸುವಂತಿದ್ದು, ಮಗು (ಅವನು/ಅವಳು)ವು ಭಯಮುಕ್ತ ಮತ್ತು ನಿರ್ಭೀತಿಯಿಂದ ಇರಬಹುದಾದ ಪರಿಸರವಾಗಿವೆ.

ಇ. **"ಸಕ್ಷಮ ಪ್ರಾಧಿಕಾರಗಳು"** ಎಂದರೆ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2000ದ ಮೇರೆಗೆ ಕಡ್ಡಾಯವಾಗಿರುವ ಶಾಸನಾತ್ಮಕವಾಗಿ ಗುರುತಿಸಲದಪಟ್ಟ ಮಕ್ಕಳ ಕಲ್ಯಾಣ ಸಮಿತಿಗಳು, ಬಾಲ ನ್ಯಾಯಮಂಡಳಿ, ಮಕ್ಕಳ ವಿಶೇಷ ಪೊಲೀಸು ಘಟಕಗಳು, ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ, 2012ರ ಮೇರೆಗೆ ಸ್ಥಾಪಿಸಲಾದ ವಿಶೇಷ ನ್ಯಾಯಾಲಯ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ, 2005 ರ ಮೇರೆಗೆ ಸ್ಥಾಪಿಸಲಾದ ಕರ್ನಾಟಕ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮತ್ತು ಮಕ್ಕಳಿಗೆ ಸಂಬಂಧಿಸಿದ ಯಾವುದೇ ಕಾನೂನು ಅಥವಾ ಕಾಯ್ದೆಗಳಡಿ ಗುರುತಿಸಲಾಗಿರುವ ಇತರೆ ಸಕ್ಷಮ ಪ್ರಾಧಿಕಾರಗಳು.

**ಎಫ್.ದುರುಪಯೋಗದ ಬಗೆಗಳು':** ಮಗುವಿನ ದುರುಪಯೋಗವು ದೈಹಿಕ, ಭಾವನಾತ್ಮಕ ಅಥವಾ ಮಾನಸಿಕ ದುರುಪಯೋಗ, ಲೈಂಗಿಕ ದುರುಪಯೋಗ, ಅಲಕ್ಷ್ಯ, ಕೆಟ್ಟದಾಗಿ ನಡೆಸಿಕೊಳ್ಳುವುದು, ತಾರತಮ್ಯ ಮೊದಲಾದವನ್ನು ಒಳಗೊಂಡಿದೆ.

**ಜಿ. ಹಾನಿ':** ಎಂದರೆ ಒಂದು ಕ್ರಿಯೆ (ಕೃತ್ಯ)/ನಡವಳಿಕೆ (ವರ್ತನೆ) ಪದೇ ಪದೇ ಉದ್ದೇಶಪೂರ್ವಕವಾಗಿ ಮಗುವಿಗೆ ನೋವು ಅಥವಾ ಗಾಯಅಥವಾ ಆಘಾತವನ್ನು ಉಂಟುಮಾಡುವುದಾಗಿದೆ. ಇದು ಬಹುತೇಕ ಸಂದರ್ಭದಲ್ಲಿ ದೈಹಿಕ ಸ್ವರೂಪದ್ದಾಗಿದ್ದರೆ ಕೆಲವೊಮ್ಮೆ ಸ್ವಯಂ ಪ್ರೇರಿತ ಅಂದರೆ ಗಾಯಗೊಳಿಸಿಕೊಳ್ಳುವುದು, ಸುಟ್ಟುಕೊಳ್ಳುವುದು, ಪದಾರ್ಥಗಳ ದುರ್ಬಳಕೆ ಇತ್ಯಾಧಿಗಳನ್ನೊಳಗೊಂಡಿದೆ.

**ಹೆಚ್**. "**ನಿರ್ಲಕ್ಷ್ಯ**" ಎಂದರೆ ಯಾವುದೇ ರೀತಿಯ ಅಪಾಯ ಅಥವಾ ಹಾನಿಯಿಂದ ಮಗುವನ್ನು ರಕ್ಷಿಸುವಲ್ಲಿ ವಿಫಲವಾದ ಕಾರಣದಿಂದ, ಮಗುವಿನ ಆರೋಗ್ಯ ಮತ್ತು ಬೆಳವಣಿಗೆಗೆ ಮಾರಕವಾಗಿರುವ ಸ್ಥಿತಿ. ನಿರ್ಲಕ್ಷ್ಯವು ಕೆಲವೊಮ್ಮೆ ದೀರ್ಘಾವಧಿಯದ್ದಾಗಿರಬಹುದು ಮತ್ತು ಅದು ಹಸಿವೆಯಿಂದ ನರಳುವುದು ಅಥವಾ ಆಹಾರ ಮತ್ತು ಪೋಷಣೆಯನ್ನು ನೀಡದಿರುವುದು, ಭಾವನಾತ್ಮಕ ಬೆಂಬಲವನ್ನು ನೀಡದಿರುವುದು ಅಥವಾ ವೈದ್ಯಕೀಯ, ಶೈಕ್ಷಣಿಕ ಸೇವೆಗಳನ್ನು ನೀಡದಿರುವುದು ಮತ್ತು ಆಶ್ರಯ, ವಸತಿ, ಬಟ್ಟೆ ಮೊದಲಾದ ಇತರ ಮೂಲಭೂತ ಸೌಲಭ್ಯಗಳನ್ನು ಒದಗಿಸದಿರುವುದು ಅಥವಾ ಮಗುವಿನ ಮೇಲ್ವಿಚಾರಣೆ ಮಾಡದೇ ಇರುವುದಾಗಿದೆ.

ಐ. "**ಲೈಂಗಿಕ ದುರುಪಯೋಗ**" : ಎಂದರೆ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ, 2012 (ಪೊಕ್ಸೊ) ಮತ್ತು/ಅಥವಾ ಭಾರತ ದಂಡ ಸಂಹಿತೆ 1860ರ ಮೇರೆಗೆ ಅಪರಾಧವೆಂದು ಪರಿಗಣಿಸಲ್ಪಡುವ ಕೃತ್ಯಗಳು ಅಥವಾ ವರ್ತನೆ.

**ಜೆ. ಶೋಷಣೆ** ಎಂದರೆ ವಯಸ್ಕರು ಅಥವಾ ಮಗುವಿನ ಪಾಲಕರು ಆರ್ಥಿಕ ಲಾಭ ಅಥವಾ ಇನ್ನಿತರೆ ಕಾರಣಗಳಿಗಾಗಿ ಉದ್ದೇಶ ಅಥವಾ ಒತ್ತಾಯಪೂರ್ವಕವಾಗಿ ಮಕ್ಕಳನ್ನು ಕಷ್ಟ, ತೊಂದರೆ ಮತ್ತು ಅಪಾಯಕ್ಕೆ ಗುರಿಪಡಿಸುವುದು ಅಥವಾ ಮಗುವಿನ ಒಟ್ಟಾರೆ ಬೆಳವಣಿಗೆಗೆ ಅಡ್ಡಿಪಡಿಸುವುದು ಉದಾ: ಬಿಕ್ಷೆ ಬೇಡುವುದು, ಬಾಲ್ಯ ವಿವಾಹ, ಒತ್ತಾಯ ಪೂರ್ವಕ ಕೂಲಿ, ವಿವಿಧ ಉದ್ದೇಶಗಳಿಗಾಗಿ ಮಕ್ಕಳ ಸಾಗಾಟ ಮಾಡುವುದು.

**ಕೆ. ಮಕ್ಕಳೊಂದಿಗೆ ನೇರ ಸಂಪರ್ಕದಲ್ಲಿರುವ ವ್ಯಕ್ತಿಗಳು**" ಎಂದರೆ ವೃತ್ತಿಪರ/ಶೈಕ್ಷಣಿಕ/ಸ್ವಯಂ ಸೇವಾ ಕಾರ್ಯದ ಭಾಗವಾಗಿ ನಿಯತವಾಗಿ/ ಸಾಂದರ್ಭಿಕವಾಗಿ/ತಾತ್ಕಾಲಿಕವಾಗಿ/ದೀರ್ಘಾವಧಿಯವರೆಗೆ ಮಗುವಿನ ಅಥವಾ ಮಕ್ಕಳ ಒಡನಾಟದಲ್ಲಿರುವ ವ್ಯಕ್ತಿಗಳು.

**ಎಲ್. ಮಕ್ಕಳೊಂದಿಗೆ ಪರೋಕ್ಷ ಸಂಪರ್ಕ ಹೊಂದಿರುವ ವ್ಯಕ್ತಿಗಳು**"ಎಂದರೆ ಶಾಲೆ ಅಥವಾ ಸ್ವಯಂ ಸೇವಾ ಕಾರ್ಯದಲ್ಲಿ ನೇರ ಒಡನಾಡಿಯಂತೆ ಮಗವಿನೊಂದಿಗೆ ನಿಯತವಾಗಿ/ಸಾಂದರ್ಭಿಕವಾಗಿ/ತಾತ್ಕಾಲಿಕವಾಗಿ/ದೀರ್ಘಾವಧಿಯವರೆಗೆ ಮಗುವಿನೊಂದಿಗೆ ವ್ಯವಹರಿಸದಿದ್ದರೂ, ಮಗುವಿನ ಭಾವಚಿತ್ರಗಳು, ಕಡತಗಳು, ಮಕ್ಕಳ ಕುರಿತಾದ ವೈಯಕ್ತಿಕ ವಿವರಗಳು, ಮಾಹಿತಿ ದತ್ತಾಂಶಗಳನ್ನು ನಿರ್ವಹಿಸುವ ವ್ಯಕ್ತಿಗಳು.

**ಎಂ. "ಮಗುವಿನ ರಕ್ಷಣೆ"** ಎಂದರೆ ಯಾವುದೇ ವ್ಯಕ್ತಿ, ಸಂಸ್ಥೆ, ವ್ಯವಸ್ಥೆ ಅಥವಾ ಪ್ರಾಧಿಕಾರದ ಪೋಷಣೆಯಲ್ಲಿರುವಾಗ ನಿರ್ಲಕ್ಷ್ಯ, ತಾರತಮ್ಯ ಹಾಗೂ ಎಲ್ಲಾ ರೀತಿಯ ಹಿಂಸೆ ಮತ್ತು ದುರುಪಯೋಗಗಳಿಂದ ಮಗುವಿನ ಮೂಲಭೂತ ಹಕ್ಕುಗಳನ್ನು ರಕ್ಷಿಸುವುದಾಗಿದೆ.

**ಎನ್. "ರಕ್ಷಣಾತ್ಮಕ ಪರಿಸರ"** ಎಂದರೆ ಮಗುವಿನ ರಕ್ಷಣೆ ಮತ್ತು ಸುರಕ್ಷತೆಯನ್ನು ಖಾತರಿಪಡಿಸುವ ಕೆಳಕಂಡ ಅಂಶಗಳನ್ನೊಳಗೊಂಡ ಪರಿಸರವಾಗಿದೆ.

1) ನಿರ್ಲಕ್ಷ್ಯ, ತಾರತಮ್ಯ ಹಾಗೂ ಎಲ್ಲಾ ರೀತಿಯ ಹಿಂಸೆ ಮತ್ತು ದುರುಪಯೋಗಗಳಿಂದ ಮುಕ್ತವಾದ ಸುರಕ್ಷಿತ ಪರಿಸರ
2) ಮಕ್ಕಳನ್ನು ಹಾನಿಕಾರಕ ಸನ್ನಿವೇಶಗಳಿಂದರಕ್ಷಿಸುವುದು
3) ಅಸಾಹಾಯಕ ಪರಿಸ್ಥಿತಿಗೆ ಒಳಗಾಗುವುದನ್ನು ಕಡಿಮೆ ಮಾಡುವುದು ಮತ್ತು ಹೋಗಲಾಡಿಸುವುದು
4) ರಕ್ಷಣೆ ಮತ್ತು ಪೂರಕ ಸೇವೆಗಳು ಮಕ್ಕಳಿಗೆ ಸುಲಭವಾಗಿ ದೊರಕುವಂತಿರುತ್ತದೆ.
5) ಮಕ್ಕಳ ರಕ್ಷಣಾ ವ್ಯವಸ್ಥೆಯು ಮಕ್ಕಳು ಯಾವುದೇ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಮತ್ತು ಸುರಕ್ಷತೆಯಿಂದ ವಂಚಿತರಾಗದಂತೆ ಕ್ರಮವಹಿಸುತ್ತದೆ.
6) ಸರ್ಕಾರವು ಮಕ್ಕಳ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿರುತ್ತದೆ.
7) ಜನರು ಮತ್ತು ಸಮುದಾಯ ಮಕ್ಕಳ ಹೊಣೆಗಾರಿಕೆಯನ್ನು ಹೆಚ್ಚು ಮುತುವರ್ಜಿಯಿಂದ ವಹಿಸುತ್ತಾರೆ.

**2.3 ಕಾನೂನಿನ ಅನ್ವಯಿಸುವಿಕೆ:**

ಮಕ್ಕಳನ್ನು ಇಂದು ಕೇವಲ "ರಕ್ಷಣೆಯ ವಸ್ತು"[2]ವನ್ನಾಗಿ ಗುರುತಿಸದೆ, ಹಕ್ಕುಗಳ ವಿಷಯವನ್ನಾಗಿ ಗುರುತಿಸಲಾಗುತ್ತಿದೆ. ಕೆಳಕಂಡ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಕಾಯ್ದೆಗಳು, ನೀತಿಗಳು ಮತ್ತು ಮಾರ್ಗಸೂಚಿಗಳು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ನೀತಿಯನ್ನು ರೂಪಿಸಲು ತಳಹದಿಯಾಗಿವೆ.

**ಎ. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ (ಯುಎನ್‌ಸಿಆರ್‌ಸಿ),** 1989: ಭಾರತವು ಸಹಿ ಮಾಡಿ ಒಪ್ಪಿಕೊಂಡ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ, 1989 ರಂತೆ ಮಕ್ಕಳ ಹಿತದೃಷ್ಟಿಯಿಂದ ರೂಪಿಸಲಾದ ತತ್ವಗಳು ಮತ್ತು ಮಾನದಂಡಗಳ ಮೂಲಕ ಪ್ರತಿಯೊಂದು ಮಗುವಿಗೆ ರಕ್ಷಣಾತ್ಮಕ ಹಕ್ಕುಗಳನ್ನು ಮಾನ್ಯ ಮಾಡುತ್ತದೆ.

2 ಮಕ್ಕಳ ಬಗೆಗಿನ ಸರ್ಕಾರದ ಸ್ನೇಹಪರತೆ ಕುರಿತ ದಕ್ಷಿಣ ಏಷ್ಯಾ ವರದಿ, 2013–www.southasiareport.org ಈ ವೆಬ್‌ಸೈಟಿನಲ್ಲಿ ಲಭ್ಯವಿದೆ.

**ಬಿ. ಭಾರತ ಸಂವಿಧಾನ:** ಭಾರತ ಸಂವಿಧಾನವು ಅನುಚ್ಛೇದ 14 (ಸಮಾನತೆಯ ಹಕ್ಕು ಮತ್ತು ಸಮಾನ ರಕ್ಷಣೆಯ ನ್ಯಾಯ) ಅನುಚ್ಛೇದ 15 (3) (ಮಹಿಳೆಯರು ಮತ್ತು ಮಕ್ಕಳಿಗಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸುವ ರಾಜ್ಯ ಸರ್ಕಾರದ ಮೂಲಭೂತ ಹಕ್ಕು, ಅನುಚ್ಛೇದ 21 (ಜೀವಿಸುವ ಹಕ್ಕು ಮತ್ತು ವೈಯುಕ್ತಿಕ ಸ್ವಾತಂತ್ರ್ಯ) ಅನುಚ್ಛೇದ 21ಎ (ಶಿಕ್ಷಣದ ಹಕ್ಕು), ಅನುಚ್ಛೇದ 23 ಮತ್ತು 24 (ಶೋಷಣೆಯ ವಿರುದ್ಧದ ಹಕ್ಕುಗಳು), ಅನುಚ್ಛೇದ 39 (ಇ) (ಆರೋಗ್ಯದ ಹಕ್ಕು ಮತ್ತು ಆರ್ಥಿಕ ಅವಶ್ಯಕತೆಗಾಗಿ ದುರುಪಯೋಗದಿಂದ ಸ್ವಾತಂತ್ರ್ಯ) ಮತ್ತು 39 (ಎಫ್) (ಗೌರವದಿಂದ ಬದುಕುವ ಹಕ್ಕು) ಹಾಗೂ ಅನುಚ್ಛೇದ 51ಎ(ಕೆ) (ಶಿಕ್ಷಣಕ್ಕೆ ಅವಕಾಶಗಳನ್ನು ಒದಗಿಸುವುದು ತಂದೆ ತಾಯಿ ಹಾಗೂ ಪೋಷಕರ ಜವಾಬ್ದಾರಿ) ಸೇರಿದಂತೆ ಅನೇಕ ಉಪಬಂಧಗಳಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ರಾಜ್ಯವು ಸಂವಿಧಾನದ ಅಡಿ ಮಕ್ಕಳ ಎಲ್ಲಾ ಅಗತ್ಯತೆಗಳನ್ನು ಪೂರೈಸಲಾಗಿದೆ ಮತ್ತು ಅವರ ಮಾನವ ಹಕ್ಕುಗಳನ್ನು ಸಂಪೂರ್ಣವಾಗಿ ಸಂರಕ್ಷಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಪ್ರಾಥಮಿಕ ಜವಾಬ್ದಾರಿಯನ್ನು ಹೊಂದಿದೆ.

ಸಿ. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2000 (ಜೆ ಜೆ ಕಾಯ್ದೆ) ಮತ್ತು ಕರ್ನಾಟಕ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮ, 2010 (ಕರ್ನಾಟಕ ಜೆಜೆ ನಿಯಮಗಳು).

ಡಿ. ರಾಷ್ಟ್ರೀಯ ಮಕ್ಕಳ ಸನ್ನದು, 2003 (ಮಕ್ಕಳ ಸನ್ನದು)

ಇ. ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆ, 2005 (ಎನ್‌ಪಿಎ 2005)

ಎಫ್. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ, 2005

ಜಿ. ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಮಕ್ಕಳ ಹಕ್ಕು ಕಾಯ್ದೆ, 2009: ಸಮಗ್ರ ಶಿಶು ಸಂರಕ್ಷಣಾ ಯೋಜನೆ (ಐಸಿಪಿಎಸ್)

ಹೆಚ್. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ, 2012 (ಪೋಕ್ಸೋ)

ಐ. ರಾಷ್ಟ್ರೀಯ ಮಕ್ಕಳ ನೀತಿ, 2013:

ಜೆ. ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಗಟ್ಟುವ, ನಿಷೇಧಿಸುವ ಮತ್ತು ಪರಿಹಾರ) ಕಾಯ್ದೆ 2013: ಇದು ಕೇಂದ್ರ ಸರ್ಕಾರದ ಕಾಯ್ದೆಯಾಗಿದ್ದು, ಉದ್ಯೋಗದ ಸ್ಥಳಗಳಲ್ಲಿನ ಲೈಗಿಂಕ ಕಿರುಕುಳಗಳಿಂದ ಮಹಿಳೆಯರನ್ನು ರಕ್ಷಿಸುವುದಾಗಿದೆಯಲ್ಲದೆ ಇದರೊಂದಿಗೆ ಶಾಲೆ, ಕೆಲಸದ ಸ್ಥಳ ಅಥವಾ ಇತರೆ ಇದೇ ಬಗೆಯ ಪರಿಸರದಲ್ಲಿರುವ ಹೆಣ್ಣು ಮಕ್ಕಳಿಗೂ ರಕ್ಷಣೆಯನ್ನು ಒದಗಿಸುವ ಬಗ್ಗೆ ವಿವರಿಸಿದೆ.

ಕೆ. ಶಾಲೆಗಳಲ್ಲಿ ಕಠಿಣ ದೈಹಿಕ ಶಿಕ್ಷೆಯನ್ನು ತೆಗೆದು ಹಾಕಲು ಸಲಹೆ

ಎಲ್. ಅಪರಾದ ಪ್ರಕರಣಗಳಲ್ಲಿ ದುರ್ಬಲ ಸಾಕ್ಷಿಗಳ ಧ್ವನಿ ಮುದ್ರಣ ಮಾಡಲು ಮಾರ್ಗಸೂಚಿಗಳು

ಎಂ. ರೈಲ್ವೆ ವಶದಲ್ಲಿರುವ ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಕಾರ್ಯ ವಿಧಾನಗಳು

ಎನ್. ಬಾಲ ಕಾರ್ಮಿಕತೆ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986

ಓ. ಬಾಲ ಕಾರ್ಮಿಕತೆ (ತಿದ್ದುಪಡಿ) ಕಾಯ್ದೆ, 2006

ಪಿ. ಜೀತ ಪದ್ಧತಿ (ನಿರ್ಮೂಲನಾ) ಕಾಯ್ದೆ, 1976

ಕ್ಯೂ. ಕಾರ್ಖಾನೆಗಳ ಕಾಯ್ದೆ, 1948

ಆರ್. ಶಿಶುವಿಗೆ ಹಾಲಿನ ಬದಲಿ ಆಹಾರಗಳು, ಹಾಲಿನ ಬಾಟಲಿಗಳು ಮತ್ತು ಶಿಶುವಿನ ಆಹಾರಗಳು

ಎಸ್. ಪ್ರಸವ ಪೂರ್ವ ಪತ್ತೆಹಚ್ಚುವ ವಿಧಾನಗಳು ಅಧಿನಿಯಮ, 1994

ಟಿ. ಧೈಹಿಕ ಅಸಾಮರ್ಥ್ಯ ಹೊಂದಿರುವ ವ್ಯಕ್ತಿಗಳ ಅಧಿನಿಯಮ. 1995

ಯು. ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006

ವಿ. ಅನೈತಿಕ ಕಳ್ಳಸಾಗಣೆ ತಡೆ ಕಾಯ್ದೆ, 1986

ಡಬ್ಲ್ಯೂ. ಗಾರ್ಡಿಯನ್ಸ್ ಮತ್ತು ವಾರ್ಡ್ಸ್ ಕಾಯ್ದೆ, 1890

ಎಕ್ಸ್. ಹಿಂದೂ ದತ್ತು ಮತ್ತು ನಿರ್ವಹಣೆ ಕಾಯ್ದೆ, 1956

ವೈ. ಆಹಾರದ ಹಕ್ಕು ಕಾನೂನು ಮತ್ತು ಮಕ್ಕಳು

ಝಡ್. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಯ್ದೆ, 1989

ಎಎ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ, 2005

ಬಿಬಿ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಮಾರ್ಗಸೂಚಿಗಳು: ಶಾಲಾ ಸುರಕ್ಷತಾ ನೀತಿ– 2013

ಸಿಸಿ. ಕರ್ನಾಟಕ ವಿಕ್ಟಿಮ್ (ಪೀಡಿತರ) ಪರಿಹಾರ ಯೋಜನೆ – 2011

ಡಿಡಿ. ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐಸಿಪಿಎಸ್)

### 2.4 ಆಡಳಿತಾತ್ಮಕ ತತ್ವಗಳು ಮತ್ತು ನಿಗಧಿಪಡಿಸಲಾದ ಮಾನದಂಡಗಳು

ಮಕ್ಕಳ ರಕ್ಷಣಾ ನೀತಿಯು ಮಕ್ಕಳ ರಕ್ಷಣೆಯ ಹಕ್ಕುಗಳನ್ನು ಮನವರಿಕೆ ಮಾಡಿಕೊಡುವುದಕ್ಕಾಗಿ ವರ್ಗಾಯಿಸಲಾಗದಂಥಹ ಕೆಲವು ಮೂಲಭೂತ ತತ್ವ[3]ಗಳಿಂದ ರೂಪಿತಗೊಂಡಿದೆ. ಈ ಕೆಳಕಂಡ ತತ್ವಗಳು ಮಕ್ಕಳ ಸಂರಕ್ಷಣೆಗೆ ಸಂಬಂಧಿಸಿದಂತೆ ರೂಪಿತವಾಗಿರುವ ಶಾಸನಗಳು, ಮಾನದಂಡಗಳು, ಮಾರ್ಗಸೂಚಿಗಳ ಆಧಾರದಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸಲಾಗುತ್ತದೆ.

ಎ. **ಮಕ್ಕಳ ಹಿತಾಸಕ್ತಿಯ ತತ್ವ:** ಈ ತತ್ವವು ಮಕ್ಕಳ ರಕ್ಷಣೆಯಲ್ಲಿ ನಿರತರಾಗಿರುವ ಭಾಗೀದಾರರುಗಳು ಮಕ್ಕಳ ಕುರಿತಾಗಿ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳುವಾಗ[4] ಮಕ್ಕಳ ಹಿತದೃಷಿಯನ್ನು ಪ್ರಾಥಮಿಕ ಆಧ್ಯತೆಯನ್ನಾಗಿ ಪರಿಗಣಿಸಬೇಕೆಂದು ತಿಳಿಸುವುದರೊಂದಿಗೆ ರಾಜ್ಯವು ಮಕ್ಕಳ ಕುರಿತ ನೀತಿಗಳನ್ನು ರೂಪಿಸಬೇಕು ಮತ್ತು ಗರಿಷ್ಠ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಹಂಚಿಕೆ ಮಾಡಬೇಕೆಂಬುದು ತಿಳಿಸುತ್ತದೆ. ರಾಜ್ಯ ಸರ್ಕಾರ, ಪಾಲಕರು, ಪೋಷಕರು, ಶಿಕ್ಷಕರು ಮತ್ತು ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಕಾನೂನುಬದ್ಧವಾಗಿ ಹೊಣೆಗಾರರಾಗಿರುವ ಇತರೆ ವ್ಯಕ್ತಿಗಳ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಸಹ ಇದು ವಿವರಿಸುತ್ತದೆ.

---

[3] ಯುಎನ್‌ಸಿಆರ್‌ಸಿ ಮೇರೆಗೆ ನಿರೂಪಿಸಲಾದ ತತ್ವಗಳು ಮತ್ತು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2000ದ ಮತ್ತು 2006ರ ತಿದ್ದುಪಡಿ ಮೇರೆಗಿನ ಮಾರ್ಗದರ್ಶಿ ತತ್ವಗಳು.

[4] ಯುಎನ್‌ಸಿಆರ್‌ಸಿ ಅನುಚ್ಛೇದ 3

ಬಿ. **ಸಮಾನತೆ, ಸಾರ್ವತ್ರಿಕತೆ ಮತ್ತು ತಾರತಮ್ಯರಹಿತ ತತ್ವ:** ಈ ತತ್ವದಡಿ ಲಿಂಗತ್ವ, ಧರ್ಮ, ಜಾತಿ, ವರ್ಗ, ಭೌಗೋಳಿಕ ಪ್ರದೇಶ, ವಿಕಲತೆ ಇತ್ಯಾದಿಗಳನ್ನು ಒಳಗೊಂಡಂತೆ ಯಾವುದೇ ಕಾರಣಗಳನ್ನು ಮುಂದಿಟ್ಟು ಮಗುವನ್ನು ತಾರತಮ್ಯ ಮಾಡುವಂತಿಲ್ಲ ಮತ್ತು ಎಲ್ಲಾ ಮಕ್ಕಳಿಗೆ ಸಮಾನಾವಕಾಶ ಮತ್ತು ಉಪಚಾರಗಳನ್ನು ನೀಡತಕ್ಕದ್ದು. ಸದರಿ ತತ್ವದಡಿ ರಾಜ್ಯ ಮಕ್ಕಳ ಸಂರಕ್ಷಣಾ ನೀತಿಯು ರಾಜ್ಯದಲ್ಲಿ ಹುಟ್ಟಿದಂದಿನಿಂದ 18 ವರ್ಷ ವಯಸ್ಸಿನ ಒಳಗಿರುವ ಎಲ್ಲ ಮಕ್ಕಳಿಗೂ ಸೇರಿದಂತೆ ವಿಶೇಷವಾಗಿ ಹೆಣ್ಣು ಮಕ್ಕಳು, ದುರ್ಬಲ ವರ್ಗದವರು ಅಥವಾ ಸಂಕಷ್ಟಕ್ಕೊಳಗಾಗಬಹುದಾದ ಮಕ್ಕಳಿಗೆ ರೂಪಿಸಲಾದ ಕಾನೂನುಗಳಿಗೆ ಅನ್ವಯಿಸುತ್ತದೆ.

ಸಿ. **ಬದುಕುವ ಮತ್ತು ಬೆಳವಣಿಗೆ ಹೊಂದುವ ಹಕ್ಕಿನ ತತ್ವ:** ಮಕ್ಕಳ ಬದುಕುವ ಮತ್ತು ಬೆಳವಣಿಗೆಹೊಂದುವ ಎಲ್ಲಾ ಹಕ್ಕುಗಳು ಸೇರಿದಂತೆ ಮಗುವಿನ ಬದುಕುವ ಹಕ್ಕಿನ ಅಡಿಯಲ್ಲಿ ವಾಸದ ಸ್ಥಿತಿ–ಗತಿಗಳು, ಜೀವನ ಮಟ್ಟ ಹಾಗೂ ತನ್ನ ಸಾಮರ್ಥ್ಯವನ್ನು ಗರಿಷ್ಠ ಪ್ರಮಾಣದಲ್ಲಿ ವೃದ್ಧಿಸಿಕೊಳ್ಳುವ ನಿಯಮಗಳ ಆಧಾರದಲ್ಲಿ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸಲಾಗಿದೆ.

ಡಿ. **ಭಾಗವಹಿಸುವ ಹಕ್ಕಿನ ತತ್ವ:** ಮಗುವಿನ ಮೇಲೆ ಪರಿಣಾಮ ಬೀರುವ ಸಮುದಾಯದಲ್ಲಿನ ಯಾವುದೇ ವಿಷಯಗಳ ಪ್ರತಿ ಹಂತದಲ್ಲಿಯೂ ಮಗುವಿನ ಮಾತನ್ನು ಕೇಳಿಸಿಕೊಳ್ಳುವ ಮತ್ತು ಆಲಿಸುವ ಮತ್ತು ಭಾಗವಹಿಸುವ ಹಕ್ಕನ್ನು ಮಗುವು ಹೊಂದಿರುತ್ತದೆ.ಮಕ್ಕಳ ಭಾಗವಹಿಸುವ ಹಕ್ಕಿಗೆ ಹನ್ನೊಂದು ಮತ್ತು ಹನ್ನೆರಡನೇ ಪಂಚವಾರ್ಷಿಕ ಯೋಜನೆಗಳ (2012–2017) ದಸ್ತಾವೇಜುಗಳಲ್ಲಿ, ರಾಷ್ಟ್ರೀಯ ಮಕ್ಕಳ ನೀತಿ 2013 ಮತ್ತು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2000 ಮತ್ತು ರಾಜ್ಯ ನಿಯಮಗಳು, 2010 ರಲ್ಲಿ ಒತ್ತು ನೀಡಲಾಗಿದೆ.

ರಾಜ್ಯ ಮಕ್ಕಳ ಸಂರಕ್ಷಣಾ ನೀತಿಯು ಸದರಿ ತತ್ವವನ್ನಾಧರಿಸಿ ಮಕ್ಕಳ ಅನಿಸಿಕೆ, ಅಭಿಪ್ರಾಯಗಳನ್ನು ಆಲಿಸುವ (ಮಕ್ಕಳ ವಯಸ್ಸು ಮತ್ತು ತಿಳುವಳಿಕೆಯನ್ನಾಧರಿಸಿ)ಲ್ಲಿ ಮತ್ತು ವಯಸ್ಕರು ಮತ್ತು ಮಕ್ಕಳ ನಡುವೆ ಪರಸ್ಪರ ಗೌರವಯುತ ಸಂವಹನಕ್ಕೆ ಪೂರಕ ವಾತಾವರಣವನ್ನು ಕಲ್ಪಿಸುವಲ್ಲಿ ರಾಜ್ಯದ ಬದ್ಧತೆಯನ್ನು ಸ್ಪಷ್ಟಪಡಿಸುತ್ತದೆ.

ಇ. **ಘನತೆ ಮತ್ತು ಸ್ವಾಭಿಮಾನದ ತತ್ವ:** ಮಗುವಿನ ಘನತೆ ಮತ್ತು ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಎಲ್ಲ ಮಕ್ಕಳನ್ನು ಗೌರವಯುತವಾಗಿ ನಡೆಸಿಕೊಳ್ಳತಕ್ಕದ್ದು. ಮಕ್ಕಳ ಸಂರಕ್ಷಣಾ ನೀತಿಯು ಮಕ್ಕಳೊಂದಿಗೆ ನಡೆಸಲಾಗುವ ಎಲ್ಲಾ ರೀತಿಯ ಮೌಖಿಕ ಮತ್ತು ಅಮೌಖಿಕ ಸಂವಹನವು ಮಗು ಸಂವೇದಿ ರೂಪದಲ್ಲಿದ್ದು, ಮಗುವಿನ ಸ್ವಾಭಿಮಾನವನ್ನು ಗೌರವಿಸುವಂಥಹ ರೀತಿಯಲ್ಲಿರಬೇಕು.

ಎಫ್. **ಗೌಪ್ಯತೆಯ ತತ್ವ:** ಮಗುವಿನ ರಕ್ಷಣೆಯು ಮಕ್ಕಳ ಖಾಸಗಿತನ ಮತ್ತು ಗೌಪ್ಯತೆಯ ಹಕ್ಕನ್ನು ಒಳಗೊಂಡಿರುತ್ತದೆ. ಕಾನೂನಿನ ಮೂಲಕ ನಿಗಧಿಪಡಿಸಿದ ಹೊರತು, ಮಗುವಿನಮೇಲಿನ ಎಲ್ಲಾ ಬಗೆಯ ದುರುಪಯೋಗಗಳಿಗೆ ಸಂಬಂಧಪಟ್ಟಂತೆ ವ್ಯವಹರಿಸುವಾಗ ಗೌಪ್ಯತೆಯನ್ನು ಕಾಪಾಡತಕ್ಕದ್ದು.ಇಂತಹ ಪ್ರಕರಣಗಳಿಗೊಳಗಾದ ಮಗುವಿನ ಗುರುತಿನ ಖಾಸಗಿತನವನ್ನು ಕಟ್ಟುನಿಟ್ಟಾಗಿ ಕಾಪಾಡಬೇಕೆಂಬುದನ್ನು ಸಹ ಸದರಿ ತತ್ತ್ವವು ಪ್ರತಿಪಾದಿಸುತ್ತದೆ. ಮಗುವಿನ ಹೆಸರು, ವಿಳಾಸ, ಭಾವಚಿತ್ರ, ಕುಟುಂಬದ ವಿವರಗಳು, ಶಾಲೆ, ನೆರೆಹೊರೆ ಅಥವಾ ಗುರುತನ್ನು ಬಹಿರಂಗಪಡಿಸುವುದಕ್ಕೆ ಎಡೆಮಾಡಿಕೊಡುವ ಯಾವುದೇ ಇತರ ವಿವರಗಳುಮಗುವಿನ ಗುರುತಿನ ಅಂಶಗಳಾಗಿವೆ. ಮಗುವಿನ ಹಕ್ಕುಗಳ ರಕ್ಷಣೆಯ ಭಾಗೀದಾರರಾದ ಮಾಧ್ಯಮಗಳು ಸಹ ದುರುಪಯೋಗಗಳಿಗೊಳಗಾದ ಮಗುವಿನ ಗುರುತಿನ ಗೌಪ್ಯತೆಯನ್ನು ಕಾಪಾಡಬೇಕಾಗುತ್ತದೆ.

**2.5 ಪ್ರಮುಖ ಸವಾಲುಗಳು:**

ಪರಿಣಾಮಕಾರಿ ಮತ್ತು ಸಮಗ್ರ ಮಕ್ಕಳ ರಕ್ಷಣಾ ವ್ಯವಸ್ಥೆಗೆ ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಇತರೆ ಅನೇಕ ಸವಾಲುಗಳಿವೆ.

**ಎ.** ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾನೂನುಗಳಡಿಯಲ್ಲಿರುವ ಮಕ್ಕಳ ರಕ್ಷಣಾ ಅಗತ್ಯತೆಗಳ ಬಗ್ಗೆ ಜನಸಾಮಾನ್ಯರು ಮತ್ತು ಮಕ್ಕಳ ರಕ್ಷಣೆಯ ಜವಾಬ್ದಾರಿ ಹೊಂದಿರುವ ವಿವಿಧ ವರ್ಗದ ಅಧಿಕಾರಿಗಳಲ್ಲಿನ ಸಮರ್ಪಕ ಅರಿವಿನ ಕೊರತೆ.

**ಬಿ.** ಮನೆ ಮತ್ತು ಇತರೆ ಪರಿಸರಗಳಲ್ಲಿ ಮಕ್ಕಳ ಮೇಲಾಗುವ ದೌರ್ಜನ್ಯಗಳ ಬಗೆಗಿನ ಅರಿವು ಮತ್ತು ಸಮರ್ಪಕ ಗಮನದ ಕೊರತೆ.

**ಸಿ.** ವಿವಿಧ ಸನ್ನಿವೇಶಗಳಲ್ಲಿರುವ ಮತ್ತು ಅವಶ್ಯಕತೆಗಳನ್ನು ಹೊಂದಿರುವ ಮಕ್ಕಳನ್ನು ಗುರುತಿಸಿ ರಕ್ಷಣೆ ನೀಡಲು ಸಾಧ್ಯವಾಗದಿರುವುದು.

**ಡಿ.** ಮಕ್ಕಳಿಗೆ ಸೇವೆಯನ್ನು ಒದಗಿಸಲು ನಿರತರಾಗಿರುವ ತರಬೇತಿ ಹೊಂದಿದ, ಅನುಭವವುಳ್ಳ, ಸಂವೇದನಾಶೀಲ ಸಿಬ್ಬಂದಿಗಳಾದ ಸಮಾಜ ಕಾರ್ಯಕರ್ತರು, ಶಿಕ್ಷಕರು, ವೈದ್ಯಕೀಯ ಸಿಬ್ಬಂದಿಗಳು, ಆಪ್ತಸಮಾಲೋಚಕರು, ಪೊಲೀಸ್ ಹಾಗೂ ಇತರೆ ಸಿಬ್ಬಂದಿಗಳ ಕೊರತೆ.

**ಇ.** ಮಕ್ಕಳಿಗೆ ಸೇವೆಯನ್ನು ಒದಗಿಸುತ್ತಿರುವ ಸಿಬ್ಬಂದಿಗಳಿಗೆ ಸಮರ್ಪಕ ತರಬೇತಿ ಮತ್ತು ಅರಿವಿನ ಕೊರತೆ

**ಎಫ್.** ಮಕ್ಕಳ ರಕ್ಷಣಾ ಸೇವೆಗಳನ್ನು ಒದಗಿಸುವಲ್ಲಿ ಸಂಪನ್ಮೂಲಗಳ ಕೊರತೆ

**ಜಿ.** ಮಕ್ಕಳ ಕುರಿತಾದ ಕಾನೂನು ಮತ್ತು ಯೋಜನೆಗಳನ್ನು ಜಾರಿಗೊಳಿಸುವ ಹಾಗೂ ಅನುಷ್ಠಾನಗೊಳಿಸುವಲ್ಲಿನ ತೊಡಕುಗಳು. ಉದಾ: ಮಕ್ಕಳ ರಕ್ಷಣೆಯ ಕುರಿತಾದ ICPS ಕಾರ್ಯಕ್ರಮ ಮತ್ತು ಸದರಿ ಕಾರ್ಯಕ್ರಮದ ಮೇಲ್ವಿಚಾರಣೆಯಲ್ಲಿನ ತೊಡಕುಗಳು.

**ಹೆಚ್.** ಮಕ್ಕಳ ರಕ್ಷಣೆಯನ್ನು ಕುರಿತ ಕಾನೂನು ವ್ಯವಸ್ಥೆಯ ವ್ಯಾಪಕ ಪ್ರಚಾರದ ಕೊರತೆ.

---

5. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯು ಶಿಕ್ಷಣ ಸಂಸ್ಥೆಗಳಿಗಾಗಿ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸುವ ಮೂಲಕ ಮಕ್ಕಳ ಭಾಗವಹಿಸುವಿಕೆ ಹಕ್ಕಿಗೆ ಒಂದು ನಿದರ್ಶನವನ್ನು ಒದಗಿಸಿದೆ. ಮಕ್ಕಳ ರಕ್ಷಣೆಯ ಆರಂಭಿಕ ಹಂತವಾಗಿ **'ನಮ್ಮ ಸುರಕ್ಷತೆ ನಮ್ಮ ದನಿ'** ಎಂಬ ಪ್ರಯತ್ನವನ್ನು ಇನ್‌ವೆಂಚರ್ ಅಕಾಡೆಮಿಯು ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್‌ಟ್ರಸ್ಟ್, ಫೀಡ್‌ಬ್ಯಾಕ್ ಕನ್ಸಲ್ಟಿಂಗ್, ಕನ್ಸರ್ನ್ ಫಾರ್ ವರ್ಕಿಂಗ್ ಚಿಲ್ಡ್ರನ್ ಮತ್ತು ಮಂಡ್‌ಕುರ ಲಾ ಪಾರ್ಟನರ್ಸ್‌ಗಳ ಸಹಯೋಗದೊಂದಿಗೆ ಹಮ್ಮಿಕೊಂಡಿತು. ಇದರಲ್ಲಿ ಬೆಂಗಳೂರಿನ ವಿವಿಧ ಭಾಗಗಳಿಂದ ವಿವಿಧ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಸುಮಾರು 1000ಕ್ಕೂ ಹೆಚ್ಚಿನ ಮಕ್ಕಳು ಭಾಗವಹಿಸಿ ರಾಜ್ಯದಲ್ಲಿ ಮಕ್ಕಳ ರಕ್ಷಣೆಯ ಕುರಿತು ತಮ್ಮ ಅನಿಸಿಕೆ, ಕಾಳಜಿ ಮತ್ತು ಬೇಡಿಕೆಗಳನ್ನು ವ್ಯಕ್ತಪಡಿಸಿದರು. ಈ ಅನಿಸಿಕೆಗಳನ್ನು ಸರ್ಕಾರಕ್ಕೆ ಸನ್ನಧಿನ ರೂಪದಲ್ಲಿ ನೀಡಲಾಗಿದೆ ಮತ್ತು ಇದನ್ನು ರಾಜ್ಯಾದ್ಯಂತ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯ ವಿಧಾನಗಳು ಹಾಗೂ ಮಕ್ಕಳ ಸುರಕ್ಷತಾ ಗಮನಿಕೆ ಪಟ್ಟಿಗಳನ್ನು ರೂಪಿಸಲು ಬಳಸಿಕೊಳ್ಳಲಾಗಿದೆ.

# ಅಧ್ಯಾಯ 3 : ಅನ್ವಯಿಸುವಿಕೆ ಮತ್ತು ಅನುಷ್ಠಾನ

## 3.1 ರಾಜ್ಯ ಮಕ್ಕಳಾ ರಕ್ಷಣಾ ನೀತಿಯ ವ್ಯಾಪ್ತಿ

ರಾಜ್ಯ ಮಕ್ಕಳ ರಕ್ಷಣಾ ನೀತಿಯು ಮಕ್ಕಳ ನೇರ ಅಥವಾ ಪರೋಕ್ಷ ಸಂಪರ್ಕಕ್ಕೆ ಬರುವ ಎಲ್ಲಾ ಸರ್ಕಾರಿ ಇಲಾಖೆಗಳು, ಸಿಬ್ಬಂದಿ, ಸಂಸ್ಥೆಗಳು, ಶಾಸನಬದ್ಧ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಈ ನೀತಿಯ ವ್ಯಾಪ್ತಿಯು ಶಿಕ್ಷಣ ಸಂಸ್ಥೆಗಳು ಮತ್ತು ಮಕ್ಕಳಿಗಾಗಿ ಇರುವ ಇತರ ಸಂಸ್ಥೆಗಳನ್ನು ಒಳಗೊಂಡಂತೆ ಎಲ್ಲ ಸನ್ನಿವೇಶ ಮತ್ತು ಸಂದರ್ಭಗಳಲ್ಲಿ ಎಲ್ಲಾ ಮಕ್ಕಳ ಸುರಕ್ಷತೆ ಮತ್ತು ಸಂರಕ್ಷಣೆಯನ್ನು ಖಚಿತಪಡಿಸುವ ರಾಜ್ಯ ಸರ್ಕಾರದ ಹೊಣೆಗಾರಿಕೆಯನ್ನು ಒಳಗೊಂಡಿದೆ. ವಿವಿಧ ಸನ್ನಿವೇಶಗಳಲ್ಲಿ ನೆಲೆಗೊಂಡಿರುವ ಅಥವಾ ವಿಭಿನ್ನ ಪರಿಸರದಲ್ಲಿ ಕಂಡುಬರುವ ಮಕ್ಕಳ ರಕ್ಷಣೆಯ ಅವಶ್ಯಕತೆಗಳಿಗನುಸಾರವಾಗಿ, ಸದರಿ ನೀತಿಯಡಿಯಲ್ಲಿ ಮಾರ್ಗಸೂಚಿಗಳು ಮತ್ತು ನಿರ್ಧಿಷ್ಟ ಅನುಷ್ಠಾನ ವಿಧಾನಗಳನ್ನು ರಚಿಸಲಾಗುವುದು.

## 3.2 ಅನುಷ್ಠಾನ

ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ಕೆಳಕಂಡ ಪ್ರಮುಖ ಅಂಶಗಳನ್ನು ಆಧರಿಸಿ ಅನುಷ್ಠಾನಗೊಳಿಸಲಾಗುವುದು.

ಎ. **ಕಾರ್ಯ ನಿರ್ವಹಣಾ ಮಾರ್ಗಸೂಚಿಗಳು ಮತ್ತು ವಿಧಾನಗಳು:** ವಿವಿಧ ಕಾಯ್ದೆಗಳು ಮತ್ತು ಯೋಜನೆಗಳಡಿ ಮಕ್ಕಳಿಗೆ ಸೇವೆಗಳನ್ನು ಒದಗಿಸುತ್ತಿರುವ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಾದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೋಲಿಸ್ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಕಾರ್ಮಿಕ ಇಲಾಖೆ, ಕಾನೂನು ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಜಿಲ್ಲಾ ಮತ್ತು ನಗರ ಆಡಳಿತ ಇಲಾಖೆ, ಮಾಹಿತಿ ಇಲಾಖೆ ಇತ್ಯಾದಿಗಳು ಸದರಿ ನೀತಿಯಲ್ಲಿ ತಿಳಿಸಿರುವ ಮಾರ್ಗಸೂಚಿ ಮತ್ತು ಕಾರ್ಯವಿಧಾನಗಳನ್ನು ಪ್ರಕಟಿಸುವ ಮೂಲಕ ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಅಂಶಗಳನ್ನು ಒಂದು ನಿರ್ಧಿಷ್ಟ ಅವಧಿಯಲ್ಲಿ ಅಥವಾ ಹಂತ–ಹಂತವಾಗಿ ಅನುಷ್ಠಾನಗೊಳಿಸಬೇಕು.

ಬಿ. **ರಾಜ್ಯ ನೋಡಲ್ ಅಧಿಕಾರಿಗಳನ್ನು ನೇಮಿಸುವುದು:** ಮಕ್ಕಳ ರಕ್ಷಣಾ ನೀತಿಯನ್ನು ಇತರೆ ಇಲಾಖೆಗಳ ಸಂಯೋಜನೆ ಮತ್ತು ಸಮನ್ವಯದ ಮೂಲಕ ಪರಿಣಾಮಕಾರಿಯಾಗಿ ಯೋಜಿಸಿ, ಅನುಷ್ಠಾನಗೊಳಿಸಲು ಹಾಗೂ ಮೇಲ್ವಿಚಾರಣೆ ಮತ್ತು ಪರಿಶೀಲನೆಗಾಗಿ ಅನುಕೂಲ ಕಲ್ಪಿಸಲು ರಾಜ್ಯ ನೋಡಲ್ ಅಧಿಕಾರಿಗಳನ್ನು ನೇಮಿಸುವುದು.

ಸಿ. **ಮಾನವ ಸಂಪನ್ಮೂಲ ಅಭಿವೃದ್ಧಿ:** ರಾಜ್ಯ ಮಕ್ಕಳ ರಕ್ಷಣಾ ನೀತಿಯ ಅನುಷ್ಠಾನದಲ್ಲಿ ನಿರತರಾದ ಎಲ್ಲಾ ಸಿಬ್ಬಂದಿಗಳು ಹಾಗೂ ಮಕ್ಕಳ ರಕ್ಷಣೆಗೆ ಹೊಣೆಗಾರರಾದ ಎಲ್ಲ ಭಾಗೀದಾರರುಗಳಿಗೆ ತರಬೇತಿ ನೀಡುವುದು ಮತ್ತು ಅವರಿಗೆ ಅರಿವು ಮೂಡಿಸುವ ಮೂಲಕ ನೀತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿಯ ಪ್ರಕ್ರಿಯೆಯನ್ನು ನಿಯಮಿತ ಮತ್ತು ಪುನರಾವರ್ತಿತ ಮಾದರಿಯಲ್ಲಿ ಜಾರಿಗೊಳಿಸುವುದು ಕಡ್ಡಾಯವಾಗಿದೆ.

**ಡಿ. ವಿವಿಧ ಸಂಸ್ಥೆಗಳ ನಡುವೆ ಸಂಯೋಜನೆಯನ್ನು ಹೊಂದಲು ಗಣಕೀಕೃತ ಅಂತರ್ಜಾಲ ವ್ಯವಸ್ಥೆಯನ್ನು ರೂಪಿಸುವುದು:**

ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ಉತ್ತೇಜಿಸಲು ಮತ್ತು ಅನುಷ್ಠಾನಕ್ಕೆ ತರುವಲ್ಲಿ ಹಲವಾರು ಭಾಗೀದಾರರು ತೊಡಗಿರುವುದರಿಂದ, ರಾಜ್ಯದ ವಿವಿಧ ಇಲಾಖೆಗಳ ನಡುವೆ ಸಂಯೋಜನೆ ಮತ್ತು ಸಂಪರ್ಕಕ್ಕೆ ಅನುಕೂಲ ಕಲ್ಪಿಸುವಂಹ ಒಂದು ಸಮರ್ಪಿತ ಪ್ರತ್ಯೇಕ ಪೋರ್ಟಲ್‌ನ್ನು ಹೊಂದುವುದರೊಂದಿಗೆ, ಭಾಗೀದಾರರ ನಡುವೆ ಪರಸ್ಪರ ಸಂವಾದಕ್ಕೆ ಒಂದು ವೇದಿಕೆಯನ್ನೊದಗಿಸುವುದು ಅತ್ಯಗತ್ಯವಾಗಿದೆ. ಗಣಕೀಕರಣವನ್ನು ಯೋಜಿಸಲು ಮತ್ತು ಸಂಯೋಜಿತ ಪೋರ್ಟಲ್‌ನ್ನು ರೂಪಿಸಲು ಅವಶ್ಯಕವಾದ ಪ್ರಥಮ ಹಂತವೇ ಸಮಗ್ರ ಪ್ರಕ್ರಿಯೆಗಳ ವಿಶ್ಲೇಷಣೆಯಾಗಿದೆ.

**ಇ. ಮಕ್ಕಳ ರಕ್ಷಣಾ ಆಯವ್ಯಯವನ್ನು ಸಿದ್ಧಪಡಿಸುವುದು:** ರಾಜ್ಯವು ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾದ ಆಯವ್ಯಯದ ಕುರಿತು ಇಲಾಖೆ ಮತ್ತು ಯೋಜನಾವಾರು ವಿಶ್ಲೇಷಣೆಯನ್ನು ಕೈಗೊಳ್ಳುವ ಮೂಲಕ ಸಂಪನ್ಮೂಲಗಳ ಸಮರ್ಪಕ ಹಂಚಿಕೆ ಮತ್ತು ಸೂಕ್ತ ಬಳಕೆಯನ್ನು ಖಾತರಿಪಡಿಸುವುದು.

**ಎಫ್.ಮಕ್ಕಳ ಸುರಕ್ಷತೆಯ ಪರಿಣಾಮದ ವಿಮರ್ಷೆ:** ರಾಜ್ಯದ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ಆಯವ್ಯಯವೂ ಒಳಗೊಂಡಂತೆ ಮಕ್ಕಳ ರಕ್ಷಣೆಯ ನಿಯಮಾವಳಿಗಳ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಮಕ್ಕಳ ರಕ್ಷಣೆಯಲ್ಲಿ ತೊಡಗಿರುವವರು ಮತ್ತು ಸಂಸ್ಥೆಗಳು ಮುಖ್ಯವಾಗಿ ಪೊಲೀಸ್ ಮತ್ತು ಮಕ್ಕಳ ಸಹಾಯವಾಣಿ, ಮಕ್ಕಳ ಕಲ್ಯಾಣ ಸಮಿತಿ, ಮುಂತಾದ ಮಕ್ಕಳ ಸುರಕ್ಷತಾ ಏಜನ್ಸಿಗಳ ವರದಿಗಳು, ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳ ಹಿಂಬರಹವಿರುವ ಮತ್ತು ರಾಜ್ಯ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಹಾಗೂ ರಾಷ್ಟ್ರದ ಆಯವ್ಯಯದಲ್ಲಿ ಸೇರಿಸಿದ ಇಲಾಖಾ ದತ್ತಾಂಶ ಸಂಗ್ರಹಗಳು ಮುಂತಾದ ವರದಿಗಳನ್ನು ಆಧರಿಸಿ ಮಕ್ಕಳ ಸುರಕ್ಷತೆಯ ಪರಿಣಾಮದ ವಿಮರ್ಷೆಯನ್ನು ಕೈಗೊಳ್ಳಬಹುದಾಗಿದ್ದು, ಸದರಿ ವರದಿಗಳು ಸರ್ಕಾರದ ಉನ್ನತಾಧಿಕಾರಿಗಳಿಂದ ಮಾನ್ಯಗೊಂಡವುಗಳಾಗಿರಬೇಕು.

**ಜಿ. ಭಾಷಾಂತರ:** ಶಿಕ್ಷಣ ಸಂಸ್ಥೆಗಾಗಿ ರೂಪಿಸಿರುವ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು, ರಾಜ್ಯದಲ್ಲಿ ಸಾಮಾನ್ಯವಾಗಿ ಬಳಸಲಾಗುತ್ತಿರುವ ಸ್ಥಳೀಯ ಭಾಷೆಗೆ ಭಾಷಾಂತರಿಸಿ ವ್ಯಾಪಕವಾಗಿ ತಿಳಿಯುವಂತೆ ಮಾಡುವುದರೊಂದಿಗೆ ಅಂತರ್ಜಾಲವನ್ನು ಒಳಗೊಂಡಂತೆ ವ್ಯಾಪಕವಾಗಿ ಪ್ರಸಾರ ಮಾಡತಕ್ಕದ್ದು.

**ಹೆಚ್. ಅನುಸಂಧಾನ ಸೇವೆಗಳು:** ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಅನುಸಂಧಾನ ಸೇವೆಗಳನ್ನು ಪರಿಣಾಮಕಾರಿಯಾಗಿ ಒಧಗಿಸಲು ಶಿಷ್ಟಾಚಾರಗಳನ್ನು ಅಳವಡಿಸಿಕೊಳ್ಳುವ ಮೂಲಕ ಅವರಿಗೆ ಕಾನೂನು ಮತ್ತು ಬೆಂಬಲ ಸೇವೆಗಳು, ವೈದ್ಯಕೀಯ, ಮಾನಸಿಕ ಮತ್ತು ಸಾಮಾಜಿಕ ಸೇವೆಗಳು, ಶೈಕ್ಷಣಿಕ ಮತ್ತು ಇತರ ಪುನರ್ವಸತಿ ಮಾರ್ಗದರ್ಶನ, ತೊಂದರೆಗೀಡಾದವರಿಗೆ ಪರಿಹಾರ ನೀಡಿಕೆ, ಇತ್ಯಾದಿಗಳನ್ನು ನೀಡುವುದು.

**ಐ. ಅರಿವು–ಜಾಗೃತಿ ಮೂಡಿಸುವುದು:** ರಾಜ್ಯವು ಮಕ್ಕಳ ರಕ್ಷಣೆ ಮತ್ತು ಸುರಕ್ಷತಾ ವಿಷಯಗಳನ್ನು ಕುರಿತು ಸಾರ್ವಜನಿಕರು ಮತ್ತು ಎಲ್ಲ ಭಾಗೀದಾರರುಗಳಿಗೆ ಅರಿವು–ಜಾಗೃತಿಯನ್ನು ಮೂಡಿಸಲು ಸ್ಥಳೀಯ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಐಇಸಿ ಸಾಮಾಗ್ರಿಗಳನ್ನು ವಿನ್ಯಾಸಗೊಳಿಸಿ ಮತ್ತು ಅಭಿವೃದ್ಧಿಪಡಿಸುವುದು. ಸದರಿ ಐಇಸಿ ಸಾಮಾಗ್ರಿಗಳು ಎಲ್ಲ ಭಾಗೀದಾರರುಗಳ ಆಲೋಚನಾ ರೀತಿಗಳು, ಸಾಂಪ್ರದಾಯಿಕ

ಆಚರಣೆಗಳು ಮತ್ತು ಪೂರ್ವಭಾವಿ ಗ್ರಹಿಕೆಗಳನ್ನು ಕುರಿತ ವರ್ತನೆಯ ಬದಲಾವಣೆಗಳನ್ನು ಪ್ರಭಾವಿಸುವಂತಿಸರಬೇಕು. ಐಇಸಿ ಸಾಮಾಗ್ರಿಗಳು ಮಕ್ಕಳ ಸುರಕ್ಷತೆಗಾಗಿ ಅನುಷ್ಠಾನದಲ್ಲಿರುವ ಕಾನೂನು ಉಪಬಂಧಗಳನ್ನು ಸಹ ಒಳಗೊಂಡಿರಬೇಕು. ಜನಸಾಮಾನ್ಯರನ್ನು ಮತ್ತು ಉದ್ದೇಶಿತ ಭಾಗೀದಾರರನ್ನು ಪರಿಣಾಮಕಾರಿಯಾಗಿ ತಲುಪಲು ಪತ್ರಿಕೆ, ದೃಶ್ಯ ಮಾಧ್ಯಮ, ಜಾನಪದ ಕಲೆಗಳು, ರಂಗಭೂಮಿ, ಬೀದಿ ನಾಟಕಗಳು ಮುಂತಾದ ಸಮೂಹ ಸಂಪರ್ಕ ಮಾಧ್ಯಮಗಳನ್ನು ಬಳಸುವುದು.

ಜೆ. **ಗೌಪ್ಯತೆ ಮತ್ತು ಖಾಸಗೀತನ:** ಮಕ್ಕಳ ರಕ್ಷಣೆಯ ಕುರಿತು ಕಾರ್ಯನಿರ್ವಹಿಸುವ ಎಲ್ಲಾ ಇಲಾಖೆಗಳು ಮತ್ತು ಸರ್ಕಾರ ಮಗುವಿಗೆ ಸಂಬಂಧಿಸಿದ ಎಲ್ಲ ಮಾಹಿತಿಯ ಗೌಪ್ಯತೆಯನ್ನು ಕಾಪಾಡುವುದರೊಂದಿಗೆ ಮಗುವಿನ ಘನತೆ ಮತ್ತು ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಹಾಗೂ ಪ್ರಸ್ತುತದಲ್ಲಿ ಜಾರಿಯಲ್ಲಿರುವ ಕಾನೂನುಗಳಿಗೆ ಅನುಸಾರವಾಗಿ ಸಂಗ್ರಹಿಸಬೇಕು ಮತ್ತು/ಅಥವಾ ಪರಸ್ಪರ ಹಂಚಿಕೊಳ್ಳಬೇಕು.

ಕೆ. **ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ:** ರಾಜ್ಯವು ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸ್ಥಳೀಯ ಮಟ್ಟದಿಂದ ರಾಜ್ಯಮಟ್ಟದವರೆಗೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡಲು ಅಗತ್ಯವಿರುವ ಸೂಕ್ತ ವ್ಯವಸ್ಥೆಯನ್ನು ಹೊಂದುವುದರೊಂದಿಗೆ ಅಗತ್ಯ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳುವುದು.

### 3.3 ರಾಜ್ಯ ಮಕ್ಕಳ ರಕ್ಷಣಾ ನೀತಿಯ ಪರಿಶೀಲನೆ ಮತ್ತು ಮೇಲ್ವಿಚಾರಣೆ

ಮಕ್ಕಳ ರಕ್ಷಣಾ ನೀತಿಯ ವಾರ್ಷಿಕ ಪರಿಶೀಲನೆಯು ನೋಡಲ್ ಅಧಿಕಾರಿಯವರಾದ ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯತಕ್ಕದ್ದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕರ್ನಾಟಕ ಸರ್ಕಾರ ರವರು ಪ್ರಾಥಮಿಕ, ಮಾದ್ಯಮಿಕ ಹಾಗು ಕಾಲೇಜು ಶಿಕ್ಷಣ, ಪೋಲಿಸ್, ಕಾರ್ಮಿಕ ಇಲಾಖೆ, ಕಾನೂನು ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ, ಜಿಲ್ಲಾ ಮತ್ತು ನಗರಾಡಳಿತ, ಮಾಹಿತಿ ಇಲಾಖೆ, ಸೇರಿದಂತೆ ಇತರೆ ಸಂಬಂದಿತ ಇಲಾಖೆಗಳ ಸಹಯೋಗದೊಂದಿಗೆ ಪರಿಶೀಲನೆ ನಡೆಸಲು ಅಗತ್ಯ ಏರ್ಪಾಡುಗಳನ್ನು ಮಾಡುವುದು.

ರಾಜ್ಯದಲ್ಲಿ ಮಕ್ಕಳ ರಕ್ಷಣೆಯ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಎಲ್ಲ ಕಾಲಕ್ಕೂ ಮಕ್ಕಳ ರಕ್ಷಣಾ ನೀತಿಯು ಅನ್ವಯವಾಗಿರುವುದನ್ನು ಖಚಿತಪಡಿಸುವ ಸಲುವಾಗಿ ಅದನ್ನು ಕಾಲಕಾಲಕ್ಕೆ ಪುನರಾವಲೋಕನ ಮಾಡತಕ್ಕದ್ದು. ನೀತಿಯನ್ನು ನಿರಂತರವಾಗಿ ಅನುಷ್ಠಾನಗೊಳಿಸಲು ಮತ್ತು ಎಲ್ಲಾ ಕಾಲಕ್ಕೂ ಅನ್ವಯಿಸಲು ಅನುಷ್ಠಾನದ ಪರಿಶೀಲನೆಯ ಫಲಿತಾಂಶವನ್ನು ಉಪಯೋಗಿಸುವುದು.

ಮಗುವಿನ ಮೇಲಿನ ಪರಿಣಾಮಗಳ ವಿಮರ್ಶೆಗಳು ಮತ್ತು ರಾಜ್ಯದಲ್ಲಿ ಮಗುವಿನ ರಕ್ಷಣೆಗೆ ಸಂಬಂಧಿಸಿದಂತೆ ಮಕ್ಕಳ ಮೇಲೆ ಪ್ರಭಾವ ಬೀರುವ ಎಲ್ಲಾ ಕಾನೂನುಗಳು ಮತ್ತು ನೀತಿಗಳ ಪುನರಾವಲೋಕನವನ್ನು ಪರಿಶೀಲನಾ ಕಾರ್ಯತಂತ್ರಗಳು ಒಳಗೊಂಡಿವೆ.

### 3.4 ಅನುಸರಣೆ

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಅನುಸರಣೆಯು ಕೆಳಕಂಡ ವಿಚಾರಗಳ ಆಧಾರದ ಮೇಲೆ 2 ಭಾಗಗಳಾಗಿ ಪ್ರತಿಪಾದಿಸಿದೆ.

ಎ. ಮಕ್ಕಳ ರಕ್ಷಣೆಯನ್ನು ಸ್ವೀಕಾರರ್ಹ ರೀತಿಯಲ್ಲಿ ಅನುಷ್ಠಾನಗೊಳಿಸುವ ಧ್ಯೇಯದೊಂದಿಗೆ ಮಕ್ಕಳ ಸ್ನೇಹಿ ಆಡಳಿತವನ್ನು ಎಲ್ಲಾ ಭಾಗೀದಾರರು ಒಪ್ಪಿಕೊಳ್ಳುವಂತಾಗುವುದು.

ಬಿ. ಕೇಂದ್ರ ಹಾಗೂ ರಾಜ್ಯ ಸರ್ಕಾರದಡಿ ಅಸ್ತಿತ್ವದಲ್ಲಿರುವ ಎಲ್ಲಾ ಶಾಸನ ಮತ್ತು ನಿಯಮಗಳಡಿಯಲ್ಲಿ ಮಾನ್ಯ ಮಾಡಲಾದ ಕಾನೂನುಬದ್ಧ ಹೊಣೆಗಾರಿಕೆಗಳು, ಪರಿಹಾರ ವ್ಯವಸ್ಥೆ ಹಾಗೂ ಮಕ್ಕಳ ರಕ್ಷಣೆಯ ಪರಿಣಾಮಗಳ ನಿರ್ವಹಣೆಯನ್ನು ಗುರುತಿಸಲಾಗಿದೆ. ಉದಾ: ಬಾಲನ್ಯಾಯ ಕಾಯ್ದೆ ಮತ್ತು ನಿಯಮ, ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ಸಂರಕ್ಷಿಸುವ ಕಾಯ್ದೆ ಹಾಗೂ ನಿಯಮಗಳು, ಭಾರತೀಯ ದಂಡ ಸಂಹಿತೆ.

ರಾಜ್ಯವು ಸಂಬಂಧಿಸಿದ ಕಾನೂನುಗಳ ಮೂಲಕ ವಿವಿಧ ಕಾನೂನುಗಳಡಿಯಲ್ಲಿನ ಕಾರ್ಯವಿಧಾನಗಳು, ಮಾರ್ಗಸೂಚಿಗಳು ಹಾಗೂ ದಂಡನೆ ಪರಿಣಾಮಗಳನ್ನು ಪಾಲಿಸಲು ಬದ್ಧವಾಗಿದೆಯಲ್ಲದೇ, ನಿಗಧಿತ ಕಾಲಾವಧಿ ಮತ್ತು ಹಂತಹಂತವಾಗಿ ಅವಶ್ಯಕ ಮಾರ್ಪಾಡುಗಳೊಂದಿಗೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ಅನುಷ್ಠಾನಮಾಡುವ ಎಲ್ಲಾ ಪ್ರಯತ್ನಗಳನ್ನು ಮಾಡಬೇಕಿದೆ.

*****

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು

### ವಿಷಯಾನುಕ್ರಮಣಿಕೆ


| | | |
|---|---|---|
| | **ಅಧ್ಯಾಯ 1: ಕಿರುನೋಟ** | |
| 1.1 | ಸುರಕ್ಷಿತ ಶಾಲೆಯ ಪರಿಕಲ್ಪನೆ | 21 |
| 1.2 | ಸುರಕ್ಷಿತ ಶಾಲೆಯ ಮೌಲ್ಯಗಳು | 21 |
| 1.3 | ಸುರಕ್ಷಿತ ಶಾಲೆಯ ಉತ್ತೇಜನಕ್ಕೆ ಕಾರ್ಯತಂತ್ರಗಳು | 22–25 |
| | **ಅಧ್ಯಾಯ –2 ವ್ಯಾಖ್ಯಾನಗಳು ಮತ್ತು ವ್ಯಾಪ್ತಿ** | |
| 2.1 | ವ್ಯಾಖ್ಯಾನಗಳು | 26 |
| 2.2 | ಮಕ್ಕಳ ರಕ್ಷಣಾ ನೀತಿಯ ಅನ್ವಯ | 27–28 |
| | **ಅಧ್ಯಾಯ –3 ಮುಂಜಾಗ್ರತಾ ಕ್ರಮಗಳು** | |
| 3.1 | ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾರಿಯಲ್ಲಿರುವ ಮಗುವಿನ ರಕ್ಷಣಾ ನಿಯಮ, (EI CPP) | 29 |
| 3.2 | ಸುರಕ್ಷ ನೇಮಕಾತಿ ಮತ್ತು ಆಯ್ಕೆಯ ಮಾರ್ಗಸೂಚಿಗಳು | 30–31 |
| 3.3 | ಮಾನವ ಸಂಪನ್ಮೂಲ ನೀತಿ ಮತ್ತು ಸೇವಾ ನಿಯಮಗಳು | 31–32 |
| 3.4 | ಹೆಚ್ಚುವರಿ ಸುರಕ್ಷತಾ ಕ್ರಮಗಳು | 32–33 |
| 3.5 | ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ವೃತ್ತಿಪರ ನೈತಿಕತೆಯ ನೀತಿ ಸಂಹಿತೆ | 33–36 |
| 3.6 | ಸಾಮರ್ಥ್ಯಾಭಿವೃದ್ಧಿ | 37–38 |
| 3.7 | ಸುರಕ್ಷಿತ ಸಾರಿಗೆ ಕ್ರಮಗಳು | 39 |
| | **ಅಧ್ಯಾಯ : 4 ಮಕ್ಕಳ ಹಲ್ಲೆ ಸೇರಿದಂತೆ ಮಕ್ಕಳ ಸುರಕ್ಷತೆಯ ಉಲ್ಲಂಘನೆಗೆ ಪ್ರತಿಕ್ರಿಯಾತ್ಮಕ ಕ್ರಮಗಳು** | |
| 4.1 | ಉಲ್ಲಂಘನೆಯ ಸ್ವರೂಪವನ್ನು ಗುರುತಿಸುವಿಕೆ | 40 |
| 4.1.1 | ಮಕ್ಕಳ ಮೇಲಿನ ಹಲ್ಲೆಯ ಸೂಚಕಗಳನ್ನು ಗುರುತಿಸುವಿಕೆ | 40 |
| 4.2 | ಆಂತರಿಕ ಪ್ರತಿಕ್ರಿಯಾತ್ಮಕ ಕಾರ್ಯತಂತ್ರಗಳು | 40 |
| 4.2.1 | ಮಕ್ಕಳ ರಕ್ಷಣಾ ಸಮಿತಿ (CPC) | 40–42 |
| 4.2.2 | ಶಾಲಾ ನಿರ್ವಹಣಾ ಸಮಿತಿ (SMC) ಅಥವಾ ಪೋಷಕ–ಶಿಕ್ಷಕರ ಸಂಘ (PTA) | 43 |
| 4.2.3 | ಸಲಹಾ ಪೆಟ್ಟಿಗೆ | 43 |
| 4.2.4 | ವೃತ್ತಿಪರ ಆಪ್ತಸಮಾಲೋಚನಾ ಸೇವೆಗಳು | 44 |
| 4.3 | ಆಂತರಿಕ ಪ್ರತಿಕ್ರಿಯಾತ್ಮಕ ವರದಿ & ನಿವಾರಣೋಪಾಯಗಳ ಪ್ರಕ್ರಿಯೆ | 44–47 |
| 4.4 | ಗೌಪ್ಯತೆ | 47 |
| 4.5 | ವರ್ಗಾವಣೆ ಪ್ರಮಾಣ ಪತ್ರ | 48 |
| 4.6 | ವಿಚಾರಣಾ ಕಾರ್ಯವಿಧಾನಗಳು ಮತ್ತು ಜರುಗಿಸಬೇಕಾದ ಕ್ರಮ | 48–50 |

| | | |
|---|---|---|
| 4.7 | ಮಕ್ಕಳ ಸುರಕ್ಷತಾ ಉಲ್ಲಂಘನೆಯ ಬಾಹ್ಯ ಪರಿಹಾರೋಪಾಯ ವಿಧಾನಗಳು | 53 |
| 4.7.1 | ಮಕ್ಕಳ ಕಲ್ಯಾಣ ಸಮಿತಿ (CWC) | 53 |
| 4.7.2 | ಬಾಲ ನ್ಯಾಯ ಮಂಡಳಿ (JJB) | 54 |
| 4.7.3 | ಮಕ್ಕಳ ವಿಶೇಷ ಪೊಲೀಸ್ ಘಟಕ (SJPU) | 54 |
| 4.7.4 | ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (KSCPCR) | 55 |
| 4.7.5 | ಮಕ್ಕಳ ಸಹಾಯವಾಣಿ – 1098 | 55 |
| 4.7.6 | ರಾಜ್ಯಮಟ್ಟದ ಇಲಾಖೆಗಳು | 56 |
| 4.8 | ಕಾನೂನು ಪರಿಹಾರೋಪಾಯಗಳು ಮತ್ತು ವರದಿಯ ಕಾರ್ಯವಿಧಾನಗಳು | 56 |
| 4.8.1 | ಲೈಂಗಿಕ ಅಪರಾದಗಳಿಂದ ಮಕ್ಕಳ ರಕ್ಷಣಾ ಕಾಯ್ದೆ (POSCO) ಅಡಿಯಲ್ಲಿ | 56 |
| 4.9 | ಮಾಧ್ಯಮ ಮತ್ತು ಮಗುವಿನ ಸಂರಕ್ಷಣೆ | 57–58 |
| | **ಅಧ್ಯಾಯ 5: ಮೇಲ್ವಿಚಾರಣೆ ಮತ್ತು ಪರಿಶೀಲನೆ** | |
| 5.1 | ಶಿಕ್ಷಣ ಸಂಸ್ಥೆಯ ಹಂತದಲ್ಲಿ ಮೇಲ್ವಿಚಾರಣೆ ಮತ್ತು ಪರಿಶೀಲನೆ | 59 |
| 5.1.1 | ಸ್ವಯಂ ಮಾಪನ | 59 |
| 5.1.2 | ಮಕ್ಕಳ ರಕ್ಷಣಾ ಸಮಿತಿಯಿಂದ ಪರಿಶೀಲನೆ | 59 |
| 5.1.3 | ಸಂಸ್ಥೆಯ ಮುಖ್ಯಸ್ಥರಿಂದ ಪರಿಶೀಲನೆ ಮತ್ತು ಮೇಲ್ವಿಚಾರಣೆ. | 60 |
| 5.2 | ಬಾಹ್ಯ ಪರಿಶೀಲನೆ | 61–65 |
| | **ಅನುಬಂಧಗಳು** | |
| | **ಟೇಬಲ್** | |
| | – ಪ್ರಮುಖ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳು ಹಾಗೂ ಅಂತರ್–ಸಂಸ್ಥೆಗಳ ನಡುವಿನ ಸಮನ್ವಯತೆ | 67–84 |
| | **ಲಗತ್ತುಗಳು** | |
| | 1. ಮಾಧ್ಯಮಗಳ ನೀತಿ ಸಂಹಿತೆ | 85–89 |
| | 2. ಶಾಲೆಗಳಿಗೆ ಮಾದರಿ ಮಕ್ಕಳ ರಕ್ಷಣಾ ನೀತಿ | 90–103 |
| | 3. ಮಕ್ಕಳ ಮೇಲಿನ ಹಲ್ಲೆಯನ್ನು ವರದಿ ಮಾಡುವ ನಮೂನೆ | 104–105 |
| | 4. ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸುವ ಕಾರ್ಯತಂತ್ರಗಳು | 106–110 |
| | 5. ಆಘಾತ ನಂತರ ಮಕ್ಕಳ ಆರೈಕೆ | 111–122 |
| | **ತಡೆಪಟ್ಟಿ** | |
| | **ಶಿಕ್ಷಣ ಸಂಸ್ಥೆಗಳಿಗೆ ಮಕ್ಕಳ ಸುರಕ್ಷತಾ ಗಮನಿಕೆ ಪಟ್ಟಿ** | 123–162 |
| | ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದೊಯ್ಯುವ ವಿವಿಧ ಬಗೆಯ ಒಪ್ಪಂದದ ವಾಹನಗಳಾದ ಮೋಟಾರು ಕ್ಯಾಬ್/ ಮ್ಯಾಕ್ಸಿ ಕ್ಯಾಬ್/ ಓಮಿನಿ ಬಸ್‌ಗಳು ಕಡ್ಡಾಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳು | 163 |

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು

## ಅಧ್ಯಾಯ 1 : ಕಿರುನೋಟ

### 1.1 ಸುರಕ್ಷಿತ ಶಾಲೆಯ ಪರಿಕಲ್ಪನೆ:

ಮಗು ಎದುರಿಸುತ್ತಿರುವ ಮಾನಸಿಕ, ಭಾವನಾತ್ಮಕ, ಗ್ರಹಿಕಾತ್ಮಕ, ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಅಥವಾ ಭೌತಿಕ ಸಂಕಷ್ಟಗಳನ್ನು ವಿವಿಧ ಆಯಾಮಗಳಡಿ ತುಲನೆ ಮಾಡಿ, ಶೈಕ್ಷಣಿಕ ಸಂಸ್ಥೆಗಳು ಮಕ್ಕಳಿಗೆ ಸುರಕ್ಷಿತ ಪರಿಸರದ ರಕ್ಷಣೆ ನೀಡುವುದನ್ನು ಖಾತರಿಪಡಿಸಿಕೊಳ್ಳಲು ಸಮಗ್ರ ವಿಧಾನವನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಮಕ್ಕಳ ರಕ್ಷಣೆಯ ವಿಧಾನವು ಮಗುವಿನ ಶೈಕ್ಷಣಿಕ ಪರಿಸರ ಹಾಗೂ ಸಮಗ್ರವಾಗಿ ತೊಡಗಿಸಿಕೊಳ್ಳುವಿಕೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿರ್ವಹಿಸಬೇಕಾಗಿದೆ.

ಸದೃಢ ಮತ್ತು ಪೂರ್ವಭಾವಿ ಸುರಕ್ಷಿತ ಶಾಲಾ ವಾತಾವರಣದ ನಿರ್ಮಾಣವು ಭಾರತದ ಸಂವಿಧಾನ ಮತ್ತು ಶಾಸನಗಳಡಿಯಲ್ಲಿ ಮಕ್ಕಳು ಮತ್ತು ಅವರ ಹಕ್ಕುಗಳ ಕುರಿತಂತೆ ತಿಳಿಸಿರುವ ಅಂಶಗಳನ್ನು ಗೌರವಿಸುವುದರ ಆಧಾರದ ಮೇಲೆ ನಿಂತಿದೆ ಮತ್ತು ಹಲ್ಲೆ, ಕಿರುಕುಳ ಮತ್ತು ನಿಂದನೆಯಿಂದ ಮುಕ್ತವಾಗಿದೆ.ಶಿಕ್ಷಕರು, ಪೋಷಕರು, ಸಮುದಾಯ, ಇತರೆ ಶಾಲೆಗಳು ಮತ್ತು ಪ್ರಮುಖವಾಗಿ ಮಕ್ಕಳೂ ಸೇರಿದಂತೆ ಇತರೆ ಭಾಗೀದಾರರ ಜೊತೆಗೂಡಿ ಕಾರ್ಯನಿರ್ವಹಿಸುವುದಾಗಿದೆ. ವಿವಿಧ ಭಾಗೀದಾರರು ಒಟ್ಟಾಗಿ ಪೂರ್ವಾಗ್ರಹಗಳನ್ನು ತೊಡೆದುಹಾಕುವ ಮೂಲಕ ಹಾಗೂ ಮಗುವಿನ ಘನತೆಯನ್ನು ಎತ್ತಿಹಿಡಿದು ಮಕ್ಕಳ ಹಕ್ಕುಗಳನ್ನು ವಾಸ್ತವವಾಗಿ ಸಾಕಾರಗೊಳಿಸಬೇಕಾಗಿದೆ. ಸುರಕ್ಷಿತ ಶಾಲಾ ಪರಿಸರವು, ಮಗುವಿನ ಸಕಾರಾತ್ಮಕ ಹಾಗೂ ಒಟ್ಟಾರೆ ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸುವುದಾಗಿದೆ.

ಸುರಕ್ಷಾ ಶಾಲಾ ಪರಿಸರದ ಕಲ್ಪನೆಯು, ಒಂದು ಸಮರ್ಥ ಮತ್ತು ಸಬಲಗೊಳಿಸುವಿಕೆಯ ಪ್ರಕ್ರಿಯೆಯಾಗಿದ್ದು, ನಿರ್ಬಂಧಿತ ಕ್ರಮಗಳಾದ ಸದಾ ನಿಗಾ ವಹಿಸುವಿಕೆ ಮತ್ತು ನಿಯಂತ್ರಣ ಆಧಾರಿತ ವಿಧಾನವಾಗಿರುವುದಿಲ್ಲ ಎಂಬುದನ್ನು ನಿರ್ದೇಶಿಸುತ್ತದೆ. ಇದು ಮಗುವಿನ ಭಾಗವಹಿಸುವಿಕೆಯನ್ನು ಕೇಂದ್ರೀಕರಿಸುವುದನ್ನು ತಿಳಿಸುತ್ತದೆ ಹಾಗೂ ಈ ಮೂಲಕ ಎಲ್ಲಾ ಹಕ್ಕುಗಳು ಮತ್ತು ಮಕ್ಕಳನ್ನು ಕೇಂದ್ರೀಕರಿಸಿದ ಆಶಾದಾಯಕ ಶಾಲೆಯ ಅವಶ್ಯಕತೆಗಳನ್ನು ಹೊಂದಲು ಅನುವು ಮಾಡಿಕೊಡುವುದು. ಇದು ಮಗು ಸುರಕ್ಷಿತವಾಗಿದೆ ಎಂದು ಭಾವಿಸಿ ಪ್ರತಿಕ್ರಿಯಿಸುವ ವಾತಾವರಣವನ್ನು ನಿರ್ಮಿಸುವ ತತ್ತ್ವದಡಿ ಮಕ್ಕಳೂ ಸೇರಿದಂತೆ ಎಲ್ಲಾ ಭಾಗೀದಾರರು ಭಾಗವಹಿಸಬೇಕಾಗಿದೆ ಎಂಬುದನ್ನು ಆಶಿಸುತ್ತದೆ.

### 1.2 ಸುರಕ್ಷಿತ ಶಾಲೆಯ ಮೌಲ್ಯಗಳು:

#### 1.2.1 ಮಗು ಕೇಂದ್ರಿತ ವಿಧಾನ :

ಇದು ಮಕ್ಕಳನ್ನು ಸಮಗ್ರವಾಗಿ ನೋಡಿ ಗುರುತಿಸುವ ಒಂದು ಪ್ರಮುಖ ಮೌಲ್ಯವಾಗಿದ್ದು, ಪ್ರತಿಯೊಂದು ಮಗುವು ತನ್ನ ಅನುಭವಗಳು ಮತ್ತು ಅಭಿಪ್ರಾಯಗಳ ಮೂಲಕ ಕೊಡುಗೆ ನೀಡುವುದಾಗಿದೆ. ಮಗು ಕೇಂದ್ರಿತ ವಿಧಾನದಲ್ಲಿ ಮುಖ್ಯವಾಗಿ ಮಗುವಿನ ಅತ್ಯುತ್ತಮ ಹಿತಾಸಕ್ತಿಗಳಾದ ಅನಿಸಿಕೆ, ಇಚ್ಛೆ ಮತ್ತು ಕಾಳಜಿಯನ್ನು ಪರಿಗಣಿಸಿ ನಿರ್ಧರಿಸಬಹುದು. ಇದರಿಂದ ಎಲ್ಲಾ ಮಕ್ಕಳಿಗೆ ಭಾಗವಹಿಸಲು ಮತ್ತು ಕಲಿಕೆಯ ಅವಕಾಶಗಳಿಂದ ಎಲ್ಲಾ ಪ್ರಯೋಜನಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಈ ವಿಧಾನವು ಒಂದು ವೇಳೆ ಮಗುವೇ ಹಲ್ಲೆನಡೆಸಿದ್ದಲ್ಲಿ, ಪ್ರತಿಕ್ರಿಯೆಯು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಕುರಿತಾಗಿ ಇರುವಂತಹ ಸುಧಾರಣಾತ್ಮಕ ಮತ್ತು ಪುನರ್ವಸತಿಯ ಸೇವೆಗಳಡಿಯಲ್ಲಿ ಪರಿಗಣಿಸುವ ಬಗ್ಗೆ ತಿಳಿಸುತ್ತದೆ.

### 1.2.2 ಸ್ವ–ನಿರ್ಧಾರ:

ಮಕ್ಕಳು ತಮ್ಮ ಜೀವನದ ಮೇಲೆ ಪರಿಣಾಮ ಬೀರುವ ಎಲ್ಲಾ ವಿಷಯಗಳು ಹಾಗೂ ಅವರ ಸ್ವಂತ ಯೋಗಕ್ಷೇಮಕ್ಕೆ ಸಂಬಂಧಿಸಿದಂತೆ ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಮತ್ತು ಸಂಬಂಧಿಸಿದ ತೀರ್ಮಾನಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರುತ್ತಾರೆ. ಸ್ವ–ನಿರ್ಧಾರವು ಸುರಕ್ಷಿತ ಶಾಲಾ ಪರಿಸರದಲ್ಲಿ ಮಗುವು ಸಕ್ರೀಯವಾಗಿ ತೊಡಗಿಸಿಕೊಳ್ಳಲು ಮತ್ತು ಕಾಳಜಿವಹಿಸಬೇಕಾದ ವಿಷಯಗಳ ಕುರಿತು ವರದಿ ಮಾಡಲು ಸಮರ್ಥವಾಗಿಸುತ್ತದೆ. ಆದುದರಿಂದ, ವಯಸ್ಕರ ಅಭಿಪ್ರಾಯಗಳಿಗಿಂತ ಮಕ್ಕಳ ಅಭಿಪ್ರಾಯಗಳು ಭಿನ್ನವಾಗಿದ್ದಾಗಲೂ ಮಕ್ಕಳ ಅಭಿಪ್ರಾಯಗಳನ್ನು ಗೌರವಿಸುವ, ಆಲಿಸುವ ಮತ್ತು ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರೋತ್ಸಾಹದಾಯಕ ವಾತಾವರಣ ನಿರ್ಮಿಸುವುದಾಗಿದೆ.

### 1.2.3 ಮಗುವಿನ ಭಾಗವಹಿಸುವಿಕೆ:

ಮಗುವಿನ ಭಾಗವಹಿಸುವಿಕೆಯು ಶಾಲೆಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳಲ್ಲಿ ಮಕ್ಕಳು ಸಕ್ರಿಯವಾಗಿ ಭಾಗವಹಿಸುವುದಾಗಿದೆ. ಮಕ್ಕಳ ಮಾತನ್ನು ಆಲಿಸುವ ಮತ್ತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶಗಳನ್ನು ನೀಡಿ ಶಾಲೆಯ ಒಳಗೆ ಮತ್ತು ಹೊರಗೆ ಶೈಕ್ಷಣಿಕ ಚಟುವಟಿಕೆಗಳ ಯೋಜನೆ, ಸಂಘಟನೆ  ಮತ್ತು ಶೈಕ್ಷಣಿಕ ಚಟುವಟಿಕೆಗಳ ಮೌಲ್ಯಮಾಪನದಲ್ಲಿ ತೊಡಗಿಸಿಕೊಂಡು ಅವರ ಪೌಢತೆ ಮತ್ತು ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳುವುದು

### 1.2.4 ಮಕ್ಕಳ ಸ್ನೇಹಿ ಭಾಷೆ:

ಮಕ್ಕಳೊಂದಿಗೆ ನಡೆಸುವ ಎಲ್ಲಾ ಸಂವಹನವು ಮಕ್ಕಳ ಸ್ನೇಹಿಯಾಗಿದ್ದು, ಅವರ ವಯಸ್ಸಿಗೆ ಅನುಗುಣವಾಗಿರಬೇಕು ಮತ್ತು ಸಂವಹನವು ಮಗುವಿನಲ್ಲಿ ಭಯ ಹುಟ್ಟಿಸುವಿಕೆ ಅಥವಾ ಮುಜುಗರ, ಅವಮಾನ ಅಥವಾ ಅವರ ಸ್ವಾಭಿಮಾನ ಮತ್ತು ಘನತೆಯನ್ನು ಕೆಳಮಟ್ಟಕ್ಕೆ ಇಳಿಸುವಂತಿರಬಾರದು.

### 1.2.5 ತಾರತಮ್ಯರಹಿತ ಅವಕಾಶ ಕಲ್ಪಿಸುವಿಕೆ:

ಸುರಕ್ಷಿತ ಶಾಲೆಗಳು, ಬದಲಿಸಲಾಗದ ತತ್ವಗಳಾದ ಸಮಾನತೆ, ನ್ಯಾಯ ಮತ್ತು ತಾರತಮ್ಯರಹಿತ ಆಧಾರಿತವಾಗಿರುತ್ತವೆ. ಶಾಲೆಗಳು ಎಲ್ಲಾ ಮಕ್ಕಳಿಗೆ ಸಮಾನ ಕಲಿಕೆ ಮತ್ತು ಬೆಳವಣಿಗೆ ಅವಕಾಶಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳುವುದು. ಶಾಲೆಯಲ್ಲಿ ಇತರೆ ಮಕ್ಕಳಿಂದ ಅಥವಾ ವಯಸ್ಕರಿಂದ ಮಕ್ಕಳಿಗೆ ಯಾವುದೇ ರೀತಿಯ ತಾರತಮ್ಯ ಮಾಡಿರುವುದು ಕಂಡುಬಂದಲ್ಲಿ, ಅಂತಹ ವಿಷಯಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದು.

## 1.3 ಸುರಕ್ಷಿತ ಶಾಲೆಯ ಉತ್ತೇಜನಕ್ಕೆ ಕಾರ್ಯತಂತ್ರಗಳು

### 1.3.1 ಮಕ್ಕಳ ಸ್ವಯಂ ರಕ್ಷಣೆಗೆ ಮಕ್ಕಳನ್ನೇ ಪ್ರಾಥಮಿಕ ಘಟಕಗಳಾಗಿ ಗುರುತಿಸುವುದು:

ಮಕ್ಕಳನ್ನು ಇಂದು ಹಕ್ಕುಗಳ ವಿಷಯವನ್ನಾಗಿ ಗುರುತಿಸಲಾಗಿದೆಯೇ ಹೊರತು ಅವರು ಕೇವಲ "ಸಂರಕ್ಷಣೆಯ ವಸ್ತುಗಳಲ್ಲ"[1] ಎನ್ನುವುದನ್ನು ಶಾಲೆಗಳು ಒಪ್ಪಿಕೊಳ್ಳುವ ಅವಶ್ಯಕತೆ ಇದೆ. ಆದುದರಿಂದ ಮಕ್ಕಳ ರಕ್ಷಣಾ ನೀತಿ ಮತ್ತು ಕಾರ್ಯವಿಧಾನಗಳನ್ನು ಸಿದ್ಧಪಡಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಮಗುವಿನ ಭಾಗವಹಿಸುವಿಕೆಯನ್ನು ಖಾತರಿಪಡಿಸಿಕೊಳ್ಳುವುದು.

---

[1] ಮಕ್ಕಳ ಸ್ನೇಹಿ ಸರ್ಕಾರ, ದಕ್ಷಿಣಾ ಏಷ್ಯಾ ವರದಿ 2013 www.southasianreport.org ಲಭ್ಯವಿದೆ.

2. ಎಂ & ಇ ಟೂಲ್ ಕಿಟ್ ಪರಿಣಿತರಿಂದ ಪ್ರಕಟಣೆಗೊಂಡ ಮಕ್ಕಳನ್ನು ರಕ್ಷಿಸುವುದು, 2013

ಮಕ್ಕಳ ಭಾಗವಹಿಸುವಿಕೆಯನ್ನು ಖಾತರಿಪಡಿಸುವಿಕೆಯಲ್ಲಿ ಕೆಳಕಂಡ ಅಂಶಗಳು ಪ್ರಮುಖವಾಗಿದೆ.

ಅ. ಮಕ್ಕಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳು ಗೋಚರಿಸದೆ ಇರಬಹುದು ಅಥವಾ ಗೋಚರಿಸಬಹುದು ಆದರೆ ಅವುಗಳು ಅತ್ಯಂತ ಸೂಕ್ಷ್ಮವಾಗಿದ್ದು, ಅವುಗಳಿಗೆ ಸುತ್ತಲಿನ ವಯಸ್ಕರು ಸೂಕ್ಷ್ಮವಾಗಿ ಗ್ರಹಿಸಬೇಕಾದ ಅವಶ್ಯಕತೆಯನ್ನು ಗುರುತಿಸುವುದು.

ಆ. ಕೆಲವೊಮ್ಮೆ ಮಕ್ಕಳು ಅದರಲ್ಲೂ ವಿಶೇಷವಾಗಿ, ಬಲವಂತದ ಸಂದರ್ಭಗಳಲ್ಲಿ ಮುಕ್ತವಾಗಿ ಸಂವಹನ ನಡೆಸುವುದು ಬಹಳ ಕಷ್ಟಕರ ಎನ್ನುವುದು ಸರ್ವೇ ಸಾಮಾನ್ಯವಾಗಿದೆ.

ಆದುದರಿಂದ ಎಲ್ಲಾ ಶಾಲಾ ಚಟುವಟಿಕೆಗಳಲ್ಲಿ ಮಕ್ಕಳ ಕ್ರಿಯಾಶೀಲ ಭಾಗವಹಿಸುವಿಕೆಯನ್ನು ಉತ್ತೇಜಿಸುವ ದೃಷ್ಟಿಯಿಂದ, ಪ್ರತಿಯೊಬ್ಬರು ನೈತಿಕ ಭಾಗವಹಿಸುವಿಕೆಯ[2] ಮೂರು ಅವಶ್ಯಕತೆಗಳನ್ನು ಕಡ್ಡಾಯವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಈ ಅವಶ್ಯಕತೆಗಳನ್ನು ಮಕ್ಕಳ ಹಕ್ಕುಗಳ ಸಮಿತಿಯ ಸಾಮಾನ್ಯ ಅಭಿಪ್ರಾಯ ಸಂಖ್ಯೆ 12 (Committee on the Rights of the Child General Comment, no.12) ರಲ್ಲಿ ಅಹವಾಲನ್ನು ಹೇಳಿಕೊಳ್ಳುವ ಮಕ್ಕಳ ಹಕ್ಕುಗಳನ್ನು ನಿರೂಪಿಸಲಾಗಿದ್ದು, ಕೆಳಗಿನ ಅಂಶಗಳನ್ನು ಗಮನಿಸುವುದು.

**ಅ. ಪಾರದರ್ಶಕ ಮತ್ತು ಉಪಯುಕ್ತ ಮಾಹಿತಿ**

ಮಕ್ಕಳು ತಮ್ಮ ಹಕ್ಕುಗಳನ್ನು ಕುರಿತ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಂಪೂರ್ಣವಾದ ಹಾಗೂ ವಯಸ್ಸಿಗೆ ಅನುಗುಣವಾಗಿ ಮಾಹಿತಿಯನ್ನು (ಮಕ್ಕಳ ವೈವಿಧ್ಯತೆಯ ಸಂವೇದನೆಯೂ ಸಹ ಆಗಿರಬಹುದು) ಕಡ್ಡಾಯವಾಗಿ ಒದಗಿಸುವುದು. ಮಾಹಿತಿಯಲ್ಲಿ ಅವರ ಅಬಿಪ್ರಾಯಗಳಿಗೆ ಹೇಗೆ ಹೆಚ್ಚಿನ ಮನ್ನಣೆ ನೀಡುವುದು, ಭಾಗವಹಿಸುವಿಕೆಯ ಕ್ರಮ ಹೇಗೆ ಇರುತ್ತದೆ, ಅದರ ವ್ಯಾಪ್ತಿ ಉದ್ದೇಶ ಮತ್ತು ಸಂಭನೀಯ ಪರಿಣಾಮ ಮುಂತಾದವುಗಳನ್ನು ಅದು ಒಳಗೊಂಡಿರುವುದು.

**ಆ. ಸ್ವ–ಇಚ್ಛೆಯಿಂದ ಭಾಗವಹಿಸುವಿಕೆ:**

ಮಕ್ಕಳು ತಮ್ಮ ಇಚ್ಛೆಗಳನ್ನು ವ್ಯಕ್ತಪಡಿಸುವುದಕ್ಕೆ ನಿರ್ಬಂಧಗಳನ್ನು ಹೇರಬಾರದು ಮತ್ತು ಇದು ಅವರ ಭಾಗವಹಿಸುವಿಕೆಗೆ ಅಡ್ಡಿಯಾಗುತ್ತದೆ ಎನ್ನುವುದರ ಬಗ್ಗೆ ಅವರಿಗೆ ಮಾಹಿತಿ ನೀಡುವುದು.

**ಇ. ಗೌರವದಿಂದ ಕಾಣುವುದು:**

ಮಕ್ಕಳ ಅಭಿಪ್ರಾಯಗಳನ್ನು ಗೌರವದಿಂದ ಸ್ವೀಕರಿಸುವುದು ಮತ್ತು ಮಕ್ಕಳಿಗೆ ಚರ್ಚೆಗಳು ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ನೀಡಲು ಪ್ರಾರಂಭಿಸುವುದು.

**ಉ. ಪ್ರಸ್ತುತತೆ:**

ಮಕ್ಕಳು ಯಾವ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿರುತ್ತಾರೋ ಅವು ಜೀವನದ ನೈಜ ಮತ್ತು ವಾಸ್ತವದ ಬದುಕಿಗೆ ಹತ್ತಿರವಾಗಿರಬೇಕು ಮತ್ತು ಅವರ ಜ್ಞಾನ, ಕೌಶಲ್ಯಗಳು ಮತ್ತು ಸಾಮರ್ಥ್ಯಗಳನ್ನು ಪಡೆಯಲು ಸಮರ್ಥವಾಗಿರುವಂತಿರಬೇಕು. ಮುಂದುವರೆದು ಮಕ್ಕಳು ಸ್ವತಃ: ಗುರುತಿಸಿರುವ ನೈಜ ಮತ್ತು ಪ್ರಮುಖ ಸಮಸ್ಯೆಗಳನ್ನು ಗುರುತಿಸಿ, ಬಗೆಹರಿಸುವ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸುವ ಅಗತ್ಯವಿದೆ.

**ಊ. ಮಕ್ಕಳ ಸ್ನೇಹಿ ವಾತಾವರಣ:**

ಮಕ್ಕಳ ಸಾಮರ್ಥ್ಯಕ್ಕೆ ತಕ್ಕಂತೆ ಪರಿಸರ ಮತ್ತು ಕಾರ್ಯನಿರ್ವಹಣಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು. ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವರಿಗೆ ಸಾಕಷ್ಟು ಸಮಯ ಮತ್ತು ಸಂಪನ್ಮೂಗಳನ್ನು ಒದಗಿಸುವ ಮೂಲಕ ಅವರು ಸಮರ್ಪಕರಾಗಿ ಸಿದ್ಧರಾಗುವಂತೆ ಆತ್ಮಸ್ಥೈರ್ಯ ಬೆಳೆಸಿಕೊಳ್ಳಲು ಅವಕಾಶಗಳನ್ನು ನೀಡುವುದು.

**ಋ. ಒಳಗೊಳ್ಳುವಿಕೆಯ ಪ್ರಕ್ರಿಯೆ :**

ಭಾಗವಹಿಸುವಿಕೆಯು ಎಲ್ಲರನ್ನು ಒಳಗೊಂಡಿರುವುದಾಗಿದ್ದು, ಈಗಿರುವ ತಾರತಮ್ಯ ಮಾದರಿಗಳಿಂದ ಮುಕ್ತವಾಗಿರುವುದಾಗಿದೆ ಮತ್ತು ಸಂಕಷ್ಟದಲ್ಲಿರುವ ಹುಡುಗಿಯರು, ಹುಡುಗರು ಮತ್ತು ಲಿಂಗಪರಿವರ್ತನೆಗೊಂಡ ಮಕ್ಕಳಿಗೆ ಅವಕಾಶಗಳನ್ನು ನೀಡುವ ಮೂಲಕ ಪಾಲ್ಗೊಳ್ಳುವಂತೆ ಉತ್ತೇಜಿಸುವುದು. ಎಲ್ಲಾ ಸಮುದಾಯಗಳ ಮಕ್ಕಳಿಗೆ ಸಾಂಸ್ಕೃತಿಕವಾಗಿ ಸಂವೇದನಾತ್ಮಕವಾಗಿರುಂತೆ ಕಾರ್ಯಕ್ರಮಗಳನ್ನು ರೂಪಿಸುವುದು.

**ಎ. ತರಬೇತಿ ಮೂಲಕ ಬೆಂಬಲ ನೀಡುವುದು:**

ಮಕ್ಕಳ ಪರಿಣಾಮಕಾರಿ ಭಾಗವಹಿಸುವಿಕೆಗೆ ಅನುಕೂಲ ಕಲ್ಪಿಸಲು ಹಿರಿಯರಿಗೆ ತಯಾರಿ, ಕೌಶಲ್ಯಗಳು ಮತ್ತು ಬೆಂಬಲದ ಅಗತ್ಯವಿದೆ. ಉದಾ: ಮಕ್ಕಳನ್ನು ಆಲಿಸುವ, ಅವರೊಂದಿಗೆ ತೊಡಗಿಸಿಕೊಳ್ಳುವ ಮತ್ತು ಅವರ ವಿಕಸನದ ಸಾಮರ್ಥ್ಯಕ್ಕೆ ತಕ್ಕಂತೆ ಮಕ್ಕಳೊಂದಿಗೆ ಕಾರ್ಯನಿರ್ವಹಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳುವುದು.

**ಏ. ಸುರಕ್ಷತೆ & ಅಪಾಯದ ಸನ್ನಿವೇಶಗಳಲ್ಲಿ ಸೂಕ್ಷ್ಮಗಾಹಿಯಾಗಿರುವಿಕೆ:**

ಮಕ್ಕಳು ಅಪಾಯಗಳಿಂದ ರಕ್ಷಿಸಿಕೊಳ್ಳುವ ಹಕ್ಕುಗಳ ಬಗ್ಗೆ ಅರಿವನ್ನು ಹೊಂದಿರುವುದು ಮತ್ತು ಅವರಿಗೆ ಸಹಾಯದ ಅವಶ್ಯಕತೆಯ ಸಂದರ್ಭಗಳಲ್ಲಿ ಯಾವಾಗ, ಎಲ್ಲಿ ಮತ್ತು ಯಾರನ್ನು ಸಂಪರ್ಕಿಸಬೇಕೆಂಬುದನ್ನು ತಿಳಿದುಕೊಂಡಿರುವುದು.

**ಐ. ಉತ್ತರದಾಯಿತ್ವ/ಹೊಣೆಗಾರಿಕೆ :**

ನಿರಂತರ ಅನುಸರಣೆಯನ್ನು ಕೈಗೊಳ್ಳುವ ಮತ್ತು ಭಾಗವಹಿಸುವಿಕೆಯ ಚಟುವಟಿಕೆಗಳ ಮೌಲ್ಯಮಾಪನ ಮಾಡುವ ಬದ್ಧತೆಯ ಅಗತ್ಯವಿದೆ. ಮಕ್ಕಳ ಅಭಿಪ್ರಾಯಗಳನ್ನು ಯಾವ ರೀತಿ ಅರ್ಥೈಸಲಾಗಿದೆ ಮತ್ತು ಅವರ ಭಾಗವಹಿಸುವಿಕೆಯು ಫಲಿತಾಂಶಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಮಕ್ಕಳಿಗೆ ತಿಳಿಸುವುದು. ಮಕ್ಕಳ ಭಾಗವಹಿಸುವಿಕೆಯ ಅವಶ್ಯಕತೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ಕೇಂದ್ರೀಕೃತ ಪ್ರಕ್ರಿಯೆಯ ಮೂಲಕ ಮಕ್ಕಳ ಸಹಭಾಗಿತ್ವದೊಂದಿಗೆ ಕೈಗೊಳ್ಳುವುದು.

1.3.2 **ಸುರಕ್ಷಾ ವಿಧಾನಗಳ ಸ್ಥಾಪನೆ:**

ಸುರಕ್ಷತೆಯನ್ನು ಖಾತರಿಪಡಿಸುವ ವಿಧಾನಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

**a. ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸಿ ಅಧಿಸೂಚನೆ ಹೊರಡಿಸುವುದು (EICPP).**

ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯು (ಶೈಕ್ಷಣಿಕ ಸಂಸ್ಥೆಯ ವ್ಯಾಖ್ಯಾನವನ್ನು 0A ನಲ್ಲಿ ಉಲ್ಲೇಖಿಸಿದಂತೆ) ಅನುಬಂಧದಲ್ಲಿರುವಂತೆ ಮಕ್ಕಳ ರಕ್ಷಣಾ ನೀತಿಯನ್ನು ಸಿದ್ಧಪಡಿಸುವುದು. ಶೈಕ್ಷಣಿಕ ಸಂಸ್ಥೆಗಳ ಎಲ್ಲಾ ಭಾಗೀದಾರರೊಂದಿಗೆ ಪೋಷಕರು, ಮಕ್ಕಳು ಮತ್ತು ನೀತಿಯಡಿ ಒಳಗೊಳ್ಳುವ ಎಲ್ಲರಿಗೂ ನೀತಿಯನ್ನು ಅಧಿಸೂಚಿಸುವುದು.

**b. ಹೊಂದಿಕೆಯಾಗಿರುವ ಮಾದರಿ ಸುರಕ್ಷಾ ಗಮನಿಕೆ ಪಟ್ಟಿಯನ್ನು ಹೊಂದಿರುವುದು:**

ಪ್ರಸ್ತಾವಿತ ಮಾರ್ಗಸೂಚಿಯ ಭಾಗವಾಗಿ ಸುರಕ್ಷತೆಯ ಚೆಕ್‌ಲಿಸ್ಟ್‌ನ್ನು ಅನುಬಂಧದಲ್ಲಿ ಲಗತ್ತಿಸಲಾಗಿದ್ದು, ಇದನ್ನು ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯು ಅಳವಡಿಸಿಕೊಳ್ಳುವುದು. ಚೆಕ್‌ಲಿಸ್ಟ್‌ನಲ್ಲಿ ಕಡ್ಡಾಯವಾಗಿರುವ ಕಲಂಗಳನ್ನು ಹಾಗೆಯೇ ಉಳಿಸಿಕೊಂಡು, ಸುರಕ್ಷಿತಾ ಮೇಲ್ವಿಚಾರಣೆಗೆ ಪರಿಣಾಮಕಾರಿ ಸಾಧನವಾಗಿ ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಗಳು ವಿಶಿಷ್ಟ ಸನ್ನಿವೇಶಗಳಿಗೆ ಅನುಗುಣವಾಗಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಬಹುದಾಗಿದೆ.

**c. ವಿಪತ್ತಿನ ಅಪಾಯವನ್ನು ತಗ್ಗಿಸುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವಿಕೆ :**

ಮಕ್ಕಳಿಗೆ ಲಭ್ಯವಿರುವ ಶಿಕ್ಷಣದ ಹಕ್ಕಿನಡಿಯಲ್ಲಿ ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಗಳು ಮಕ್ಕಳು ಎಲ್ಲಾ ರೀತಿಯ ಅಪಾಯದಿಂದ ಸುರಕ್ಷಿತವಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು. ಬೃಹತ್ ಪ್ರಮಾಣದ 'ನೈಸರ್ಗಿಕ ವಿಪತ್ತುಗಳಾದ ಭೌಗೋಳಿಕ/ಹವಾಮಾನ ಆಧಾರಿತ ವಿಕೋಪಗಳು, ಮಾನವ ನಿರ್ಮಿತ ಅಪಾಯಗಳು, ಪಿಡುಗುಗಳು, ನಾಗರೀಕ ಅಶಾಂತಿ, ಉಗ್ರಗಾಮಿ ಪ್ರವೃತ್ತಿ, ಭಯೋತ್ಪಾದನೆ, ಸಾಮಾನ್ಯವಾಗಿ ಅಥವಾ ಸಣ್ಣ ಪ್ರಮಾಣದಲ್ಲಿ ಸಂಭವಿಸುವ ಬೆಂಕಿ ಅನಾಹುತಗಳು, ಸಾರಿಗೆ, ಇತರೆ ತುರ್ತುಪರಿಸ್ಥಿತಿಗಳು ಮತ್ತು ಮಕ್ಕಳ[3] ಜೀವದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಪರಿಸರಾತ್ಮಕ ಅಪಾಯಗಳಿಂದ ಸುರಕ್ಷತೆಯನ್ನು ಹೊಂದುವುದು (Refer nidm.gov.in /safety_school.asp).

**d. ಮಕ್ಕಳ ಹಕ್ಕುಗಳ ಕ್ಲಬ್ಬುಗಳ ರಚನೆ:**

ಮಕ್ಕಳ ಹಕ್ಕುಗಳ ಕ್ಲಬ್ಬುಗಳನ್ನು ರಚಿಸಲು ಮಕ್ಕಳಿಗೆ ಸಹಕರಿಸುವುದರಿಂದ ಮಕ್ಕಳು ತಮ್ಮ ಹಕ್ಕುಗಳು ಮತ್ತು ಜವಾಬ್ದಾರಿಗಳು, ವರದಿ ಮಾಡುವ ವಿಧಾನಗಳು ಹಾಗೂ ಕಾಳಾಜಿಯ ವಿಷಯಗಳ ಜೊತೆಗೆ ಶಿಕ್ಷಣ ಸಂಸ್ಥೆಗಳಲ್ಲಿ ಸುರಕ್ಷತೆಯಡಿ ಪೋಷಕರನ್ನು ತೊಡಗಿಸಿಕೊಳ್ಳುವಿಕೆಯ ಕುರಿತು ಚರ್ಚಿಸಬಹುದಾಗಿದೆ.

**e. ಸಿಬ್ಬಂದಿಗಳ ಮೌಲ್ಯಮಾಪನದಲ್ಲಿ ಮಗುವಿನ ಸುರಕ್ಷತೆಯ ಸೇರ್ಪಡೆ:**

ಸಿಬ್ಬಂದಿಗಳ ಔಪಚಾರಿಕ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಯಲ್ಲಿ ಮಗುವಿನ ಸುರಕ್ಷತೆಯ ವಿಷಯಗಳು ನಿಯಮಿತವಾಗಿ ಒಳಗೊಂಡಿರುವುದನ್ನು ಖಾತರಿಪಡಿಸಿಕೊಳ್ಳುವುದು.

**f. ಅರಿವು, ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆ ಕಾರ್ಯಕ್ರಮಗಳ ಆಯೋಜನೆ:**

ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಯ ಕುರಿತು ಮಕ್ಕಳು, ಪೋಷಕರು ಮತ್ತು ಪಾಲಕರಿಗೆ ಅರಿವು, ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆ ಕಾರ್ಯಕ್ರಮಗಳನ್ನು ಸಂಘಟಿಸಲು ಒತ್ತು ನೀಡಿರುವುದನ್ನು ಖಚಿತಪಡಿಸುವುದು.

**g. ವರದಿ ಮಾಡುವ ವಿಧಾನಗಳನ್ನು ಸೃಜಿಸುವುದು:**

ಸದೃಢ ಮತ್ತು ನಿರ್ಧಿಷ್ಟವಾದ ವರದಿ ವಿಧಾನಗಳನ್ನು ಸೃಜಿಸುವುದು ಮತ್ತು ಅವುಗಳು ಶಾಲಾ ನಿರ್ವಹಣಾ ಸಮಿತಿ (SMC)/ಪೋಷಕರು–ಶಿಕ್ಷಕರ ಸಂಘ (PTA), ಸಲಹೆ ಪೆಟ್ಟಿಗೆ, ಮಕ್ಕಳ ಸಭೆಗಳು, ಸಾಮಾನ್ಯ ಸಭೆಗಳು ಇತ್ಯಾದಿಗಳ ಮೂಲಕ ಅರ್ಥಪೂರ್ಣವಾಗಿ ಬಳಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು.

---

Ahmedabad agenda for school safety, outcome document of the International Conference of School Safety 18-20th January, 2007, Ahmedabad, India

# ಅಧ್ಯಾಯ –2 ವ್ಯಾಖ್ಯಾನಗಳು ಮತ್ತು ವ್ಯಾಪ್ತಿ

## 2.1 ವ್ಯಾಖ್ಯಾನಗಳು:–

**ಅ. ಶೈಕ್ಷಣಿಕ ಸಂಸ್ಥೆ** ಎಂದರೆ ಕೆಳಕಂಡ ಅರ್ಥ ಮತ್ತು ಅಂಶಗಳನ್ನು ಒಳಗೊಂಡಿರುವುದು.

ಸಂಸ್ಥೆಯು ಯಾವುದೇ ಹೆಸರಿನಿಂದ ಕರೆಯಲ್ಪಡುವ ಅಂದರೆ, ಪೂರ್ವಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ, ಸೆಕೆಂಡರಿ, ಹೈಯರ್ ಸೆಕೆಂಡರಿ ಶಾಲೆಗಳು, ಆಪರೆಂಟೀಸ್ ತರಬೇತಿ ಕೇಂದ್ರಗಳು, ಔದ್ಯೋಗಿಕ ಕೌಶಲ್ಯ ತರಬೇತಿ ಕೇಂದ್ರಗಳು ಮತ್ತು ಅದಕ್ಕೆ ಹೊಂದಿಕೆಯಾಗಿರುವ ಎಲ್ಲಾ ಪ್ರದೇಶ, ಅದು ಪ್ರತ್ಯೇಕವಾಗಿ ನಿರ್ವಹಿಸುತ್ತಿರುವ ಅಥವಾ ಇತರೆ ಚಟುವಟಿಕೆಗಳಡಿ 2.5 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಸಂಸ್ಥೆಗಳನ್ನು ಶೈಕ್ಷಣಿಕ ಸಂಸ್ಥೆಗಳೆಂದು ಕರೆಯಬಹುದು.

ಶಿಕ್ಷಣವನ್ನು ನೀಡುತ್ತಿರುವ ಯಾವುದೇ ಸಂಸ್ಥೆ ಅಥವಾ ಪದವಿಗಿಂತ ಕೆಳ ಹಂತದಲ್ಲಿ ತರಬೇತಿಯನ್ನು ನೀಡುತ್ತಿರುವ ಟ್ಯುಟೋರಿಯಲ್‌ಗಳನ್ನು ಒಳಗೊಂಡಿರುವುದು ಸಹ ಶಿಕ್ಷಣ ಸಂಸ್ಥೆ ಎಂದೆನಿಸುತ್ತದೆ. ಯಾವುದೇ ರಾಜ್ಯ /ಕೇಂದ್ರ/ ಶೈಕ್ಷಣಿಕ ಮಂಡಳಿ ಅಥವಾ ಕೆಳಗೆ ತಿಳಿಸಿರುವ ಸೂಕ್ತ ಪ್ರಾಧಿಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಸಂಸ್ಥೆಗಳು ಇದರಡಿ ಸೇರಿರುತ್ತವೆ.

a. ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿತವಾಗಿ, ಮಾಲೀಕತ್ವಹೊಂದಿ ನಿಯಂತ್ರಿಸಲ್ಪಟ್ಟಿರುವ ಅಥವಾ ನಿರ್ವಹಿಸಲ್ಪಡುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆ.

b. ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಭಾಗಶಃ ಅಥವಾ ಪೂರ್ಣ ಪ್ರಮಾಣದ ನೆರವು ಅಥವಾ ಅನುದಾನ ಪಡೆಯುತ್ತಿರುವ ಯಾವುದೇ ಅನುದಾನಿತ ಸಂಸ್ಥೆ.

c. ಖಾಸಗಿ ಮಂಡಳಿಯಿಂದ ನಿರ್ವಹಿಸಲ್ಪಡುತ್ತಿರುವ ಮತ್ತು ಆಡಳಿತಕ್ಕೊಳಪಟ್ಟಿರುವ ಯಾವುದೇ ಸ್ಥಾಪಿತ ಶಿಕ್ಷಣ ಸಂಸ್ಥೆ.

d. ಸಂವಿಧಾನದ ಪರಿಚ್ಛೇದ 30 ರ ಕಲಂ (1) ರನ್ವಯ ಸ್ಥಾಪಿತವಾಗಿರುವ ಮತ್ತು ಆಡಳಿತಕ್ಕೊಳಪಟ್ಟಿರುವ, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅನುದಾನ ಪಡೆಯುತ್ತಿರುವ ಅಥವಾ ಪಡೆಯದೇ ಇರುವ ಯಾವುದೇ ಅಲ್ಪಸಂಖ್ಯಾತ ಶಾಲೆ, ವೇದ ಶಾಲೆ, ಮದರಸಾ ಅಥವಾ

e. ವೆಚ್ಚಗಳನ್ನು ಸರಿದೂಗಿಸಲು, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ ರೀತಿಯ ಅನುದಾನ ಅಥವಾ ನಿಧಿಯನ್ನು ಪಡೆಯದೇ ಇರುವ ಅನುದಾನರಹಿತ ಶಿಕ್ಷಣ ಸಂಸ್ಥೆ.

**ಆ. ಶೈಕ್ಷಣಿಕ ಸಂಸ್ಥೆಗಳ ವರ್ಗೀಕರಣ:** ಕಲಂ 2.1ಎ ರನ್ವಯ ವ್ಯಾಖ್ಯಾನಿಸಿರುವಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು ಕೆಳಗಿನಂತೆ ವರ್ಗೀಕರಿಸುವುದು ಮತ್ತು ಗುಂಪುಗಳನ್ನಾಗಿಸುವುದು.

a. ಪ್ರಾಥಮಿಕ ಪೂರ್ವ ಶಿಕ್ಷಣವು; ನರ್ಸರಿ, LKG & UKG ಶಿಕ್ಷಣವನ್ನು ಮತ್ತು 2.5 ವರ್ಷದಿಂದ 5 ವರ್ಷಗಳವರೆಗಿನ ಮಕ್ಕಳನ್ನು ಒಳಗೊಂಡಿರುವುದು.

b. ಪ್ರಾಥಮಿಕ ಶಾಲೆಯು 1 ರಿಂದ 5 ನೇ ತರಗತಿಯವರೆಗೆ ಹೊಂದಿರುವುದು.

c. ಮಾಧ್ಯಮಿಕ ಶಾಲೆಯು 1 ರಿಂದ 8 ಅಥವಾ 6 ರಿಂದ 8ನೇ ತರಗತಿಗಳನ್ನು ಹೊಂದಿರುವುದು.

d. ಪ್ರೌಢಶಾಲೆಯು 1 ರಿಂದ 10 ಅಥವಾ 6 ರಿಂದ 10 ಅಥವಾ 9 ರಿಂದ 10 ರ ವರೆಗೆ ತರಗತಿಗಳನ್ನು ಹೊಂದಿರುವುದು.

e. ಪದವಿ ಪೂರ್ವ ಶಿಕ್ಷಣವು 1 ರಿಂದ 12 ಅಥವಾ 6 ರಿಂದ 12 ಅಥವಾ 11 ಮತ್ತು 12 ರ ವರೆಗೆ ತರಗತಿಗಳನ್ನು ಹೊಂದಿರುವುದು.

f. ಟ್ಯುಟೋರಿಯಲ್ ಒಳಗೊಂಡಂತೆ ಶಿಕ್ಷಣ ಅಥವಾ ತರಬೇತಿಯನ್ನು ನೀಡುತ್ತಿರುವ ಯಾವುದೇ ಇತರೆ ಸಂಸ್ಥೆ

ಇ. **ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳೊಂದಿಗೆ ನೇರ ಸಂಪರ್ಕ ಹೊಂದಿರುವ ವ್ಯಕ್ತಿಗಳು:**

ಮಗು ಅಥವಾ ಮಕ್ಕಳೊಂದಿಗೆ ಭೌತಿಕವಾಗಿ ಉಪಸ್ಥಿತರಿರುವ ವ್ಯಕ್ತಿಗಳು ಅಥವಾ ಅವರ ವೃತ್ತಿಯ ಭಾಗವಾಗಿ ಅಥವಾ ಶಿಕ್ಷಣ/ಶಾಲೆಗೆ ಸಂಬಂಧಿಸಿದ ಪೂರ್ಣಕಾಲಿಕ, ಅರೆಕಾಲಿಕ, ತಾತ್ಕಾಲಿಕ ಅಥವಾ ದೀರ್ಘಾವದಿಯಲ್ಲಿ ಕೆಲಸಮಾಡುವ ವ್ಯಕ್ತಿಗಳು.

ಈ. **ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳೊಂದಿಗೆ ಪರೋಕ್ಷ ಸಂಪರ್ಕ ಹೊಂದಿರುವ ವ್ಯಕ್ತಿಗಳು:**

ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳೊಂದಿಗೆ ಪರೋಕ್ಷವಾಗಿ ಭೌತಿಕವಾಗಿ ಉಪಸ್ಥಿತಿಯ ಅವಶ್ಯಕತೆಯಿಲ್ಲದ ವ್ಯಕ್ತಿಗಳು, ಮಗುವಿನ ವೈಯಕ್ತಿಕ ವಿವರಗಳು ಮತ್ತು ಇತರೆ ಮಾಹಿತಿಗಳಾದ ಛಾಯಾಚಿತ್ರಗಳು, ವೈಯಕ್ತಿಕ ಕಡತಗಳು ಇತ್ಯಾದಿ ಮಾಹಿತಿಯನ್ನು ನಿರ್ವಹಿಸುವ ವ್ಯಕ್ತಿಗಳು.

**2.2 ಮಕ್ಕಳ ರಕ್ಷಣಾ ನೀತಿ ಅನ್ವಯಿಸುವಿಕೆ:**

ಈ ಮಾರ್ಗಸೂಚಿಗಳು ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಅನ್ವಯವಾಗಲಿದ್ದು, ಕೆಳಗಿನ ಸನ್ನಿವೇಶ ಮತ್ತು ಸಂದರ್ಭಗಳನ್ವಯ ವ್ಯಾಖ್ಯಾನಿಸಲಾಗಿದೆ.

ಅ. ಶೈಕ್ಷಣಿಕ ಸಂಸ್ಥೆಯ ಆವರಣದೊಳಗೆ, ಮಕ್ಕಳು ಒಳಗೊಳ್ಳುವ ಎಲ್ಲಾ ಅವಧಿಗಳಲ್ಲಿ, ಶೈಕ್ಷಣಿಕ ಸಂಸ್ಥೆಗೆ ಸಂಬಂಧಿಸಿದ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷವಾದ ಚಟುವಟಿಕೆಗಳಿಗೆ ಸಂಬಂಧಿಸಿದ, ಶಾಲಾ ಪೂರ್ವ ಮತ್ತು ನಂತರದ ಅವಧಿಗಳು ಮತ್ತು ರಜಾದಿನಗಳು ಸೇರಿರುತ್ತವೆ.

ಆ. ಶೈಕ್ಷಣಿಕ ಸಂಸ್ಥೆಯ ವಿಸ್ತರಗೊಂಡ ಪರಿಸರದಲ್ಲಿ ಒಂದು ವೇಳೆ ಶೈಕ್ಷಣಿಕ ಸಂಸ್ಥೆಯೊಂದಿಗೆ ಯಾವುದೇ ಸಂಬಂಧವಿರುವ, ಉದಾ: ನಿಲುಗಡೆ ಪ್ರದೇಶಗಳು, ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯಕ್ರಮಗಳ ಸ್ಥಳಗಳು ಅಥವಾ ಪ್ರವಾಸಗಳು, ಸಂಸ್ಥೆಗೆ ಸಂಬಂಧಿಸಿದ ಪ್ರಯಾಣ ಮತ್ತು ಸಾರಿಗೆ ವ್ಯವಸ್ಥೆಗಳನ್ನು ಶೈಕ್ಷಣಿಕ ಸಂಸ್ಥೆಯು ಮಕ್ಕಳಿಗೆ ಏರ್ಪಡಿಸಿದಲ್ಲಿ.

ಈ ಮಾರ್ಗಸೂಚಿಗಳು ಮೇಲೆ ತಿಳಿಸಿರುವ ಸಂದರ್ಭಗಳಲ್ಲಿ, ಮಕ್ಕಳೊಂದಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಂಪರ್ಕದಲ್ಲಿರುವ ಎಲ್ಲಾ ವ್ಯಕ್ತಿಗಳಿಗೂ ಸಹ ಅನ್ವಯವಾಗುತ್ತವೆ.

ಅ. ಶೈಕ್ಷಣಿಕ ಸಂಸ್ಥೆಯ ಮಂಡಳಿ ಮತ್ತು ನಿರ್ವಹಣಾ ಸಮಿತಿ

ಆ. ಖಾಯಂ, ತಾತ್ಕಾಲಿಕ ಮತ್ತು ಗುತ್ತಿಗೆ ಸಿಬ್ಬಂದಿ.

ಇ. ಸ್ವಯಂಸೇವಕರು, ಸಮಾಲೋಚಕರು, ತಜ್ಞರು, ಹೊರಗುತ್ತಿಗೆ ಸಂಸ್ಥೆಗಳ ಕೆಲಸಗಾರರು, ಸೇವೆಯನ್ನು ಒದಗಿಸುವವರು ಮತ್ತು ಶೈಕ್ಷಣಿಕ ಸಂಸ್ಥೆಗೆ ಸೇವೆ ಹಾಗೂ ಸಾಮಗ್ರಿಗಳನ್ನು ಪೂರೈಸುವವರು

ಈ. ಶೈಕ್ಷಣಿಕ ಸಂಸ್ಥೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಗಳು ಮತ್ತು ಸಂಪರ್ಕದಲ್ಲಿರುವವರು.

ಉ. ಶೈಕ್ಷಣಿಕ ಸಂಸ್ಥೆಯೊಂದಿಗೆ ಸಂಬಂಧವಿರುವ ಯಾವುದೇ ವ್ಯಕ್ತಿ ಹಾಗೂ ಮಗುವಿನ ಮೇಲೆ ಅಧಿಕಾರ ಹೊಂದಿರುವ ಮತ್ತು/ಅಥವಾ ಸಂಪರ್ಕದಲ್ಲಿರುವ[4] ವ್ಯಕ್ತಿ ಮತ್ತು/ಅಥವಾ ಮಗುವಿನ ನಂಬಿಕೆಗಳಿಸಿರುವ ಇತರೆ ಯಾವುದೇ ವ್ಯಕ್ತಿ

ಊ. ಪ್ರಸ್ತಾವಿತ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಯಾವುದೇ ಇತರೆ ವ್ಯಕ್ತಿಯನ್ನು ಒಳಗೊಂಡಿರುತ್ತದೆ.

4 ಈ ಸಂದರ್ಭದಲ್ಲಿ ವಿಶ್ವಾಸಾರ್ಹ ಸಂಬಂಧ ಎಂದರೆ ಮಗುವಿಗೆ ಪಾಲನೆ ಮತ್ತು ಸಂರಕ್ಷಣೆ ಮಾಡುವ ಸಲುವಾಗಿ ಹೆಚ್ಚಿನ ವಿಶ್ವಾಸ ಮತ್ತು ನಂಬಿಕೆ ಇಟ್ಟುಕೊಂಡು ಯಾರ ಬಳಿ ಮಗುವನ್ನು  ಇರಿಸಲಾಗಿದೆಯೋ ಆ ವ್ಯಕ್ತಿ.

# ಅಧ್ಯಾಯ –3 ಮುಂಜಾಗ್ರತಾ ಕ್ರಮಗಳು

ಸುರಕ್ಷಿತ ಶಾಲಾ ಪರಿಸರವು ಮಗುವಿನ ಮೇಲಾಗುವ ಹಲ್ಲೆ, ನಿರ್ಲಕ್ಷ ಮತ್ತು ಶೋಷಣೆಯನ್ನು ತಡೆಗಟ್ಟುವ ಕ್ರಮಗಳನ್ನು ಹೊಂದಿರುವುದು ಮತ್ತು ಬಲವಾಗಿ ನಿವಾರಿಸುವುದು. ಮಗುವಿನ ಸುರಕ್ಷತೆಯ ಉಲ್ಲಂಘನೆಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸುವ ಮತ್ತು ಪ್ರಾಮಾಣಿಕವಾಗಿ ಹಾಗೂ ಪರಿಣಾಮಕಾರಿಯಾಗಿ ಬಗೆಹರಿಸುವ ಕಾರ್ಯವಿಧಾನಗಳನ್ನು ನಿವಾರಣ ಪ್ರಕ್ರಿಯೆಗಳಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ. ಕೈಗೊಳ್ಳುವ ಪ್ರತಿಯೊಂದು ಕ್ರಮವು ಮಗುವಿನ ಅತ್ಯುತ್ತಮ ಹಿತಾಸಕ್ತಿಯನ್ನು ಹೊಂದಿರುವುದು ಮತ್ತು ಮಕ್ಕಳ ಅಭಿಪ್ರಾಯಗಳನ್ನು ತೆಗೆದುಕೊಂಡು ಪರಿಗಣಿಸುವುದು. ಪ್ರತಿಯೊಂದು ಶಿಕ್ಷಣ ಸಂಸ್ಥೆಗಳು ಕೆಳಕಂಡ ರಚನೆ ಮತ್ತು ವಿಧಾನಗಳನ್ನು ಅಳವಡಿಸಿಕೊಳ್ಳುವುದು.

### 3.1 ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾರಿಯಲ್ಲಿರುವ ಮಗುವಿನ ರಕ್ಷಣಾ ನಿಯಮ, (EI CPP)

ಮಾದರಿ ಮಕ್ಕಳ ರಕ್ಷಣಾ ನೀತಿಯನ್ವಯ ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಲಿಖಿತವಾಗಿ ಮಕ್ಕಳ ರಕ್ಷಣಾ ನೀತಿಯನ್ನು ಕಡ್ಡಾಯವಾಗಿ ಹೊಂದಿರುವುದು. **ಶಿಕ್ಷಣ ಸಂಸ್ಥೆಯ ಗಾತ್ರದನ್ವಯ,** ಅವುಗಳು ನಗರ, ಗ್ರಾಮೀಣ ಅಥವಾ ದೂರದ ಪ್ರದೇಶದಲ್ಲಿರಲಿ ಅಥವಾ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ, ಪ್ರಥಮ ದರ್ಜೆ ಕಾಲೇಜು ಅಥವಾ ವೃತ್ತಿ ತರಬೇತಿ ಸಂಸ್ಥೆಗಳಾದ ಐಟಿಐ ಅಥವಾ ಡಿಪ್ಲೋಮಾ ಮುಂತಾದ ಸಂಸ್ಥೆಗಳು ಮಗುವಿನ ರಕ್ಷಣಾ ನೀತಿಯನ್ನು ರೂಪಿಸಿಕೊಳ್ಳುವುದು.

ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಪ್ರಮುಖ ತತ್ತ್ವಗಳೊಂದಿಗೆ ಹೆಚ್ಚುವರಿಯಾಗಿ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಒಳಗೊಂಡಿರುವುದು.

ಅ. ಮಕ್ಕಳ ರಕ್ಷಣೆಯನ್ನು ಗುರುತಿಸುವುದು ಮತ್ತು ಸುರಕ್ಷಿತ ಪರಿಸರಕ್ಕೆ ಬದ್ಧರಾಗಿರುವುದು.

ಆ. ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಅಪಾಯಕಾರಿ ಸನ್ನಿವೇಶಗಳು ಮತ್ತು ಮಕ್ಕಳಿಗೆ ಸಂಭವಿಸಬಹುದಾದ ಅಪಘಾತಗಳನ್ನು ಕಡಿಮೆಗೊಳಿಸುವುದು.

ಇ. ಮಕ್ಕಳ ರಕ್ಷಣಾ ವಿಷಯಗಳನ್ನು ನಿರ್ವಹಿಸುವಲ್ಲಿ ಗೌಪ್ಯತಾ ಅವಶ್ಯಕತೆಗಳಿಗೆ ಗೌರವ ನೀಡುವುದು.

ಈ. ಸಿಬ್ಬಂದಿಗಳು, ಬೋಧಕರು ಮತ್ತು ಆಡಳಿತ ನಿರ್ವಾಹಕರ ಮೇಲೆ ಬರುವ ತಪ್ಪು ಆಪಾದನೆಗಳನ್ನು ತಪ್ಪಿಸಲು ಸುರಕ್ಷತಾ ವಿಧಾನಗಳನ್ನು ಜಾರಿಗೊಳಿಸುವುದು.

ಉ. ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನೀತಿಗಳು, ಆಚರಣೆಗಳು ಮತ್ತು ಶಿಕ್ಷಣ ಸಂಸ್ಥೆಯ ಚಟುವಟಿಕೆಗಳಾದ ಸಿಬ್ಬಂದಿಯ ನೀತಿ ಸಂಹಿತೆ, ಬೆದರಿಕೆ ವಿರೋಧಿ ನೀತಿ (Anti–bullying policy), ಸೈಬರ್ ಸಂರಕ್ಷಣಾ ನೀತಿ ಮುಂತಾದವುಗಳನ್ನು ಪಟ್ಟಿ ಮಾಡುವುದು.

**ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಕೆಳಕಂಡ ಅಂಶಗಳನ್ನು ಖಾತರಿಪಡಿಸಿಕೊಳ್ಳುವುದು.**

ಅ. ಶಿಕ್ಷಣ ಸಂಸ್ಥೆಗಳು ಮಕ್ಕಳ ರಕ್ಷಣಾ ನೀತಿಯ ಪ್ರತಿಯನ್ನು ಸುಲಭವಾಗಿ ಲಭ್ಯವಿರುವ ಸ್ಥಳದಲ್ಲಿರಿಸುವುದು.

**ಆ.** ಮಕ್ಕಳ ರಕ್ಷಣಾ ನೀತಿಯನ್ನು ಶಾಲಾ ದಿನಚರಿ, ಶಾಲೆಯ ಸೂಚನಾ ಪಲಕ, ಓದುವ ಸ್ಥಳಗಳು, ಯಾವುದೇ ಮಾಹಿತಿ ಕೇಂದ್ರ ಮತ್ತು ತನ್ನ ಅಂತರ್ಜಾಲದಲ್ಲಿ ಪ್ರಕಟಿಸುವ ಮೂಲಕ ಶಿಕ್ಷಣ ಸಂಸ್ಥೆಯು ಪ್ರಚಾರ ಮಾಡುವುದು.

**ಇ.** ಶಿಕ್ಷಣ ಸಂಸ್ಥೆಯ ತನ್ನ ಎಲ್ಲಾ ಸಿಬ್ಬಂದಿ, ಗುತ್ತಿಗೆ ನೌಕರರಿಗೆ ಮತ್ತು ಸಂಬಂಧಿಸಿದ ಎಲ್ಲಾ ಇತರೆ ಭಾಗಿದಾರರಿಗೆ ಮಕ್ಕಳ ರಕ್ಷಣಾ ನೀತಿಯ ಪಾಲನೆ ಬಗ್ಗೆ ಅಧಿಸೂಚನೆ ಹೊರಡಿಸುವುದು ಮತ್ತು ಲಭ್ಯವಾಗುವಂತೆ ನೋಡಿಕೊಳ್ಳುವುದು.

**ಈ.** ಮಕ್ಕಳ ರಕ್ಷಣಾ ನೀತಿಯ ಮಾಹಿತಿ ಮತ್ತು ಅದನ್ನು ಪಾಲಿಸಲು ಬದ್ಧವಾಗಿರುವ ಬಗ್ಗೆ ಶಿಕ್ಷಣ ಸಂಸ್ಥೆಗಳು ಲಿಖಿತವಾಗಿ ಘೋಷಣೆಯನ್ನು ಪಡೆದುಕೊಳ್ಳುವುದು.

**ಉ.** ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಕನಿಷ್ಟ ಮೂರು ತಿಂಗಳಿಗೊಮ್ಮೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ತಿಳುವಳಿಕೆ ನೀಡುವುದು.

**ಊ.** ಮಕ್ಕಳ ರಕ್ಷಣಾ ನೀತಿಯನ್ನು, ಶಿಕ್ಷಣ ಸಂಸ್ಥೆಗಳ ಆಡಳಿತ (ಸರ್ಕಾರೇತರ ಶಿಕ್ಷಣ ಸಂಸ್ಥೆಗಳಿಗೆ ಆಡಳಿತ ಮಂಡಳಿ ಅಥವಾ ಬೋರ್ಡ್ ಆಫ್ ಟ್ರಸ್ಟೀಸ್, ಸರ್ಕಾರಿ ಶಾಲೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು) ಮಂಡಳಿಯು ಆಗಾಗ್ಗೆ ಪರಿಶೀಲಿಸಿ ಮಾರ್ಪಾಟುಗಳನ್ನು ಮಾಡುವುದು.

**ಋ.** ಪ್ರಸ್ತಾವಿತ ಮಾರ್ಗಸೂಚಿಗಳಲ್ಲಿ ಸ್ವ-ಮೌಲ್ಯಮಾಪನದ ಗಮನಿಕೆ ಪಟ್ಟಿಯನ್ನು ಅಳವಡಿಸುವುದು.

### 3.2 ಸುರಕ್ಷ ನೇಮಕಾತಿ ಮತ್ತು ಆಯ್ಕೆಯ ಮಾರ್ಗಸೂಚಿಗಳು

ಸುರಕ್ಷ ನೇಮಕಾತಿ ಮತ್ತು ಆಯ್ಕೆಯ ಮಾರ್ಗಸೂಚಿಗಳಿಂದ ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣೆಗೆ ಸೂಕ್ತವಾದ ವ್ಯಕ್ತಿಗಳನ್ನು ಗುರುತಿಸಿ, ಆಯ್ಕೆ ಮಾಡಿಕೊಳ್ಳಲು ಮತ್ತು/ಅಥವಾ ವಿದ್ಯಾರ್ಥಿಗಳ ಸುರಕ್ಷತೆಯನ್ನು ತೊಂದರೆಗೆ ಸಿಲುಕಿಸಬಹುದಾದ ಅನರ್ಹ ವ್ಯಕ್ತಿಗಳನ್ನು ಗುರುತಿಸಿ, ತಡೆಯಲು ನೆರವಾಗುತ್ತದೆ. ಕೆಳಕಂಡ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳುವುದರಿಂದ ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿ ನಿಯಮಗಳಲ್ಲಿ ತಿದ್ದುಪಡಿಗಳನ್ನು ಮಾಡುವುದು.

**ತಪಾಸಣೆ:**

ಅ. ಸಂಸ್ಥೆಯ ಮುಖ್ಯಸ್ಥರಿಂದ ಹಿಡಿದು ಬೋಧಕ, ಬೋಧಕೇತರ ಸಿಬ್ಬಂದಿ, ಗುತ್ತಿಗೆ ಸಿಬ್ಬಂದಿ ಮತ್ತು ಹೊರ

ಗುತ್ತಿಗೆಯ ಸಂಸ್ಥೆಗಳನ್ನು ನೇಮಿಸಿಕೊಳ್ಳುವಾಗ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ, ಹಿಂದೆ ಅವರುಗಳು ಸೇವೆ ಸಲ್ಲಿಸಿದ ಎರಡು ಉದ್ಯೋಗದಾತರಿಂದ ದೃಢೀಕರಣ ಪತ್ರವನ್ನು ಪಡೆದುಕೊಳ್ಳುವುದು ಮತ್ತು ಇದರೊಂದಿಗೆ ಹಿಂದಿನ ಉದ್ಯೋಗದಾತರು ಮತ್ತು ಶಿಫಾರಸ್ಸು ಮಾಡಿರುವವರೊಂದಿಗೆ ಲಿಖಿತ ಮತ್ತು ಮೌಖಿಕವಾಗಿ ಪರಿಶೀಲಿಸುವುದು. ಎಲ್ಲ ರೀತಿಯಿಂದಲೂ ಸೂಕ್ತವಾದ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಮಕ್ಕಳೊಂದಿಗೆ ಕಾರ್ಯನಿರ್ವಹಿಸಲು ತೊಡಗಿಸಿಕೊಳ್ಳುವುದು.

ಆ.ಆಯ್ಕೆಯನ್ನು ಲಿಖಿತವಾಗಿ ಅರ್ಜಿಯನ್ನು ಆಹ್ವಾನಿಸುವುದು ಮತ್ತು ವೈಯಕ್ತಿಕ ಸಂದರ್ಶನದ ನಡೆಸುವುದು. ಮಕ್ಕಳ ಸುರಕ್ಷತೆ ಮತ್ತು ಹಲ್ಲೆ ಮುಂತಾದವುಗಳ ಕುರಿತು ಅರ್ಜಿದಾರನ ಮನೋಭಾವವನ್ನು ಪರಿಶೀಲಿಸುವುದು.

ಇ.ಪೊಲೀಸ್ ಇಲಾಖೆಯಿಂದ ಅರ್ಜಿದಾರನ ಹಿನ್ನೆಲೆ ಮತ್ತು ಆತನ ವಿರುದ್ಧ ಯಾವುದಾದರೂ ಬಾಕಿ ಇರುವ ಅಪರಾಧ ಪ್ರಕರಣಗಳಿರುವುದರ ಬಗ್ಗೆ ಮಾಹಿತಿಯನ್ನು ಪಡೆಯುವುದು. ಒಂದುವೇಳೆ ಅಂತಹ

ಪ್ರಕರಣವೇನಾದರೂ ನೊಂದಣಿಯಾಗಿದ್ದಲ್ಲಿ, ಅಂತಹ ವ್ಯಕ್ತಿಯನ್ನು ಮಕ್ಕಳೊಂದಿಗೆ ನೇರವಾಗಿ ಸಂಪರ್ಕವಿರುವ ಯಾವುದೇ ಕೆಲಸಕ್ಕೂ ಪರಿಗಣಿಸದಿರುವುದು.

ಈ. ಸಿಬ್ಬಂದಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು, ಸಂದರ್ಶನ ವರದಿಗಳು, ಪ್ರಮಾಣ ಪತ್ರಗಳು ಅವರು ನಿವೃತ್ತರಾಗುವವರೆಗೂ ಶಿಕ್ಷಣ ಸಂಸ್ಥೆ ಮತ್ತು ಆಡಳಿತ ಮಂಡಳಿಯಲ್ಲಿ ಲಭ್ಯವಿರುವುದು.

**ಹೊರ ಗುತ್ತಿಗೆ ಸಿಬ್ಬಂದಿಗಳಿಗಾಗಿ:**

ಶಿಕ್ಷಣ ಸಂಸ್ಥೆಯು ಸಿಬ್ಬಂದಿಗಳನ್ನು ಹೊರಗುತ್ತಿಗೆ ಸಂಸ್ಥೆಯ ಮೂಲಕ ತೆಗೆದುಕೊಂಡಿದ್ದಲ್ಲಿ, ಆ ಸಂಸ್ಥೆಯು ಸಿಬ್ಬಂದಿಗಳ ನೇಮಕಾತಿ ಮಾರ್ಗಸೂಚಿಗಳನ್ನು ಹೊಂದಿದ್ದು ಆಯ್ಕೆಯಲ್ಲಿ ಮೇಲ್ಕಂಡ ನಿಯಮಗಳನ್ನು ಪಾಲಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.

**3.3 ಮಾನವ ಸಂಪನ್ಮೂಲ ನೀತಿ ಮತ್ತು ಸೇವಾ ನಿಯಮಗಳು:**

ಶಿಕ್ಷಣ ಸಂಸ್ಥೆಯಲ್ಲಿನ ಆಡಳಿತ ಮಂಡಳಿಯ ಮಾನವ ಸಂಪನ್ಮೂಲ ನೀತಿಯು ಸಂಸ್ಥೆಯಲ್ಲಿನ ಮಕ್ಕಳ ರಕ್ಷಣಾ ನೀತಿಯನ್ನು ಉಲ್ಲೇಖಿಸಿ, ಅದರಲ್ಲಿರುವ ಮಕ್ಕಳ ರಕ್ಷಣಾತ್ಮಕ ಕ್ರಮಗಳ ಮಾಹಿತಿಯನ್ನು ಅಳವಡಿಸಿಕೊಳ್ಳುವುದು. ಮಕ್ಕಳ ರಕ್ಷಣಾ ನೀತಿಯನ್ನು ಪಾಲಿಸದಿರುವ ಹಾಗೂ ನೀತಿ ಸಂಹಿತೆಗೆ ಬದ್ಧರಾಗದೇ ಇರುವುದರಿಂದ ಎದುರಾಗುವ ಪರಿಣಾಮಗಳ ಬಗ್ಗೆ ಸಂಸ್ಥೆಯ ಮಾನವ ಸಂಪನ್ಮೂಲ ನೀತಿಯಲ್ಲಿ ಸ್ಪಷ್ಟವಾಗಿ ನಿರ್ಧಿಷ್ಟಪಡಿಸುವುದು.

ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯನ್ನು ರಾಜ್ಯದ ಸಿಬ್ಬಂದಿಗಳ ನೀತಿಯ ಸೇವಾ ನಿಯಮಗಳಲ್ಲಿ ಸೇರಿಸುವುದು. ಈ ನಿಯಮಗಳು ಗ್ರ್ಯಾಂಟ್ಇನ್ ಏಡ್ ಸಂಸ್ಥೆಗಳ ಸೇವಾ ನಿಯಮಗಳು, ಅನುದಾನಿತ ಮತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೂ ಅನ್ವಯವಾಗುತ್ತದೆ.

**ನೇಮಕಾತಿ ಮತ್ತು ಸೇವಾ ಅವಧಿಯಲ್ಲಿ ಪಾಲಿಸಬೇಕಾದ ನಿಯಮಗಳು:**

ಅ. ನೇಮಕಾತಿಗೊಂಡ ಸಿಬ್ಬಂದಿಯು ಪಾಲಿಸಬೇಕಾದ ನೀತಿ ಸಂಹಿತೆಗೆ (ಮಾದರಿ ನೀತಿ ಸಂಹಿತೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ) ಒಪ್ಪಿಗೆ ಸೂಚಿಸಿ ಸಹಿ ಮಾಡಿರುವುದನ್ನು ಖಾತರಿ ಪಡಿಸಿಕೊಳ್ಳುವುದು.

ಆ. ಒಂದುವೇಳೆ ಸಿಬ್ಬಂದಿಗಳನ್ನು ಮಕ್ಕಳ ರಕ್ಷಣಾ ನೀತಿಯ ಅಧಿಸೂಚನೆಗೆ ಮುನ್ನ ನೇಮಕಾತಿ ಮಾಡಿಕೊಂಡಿದ್ದಲ್ಲಿ, ಅವರ ಅಪರಾಧ ಹಿನ್ನೆಲೆಯನ್ನು ಪರಿಶೀಲಿಸುವುದು. ಅಂತಹ ಪ್ರತಿಯೊಬ್ಬ ನೌಕರನು ನೀತಿ ಸಂಹಿತೆಯನ್ನು ಒಪ್ಪಿಕೊಳ್ಳುವುದು ಮತ್ತು ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯನ್ನು ಪಾಲಿಸುವ ಬಗ್ಗೆ ಒಪ್ಪಿಗೆಯನ್ನು ಲಿಖಿತವಾಗಿ ಪಡೆಯುವುದು. ಒಂದುವೇಳೆ ಯಾವುದೇ ಸಿಬ್ಬಂದಿ ಅನುಸರಣೆಗೆ ಬದ್ಧವಾಗಿರದೇ ಇದ್ದಲ್ಲಿ, ಚಾಲ್ತಿಯಲ್ಲಿರುವ ಕಾನೂನಿನನ್ವಯ ಅಥವಾ ಸಂಸ್ಥೆಯ ಮಾನವ ಸಂಪನ್ಮೂಲ ನೀತಿಯಲ್ಲಿ ವ್ಯಾಖ್ಯಾನಿಸಿರುವಂತೆ ಅಥವಾ ಸರ್ಕಾರಿ ಸೇವಾ ನಿಯಮಗಳಡಿ ಸೂಕ್ತ ಕ್ರಮ ಕೈಗೊಳ್ಳುವುದು.

ಇ. ಶಿಕ್ಷಣ ಸಂಸ್ಥೆಯಲ್ಲಿನ ಯಾವುದೇ ಬೋಧಕ ಅಥವಾ ಬೋಧಕೇತರ ಸಿಬ್ಬಂದಿ ಸುರಕ್ಷತೆಯ ಉಲ್ಲಂಘನೆ ಅಥವಾ ಹಲ್ಲೆಗೆ ಸಂಬಂಧಿಸಿದ ತನಿಖೆಗೆ ಒಳಪಟ್ಟಿದ್ದಾಗ ಅವರ ವಿಚಾರಣೆಯನ್ನು ಬಾಕಿ ಇರಿಸಿ, ಅಮಾನತ್ತುಗೊಳಿಸುವುದು.

ಈ. ಶಿಕ್ಷಣ ಸಂಸ್ಥೆಯಲ್ಲಿನ ಯಾವುದೇ ಬೋಧಕ ಅಥವಾ ಬೋದಕೇತರ ಸಿಬ್ಬಂದಿಯು, ಮಕ್ಕಳ ಮೇಲೆ ಹಲ್ಲೆ ಮಾಡಿರುವುದಾಗಿ ಅಥವಾ ಸುರಕ್ಷತೆಯನ್ನು ಉಲ್ಲಂಘನೆ ಮಾಡಿರುವುದಾಗಿ ನ್ಯಾಯಾಲಯದಲ್ಲಿ ಸಾಬೀತಾದಲ್ಲಿ ಅವನು/ಆಕೆಯನ್ನು ತಕ್ಷಣವೇ ಸೇವೆಯಿಂದ ವಜಾಗೊಳಿಸಿ, ಸೇವೆಯನ್ನು ಮುಕ್ತಾಯಗೊಳಿಸಲು ಕಾರಣವಾದ ಅಂಶಗಳನ್ನು ವಜಾಗೊಳಿಸುವ ಪತ್ರದಲ್ಲಿ ದಾಖಲಿಸುವುದು.

ಊ. ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕಾರ್ಯಕ್ಷಮತೆಯಡಿ ಮಕ್ಕಳ ರಕ್ಷಣಾ ನೀತಿಯ ಅನುಸರಣೆಯನ್ನು ಸೇರ್ಪಡೆಗೊಳಿಸುವುದು.

### 3.4 ಹೆಚ್ಚುವರಿ ಸುರಕ್ಷತಾ ಕ್ರಮಗಳು:

**ಅ.ಸುರಕ್ಷಿತ ಮೂಲಸೌಕರ್ಯ:**

ರಾಷ್ಟ್ರೀಯ ಕಟ್ಟಡಗಳ ನೀತಿ ಸಂಹಿತೆ, 2005ನ್ನು ಶಿಕ್ಷಣ ಸಂಸ್ಥೆಗಳ ನಿರ್ಮಾಣ[5] ಕಾರ್ಯದಲ್ಲಿ ತೊಡಗಿರುವ ಎಲ್ಲಾ ಸಂಸ್ಥೆಗಳು ಒಂದು ಮಾದರಿ ನೀತಿ ಸಂಹಿತೆಯನ್ನಾಗಿ ಅಳವಡಿಸಿಕೊಳ್ಳಲಾಗಿದೆ. ಮಾನವ ಸಂಪನ್ಮೂಲ ಮಂತ್ರಾಲಯದ ದಿನಾಂಕ 09.10.2014[6] ರ ಶಾಲಾ ಸುರಕ್ಷತೆ ಪ್ರಕಟಣೆಯನ್ವಯ ಎಲ್ಲಾ ಹೊಸ ಕಟ್ಟಡಗಳನ್ನು ವಿನ್ಯಾಸಗೊಳಿಸಬೇಕಿದೆ. ವಯಸ್ಕರು ಮತ್ತು ಮಕ್ಕಳಿಂದ ಮಕ್ಕಳ ಮೇಲಾಗುವ ಅಪಾಯಗಳನ್ನು ತಪ್ಪಿಸುವ ನಿಟ್ಟಿನಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ಸ್ಥಳಗಳಲ್ಲಿ ಅಂದರೆ, ಶೌಚಾಲಯಗಳು, ಪ್ರಯೋಗಾಲಯಗಳು, ಕ್ರೀಡಾ ಸಾಮಗ್ರಿಗಳ ಕೊಠಡಿಗಳು, ಸ್ನಾನದ ಕೊಠಡಿಗಳು, ಕಲಾ ಮಂದಿರಗಳು, ಸಮಾಲೋಚನಾ ಕೊಠಡಿಗಳು ಮುಂತಾದವುಗಳಲ್ಲಿ ಸಮರ್ಪಕ ಬೆಳಕಿನ ವ್ಯವಸ್ಥೆ, ವಯಸ್ಕ ಸೇವಕರು, ಸಮಬಲದ ಬೆಂಬಲ ಗುಂಪುಗಳು ಮುಂತಾದವುಗಳನ್ನು ಒದಗಿಸುವ ಮೂಲಕ ಸುರಕ್ಷಾ ಅಭ್ಯಾಸಗಳನ್ನು ಖಾತರಿಪಡಿಸುವುದು.

**ಆ. ನಿಯಂತ್ರಣದ ಲಭ್ಯತೆ:**

ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡುವವರಿಗೆ ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ನಿಯಮಗಳನ್ನು ಅಭಿವೃದ್ಧಿಪಡಿಸಿ ಅನುಸರಿಸಲು ತಿಳಿಸುವುದು ಹಾಗೂ ಭೇಟಿ ನೀಡುವವರ ರಿಜಿಸ್ಟರನ್ನು ಸರಿಯಾದ ಸ್ಥಳದಲ್ಲಿ ಇಡುವುದು, ಸೇವೆಗಳ ಸರಬರಾಜುದಾರರು, ಸಮಾಲೋಚಕರು, ಮಾರುಕಟ್ಟೆ ಸಿಬ್ಬಂದಿ ಮುಂತಾದವರುಗಳ ಆಗಮನ ಮತ್ತು ನಿರ್ಗಮನದ ದ್ವಾರಗಳ ಮೇಲ್ವಿಚಾರಣೆ ಮಾಡುವುದು. ಶಿಕ್ಷಣ ಸಂಸ್ಥೆಯ ಹೊರಗಿನ ವ್ಯಕ್ತಿಗಳು ಯಾವ ಸಂದರ್ಭಗಳಲ್ಲಿ ಸಂಸ್ಥೆಯ ಒಳಗೆ ಬರಲು ಅವಕಾಶ ನೀಡಲಾಗಿತ್ತು ಎಂಬುದನ್ನು ಖಾತರಿಪಡಿಸಿಕೊಳ್ಳುವುದು.

**ಇ. ಶಾಲೆಯ ಹೊರಗಿನ ಚಟುವಟಿಕೆಗಳ ಮಾರ್ಗಸೂಚಿಗಳು:**

ಶಿಕ್ಷಣ ಸಂಸ್ಥೆಗಳು ಹೊರಗಿನ ಪ್ರವಾಸಗಳನ್ನು ಕೈಗೊಂಡಾಗ ಅಂದರೆ, ವಿಹಾರಗಳು, ವನಭೋಜನ, ಶೈಕ್ಷಣಿಕ ಪ್ರವಾಸ, ಅರಿವು–ಜಾಗೃತಿ ಶಿಬಿರಗಳು, ಜಾಥಾಗಳು ಮುಂತಾದ ಸಂದರ್ಭಗಳಲ್ಲಿ ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ, ಪಾಲಿಸುವುದು.

- ಪೋಷಕರು/ಪಾಲಕರಿಂದ ಲಿಖಿತವಾಗಿ ಅನುಮೋದನೆ ಪಡೆಯುವುದು.
- ಹೊರಡುವ ಮುನ್ನ ವಿದ್ಯಾರ್ಥಿಗಳಿಗೆ ಸುರಕ್ಷತೆಯ ಬಗ್ಗೆ ಮಾಹಿತಿ ನೀಡುವುದು,
- ತುರ್ತು ಪರಿಸ್ಥಿತಿಗಳಲ್ಲಿ ಪೋಷಕರನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳನ್ನು ಪಡುದುಕೊಳ್ಳುವುದು,
- ಪರಿವೀಕ್ಷಣೆಗೆ ವಿದ್ಯಾರ್ಥಿಗಳು ಮತ್ತು ವಯಸ್ಕರ ಅನುಪಾತ ಪಾಲಿಸುವುದು,

---

5. ರಾಷ್ಟ್ರೀಯ ಕಟ್ಟಡ ಸಂಹಿತೆಯು (NBC) ಕಟ್ಟಡವು ಅಪಾಯಕಾರಿ ಸಂದರ್ಭಗಳು, ಭೂಕಂಪನದ ನಂತರದ ಪರಿಣಾಮಗಳು, ಐತಿಹಾಸಿಕ ಮಹತ್ವ ಅಥವಾ ಆರ್ಥಿಕ ಮಹತ್ವ ಒಳಗೊಂಡಂತೆ ಕಟ್ಟಡಗಳ ಬಳಕೆಗೆ ಅನುಗುಣವಾಗಿ, ವಿವಿಧ ಮಾದರಿಯ ಕಟ್ಟಡಗಳ ರಚನೆ ಕುರಿತಂತೆ ಕೆಲವು ಮಹತ್ವದ ಅಂಶಗಳ ಬಗ್ಗೆ ತಿಳಿಸಿದೆ. ಸದರಿ ಸಂಹಿತೆಯ ವಿಭಾಗ 5.3.4 ರ 1.5 ಪ್ಯಾರಾದಲ್ಲಿ ಶಾಲೆಗಳ ಕಟ್ಟಡಗಳ ನಿರ್ಮಾಣದಲ್ಲಿ ಪರಿಗಣಿಸಬೇಕಾದ ಮಹತ್ವದ

6. ಅಂಶಗಳ ಕುರಿತು ತಿಳಿಸಿದೆ.[1] D. O. No. 10-11/2014-EE.4

7. D.O. No. 32-5/2014-RMSA-1

- ಮಗುವಿನ ರಕ್ಷಣಾ ನಿಯಮಗಳ ಬಗ್ಗೆ ಕನಿಷ್ಠ ತರಬೇತಿ ಹೊಂದಿರುವ ಒಬ್ಬ ವಯಸ್ಕರು ಇರುವಂತೆ ನೋಡಿಕೊಳ್ಳುವುದು.
- ಪ್ರಥಮ ಚಿಕಿತ್ಸಾ ಪೆಟ್ಟಿಗೆ ಸಿದ್ಧವಿರುವುದು.
- ಹೊರಗಿನ ಪ್ರದೇಶಗಳಲ್ಲಿ ಮುರಿದಿರುವ ಸ್ನಾನ ಗೃಹದ ನಿರ್ವಹಣೆ
- ಸಾರ್ವಜನಿಕ ಸಾರಿಗೆಯ ಬಳಕೆ, ಇತ್ಯಾದಿಗಳು.
- ನಿರ್ಧಿಷ್ಟ ಘಟನೆ ಅಥವಾ ಕಾರ್ಯಕ್ರಮಗಳಾದ ಶಾಲಾ ಪ್ರವಾಸ, ಸ್ಪರ್ಧೆಗಳು ನಡೆಯುವ ಸಂದರ್ಭಗಳಲ್ಲಿ ಮಗುವಿನ ರಕ್ಷಣೆಗಾಗಿ ನಿಗಧಿಪಡಿಸಿದ ವ್ಯಕ್ತಿಯನ್ನು ಜವಾಬ್ದಾರರನ್ನಾಗಿಸಿ, ಹೊಣೆಗಾರಿಕೆಯನ್ನು ನಿಗಧಿಪಡಿಸುವುದು.
- ಪ್ರಾಥಮಿಕ ಶಾಲೆಯವರೆಗೆ 1:10 ಮತ್ತು ಪ್ರೌಢಶಾಲೆ ಮತ್ತು ಅದಕ್ಕೆ ಮೇಲ್ಪಟ್ಟ ಶಾಲೆಗಳಿಗೆ 1:20 ರ ಅನುಪಾತವನ್ನು ನಿಗಧಿಗೊಳಿಸುವುದು. ಈ ಕುರಿತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ದಿನಾಂಕ: 28.07.2014[7] ರ ಮಕ್ಕಳ ಪ್ರವಾಸದ ಮಾರ್ಗಸೂಚಿಗಳನ್ನು ಅವಲೋಕಿಸುವುದು.

**ಈ. ಮಾರ್ಗದರ್ಶನ ಮತ್ತು ಆಪ್ತಸಮಾಲೋಚನಾ ಕೇಂದ್ರಗಳು:**

ಪ್ರತಿಯೊಂದು ಶಿಕ್ಷಣ ಸಂಸ್ಥೆಗಳಲ್ಲಿ ಮಾರ್ಗದರ್ಶನ ಮತ್ತು ಆಪ್ತಸಮಾಲೋಚನಾ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ಅವುಗಳು ಪರಿಣಾಮಕಾರಿ ಹಾಗೂ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಕ್ರಮವಹಿಸುವುದು. ಸದರಿ ಕೇಂದ್ರಗಳಲ್ಲಿ ತರಬೇತಿ ಹೊಂದಿದ ಆಪ್ತಸಮಾಲೋಚಕರನ್ನು ನೇಮಿಸುವುದು ಅಥವಾ ತರಬೇತಿ ಹೊಂದಿದವರ ಸೇವೆಯನ್ನು ಪಡೆಯುವುದು. ಆಪ್ತ ಸಮಾಲೋಚನಾ ಸೇವೆಗಳನ್ನು ಸಮಯಕ್ಕನುಗುಣವಾಗಿ ಅಧಿವೇಶನಗಳ ಮೂಲಕ ನೀಡುವುದು. ತರಬೇತಿ ಹೊಂದಿದ ಆಪ್ತಸಮಾಲೋಚಕರು ಲಭ್ಯವಿಲ್ಲದಿದ್ದಲ್ಲಿ, ಶಾಲೆಯಲ್ಲಿರುವ ಒಬ್ಬ ಶಿಕ್ಷಕರಿಗೆ ಮಕ್ಕಳ ಆಪ್ತಸಮಾಲೋಚನಾ ಕೌಶಲ್ಯಗಳ ಬಗ್ಗೆ ತರಬೇತಿ ನೀಡಿ ಬಳಸಿಕೊಳ್ಳುವುದು.

**3.5 ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ವೃತ್ತಿಪರ ನೈತಿಕತೆಯ ನೀತಿ ಸಂಹಿತೆ:**

**ಉದ್ದೇಶ ಮತ್ತು ವ್ಯಾಪ್ತಿ:** ಶಿಕ್ಷಣ ಸಂಸ್ಥೆಯಲ್ಲಿನ ಬೋದಕ, ಬೋದಕೇತರ ಮತ್ತು ಹೊರಗುತ್ತಿಗೆ (ಇನ್ನು ಮುಂದೆ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳೆಂದು ಉಲ್ಲೇಖಿಸಲಾಗುವುದು) ಸಿಬ್ಬಂದಿಗಳಿಗೆ ಅವರ ವರ್ತನೆ ಮತ್ತು ನೈತಿಕತೆಯ ಬಗ್ಗೆ ಮಾರ್ಗದರ್ಶನ ನೀಡಲು ನೀತಿ ಸಂಹಿತೆಯನ್ನು ರೂಪಿಸಿ, ಪಾಲಿಸಲು ಸಂಸ್ಥೆಯು ಬದ್ಧವಾಗಿರಬೇಕೆಂದು ನಿರೀಕ್ಷಿಸಲಾಗಿದೆ.

ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳನ್ನು ವಿಶೇಷ ಹಾಗೂ ಆದರ್ಶಪ್ರಾಯ ಸ್ಥಾನದಲ್ಲಿ ಗುರುತಿಸಲಾಗುತ್ತಿದ್ದು, ವಿದ್ಯಾರ್ಥಿಗಳು ಮತ್ತು ಸಮುದಾಯದ ಸದಸ್ಯರ ವರ್ತನೆ ಮತ್ತು ನಡವಳಿಕೆಯ ಮೇಲೆ ಪ್ರಭಾವ ಬೀರುವ ಮಾದರಿಯ ವ್ಯಕ್ತಿಗಳಾಗಿರುವುದು. ಆದುದರಿಂದ ಸದರಿಯವರ ನಡವಳಿಕೆಯು ಸಮಾಜದಲ್ಲಿನ ಉತ್ತಮ ನಡವಳಿಕೆಗಳಿಗೆ ಉದಾಹರಣೆಯಾಗುವಂತಿರಬೇಕು. ಒಬ್ಬ ನಾಗರೀಕನಾಗಿ ಮತ್ತು ಶಿಕ್ಷಣ ಸಂಸ್ಥೆಯ ಸದಸ್ಯನಾಗಿ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶಾಲೆಯ ಒಳಗೆ ಮತ್ತು ಹೊರಗೆ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದರೊಂದಿಗೆ ಅವರ ಗೌರವ, ಘನತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳುವುದು.

ಈ ಮಾರ್ಗಸೂಚಿಗಳ ಆಧಾರದಲ್ಲಿ ಶಿಕ್ಷಣ ಸಂಸ್ಥೆಯಲ್ಲಿನ ಆಡಳಿತ ಮಂಡಳಿಯು ಬೋದಕ ಮತ್ತು ಬೋದಕೇತರ ಸಿಬ್ಬಂದಿಗಳಿಗೆ ನೀತಿ ಸಂಹಿತೆಯನ್ನು ವ್ಯಾಖ್ಯಾನಿಸುವುದು. ಸರ್ಕಾರಿ ಶಾಲೆಗಳಾಗಿದ್ದಲ್ಲಿ, ಶಿಕ್ಷಣ ಇಲಾಖೆಯು ಸಿಬ್ಬಂದಿಗಳಿಗೆ ನೀತಿ ಸಂಹಿತೆಯನ್ನು ವ್ಯಾಖ್ಯಾನಿಸುವುದು. ಈ ನೀತಿ ಸಂಹಿತೆಯು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಭಾಗವಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕರಡು ಎನ್‌ಸಿಟಿಇ ಮಾರ್ಗಸೂಚಿ 2010ನ್ನು ಉಲ್ಲೇಖಿಸುವುದು.

ನೀತಿ ಸಂಹಿತೆಯು ಎಲ್ಲಾ ಶಿಕ್ಷಣ ಸಂಸ್ಥೆಗಳ ಬೋದಕ, ಬೋದಕೇತರ ಮತ್ತು ಹೊರಗುತ್ತಿಗೆ ಸಿಬ್ಬಂದಿಗಳಿಗೆ ಅನ್ವಯವಾಗಲಿದ್ದು, ಅವರು ಅನುಸರಿಸಲು ವಿಫಲರಾದಲ್ಲಿ ಶಿಕ್ಷಣ ಸಂಸ್ಥೆಯ ಮಾನವ ಸಂಪನ್ಮೂಲ ನೀತಿ ಅಥವಾ ಸಿಬ್ಬಂದಿಗಳ ಸೇವಾ ನಿಯಮಾವಳಿಗಳು ಮತ್ತು/ಅಥವಾ ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಡಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು ಎಂಬ ಅಂಶದ ಬಗ್ಗೆ ಎಲ್ಲರೂ ಅರಿವನ್ನು ಹೊಂದಿರತಕ್ಕದ್ದು.

**ಕಾನೂನು ಮತ್ತು ಸಂವಿಧಾನದ ಕಟ್ಟುಪಾಡುಗಳ ಅನುಪಾಲನೆ:**

ಎಲ್ಲಾ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಹಾಗೂ ಹೊರಗುತ್ತಿಗೆಯ ಸಂಸ್ಥೆಗಳಿಂದ ನೇಮಿಸಲ್ಪಟ್ಟ ಗುತ್ತಿಗೆ ಸಿಬ್ಬಂದಿಗಳು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯು ಸೇರಿದಂತೆ ಪ್ರಸ್ತುತ ಜಾರಿಯಲ್ಲಿರುವ ಶಾಸನಗಳಡಿ ಒಳಪಟ್ಟಿರುವರು.

**'ಮಗುವಿನ ರಕ್ಷಣೆ'ಗೆ ಸಕಾರಾತ್ಮಕ ಉದಾಹರಣೆಯನ್ನು ಸ್ಥಾಪಿಸುವುದು.**

- ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ವರ್ತನೆ ಮತ್ತು ನೈತಿಕತೆಯು ಶಾಲೆಯಲ್ಲಿನ ಎಲ್ಲಾ ವಿದ್ಯಾರ್ಥಿಗಳು ಅನುಸರಿಸಲು ಮಾದರಿಯಾಗಿರುವುದು.
- ಮಕ್ಕಳಿಗೆ ಸಂಬಂಧಿಸಿದ ಮೌಖಿಕ ಮತ್ತು ಮೌಖಿಕೇತರ ಸಂವಹನವು ಮಕ್ಕಳ ಸಂವೇಧಿ ಮತ್ತು ವಯಸ್ಸಿಗನುಗುಣವಾಗಿರಬೇಕಲ್ಲದೇ, ಯಾವುದೇ ರೀತಿಯಲ್ಲಿಯೂ ಮಗುವಿಗೆ ಹೆದರಿಕೆ, ಭಯ, ಅವಮಾನ ಅಥವಾ ಘನತೆಗೆ ಧಕ್ಕೆ ತರುವಂತಿರಬಾರದು. ಸಂವಹನವು ಮಗುವಿನ ಪೋಷಕರು ಮತ್ತು ಪಾಲಕರನ್ನು ಸಹ ಕೀಳಾಗಿ ಅಥವಾ ಕಡೆಗಣಿಸುವಂತಿರಬಾರದು.
- ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ಸಿಬ್ಬಂದಿಗಳು ತಮ್ಮ ಮೇಲೆ ಯಾವುದೇ ರೀತಿಯ ನಿಂದನೆ ಮತ್ತು ವೃತ್ತಿಪರವಲ್ಲದ ನೈತಿಕತೆಯ ಆಪಾದನೆಗಳು ಬರದಂತೆ ನಡೆದುಕೊಳ್ಳುವುದು.
- ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಸಿಬ್ಬಂದಿಗಳು ಶಾಲೆಯಲ್ಲಿನ ಯಾವುದೇ ಮಕ್ಕಳು, ವಯಸ್ಕರು ಅಥವಾ ಸಮುದಾಯದಲ್ಲಿನ ಯಾವುದೇ ಮಗುವನ್ನು ವಯಸ್ಸು, ಲಿಂಗತ್ವ, ಜಾತಿ, ವರ್ಗ, ಧರ್ಮ, ವಿಕಲತೆ, ಮುಂತಾದವುಗಳ ಆಧಾರದಲ್ಲಿ ತಾರತಮ್ಯ ಸಂಭವಿಸದಿರುವುದನ್ನು ಖಾತರಿಪಡಿಸಿಕೊಳ್ಳುವುದು. ಕೆಲವು ಸನ್ನಿವೇಶಗಳನ್ನು ಹೊರತುಪಡಿಸಿ ಯಾವುದೇ ಮಗುವಿಗೆ ವಿಶೇಷ ಆಧ್ಯತೆಯನ್ನು ನೀಡದಿರುವುದನ್ನು ಸಹ ಖಾತರಿಪಡಿಸಿಕೊಳ್ಳುವುದು.
- ಸಹೋದ್ಯೋಗಿ ಅಥವಾ ಹೊರಗುತ್ತಿಗೆ ಸಂಸ್ಥೆಯ ನೌಕರರಿಂದ ನೀತಿ ಸಂಹಿತೆಯ ಉಲ್ಲಂಘನೆಯ ಬಗ್ಗೆ ಅನುಮಾನ ಅಥವಾ ಮಾಹಿತಿ ಕಂಡುಬಂದಲ್ಲಿ, ತಕ್ಷಣವೇ ಮಕ್ಕಳ ರಕ್ಷಣಾಧಿಕಾರಿಗೆ ವರದಿಮಾಡುವುದು.

**ಮಕ್ಕಳ ರಕ್ಷಣೆ ಹಾಗೂ ಯೋಗಕ್ಷೇಮ:**

- ಶಿಕ್ಷಣ ಸಂಸ್ಥೆಗಳಲ್ಲಿ ಸಿಬ್ಬಂದಿಗಳು ತಮ್ಮ ಪರಿವೀಕ್ಷಣೆಯಡಿ ಬರುವ ವಿದ್ಯಾರ್ಥಿಗಳ ರಕ್ಷಣೆ ಮತ್ತು ಯೋಗಕ್ಷೇಮದ ಗುರಿ ಹೊಂದಿರುವುದನ್ನು ಖಾತರಿಪಡಿಸಿಕೊಳ್ಳುವುದು.

- ಶಿಕ್ಷಣ ಸಂಸ್ಥೆ ಮತ್ತು ಶಾಲೆಯ ಆವರಣದಲ್ಲಿ ಮಗುವಿನ ನಿಂದನೆಯೂ ಸೇರಿದಂತೆ ಸುರಕ್ಷತೆಯ ಉಲ್ಲಂಘನೆಯಾಗದಂತೆ ಮಗುವನ್ನು ರಕ್ಷಿಸುವ ಕರ್ತವ್ಯ ಮತ್ತು ಜವಾಬ್ದಾರಿ ಶಿಕ್ಷಣ ಸಂಸ್ಥೆಯ ಸಿಬ್ಬಂದಿಯದಾಗಿರುತ್ತದೆ ಹಾಗೂ ಸದರಿ ಘಟನೆಗಳು ಸಂಭವಿಸಿದಾಗ ಮಾಹಿತಿಯನ್ನು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾಧಿಕಾರಿ ಅಥವಾ ಸಂಸ್ಥೆಯ ಮುಖ್ಯಸ್ಥರಿಗೆ ವರದಿ ಮಾಡುವುದನ್ನು ಸಹ ಒಳಗೊಂಡಿರುತ್ತದೆ.

- ಶಾಲೆಯಲ್ಲಿನ ಯಾವುದೇ ಮಗುವಿಗೆ ಭಯ, ಆಘಾತ, ಗಾಯ, ಭೌತಿಕ ದಂಡನೆ, ಲೈಂಗಿಕ ಹಲ್ಲೆ, ಮಾನಸಿಕ ಮತ್ತು ಭಾವನಾತ್ಮಕ ಶೋಷಣೆ ಮುಂತಾದವುಗಳಿಂದ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ದೂರ ಉಳಿಯುವುದು.

- ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಮಗುವು ನೀಡಿರುವ ಮಾಹಿತಿ ಅಥವಾ ಮಗುವಿಗೆ ಸಂಬಂಧಿಸಿದ ಘಟನೆಯ ವಿವರಗಳ ಗೌಪ್ಯತೆಯನ್ನು ಕಾಪಾಡುವುದು.

- ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಎಲ್ಲಾ ವಿಧದ ದೌರ್ಜನ್ಯ (ಭೌತಿಕ, ಭಾವನಾತ್ಮಕ, ಲೈಂಗಿಕ ಮತ್ತು ನಿರ್ಲಕ್ಷ್ಯ), ಶೋಷಣೆ ಮತ್ತು ಅಧಿಕಾರ ದುರುಪಯೋಗವಾಗದಂತೆ ತೀವ್ರ ನಿಗಾವಹಿಸುವುದು ಮತ್ತು ಶೂನ್ಯ ಸಹನೆಯನ್ನು ಹೊಂದಿರುವುದು. ಇದರಲ್ಲಿ ವಿದ್ಯಾರ್ಥಿಗಳು ಅಥವಾ ವಯಸ್ಕರಿಂದ ಬೆದರಿಕೆ ಮತ್ತು ಗೇಲಿಮಾಡುವುದು ಸಹ ಸೇರಿರುತ್ತದೆ.

- ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಹೊರಡಿಸಿರುವ 'ಶಾಲೆಗಳಲ್ಲಿ ದೈಹಿಕಶಿಕ್ಷೆಯನ್ನು ನಿರ್ಮೂಲನೆ ಮಾಡುವ ಮಾರ್ಗಸೂಚಿ'ಗಳಲ್ಲಿ ವ್ಯಾಖ್ಯಾನಿಸಿರುವಂತೆ, ಮಕ್ಕಳನ್ನು ಸಕಾರಾತ್ಮಕವಾಗಿ ತೊಡಗಿಸಿಕೊಳ್ಳುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದು ಮತ್ತು ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಯಾವುದೇ ರೀತಿಯ ದೈಹಿಕ ದಂಡನೆಯನ್ನು ವಿಧಿಸುವುದರಿಂದ ದೂರವಿರುವುದು.

- ಶಾಲೆಗಳಲ್ಲಿ ಮಕ್ಕಳೊಂದಿಗೆ ವಯಸ್ಕರು ನಡೆಸುವ ಸಂಭಾಷಣೆಯನ್ನು ಎಲ್ಲರಿಗೂ ಗೋಚರಿಸುವಂತಹ ವ್ಯವಸ್ಥೆ (ತೆರೆದ ಬಾಗಿಲು/ಕಿಟಕಿ ಅಥವಾ ಪಾರದರ್ಶಕ ಬಾಗಿಲುಗಳನ್ನು ಹೊಂದಿರುವ ಕೋಣೆ)ಯಲ್ಲಿ ನಡೆಸುವುದು ಹಾಗೂ ಆ ಸಂದರ್ಭದಲ್ಲಿ ಕನಿಷ್ಠ ಒಬ್ಬ ಇತರೆ ವಯಸ್ಕ ಮಗುನೊಂದಿಗೆ ಹಾಜರಿರುವುದು. ಒಂದು ವೇಳೆ ಬಾಗಿಲು ಮುಚ್ಚಿದ ಕೋಣೆಯಲ್ಲಿ ಮಗುವಿನೊಂದಿಗೆ ಚರ್ಚೆ ಅಥವಾ ಸಭೆ ನಡೆಸಬೇಕಾದಲ್ಲಿ ಅಧಿಕೃತವಾಗಿ ನೇಮಿಸಲಾದ ಸಿಬ್ಬಂದಿ/ಪೋಷಕ/ಪಾಲಕರು ಯಾವಾಗಲೂ ಹಾಜರಿರುವುದನ್ನು ಕಡ್ಡಾಯಗೊಳಿಸಲಾಗಿದೆ.

- ಭೌತಿಕ ಭೇಟಿಯು ಕೇವಲ ಅಗತ್ಯ ಮತ್ತು ಸಂದರ್ಭೋಚಿತವಾಗಿರುವುದು ಮತ್ತು ಪರಿಸ್ಥಿತಿ, ಲಿಂಗತ್ವ, ವಯಸ್ಸು, ಸಾಮರ್ಥ್ಯ, ಬೆಳವಣಿಗೆಯ ಹಂತ, ಮಗುವಿನ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಳ್ಳುವುದು. ಭೇಟಿಯು ಗೌರವಯುತವಾಗಿರಬೇಕು ಮತ್ತು ಮಗುವಿಗೆ ಅಹಿತಕರ, ಬೆದರಿಕೆ, ತನಿಕೆ ಮತ್ತು ಲೈಂಗಿಕತೆಯಂತಹ ಸ್ವಭಾವವೆಂಧೆನಿಸಬಾರದು.

- ಮಗುವಿನ ವೈಯಕ್ತಿಕ ಮತ್ತು ಖಾಸಗಿ ಚಟುವಟಿಕೆಗಳಾದ ಸ್ನಾನ ಮಡುವುದು, ಬಟ್ಟೆ ಬದಲಿಸುವುದು, ಶೌಚಲಯ ಬಳಕೆ ಮತ್ತಿತರ ಸಂದರ್ಭಗಳಲ್ಲಿ ಮಗುವಿನ ಏಕಾಂತತೆಯನ್ನು ಖಾತರಿಪಡಿಸುವುದು ಹಾಗೂ ವೈದ್ಯಕೀಯ ತುರ್ತು ಪರಿಸ್ಥಿತಿ ಮತ್ತು ಅವಶ್ಯಕ ಸಂದರ್ಭಗಳಲ್ಲಿ ಮಗುವನ್ನು ಸಂಪರ್ಕಿಸಿ ಸಹಾಯ ಮಾಡುವುದು.

- ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಸಂಸ್ಥೆಯ ಆಡಳಿತ ಮಂಡಳಿಯ ಅನುಮತಿ ಇಲ್ಲದೆ ಹಾಗೂ ಪೋಷಕರ ಗಮನಕ್ಕೆ ತಾರದೆ, ಶಾಲಾ ಅವಧಿಯ ನಂತರ ಅಥವಾ ರಜಾ ದಿನಗಳಲ್ಲಿ ಮಗುವನ್ನು ಹೊರಗಡೆ ಸಂಪರ್ಕಿಸಬಾರದು.

- ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಯಾವುದೇ ಸನ್ನಿವೇಶಗಳಲ್ಲಿ ಯಾವುದೇ ಕಾರಣಕ್ಕೂ, ಮಗುವಿನ/ಮಕ್ಕಳ ಅನಧಿಕೃತ ಛಾಯಾಚಿತ್ರ ಮತ್ತು ವಿಡಿಯೋ ಚಿತ್ರೀಕರಣ ಮಾಡುವುದರಿಂದ ದೂರ ಉಳಿಯುವುದು.

- ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಮಾಹಿತಿ ತಂತ್ರಜ್ಞಾನವನ್ನು ಬಳಸುವಾಗ ಸೈಬರ್ ರಕ್ಷಣಾ ನಿಯಮಗಳನ್ನು ಅನುಸರಿಸುವುದು ಮತ್ತು ಎಚ್ಚರಿಕೆಯಿಂದ ಅಭ್ಯಾಸ ಮಾಡುವುದು. ಶಿಕ್ಷಣ ಸಂಸ್ಥೆಯ ಸಿಬ್ಬಂದಿಯ ಅಪ್ಪಣೆಯಿಲ್ಲದೆ ಯಾವುದೇ ವ್ಯಕ್ತಿಗೆ, ಯಾವುದೇ ಮಾಹಿತಿ ಅಥವಾ CCTVಯಲ್ಲಿನ ಮಾಹಿತಿಯನ್ನು ನೀಡುವುದರಿಂದ ದೂರವಿರುವುದು. ಮೊಬೈಲ್ ಅಪ್ಲಿಕೇಷನ್‌ನಿಂದ ಮಕ್ಕಳು ಮತ್ತು ಪೋಷಕರು/ಪಾಲಕರ ನಡುವಿನ ಸಂವಾದ ಮತ್ತು ಸಂವಹನವು ಶಿಕ್ಷಣ ಸಂಸ್ಥೆಯ ಆಡಳಿತವು ಅನುಮೋದಿಸಿರುವ ಅಪ್ಲಕೇಷನ್ಸ್‌ನ ಮೂಲಕವೇ ನಿರ್ವಹಿಸುವುದು.

**ಗೌಪ್ಯತೆ (confidentiatily):**

- ಶಿಕ್ಷಣ ಸಂಸ್ಥೆಗಳ ಎಲ್ಲಾ ಸಿಬ್ಬಂದಿಗಳು ಅಥವಾ ಗುತ್ತಿಗೆ ಸಿಬ್ಬಂದಿಗಳು, ಮಕ್ಕಳ ಅಥವಾ ಅವರ ಪೋಷಕರು/ಪಾಲಕರಿಗೆ ಸಂಬಂಧಿಸಿದ ಗೌಪ್ಯ ಮಾಹಿತಿಯನ್ನು ಹೊಂದಿದ್ದು, ಸದರಿ ಮಾಹಿತಿಯನ್ನು ಅಧಿಕೃತ ಮತ್ತು ಅರ್ಹರೊಂದಿಗೆ ಮಾತ್ರ ಹಂಚಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದು.

- ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಇತರೆ ಮಗುವಿನ ಅಸಮರ್ಪಕ ವರ್ತನೆಯನ್ನು ಗಮನಿಸಿದ ಪ್ರಕರಣಗಳಲ್ಲಿ ಉದಾ: ಮಗುವನ್ನು ಇತರೆ ಮಗು ಬೆದರಿಸಿದಲ್ಲಿ, ಶಿಕ್ಷಣ ಸಂಸ್ಥೆಯ ಸಿಬ್ಬಂದಿಯು ಸಮರ್ಪಕ ಕಾರ್ಯವಿಧಾನಗಳಿಗೆ ಅನುಗುಣವಾಗಿ ವರದಿ ಮಾಡುವುದು ಮತ್ತು ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗಧಿಪಡಿಸಿರುವಂತೆ ಮಕ್ಕಳ ರಕ್ಷಣಾ ಅಧಿಕಾರಿ/ಮಕ್ಕಳ ರಕ್ಷಣಾ ಸಮಿತಿಗಳು ವ್ಯವಹರಿಸುವುದು. ಸದರಿ ವಿಷಯವನ್ನು ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಶಾಲೆಯ ಇತರೆ ಸಿಬ್ಬಂದಿಗಳೊಂದಿಗೆ ಯಾವುದೇ ಕಾರಣಕ್ಕೂ ಹಂಚಿಕೊಳ್ಳಬಾರದು.

**ಶಿಕ್ಷಣ ಸಂಸ್ಥೆಗಳ ನೌಕರರು ನೀಡಬೇಕಾಗಿರುವ ಘೋಷಣೆ:**

ನಾನು ಇದನ್ನು ಓದಿ, ಅರ್ಥಮಾಡಿಕೊಂಡು ಮತ್ತು ನೀತಿ ಸಂಹಿತೆಯಲ್ಲಿ ತಿಳಿಸಿರುವಂತೆ ಅನುಸರಿಸಲು ಒಪ್ಪಿರುತ್ತೇನೆ. ಮಕ್ಕಳ ರಕ್ಷಣೆ, ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ನನ್ನ ಬದ್ಧತೆಗಳು ಮತ್ತು ಜವಾಬ್ದಾರಿಗಳ ಬಗ್ಗೆ ನನಗೆ ಅರಿವಿರುತ್ತದೆ ಮತ್ತು ಶಿಕ್ಷಣ ಸಂಸ್ಥೆಯ ಒಳಗೆ ಮತ್ತು ಹೊರಗೆ ವೃತ್ತಿಪರ ನೈತಿಕತೆಗೆ ಬದ್ಧನಾಗಿರುತ್ತೇನೆ.

ನೌಕರನ ಹೆಸರು : ------------------------------------

ನೌಕರನ ಪದನಾಮ :------------------------------------

ನೌಕರನ ಸಹಿ :------------------------------------

ದಿನಾಂಕ :------------------------------------

ಸ್ಥಳ :------------------------------------

### 3.6 ಸಾಮರ್ಥ್ಯಾಭಿವೃದ್ಧಿ

**ವಯಸ್ಕ ಭಾಗೀದಾರರಿಗೆ :**

ಶಿಕ್ಷಣ ಸಂಸ್ಥೆಯ ಆಡಳಿತವು (ಸರ್ಕಾರೇತರ ಶಾಲೆಗಳಿಗೆ ಆಡಳಿತ ಮಂಡಳಿ ಅಥವಾ ನಿರ್ವಹಣಾ ಮಂಡಳಿ ಮತ್ತು ಸರ್ಕಾರಿ ಶಾಲೆಗಳಿಗೆ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ) ಕೆಳಕಂಡ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಆಡಳಿತ ಮಂಡಳಿ, ಬೋದಕ ಮತ್ತು ಬೋಧಕೇತರ ಸಿಬ್ಬಂದಿ, ಗುತ್ತಿಗೆ ಸಿಬ್ಬಂದಿ, ಪೋಷಕರು ಮತ್ತು ಕಾನೂನು ಸಮ್ಮತ ಪಾಲಕರಿಗೆ ಹಾಗೂ ಎಲ್ಲಾ ವಯಸ್ಕ ಭಾಗೀದಾರರಿಗೆ ಮಾಹಿತಿ ನೀಡುವುದು ಸೇರಿದಂತೆ ಸದರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಗತ್ಯವಿರುವ ಸಂಪನ್ಮೂಲಗಳು ಮತ್ತು ನಿರ್ದೇಶನ ನೀಡುವುದು.

ಸಾಮರ್ಥ್ಯಾಭಿವೃದ್ಧಿ ಪ್ರಕ್ರಿಯೆಯ ವಿಷಯಗಳು ಕೆಳಕಂಡವುಗಳನ್ನು ಒಳಗೊಂಡಿರುವುದು.

**ಅ. ಪೂರ್ವಭಾವಿ ತರಬೇತಿ :**

ಸದರಿ ತರಬೇತಿಯಲ್ಲಿ ಮಗುವಿನ ನಿಂದನೆ, ನಿರ್ಲಕ್ಷ್ಯ ಮತ್ತು ಶೋಷಣೆಯ ಕುರಿತು ಅನ್ವಯವಾಗುವ ಕಾನೂನುಗಳು ಮತ್ತು ನೀತಿಗಳು ಹಾಗೂ ಮಾರ್ಗಸೂಚಿಗಳಾದ UNCRC, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (POCSO), ಬಾಲ ನ್ಯಾಯ ಕಾಯ್ದೆ ಮತ್ತು ICPS ಕಾನೂನುಗಳಲ್ಲಿನ ಮುಖ್ಯಾಂಶಗಳು, ಕುಂದುಕೊರತೆ ನಿವಾರಣಾ ವಿಧಾನಗಳು, ಮಾಧ್ಯಮ ಸಂಬಂಧಗಳು, ಗೌಪ್ಯತೆ ಮತ್ತು ವರದಿ ಮಾಡುವ ಬಗ್ಗೆ ಇರುವ ಬದ್ಧತೆಗಳ ಬಗ್ಗೆ ಇರುವ ಪ್ರಮುಖ ಅಂಶಗಳ ತಿಳುವಳಿಕೆಯನ್ನು ಹೊಂದಿರುವುದು.

**ಆ. ಮಕ್ಕಳ ಸ್ನೇಹಿ ಶಿಸ್ತಿನ ವಿಧಾನಗಳು ಮತ್ತು ಕಾನೂನುಬಾಹಿರವಾದ ಕಠಿಣ ದೈಹಿಕ ದಂಡನೆ :**

ಮಕ್ಕಳು ಮತ್ತು ಪೋಷಕರೊಂದಿಗೆ ನೇರ ಸಂಪರ್ಕದಲ್ಲಿರುವ ಬೋದಕ ಮತ್ತು ಬೋದಕೇತರ ಸಿಬ್ಬಂದಿಗಳಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ, ಕಠಿಣ ದೈಹಿಕ ದಂಡನೆಯ ಹಾನಿಕಾರಕ ಪರಿಣಾಮಗಳ ಬಗ್ಗೆ ತಿಳುವಳಿಕೆ ಮೂಡುವುದರಿಂದ ಶಿಸ್ತಿನ ವಿಧಾನದೆಡೆಗೆ ಆಸಕ್ತಿ ಬೆಳೆಯಲಿದೆ ಮತ್ತು ಇದು ಅವರಿಗೆ ಸಕಾರಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳಲು ನೆರವಾಗುತ್ತದೆ. NCPCR ಮಾರ್ಗಸೂಚಿಗಳನ್ನು ಗಮನಿಸುವುದು.

**ಇ. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ (KSCPP) ಮತ್ತು ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿ :**

ಶಿಕ್ಷಣ ಸಂಸ್ಥೆಗಳಲ್ಲಿನ ಬೋದಕ ಮತ್ತು ಬೋದಕೇತರ ಸಿಬ್ಬಂದಿಗಳು ಸೇರಿದಂತೆ, ಎಲ್ಲಾ ಸಿಬ್ಬಂದಿಗಳಿಗೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ (KSCPP) ಮತ್ತು ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಗಳ ಬಗ್ಗೆ ತರಬೇತಿ ನೀಡುವುದು ಹಾಗೂ ಶಾಲೆಯಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಪ್ರತಿಕ್ರಿಯೆ ಮತ್ತು ನಿವಾರಣಾ ವ್ಯವಸ್ಥೆಯನ್ನು ರಚನೆಮಾಡುವುದು.

ಈ. ವಿದ್ಯಾರ್ಥಿಗಳು ಸಮಸ್ಯೆಗಳನ್ನು ಹೇಗೆ ಸಂವೇಧನೆಯಿಂದ ನಿರ್ವಹಣೆ ಮಾಡುವುದು ಮತ್ತು ಸಮಸ್ಯೆಗಳನ್ನು ಚರ್ಚಿಸುವುದರ ಬಗ್ಗೆ ಸಿಬ್ಬಂದಿಗಳಿಗೆ ಅವಶ್ಯವಿರುವ ಜ್ಞಾನ ಮತ್ತು ಮಾಹಿತಿ ನೀಡುವುದು.

ಉ. ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಆಗಾಗ್ಗೆ ಪುನರ್ಮನನ ಅಧಿವೇಶನಗಳನ್ನು ಏರ್ಪಡಿಸುವುದು

**ಮಕ್ಕಳಿಗಾಗಿ :**

**ಅ. ಪೂರ್ವಭಾವಿ ತರಬೇತಿ:**

ಎಲ್ಲಾ ಹಂತದ ತರಗತಿಯ ವಿದ್ಯಾರ್ಥಿಗಳಿಗೆ ಮಕ್ಕಳ ರಕ್ಷಣಾ ಕಾರ್ಯಕ್ರಮಗಳ ಬಗ್ಗೆ ಪೂರ್ವಭಾವಿ ತರಬೇತಿಯನ್ನು ಆಯೋಜಿಸುವುದು. ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ನಿಯಮಗಳು, ಮಕ್ಕಳ ಹಕ್ಕುಗಳ ಕ್ಲಬ್‌ಗಳು, ಮಕ್ಕಳ ರಕ್ಷಣಾ ಸಮಿತಿಯ ಸದಸ್ಯರು ಹಾಗೂ ಅವಶ್ಯವಿರುವ ಸಂದರ್ಭಗಳಲ್ಲಿ ಯಾರನ್ನು ಸಂಪರ್ಕಿಸಬೇಕೆಂಬುದರ ಬಗ್ಗೆ ಮಕ್ಕಳಿಗೆ ತಿಳಿಸುವುದು.

**ಆ. ಜೀವನ ಕೌಶಲ್ಯಗಳು ಮತ್ತು ವೈಯಕ್ತಿಕ ಸುರಕ್ಷತೆಯ ಬಗ್ಗೆ ಅಧಿವೇಶನಗಳು :**

ಪೂರ್ವ ಪ್ರಾಥಮಿಕ ಹಂತದಿಂದ 12 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಮಕ್ಕಳ ಹಕ್ಕುಗಳ ಉಲ್ಲಂಘನೆ ಮತ್ತು/ಅಥವಾ ಹಲ್ಲೆಗಳನ್ನು ಗುರುತಿಸುವ, ವಿರೋಧಿಸುವ ಮತ್ತು ವರದಿ ಮಾಡುವ ಬಗ್ಗೆ ತಿಳಿಸುವ ಅವಶ್ಯಕತೆ ಇದೆ. ಹದಿಹರೆಯದವರಿಗೆ ಇರುವ **ಕಿಶೋರಿ ಮತ್ತು ಕಿಶೋರ ಕಾರ್ಯಕ್ರಮ**ದ ಮಕ್ಕಳಿಗೆ ಜೀವನ ಕೌಶಲ್ಯಗಳು, ವೈಯಕ್ತಿಕ ರಕ್ಷಣೆಯ ಕೌಶಲ್ಯಗಳು ಮತ್ತು ರಕ್ಷಣಾ ಕ್ರಮಗಳ ಆದ್ಯತೆಯ ಬಗ್ಗೆ ತಿಳಿಸುವುದು. ವಿಷಯ ಸಾಮಗ್ರಿಯನ್ನು ಸಂವೇಧನಾತ್ಮಕತೆಯಿಂದ ಹಾಗೂ ವಯಸ್ಸಿಗೆ ಅನುಗುಣವಾಗಿ ಅಭಿವೃದ್ಧಿಪಡಿಸುವುದು. ಅಪಾಯಕಾರಿ ಸನ್ನಿವೇಶಗಳಲ್ಲಿ ಸ್ವ–ಪ್ರತಿರೋಧ ಮತ್ತು ಸ್ವ–ರಕ್ಷಣೆಯ ಬಗ್ಗೆ ಅಳವಡಿಸಿಕೊಂಡು ಪ್ರಾಯೋಗಿಕ ತರಬೇತಿಗಳನ್ನು ನೀಡುವುದು. ಸ್ವ–ರಕ್ಷಣೆ ತರಗತಿಗಳಾದ ಕರಾಟೆಯು ಭೌತಿಕ ಶಿಕ್ಷಣದ ಒಂದು ಭಾಗವಾಗಿರುವುದು.

**ಇ. ಮಕ್ಕಳ ರಕ್ಷಣಾ ಸೇವೆಗಳ ಸಂಪರ್ಕ ವಿವರಗಳ ವಿನಿಮಯ :**

ಮಕ್ಕಳ ಸಹಾಯವಾಣಿ, ಹತ್ತಿರದ ಪೋಲಿಸ್ ಠಾಣೆ, ಮಕ್ಕಳ ಆಯೋಗ, ಮಕ್ಕಳ ಕಲ್ಯಾಣ ಸಮಿತಿ, ಹತ್ತಿರದ ಸ್ಥಳೀಯ ಆಸ್ಪತ್ರೆ ಮುಂತಾದ ಸೇವೆಗಳ ಸಂಪರ್ಕ ಸಂಖ್ಯೆಗಳನ್ನು ಮಕ್ಕಳು ಮತ್ತು ಪೋಷಕರು/ಪಾಲಕರಿಗೆ ಸುಲಭವಾಗಿ ದೊರೆಯುವಂತೆ ವಿನಿಮಯ ಮಾಡಿಕೊಳ್ಳುವುದು ಮತ್ತು ಸದರಿ ಮಾಹಿತಿಯನ್ನು ಸಂಸ್ಥೆಯಲ್ಲಿನ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸುವುದು. ಹಾಗೆಯೇ ತುರ್ತು ಅಥವಾ ಆಘಾತಕಾರಿ ಸಂದರ್ಭಗಳಲ್ಲಿ ದೂರವಾಣಿ ಮೂಲಕ ಮಕ್ಕಳು ಸಂಪರ್ಕಿಸುವ ಸೌಲಭ್ಯವನ್ನು ಹೊಂದಿರುವುದು. ಮಕ್ಕಳು ಭೌತಿಕವಾಗಿ, ಮಾನಸಿಕವಾಗಿ ಮತ್ತು ಶೈಕ್ಷಣಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅಹವಾಲುಗಳನ್ನು ಬರೆದುಹಾಕಲು ಸೂಕ್ತ ಮಕ್ಕಳ ಅಂಚೆ ಪೆಟ್ಟಿಗೆ ದೊರೆಯುವ ಸ್ಥಳದ ಬಗ್ಗೆ ಮಕ್ಕಳಿಗೆ ತಿಳಿಸುವುದು. ಈ ಅಂಚೆ ಪೆಟ್ಟಿಗೆಯನ್ನು ಪ್ರತಿಯೊಂದು ವಾರ್ಡ್/ಕೊಳಚೆ ಪ್ರದೇಶ/ ಪಂಚಾಯ್ತಿಗಳಲ್ಲಿ ಇಡುವುದು.

**ಈ. ಮಕ್ಕಳ ಹಕ್ಕುಗಳ ಕ್ಲಬ್‌ಗಳು/ ವೇದಿಕೆ :**

ಮಕ್ಕಳ ಹಕ್ಕುಗಳ ಕ್ಲಬ್‌ಗಳು ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಯ ಅಂಶಗಳ ಕುರಿತು ಮುಂಜಾಗ್ರತೆ, ಸಂಕೇತಗಳು ಹಾಗೂ ಜಾಗೃತಿಯನ್ನು ಹೆಚ್ಚಿಸುವ ಕುರಿತು ಗಮನವನ್ನು ನೀಡುವುದು. ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸಮುದಾಯದಲ್ಲಿ ಮಕ್ಕಳ ಪರಿಣಾಮಕಾರಿ ಭಾಗವಹಿಸುವಿಕೆಯ ಉತ್ತೇಜನದ ಮಾರ್ಗಗಳನ್ನು ಈ ಕ್ಲಬ್‌ಗಳು ಸೃಜಿಸುವುದು. ಹೆಣ್ಣು ಮಕ್ಕಳ ಸಶಕ್ತೀಕರಣ ಮತ್ತು ಭಾಗವಹಿಸುವಿಕೆಯನ್ನು ಉತ್ತೇಜಿಸಲು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿನ 'ಮೀನಾ ತಂಡ'ಗಳನ್ನು ಸಕ್ರಿಯಗೊಳಿಸಲು ಉತ್ತೇಜಿಸುವುದು. ಸುರಕ್ಷತೆ ಮತ್ತು ರಕ್ಷಣೆಯ ವಿಷಯಗಳನ್ನು'ಮೀನಾ ತಂಡ'ಗಳು ಮತ್ತು ಇತರೆ ಮಕ್ಕಳ ವೇದಿಕೆಗಳ ಮೂಲಕವೂ ಸಹ ಕೈಗೆತ್ತಿಕೊಳ್ಳಬಹುದು.

**ಉ. ಮಕ್ಕಳ ದೂರು/ ಸಲಹಾ ಪಟ್ಟಿಗೆ :**

ತರಗತಿಗಳ ಹತ್ತಿರ ಅಥವಾ ವಿಶ್ರಾಂತಿ ಕೊಠಡಿಗಳ ಹತ್ತಿರ ಮಕ್ಕಳಿಗೆ ಸುಲಭವಾಗಿ ದೊರೆಯುವಂತೆ ಪ್ರತಿ ಶಿಕ್ಷಣ ಸಂಸ್ಥೆಯೂ ಮಕ್ಕಳ ದೂರು/ಸಲಹಾ ಪೆಟ್ಟಿಗೆಯನ್ನು ಕಡ್ಡಾಯವಾಗಿ ಇಡುವುದು. ಈ ಪೆಟ್ಟಿಗೆಯಲ್ಲಿ ಮಕ್ಕಳು ತಮ್ಮ ಸಲಹೆ/ಶಿಫಾರಸ್ಸುಗಳು ಅಥವಾ ದೂರುಗಳನ್ನು ಬರೆದು ಹಾಕುವಂತೆ ಮಕ್ಕಳನ್ನು ಪ್ರೋತ್ಸಾಹಿಸುವುದು.

**3.7 ಸುರಕ್ಷಿತ ಸಾರಿಗೆ ಕ್ರಮಗಳು :**

ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಭಾರತದ ಘನತೆವೆತ್ತ ಸರ್ವೋಚ್ಚ ನ್ಯಾಯಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ 1985ರ 13029, ದಿನಾಂಕ 20.11.1997 ಮತ್ತು 16.12.1997 ರಲ್ಲಿ ಹೊರಡಿಸಿರುವ ಆದೇಶ ಹಾಗೂ 18.01.2013 ರಲ್ಲಿ ಕರ್ನಾಟಕ ಸರ್ಕಾರವು ಅಧಿಸೂಚಿಸಿರುವ ಕರ್ನಾಟಕ ಮೋಟಾರು ವಾಹನಗಳ (ಶಾಲಾ ಮಕ್ಕಳನ್ನು ಸಾಗಿಸಲು ಬಳಸುವ ವಾಹನಗಳ ಕುರಿತ ಷರತ್ತುಗಳು) ನಿಯಮಗಳು, 2012ರ ಆದೇಶಗಳಿಗೆ ಬದ್ಧವಾಗಿರುವ ಕುರಿತ ವಿವರಗಳು ಕೆಳಕಂಡಂತಿವೆ.

ಅ. ಶಿಕ್ಷಣ ಸಂಸ್ಥೆಯು ಸಾರಿಗೆ ಉಸ್ತುವಾರಿ ನೋಡಿಕೊಳ್ಳುವವರು ಯಾರೆಂಬುದನ್ನು ಸ್ಪಷ್ಟವಾಗಿ ತಿಳಿಸುವುದು ಮತ್ತು ದಿನನಿತ್ಯ ಹಾಗೂ ವಿಶೇಷ ಸಂದರ್ಭಗಳಲ್ಲಿನ ಸಾರಿಗೆ ಜವಾಬ್ದಾರಿಗಳನ್ನು ನಿರ್ವಹಿಸುವವರ ಬಗ್ಗೆ ತಿಳಿಸುವುದು.

ಆ. ಎಲ್ಲಾ ವಿದ್ಯಾರ್ಥಿಗಳು ವಾಹನದಿಂದ ಕೆಳಗೆ ಇಳಿಯುವವರೆಗೆ (ಮನೆಯನ್ನು ತಲುಪಲು) ಅವರ ಜೊತೆ ಸಿಬ್ಬಂದಿಯನ್ನು ನೇಮಿಸುವುದು.

ಇ. ಬಸ್‌ಗಳು GPS ಮತ್ತು CCTV ಸೌಲಭ್ಯವನ್ನು ಹೊಂದಿದ್ದು, ಅವುಗಳು ಯಾವಾಗಲೂ ಕಾರ್ಯನಿರ್ವಹಿಸುತ್ತಿರುವುದು.

ಈ. ಶಿಕ್ಷಣ ಸಂಸ್ಥೆಯ ಆಡಳಿತವು ಚಾಲಕರ ಚಾಲನಾ ಪರವಾನಗಿಯನ್ನು ಪರಿಶೀಲಿಸುವುದು ಮತ್ತು ಪೋಲಿಸರಿಂದ ಅವರ ಪೂರ್ವಾಪರತೆ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು.

ಉ. ಶಿಕ್ಷಣ ಸಂಸ್ಥೆಯ ಆಡಳಿತವು ಚಾಲಕರು ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅದಕ್ಕೆ ವಾಹನಗಳ ಮಾಲೀಕರೇ ಸಂಪೂರ್ಣವಾಗಿ ಜವಾಬ್ದಾರರಾಗಿರುವರೆಂದು ವಾಹನಗಳ ಮಾಲೀಕರೊಂದಿಗೆ ಲಿಖಿತ ಕರಾರು ಒಪ್ಪಂದವನ್ನು ಮಾಡಿಕೊಳ್ಳುವುದು.

ಊ. ಚಾಲಕರು ವಾಹನಗಳಲ್ಲಿ ಅಥವಾ ನಿಗದಿಪಡಿಸಿದ ಸ್ಥಳದಲ್ಲಿ ಇರುವಂತೆ ಶಿಕ್ಷಣ ಸಂಸ್ಥೆಯ ಆಡಳಿತವು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವುದು. ಶಾಲಾ ಆವರಣದಲ್ಲಿ ಅನಗತ್ಯವಾಗಿ ನಡೆದಾಡದಂತೆ ಮತ್ತು ಮಕ್ಕಳೊಂದಿಗೆ ಅನಗತ್ಯ ಸಂಬಾಷಣೆಯಲ್ಲಿ ತೊಡಗದಂತೆ ಅವರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡುವುದು.

ಋ. ಶಿಕ್ಷಣ ಸಂಸ್ಥೆಗಳು ಖಾಸಗಿ ವಾಹನಗಳನ್ನು ಬಳಸಬೇಕಾದಲ್ಲಿ ಕಡ್ಡಾಯ ಮೂಲಭೂತ ಸುರಕ್ಷತಾ ಕ್ರಮಗಳಾದ ಸೀಟ್‌ಬೆಲ್ಟ್, ತುರ್ತು ಸಂದರ್ಭಗಳಲ್ಲಿ ಗಂಟೆ ಬಾರಿಸುವ ವ್ಯವಸ್ಥೆ, ತುರ್ತು ಪರಿಸ್ಥಿತಿಗಳಲ್ಲಿ ಸಂಪರ್ಕಿಸಬೇಕಾದವರ ದೂರವಾಣಿ ಸಂಖ್ಯೆಯನ್ನು ಕಾಣುವಂತಹ ಸ್ಥಳಗಳಲ್ಲಿ ಹಾಕುವುದು ಇತ್ಯಾದಿಗಳನ್ನು ನಿಗಧಿಗೊಳಿಸುವುದು. ಮಕ್ಕಳ ಬಳಕೆಗಾಗಿ ಖಾಸಗಿ ವಾಹನಗಳನ್ನು ಬಳಸಿಕೊಂಡಲ್ಲಿ ಈ ಎಲ್ಲಾ ಸೌಲಭ್ಯಗಳು ಕಡ್ಡಾಯವಾಗಿರಬೇಕೆಂದು ಅನುಮತಿ ನೀಡುವಾಗ ತಿಳಿಸುವುದು. ಈ ಎಲ್ಲಾ ಅವಶ್ಯಕತೆಗಳನ್ನು ತಪಾಸಣೆ ಮಾಡುವುದು ಮತ್ತು ಉಲ್ಲಂಘನೆಯಾಗಿರುವುದು ಕಂಡುಬಂದಲ್ಲಿ, ಅಪರಾಧದ ತೀವ್ರತೆಯ ಆಧಾರ ಎಚ್ಚರಿಕೆ ಅಥವಾ ಅಮಾನ್ಯ ಮಾಡುವುದು.

# ಅಧ್ಯಾಯ : 4

# ಮಕ್ಕಳ ದುರುಪಯೋಗ ಸೇರಿದಂತೆ ಮಕ್ಕಳ ಸುರಕ್ಷತೆಯ ಉಲ್ಲಂಘನೆಗೆ ಪ್ರತಿಕ್ರಿಯಾತ್ಮಕ ಕ್ರಮಗಳು

## 4.1 ಉಲ್ಲಂಘನೆಯ ಸ್ವರೂಪವನ್ನು ಗುರುತಿಸುವಿಕೆ :

ಮಗುವಿನ ದುರುಪಯೋಗದ ಘಟನೆಗಳು ಒಳಗೊಂಡಂತೆ ಮಗುವಿನ ಸುರಕ್ಷತೆಯ ಉಲ್ಲಂಘನೆಗಳಿಗೆ ಎಲ್ಲಾ ಶಿಕ್ಷಣ ಸಂಸ್ಥೆಗಳು ಪ್ರತಿಕ್ರಿಯಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳುವುದು.

### 4.1.1 ಮಕ್ಕಳ ಮೇಲಿನ ಹಲ್ಲೆಯ ಸೂಚಕಗಳನ್ನು ಗುರುತಿಸುವಿಕೆ :

ಮಗುವಿನ ದುರುಪಯೋಗವು ದೈಹಿಕ, ಲೈಂಗಿಕ ಅಥವಾ ಭಾವನಾತ್ಮಕವಾಗಿರಬಹುದು ಅಥವಾ ನಿರ್ಲಕ್ಷ್ಯವಾಗಿರಬಹುದು. ಕೆಲವು ಸಂದರ್ಭಗಳಲ್ಲಿ ದೇಹದ ಮುಚ್ಚಿರುವ ಬಾಗಗಳ ಮೇಲಾಗಿರುವ ಹಲ್ಲೆಯ ಚಿಹ್ನೆಗಳು ಗೋಚರಿಸುವುದಿಲ್ಲ. ಶಿಕ್ಷಣ ಸಂಸ್ಥೆಯಲ್ಲಿನ ತರಬೇತಿ ಹೊಂದಿರುವ ಸಿಬ್ಬಂದಿ ಅಥವಾ ಶಿಕ್ಷಕರು ಸಂಸ್ಥೆಯಲ್ಲಿ ಮಕ್ಕಳ ನಡವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸುವ ಮೂಲಕ ಹಲ್ಲೆಯ ಸೂಚಕಗಳನ್ನು ಕಂಡುಹಿಡಿಯುವುದು, ದೈಹಿಕ ಚಿಹ್ನೆಗಳನ್ನು ಗಮನಿಸುವಾಗ ಮತ್ತು ಪೋಷಕರೊಂದಿಗೆ ಚರ್ಚಿಸುವಾಗ ಕುಟುಂಬದ ಚಲನವಲನಗಳನ್ನು ಸಹ ಗಮನಿಸುವುದು, ಕೆಲವೊಮ್ಮೆ ನಡವಳಿಕೆಯ ಸೂಚಕಗಳು ಪ್ರತ್ಯೇಕವಾಗಿ ಅಥವಾ ದೈಹಿಕ ಚಿಹ್ನೆಗಳೊಂದಿಗೆ ಜೊತೆಯಾಗಿರುವವು. ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ವಿಶೇಷವಾಗಿ ಸಂಕಷ್ಟದಲ್ಲಿರುವ ಮಕ್ಕಳೊಂದಿಗೆ ಮತ್ತು ಕೆಳಕಂಡ ಕೆಲವು ಗುಂಪುಗಳೊಂದಿಗೆ ಎಚ್ಚರಿಕೆಯಿಂದಿರುವ ಅವಶ್ಯಕತೆ ಇದೆ.

- ಕೌಟುಂಬಿಕ ಅಥವಾ ಸಮುದಾಯದಲ್ಲಿನ ಹಿಂಸೆಗೆ ಸಾಕ್ಷಿಯಾಗಿರುವ ಮಕ್ಕಳು
- ವಯಸ್ಕ ಮಕ್ಕಳು ಪ್ರದರ್ಶಿಸುವ ಕೆಲವೊಂದು ಲೈಂಗಿಕ ನಡವಳಿಕೆಯು ಆ ಮಕ್ಕಳ ವಯಸ್ಸಿನ ಲೈಂಗಿಕ ತಿಳುವಳಿಕೆಗೆ ಅನುಗುಣವಾಗಿಲ್ಲದೇ ಇರುವುದು.
- ಲೈಂಗಿಕ ದುರುಪಯೋಗಕ್ಕೆ ಬಲಿಪಶುವಾಗಿರುವ ಮಗು ಇತರ ಮಕ್ಕಳೊಂದಿಗೆ ಅಸಮರ್ಪಕವಾಗಿ ವರ್ತಿಸುವುದು.
- ವಿಶೇಷವಾಗಿ ಅಗತ್ಯವಿರುವ ಮಕ್ಕಳು ಒಂದು ವೇಳೆ ಹಲ್ಲೆಗೆ ಒಳಗಾಗಿದ್ದಲ್ಲಿ ಅವರು ಅದನ್ನು ಗುರುತಿಸಲು ಅಥವಾ ಮೌಖಿಕವಾಗಿ ವ್ಯಕ್ತಪಡಿಸಲು ಸಾಧ್ಯವಾಗದಿರುವುದು.

ಶಿಕ್ಷಣ ಸಂಸ್ಥೆಯು (ಅ) ಆಂತರಿಕ ಪ್ರತಿಕ್ರಿಯಾತ್ಮಕ ವಿಧಾನಗಳು– ಸುರಕ್ಷತಾ ಉಲ್ಲಂಘನೆ ಮತ್ತು ಮಗುವಿನ ಮೇಲಿನ ಹಲ್ಲೆಗೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆಯು ಆಂತರಿಕವಾಗಿ ಹೇಗೆ ಪ್ರತಿಕ್ರಿಯಿಸಬೇಕು ಎಂಬುದರ ಬಗ್ಗೆ ಗಮನಹರಿಸುತ್ತದೆ. ಮತ್ತು (ಆ) ಬಾಹ್ಯ ಪ್ರತಿಕ್ರಿಯಾತ್ಮಕ ವಿಧಾನಗಳು– ಇದು ಶಿಕ್ಷಣ ಸಂಸ್ಥೆಯ ಕಾನೂನು ಬದ್ಧತೆಯ ಆಧಾರಿತವಾಗಿದ್ದು, ಈ ವಿಧಾನಗಳನ್ನು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಡಿ ವ್ಯಾಖ್ಯಾನಿಸುವುದು ಮತ್ತು ಕೆಳಗೆ ತಿಳಿಸಲಾದ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳನ್ನು ಕಡ್ಡಾಯವಾಗಿ ಪಾಲಿಸುವುದು.

## 4.2 ಆಂತರಿಕ ಪ್ರತಿಕ್ರಿಯಾತ್ಮಕ ಕಾರ್ಯತಂತ್ರಗಳು :

### 4.2.1 ಮಕ್ಕಳ ರಕ್ಷಣಾ ಸಮಿತಿ (CPC)

ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಕೆಳಕಂಡವರನ್ನೊಳಗೊಂಡ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸುವುದು.

- ಸಂಸ್ಥೆಯ ಮುಖ್ಯಸ್ಥರು ಸಮಿತಿಯ ಅಧ್ಯಕ್ಷರಾಗಿರುವರು
- ಒಬ್ಬರು ಅಥವಾ ಇಬ್ಬರು ಶಿಕ್ಷಕರಲ್ಲಿ, ಒಬ್ಬರನ್ನು ಮಕ್ಕಳ ರಕ್ಷಣಾ ಅಧಿಕಾರಿಯನ್ನಾಗಿ ನಿಯೋಜಿಸುವುದು.
- ಶಿಕ್ಷಣ ಸಂಸ್ಥೆಯ ಸಾಮರ್ಥ್ಯದನ್ವಯ ಇಬ್ಬರು/ಮೂವರು ಪೋಷಕರಲ್ಲಿ, ಒಬ್ಬ ಮಹಿಳೆ ಸಮಿತಿಯಲ್ಲಿರುವರು. ಶಾಲಾಆಡಳಿತ ಮಂಡಳಿ/ ಪೋಷಕ–ಶಿಕ್ಷಕರ ಸಂಘವಿದ್ದಲ್ಲಿ (SMC/PTA) ಸದರಿ ಸಮಿತಿಯ ಒಬ್ಬ ಪೋಷಕರನ್ನು ಒಬ್ಬ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು.
- 8ನೇ ತರಗತಿ ಅಥವಾ ಅದಕ್ಕಿಂತ ಉನ್ನತ ತರಗತಿಗಳ ಎರಡು ಅಥವಾ ಹೆಚ್ಚಿನ ವಿದ್ಯಾರ್ಥಿಗಳನ್ನು ಸಮಾನ ಲಿಂಗಾನುಪಾತದನ್ವಯ ಪ್ರತಿನಿಧಿಸುವಿಕೆಯನ್ನು ಹೊಂದಿರುವುದು.
- ಭದ್ರತಾ ಅಧಿಕಾರಿ (ಶಿಕ್ಷಣ ಸಂಸ್ಥೆಯು ಭದ್ರತಾ ಸಿಬ್ಬಂದಿಯನ್ನು ಹೊಂದಿದ್ದಲ್ಲಿ)

**ಮಕ್ಕಳ ರಕ್ಷಣಾ ಸಮಿತಿಯು ನಿರ್ವಹಿಸಬೇಕಾದ ಸಾಮಾನ್ಯ ಪಾತ್ರಗಳು ಮತ್ತು ಜವಾಬ್ದಾರಿಗಳು :**

1. ಮಕ್ಕಳ ರಕ್ಷಣಾ ಸಮಿತಿಯು 3 ತಿಂಗಳಿಗೊಮ್ಮೆ ಮತ್ತು ಸುರಕ್ಷತೆ ಉಲ್ಲಂಘನೆಯಾಗಿರುವ ಬಗ್ಗೆ ವರದಿಯಾದಾಗ ಸಭೆ ಸೇರುವುದು.
2. ತ್ರೈಮಾಸಿಕ ಸಭೆಯಲ್ಲಿ ಹಿಂದಿನ ಸಬೆಯಲ್ಲಿ ಚರ್ಚಿಸಲಾದ ಕಾರ್ಯಸೂಚಿಯನ್ನು ಪರಿಶೀಲಿಸುವುದು. ಈ ಅವಧಿಯಲ್ಲಿ ಕಂಡುಬಂದಿರುವ ಯಾವುದೇ ಬೆದರಿಕೆ/ಅಪಾಯಗಳು ಮತ್ತು ಸಂಸ್ಥೆಯಲ್ಲಿ ಮಕ್ಕಳ ರಕ್ಷಣಾ ಕ್ರಮಗಳನ್ನು ಬಲಪಡಿಸಲು ತೆಗೆದುಕೊಳ್ಳಬೇಕಾಗಿರುವ ಹೆಚ್ಚುವರಿ ಕ್ರಮಗಳ ಬಗ್ಗೆ ಚರ್ಚಿಸುವುದು.
3. ಮಕ್ಕಳ ರಕ್ಷಣಾ ಸಮಿತಿಯು ಮಗುವಿನ ಸುರಕ್ಷತೆಯಡಿ ಆಗಿರುವ ಉಲ್ಲಂಘನೆಗಳು/ದುರುಪಯೋಗಗಳ ಬಗ್ಗೆ ಬಂದಿರುವ ದೂರುಗಳು/ಶಿಫಾರಸ್ಸುಗಳ ಬಗ್ಗೆ ಮಾತ್ರ ಆಧ್ಯತೆ ನೀಡಬೇಕೇ ಹೊರತು ಶಿಕ್ಷಣ ಸಂಸ್ಥೆಯ ಯಾವುದೇ ಆಡಳಿತಾತ್ಮಕ ಸಮಸ್ಯೆಗಳಿಗೆ ಗಮನ ನೀಡುವಂತಿಲ್ಲ.
4. ಮಕ್ಕಳ ರಕ್ಷಣಾ ಸಮಿತಿಯು ಕಾಳಜಿಗಳ ಬಗ್ಗೆ ಚರ್ಚಿಸಿ ಅವುಗಳನ್ನು ದಾಖಲಿಸುವುದು ಮತ್ತು ಸೂಕ್ತ ಶಿಫಾರಸ್ಸುಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಗೆ ಸಲ್ಲಿಸುವುದು.
5. ಮಕ್ಕಳ ರಕ್ಷಣಾ ಸಮಿತಿಯು ಗಮನಿಸಿರುವ ಕಾಳಜಿಗಳನ್ನು ಬಗೆಹರಿಸುವುದು ಮತ್ತು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವುದನ್ನು ಖಾತರಿ ಪಡಿಸಿಕೊಳ್ಳುವುದು.
6. ಮಗುವಿನ ರಕ್ಷಣೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ಎಲ್ಲಾ ರಿಜಿಸ್ಟರ್‌ಗಳು, ಕಡತಗಳು, ಕಡತ ಕೋಶ ಮತ್ತು ದಾಖಲೆಗಳನ್ನು ಮಕ್ಕಳ ರಕ್ಷಣಾ ಸಮಿತಿಯು ನಿರ್ವಹಿಸುವುದು.
7. ಅಗತ್ಯವಿರುವಾಗ ಮಕ್ಕಳ ರಕ್ಷಣಾ ಸಮಿತಿಯು ಬಾಹ್ಯ ನಿಪುಣರ ಸಹಾಯವನ್ನು ಪಡೆಯುವುದು.
8. ಮಕ್ಕಳ ರಕ್ಷಣಾ ಸಮಿತಿಯ ಅವಧಿ 2 ಶೈಕ್ಷಣಿಕ ವರ್ಷಗಳಾಗಿರುತ್ತದೆ. ಖಾಲಿ ಇರುವ ಹುದ್ದೆಯನ್ನು ಒಂದು ತಿಂಗಳೊಳಗೆ ಅಥವಾ ಶೈಕ್ಷಣಿಕ ವರ್ಷದ ಆರಂಭದಲ್ಲಿ ಭರ್ತಿಮಾಡುವುದು. ಇವುಗಳಲ್ಲಿ ಯಾವುದು ಮೊದಲು ಅದನ್ನು ಪರಿಗಣಿಸುವುದು.
9. ಮಕ್ಕಳ ರಕ್ಷಣಾ ಸಮಿತಿಯು, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು.

**ಘಟನೆಗೆ ಸಂಬಂಧಿಸಿದಂತೆ ಮಕ್ಕಳ ರಕ್ಷಣಾ ಸಮಿತಿಯ ಪಾತ್ರ ಮತ್ತು ಜವಾಬ್ದಾರಿಗಳು :**

1. ಪ್ರಕರಣ ವರದಿಯಾದಲ್ಲಿ ಮಕ್ಕಳ ರಕ್ಷಣಾ ಸಮಿತಿಯು ಆದಷ್ಟು ಬೇಗನೆ ನಿಯಮಿತ ಅನುಸರಣೆಯೊಂದಿಗೆ ಪ್ರಕರಣ ಅಂತ್ಯಗೊಳ್ಳುವರೆಗೆ ಸಭೆಸೇರುವುದು. ಕಲಂ 5 ರಲ್ಲಿ ಪರಿಶೀಲನಾ ಕಾರ್ಯವಿಧಾನಗಳನ್ನು ವಿವರಿಸಲಾಗಿದೆ.
2. ಘಟನೆಯು ವರದಿಯಾದಾಗ ಮಕ್ಕಳ ರಕ್ಷಣಾ ಸಮಿತಿ ಮತ್ತು ಶಿಕ್ಷಣ ಸಂಸ್ಥೆಯ ಆಡಳಿತವು ಮಗುವಿನ ಹಿತಾಸಕ್ತಿಯನ್ನು ಕಾಪಾಡಲು ಅವರ ಸುರಕ್ಷತೆ, ಭದ್ರತೆ, ಗೌಪ್ಯತೆ ಮತ್ತು ಏಕಾಂತತೆಯ ಹಕ್ಕನ್ನು ಗಮನದಲ್ಲಿಟ್ಟುಕೊಂಡು ತನಿಖೆ ನಡೆಯುವಾಗ ಪೊಲೀಸ್, ನ್ಯಾಯಾಂಗ ಮತ್ತು ಸ್ಥಳೀಯ ಆಡಳಿತದೊಂದಿಗೆ ಕಾನೂನುಗಳಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ಸಹಕರಿಸುವುದು.
3. ಮಕ್ಕಳ ರಕ್ಷಣಾ ಸಮಿತಿಯು ಘಟನೆಯಿಂದ ಇತರೆ ಮಕ್ಕಳು, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ವಯಸ್ಕರು ಮತ್ತು ಶಿಕ್ಷಣ ಸಂಸ್ಥೆಯ ಮೇಲಾಗುವ ಪರಿಣಾಮಗಳನ್ನು ನಿರ್ಣಯಿಸುವುದು ಮತ್ತು ಬಗೆಹರಿಸುವುದು.
4. ಮಕ್ಕಳ ರಕ್ಷಣಾ ಸಮಿತಿಯು ತನ್ನ ಅನುಭವದ ಆದಾರದ ವಿಶ್ಲೇಷಣೆಯನ್ನಾಧರಿಸಿ ಮಕ್ಕಳ ಮೇಲಿನ ಹಲ್ಲೆಗೆ ಅಥವಾ ನಿಂದನೆಗೆ ಕಾರಣವಾದ ಅಂಶಗಳನ್ನು ಅರ್ಥಮಾಡಿಕೊಂಡು ತನ್ನ ಜ್ಞಾನದ ಹಿನ್ನೆಲೆಯಲ್ಲಿ ಶಿಕ್ಷಣ ಸಂಸ್ಥೆಗೆ (ವಯಸ್ಕರು, ವಿದ್ಯಾರ್ಥಿಗಳು, ಮಕ್ಕಳು, ಆಡಳಿತ ಮಂಡಳಿ, ಸೇವಾ ಪೂರೈಕೆದಾರರು) ಪುನಶ್ಚೇತನ ತರಬೇತಿಯನ್ನು ಶಿಫಾರಸ್ಸುಮಾಡುವುದು.

**ಅಧ್ಯಕ್ಷರು ಮತ್ತು ಮಕ್ಕಳ ರಕ್ಷಣಾಧಿಕಾರಿಗಳ ಪಾತ್ರ ಮತ್ತು ಜವಾಬ್ದಾರಿಗಳು :**

1. **ಅಧ್ಯಕ್ಷರು** : ಪ್ರಾಂಶುಪಾಲರು/ಮುಖ್ಯೋಪಾದ್ಯಾಯರು/ಸಂಸ್ಥೆಯ ಮುಖ್ಯಸ್ಥರು ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರಾಗಿರುವರು ಮತ್ತು ಅವರು ಕೆಳಕಂಡ ಜವಾಬ್ದಾರಿಗಳನ್ನು ನಿರ್ವಹಿಸುವರು.
    - ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶಿಕ್ಷಣ ಸಂಸ್ಥೆಗಳಿಗಾಗಿ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸುವುದು ಮತ್ತು ಸದರಿ ಮಾರ್ಗಸೂಚಿಗಳನ್ನು ಪಾಲಿಸುವುದು.
    - ಶಿಕ್ಷಣ ಸಂಸ್ಥೆಯಲ್ಲಿನ ಎಲ್ಲಾ ಸಿಬ್ಬಂದಿಗಳೊಂದಿಗೆ ಸಹಕರಿಸಿ ಮತ್ತು ಮಾರ್ಗಸೂಚಿಗಳನ್ವಯ ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತಾ ಉಲ್ಲಂಘನೆಗಳನ್ನು ಅಧಿಕೃತ ನಮೂನೆಯಲ್ಲಿ ದಾಖಲಿಸುವುದು.
    - ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಹಮ್ಮಿಕೊಳ್ಳುವುದು.
    - ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸಹಕಾರದೊಂದಿಗೆ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಅನುಷ್ಠಾನದ ವಾರ್ಷಿಕ ಪರಿಶೀಲನೆಯನ್ನು ನಡೆಸುವುದು ಮತ್ತು ಮಕ್ಕಳ ರಕ್ಷಣಾ ಸಮಿತಿ, ಸಂಬಂಧಿಸಿದ ಸಿಬ್ಬಂದಿಗಳು ಮತ್ತು ಸಂಸ್ಥೆಗಳನ್ನು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯೊಂದಿಗೆ ಪ್ರತಿ ಮೂರು ವರ್ಷಗಳಿಗೊಮ್ಮೆ ಪರಿಶೀಲಿಸುವುದು.
2. **ಮಕ್ಕಳ ರಕ್ಷಣಾಧಿಕಾರಿ :** ಸಮಿತಿಯ ಅಧ್ಯಕ್ಷರಿಗೆ ಸಹಕಾರವನ್ನು ನೀಡಲು ಶಿಕ್ಷಣ ಸಂಸ್ಥೆಯಲ್ಲಿನ ಬೋಧನಾ ಸಿಬ್ಬಂದಿಯಲ್ಲಿ ಒಬ್ಬರನ್ನು ಮಕ್ಕಳ ರಕ್ಷಣಾಧಿಕಾರಿಯನ್ನಾಗಿ ನೇಮಿಸುವುದು. ಮಕ್ಕಳ ರಕ್ಷಣಾಧಿಕಾರಿಯು ಸಂಸ್ಥೆಯ ಶಾಶ್ವತ ಸಿಬ್ಬಂದಿಯಾಗಿರುವುದು ಮತ್ತು ಮಹಿಳಾ ಸಿಬ್ಬಂದಿಯನ್ನು

ನೇಮಿಸಲು ಒತ್ತುನೀಡುವುದು ಹಾಗೂ ಇವರು ಕನಿಷ್ಠ ಐದು ವರ್ಷಗಳ ಅನುಭವವನ್ನು ಹೊದಿರುವುದು. ಮಕ್ಕಳ ರಕ್ಷಣಾಧಿಕಾರಿಯ ಪಾತ್ರ ಮತ್ತು ಜವಾಬ್ದಾರಿಗಳು ಕೆಳಕಂಡಂತಿವೆ.

- ಮೌಖಿಕ ಅಥವಾ ಲಿಖಿತವಾಗಿ ಸ್ವೀಕರಿಸಲಾದ ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ ಮಕ್ಕಳ ಸುರಕ್ಷತಾ ಉಲ್ಲಂಘನೆಯ ಪ್ರಕರಣಗಳನ್ನು ನೋಂದಾಯಿಸಿಕೊಳ್ಳುವುದು ಮತ್ತು ಅದರ ಗೌಪ್ಯತೆಯನ್ನು ಕಾಪಾಡುವುದು.
- ಪ್ರಕರಣಕ್ಕೆ ಸಂಬಂಧಿಸಿದ ದಾಖಲೆ ಮತ್ತು ಕಡತಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.
- ಮಗುವಿನ ದುರುಪಯೋಗವೂ ಸೇರಿದಂತೆ, ಸುರಕ್ಷತೆಯ ಉಲ್ಲಂಘನೆಯ ಪ್ರಕರಣಗಳನ್ನು ಕಾನೂನು ಸಮ್ಮತವಾಗಿ ವರದಿ ಮಾಡುವುದು, ಪೋಲಿಸ್ ಮತ್ತು ಇತರೆ ಸ್ಥಳೀಯ ಆಡಳಿತದೊಂದಿಗೆ ಸಹಕರಿಸುವುದು ಹಾಗೂ ಘಟನೆಯನ್ನು ಮರೆಮಾಚುವ ಪ್ರಯತ್ನ ಮಾಡುವುದು ಅಥವಾ ಮಕ್ಕಳ ಪೋಷಕರು ಅಥವಾ ಇತರೆ ಪ್ರಾಧಿಕಾರಗಳ ಮೇಲೆ ಪ್ರಭಾವ ಬೀರದಂತೆ ನೋಡಿಕೊಳ್ಳುವುದು.
- ಶಾಲೆಯ ಮುಖ್ಯಸ್ಥರು ಮತ್ತು ಸಮಿತಿಯ ಅಧ್ಯಕ್ಷರ ವಿರುದ್ಧ ಮಕ್ಕಳ ಸುರಕ್ಷತೆಯ ಉಲ್ಲಂಘನೆ ಅಥವಾ ಮಕ್ಕಳ ದುರುಪಯೋಗದ ಆಪಾದನೆಗಳು ಕಂಡುಬಂದಲ್ಲಿಯೂ ಸಹ ನಿಯಮಗಳ ಅನುಸಾರ ಕ್ರಮಕೈಗೊಳ್ಳುವುದು.
- ಶಿಕ್ಷಣ ಸಂಸ್ಥೆಯ ಮಕ್ಕಳ ಸಂರಕ್ಷಣಾ ನೀತಿಗೆ ಸಂಬಂಧಿಸಿದ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಸಂಯೋಜಿಸುವುದು.

### 4.2.2 ಶಾಲಾ ನಿರ್ವಹಣಾ ಸಮಿತಿ (SMC) ಅಥವಾ ಪೋಷಕ–ಶಿಕ್ಷಕರ ಸಂಘ (PTA)

- ಸೂಕ್ತ ಪ್ರಾಧಿಕಾರದಿಂದ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ವಯ ಶಾಲಾ ನಿರ್ವಹಣಾ ಸಮಿತಿ ಅಥವಾ ಪೋಷಕ–ಶಿಕ್ಷಕರ ಸಂಘವನ್ನು ರಚಿಸುವುದು.
- ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲಾ ರಕ್ಷಣಾ ಮತ್ತು ಸುರಕ್ಷತಾ ಅಂಶಗಳು, ಎಲ್ಲಾ ಸಿಬ್ಬಂದಿಗಳ ನಡವಳಿಕೆ ಮತ್ತು ಮನೋಭಾವ, ವಿದ್ಯಾರ್ಥಿಗಳು ಮತ್ತು ಪೋಷಕರ ಸುರಕ್ಷತಾ ಅಂಶಗಳ ಬಗ್ಗೆ ಚರ್ಚಿಸಲು ಶಾಲಾ ನಿರ್ವಹಣಾ ಸಮಿತಿ ಅಥವಾ ಪೋಷಕ ಶಿಕ್ಷಕರ ಸಂಘಗಳು ನಿಯಮಿತವಾಗಿ ಸಭೆಗಳನ್ನು ನಡೆಸುವುದು.

### 4.2.3 ಸಲಹಾ ಪೆಟ್ಟಿಗೆ

ಶಿಕ್ಷಣ ಸಂಸ್ಥೆಯು ಮಕ್ಕಳಿಗಾಗಿ ಸಲಹಾ ಪೆಟ್ಟಿಗೆಯನ್ನು ಹೊಂದಿರುವುದು. ಮಕ್ಕಳು ಸಂಭವಿಸಿದ ಘಟನೆಯನ್ನು ವಯಸ್ಕರಿಗೆ ವರದಿಮಾಡುವ ಬದಲು, ತಮ್ಮ ಕಾಳಜಿಗಳು/ದೂರುಗಳು/ಸಲಹೆಗಳನ್ನು ಸಲಹಾ ಪೆಟ್ಟಿಗೆಯಲ್ಲಿ ಹಾಕಲು ಇಚ್ಚಿಸಬಹುದು.

ಈ ವ್ಯವಸ್ಥೆಯನ್ನು ಪರಿಣಾಮಕಾರಿ ಪ್ರತಿಕ್ರಿಯೆಯ ವ್ಯವಸ್ಥೆಯನ್ನಾಗಿ ಬಳಸಲು ಮತ್ತು ಸದೃಢಗೊಳಿಸಲು ಶಿಫಾರಸ್ಸು ಮಾಡಿರುವ ಅಂಶಗಳು ಕೆಳಕಂಡಂತಿವೆ:

- ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಯಲ್ಲಿ ಒಂದಕ್ಕಿಂತ ಹೆಚ್ಚು ಸಲಹಾ ಪೆಟ್ಟಿಗೆಗಳನ್ನು ಮಕ್ಕಳು ಗೌಪ್ಯತೆಯಿಂದ ಬಳಸಲು ಅನುಗುಣವಾಗಿ ವಿವಿಧ ಸ್ಥಳಗಳಲ್ಲಿ ಲಭ್ಯವಿರುವಂತೆ ಇಡುವುದು.

- ಸಲಹಾ ಪೆಟ್ಟಿಗೆಯು ಪಾರದರ್ಶಕ ಮತ್ತು ಒಡೆದುಹೋಗದಂತಹ ಸಾಮಗ್ರಿಗಳಿಂದ ತಯಾರಿಸಿರುವುದು.
- ಸಲಹಾ ಪೆಟ್ಟಿಗೆಗೆ ಎರಡು ಬೀಗದ ಕೀಲಿಗಳಿರಬೇಕು. ಅದರಲ್ಲಿ ಒಂದು ಕೀಲಿ ಮಕ್ಕಳ ರಕ್ಷಣಾ ಅಧಿಕಾರಿಯ ಬಳಿ ಹಾಗೂ ಮತ್ತೊಂದು ವಿದ್ಯಾರ್ಥಿಗಳ ಪ್ರತಿನಿಧಿಯ ಹತ್ತಿರ ಇರುವುದು.
- ಒಂದು ವೇಳೆ ಸಲಹಾ ಪೆಟ್ಟಿಗೆಯ 2ನೇ ಬೀಗದ ಕೀಲಿಯನ್ನು ಹೊಂದಿರುವ ಮಕ್ಕಳ ಪ್ರತಿನಿಧಿಯು ತನ್ನ ಜವಾಬ್ದಾರಿಯನ್ನು ಶ್ರದ್ಧೆಯಿಂದ ನಿರ್ವಹಿಸದೇ ಇದ್ದಲ್ಲಿ, ವಿದ್ಯಾರ್ಥಿಗಳು ಅವರನ್ನು ಜವಾಬ್ದಾರಿಯಿಂದ ಕೆಳಗಿಳಿಸುವ ಮತ್ತು ಮತ್ತು ಅವರ ಪ್ರತಿನಿಧಿಯನ್ನು ಪಾರದರ್ಶಕ ಪ್ರಜಾಸತಾತ್ಮಕ ರೀತಿಯಲ್ಲಿ ಮರು ಆಯ್ಕೆಮಾಡಲು ಹಕ್ಕನ್ನು ಹೊಂದಿರುತ್ತಾರೆ.
- ವಿದ್ಯಾರ್ಥಿಗಳ ಪ್ರತಿನಿಧಿ ಮತ್ತು ಮಕ್ಕಳ ರಕ್ಷಣಾ ಸಮಿತಿಯ ಸಮ್ಮುಖದಲ್ಲಿ, ಸಲಹಾ ಪೆಟ್ಟಿಗೆಯನ್ನು ತೆರೆಯುವುದು ಮತ್ತು ಅದರಲ್ಲಿರುವ ವಿಷಯಗಳನ್ನು ಇಬ್ಬರ ಸಮ್ಮುಖದಲ್ಲಿ ಓದುವುದು.
- ತ್ವರಿತ ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು, ಸಲಹಾ ಪೆಟ್ಟಿಗೆಯನ್ನು ಕನಿಷ್ಠ ವಾರಕ್ಕೊಮ್ಮೆ ತೆರೆಯುವುದು ಮತ್ತು ವರದಿ ಮಾಡಿರುವ ವಿಷಯಗಳಿಗೆ ಮಕ್ಕಳ ರಕ್ಷಣಾ ಸಮಿತಿಯು ಪ್ರತಿಕ್ರಿಯೆಯನ್ನು ನೀಡುವುದು.

**ಅ. ಸಲಹಾ ಪೆಟ್ಟಿಗೆಯಲ್ಲಿನ ಶಿಫಾರಸ್ಸುಗಳು/ದೂರುಗಳಿಗೆ ಪ್ರತಿಕ್ರಿಯೆ ನೀಡುವಿಕೆ :**

- ಮಕ್ಕಳ ರಕ್ಷಣಾಧಿಕಾರಿಯು, ಶಿಫಾರಸ್ಸುಗಳು/ದೂರುಗಳನ್ನು ಮಕ್ಕಳ ಪ್ರತಿನಿಧಿಯ ಸಮ್ಮುಖದಲ್ಲಿ ಓದುವುದು ಮತ್ತು ಅವುಗಳನ್ನು ಸೂಕ್ತ ಕ್ರಮಕ್ಕಾಗಿ ಸುರಕ್ಷತಾ ಉಲ್ಲಂಘನೆಗಳು ಮತ್ತು ಅಸುರಕ್ಷಿತ ಉಲ್ಲಂಘನೆಳೆಂಬುದಾಗಿ ವಿಂಗಡಿಸುವುದು.
- ಮಕ್ಕಳ ರಕ್ಷಣಾಧಿಕಾರಿಯು ಮಗುವಿನ ದುರುಪಯೋಗವು ಸೇರಿದಂತೆ ಮಕ್ಕಳ ಸುರಕ್ಷತೆಯ ಉಲ್ಲಂಘನೆಯ ಪ್ರಕರಣಗಳಿದ್ದಲ್ಲಿ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ಹೇಳಿರುವ ಪ್ರಕ್ರಿಯೆಯನ್ನು ಅನುಸರಿಸುವುದು.
- ಮಕ್ಕಳ ರಕ್ಷಣಾಧಿಕಾರಿಯು ಸಲಹೆಗಳ ಪುಸ್ತಕವನ್ನು ನಿರ್ವಹಿಸುವುದು ಮತ್ತು ದೂರುಗಳೊಂದಿಗೆ ಸಲಹೆಗಳು ಮತ್ತು ತೆಗೆದುಕೊಂಡಿರುವ ಕ್ರಮದ ವರದಿಯನ್ನು ಮಕ್ಕಳೊಂದಿಗೆ ವಿನಿಮಯ ಮಾಡಿಕೊಳ್ಳುವುದು ಹಾಗೂ ಇದನ್ನು ಮಕ್ಕಳ ರಕ್ಷಣಾ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲಿಸುವುದು.

### 4.2.4 ವೃತ್ತಿಪರ ಆಪ್ತಸಮಾಲೋಚನಾ ಸೇವೆಗಳು :

ದುರುಪಯೋಗ ಮತ್ತು ಹಲ್ಲೆಗೊಳಗಾದ ಮಕ್ಕಳನ್ನು ವೃತ್ತಿಪರ ಆಪ್ತಸಮಾಲೋಚನಾ ಸೇವೆಗಳಿಗೆ ಶಿಫಾರಸ್ಸು ಮಾಡುವುದು. ಘಟನೆಯಿಂದ ಒಂದಕ್ಕಿಂತ ಹೆಚ್ಚಿನ ಮಕ್ಕಳು ಬಾಧಿತರಾಗಿದ್ದಲ್ಲಿ ಗುಂಪು ಆಪ್ತಸಮಾಲೋಚನಾ ಸೇವೆಯನ್ನು ಒದಗಿಸುವುದು.

### 4.3 ಆಂತರಿಕ ಪ್ರತಿಕ್ರಿಯಾತ್ಮಕ ವರದಿ & ನಿವಾರಣೋಪಾಯಗಳ ಪ್ರಕ್ರಿಯೆ :

**ಹಂತ 1 : ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರು ಅಥವಾ ಮಕ್ಕಳ ರಕ್ಷಣಾಧಿಕಾರಿಗೆ ತಿಳಿಸುವಿಕೆ.**

ಮಕ್ಕಳ ಸುರಕ್ಷತೆಯ ಉಲ್ಲಂಘನೆಯಾಗಿರುವುದು ಅಥವಾ ಮಗುವಿನ ದುರುಪಯೋಗವಾಗಿರುವ ಘಟನೆ ಶಿಕ್ಷಣ ಸಂಸ್ಥೆಯ ಯಾವುದೇ ಸಿಬ್ಬಂದಿಯ ಗಮನಕ್ಕೆ ಬಂದಲ್ಲಿ ಸಿಬ್ಬಂದಿಯು ಮಗುವನ್ನು ಪುನಃ ಪ್ರಶ್ನಿಸದೇ ಹಾಗೂ

ತಡಮಾಡದೇ ಕೂಡಲೇ ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರು ಅಥವಾ ಮಕ್ಕಳ ರಕ್ಷಣಾಧಿಕಾರಿಗೆ ಮಾಹಿತಿ ನೀಡುವುದು.

**ಹಂತ 2 : ಬಲಿಪಶುವಾಗಿರುವ ಮಗುವಿನ ಸುರಕ್ಷತೆ ಮತ್ತು ಮಗುವಿಗೆ ಬರವಸೆ ನೀಡುವುದನ್ನು ಖಾತರಿ ಪಡಿಸುವಿಕೆ:**

ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರು ಮತ್ತು ಮಕ್ಕಳ ರಕ್ಷಣಾಧಿಕಾರಿಯು ಮಗುವನ್ನು ಅಪಾಯದಿಂದ ಕೂಡಲೇ ಹೊರತರುವುದನ್ನು ಖಾತ್ರಿಪಡಿಸಿಕೊಳ್ಳುವುದರೊಂದಿಗೆ, ಮಗುವಿನ ಮೇಲಿನ ಹಲ್ಲೆಯಂತಹ ಪ್ರಕರಣಗಳಲ್ಲಿ (ಮಗುವಿನ ಮೇಲಿನ ಲೈಂಗಿಕ ಅಪರಾಧವೂ ಸೇರಿದಂತೆ) ಮಗುವನ್ನು ಪುನಃ ಪ್ರಶ್ನಿಸದೆ ಅಥವಾ ವಿಚಾರಣೆಗೆ ಒಳಪಡಿಸದೇ ಇರುವುದನ್ನು ಖಚಿತಪಡಿಸಿಕೊಳ್ಳುವುದು. ಅಧ್ಯಕ್ಷರು/ ಮಕ್ಕಳ ರಕ್ಷಣಾಧಿಕಾರಿ ಅಥವಾ ಶಿಕ್ಷಣ ಸಂಸ್ಥೆಯ ಆಪ್ತಸಮಾಲೋಚಕರು ಮಗುವಿನ ಸಮಸ್ಯೆಯನ್ನು ಬಗೆಹರಿಸುವ ಮತ್ತು ಅವನ/ಅವಳ ರಕ್ಷಣೆ ಮತ್ತು ಸುರಕ್ಷತೆಯನ್ನು ನೋಡಿಕೊಳ್ಳುವ ಬಗ್ಗೆ ಬರವಸೆಯನ್ನು ನೀಡುವುದು.

**ಹಂತ 3 : ಅಪಾಯದ ತ್ವರಿತ ನಿರ್ಣಯ :**

ಮಕ್ಕಳ ರಕ್ಷಣಾಧಿಕಾರಿಯು ಮಗುವಿಗೆ ಎದುರಾಗುವ ಅಪಾಯವನ್ನು ಕೂಡಲೇ ನಿರ್ಧರಿಸುವುದು. ಒಂದು ವೇಳೆ ಮಗು ಅಪಾಯ ಅಥವಾ ತೊಂದರೆಗೆ ಸಿಲುಕಿದ್ದಲ್ಲಿ ಮಗುವಿನ ರಕ್ಷಣೆ ಮತ್ತು ಸುರಕ್ಷತೆಗಾಗಿ ಮಕ್ಕಳ ಕಲ್ಯಾಣ ಸಮಿತಿ/ ಪೊಲೀಸರಿಗೆ ತಿಳಿಸುವುದು.

**ಹಂತ – 4: ವೈದ್ಯಕೀಯ ನೆರವು :**

ಅಗತ್ಯವಿದ್ದಲ್ಲಿ ಪ್ರಥಮ ಚಿಕಿತ್ಸೆ/ಹೃದಯ ಮತ್ತು ಶ್ವಾಸಕೋಶ ಪ್ರಚೋದಕ (CPR)ವನ್ನು ನೀಡುವುದು. ಮಕ್ಕಳ ರಕ್ಷಣಾ ಅಧಿಕಾರಿಯು ಪೋಷಕರು ಬಂದ ನಂತರ ಮಗುವನ್ನು ಪರೀಕ್ಷೆಗಳು/ತಪಾಸಣಾ ಪ್ರಕ್ರಿಯೆಗಳಿಗಾಗಿ ಕೂಡಲೇ ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು. ತುರ್ತು ವೈದ್ಯಕೀಯ ಸಂದರ್ಭಗಳಲ್ಲಿ ವೈದ್ಯಕೀಯ ನೆರವು/ಚಿಕಿತ್ಸೆಯನ್ನು ಪೋಷಕರು ಬರುವ ಮುನ್ನ ಪ್ರಾರಂಭಿಸುವುದು.

ಒಂದು ವೇಳೆ ಮಗುವು ಲೈಂಗಿಕ ಹಲ್ಲೆಗೆ ಒಳಗಾಗಿದ್ದಲ್ಲಿ, ಸಂಸ್ಥೆಯ ಸಿಬ್ಬಂದಿಗಳು POCSO ಮಾರ್ಗಸೂಚಿಗಳನ್ವಯ ದೇಹದ ಮೇಲಾಗಿರುವ ಗಾಯಗಳು, ಗುಪ್ತಾಂಗಗಳು ಹಾಗೂ ಇತರೆ ಭಾಗಗಳನ್ನು ಪರೀಕ್ಷಿಸಲು ಮಗುವಿನ ದೈಹಿಕ ತಪಾಸಣೆಯನ್ನು ನೇರವಾಗಿ ಅಥವಾ ಯಾವುದೇ ಸಿಬ್ಬಂದಿ ಅಥವಾ ಆಡಳಿತ ಮಂಡಳಿ ನಡೆಸುವಂತಿಲ್ಲ.

ಒಂದುವೇಳೆ ಮಗುವಿಗೆ ತುರ್ತು ವೈದ್ಯಕೀಯ ಚಿಕಿತ್ಸೆಯ ಅವಶ್ಯಕತೆಇದ್ದಲ್ಲಿ, ಶಿಕ್ಷಣ ಸಂಸ್ಥೆಯು ಕೂಡಲೇ ಮಗುವನ್ನು ಆಸ್ಪತ್ರೆಗೆ ಶಿಕ್ಷಣ ಸಂಸ್ಥೆಯ ವೈದ್ಯರೊಂದಿಗೆ (ಲಭ್ಯವಿದ್ದಲ್ಲಿ) ಅಥವಾ ಮಕ್ಕಳ ರಕ್ಷಣಾಧಿಕಾರಿ ಅಥವಾ ಮಕ್ಕಳ ರಕ್ಷಣಾ ಸಮಿತಿಯ ಸದಸ್ಯರು, ಒಂದುವೇಳೆ ಮಕ್ಕಳ ರಕ್ಷಣಾ ಸಮಿತಿ ಇಲ್ಲದಿದ್ದಲ್ಲಿ, ಮಗುವಿಗೆ ಆರಾಮದಾಯಕವೆನಿಸುವಂತಹ ಮಹಿಳಾ ಶಿಕ್ಷಕಿಯೊಂದಿಗೆ ಕರೆದುಕೊಂಡು ಹೋಗುವ ವ್ಯವಸ್ಥೆಯನ್ನು ಮಾಡುವುದು. ತುರ್ತು ಚಿಕಿತ್ಸೆಯ ಅವಶ್ಯಕತೆ ಇಲ್ಲದಿದ್ದಲ್ಲಿ, ಪೋಷಕರು ಬರುವತನಕ ಕಾದು ಆಸ್ಪತ್ರೆಗೆ ಕರೆದೊಯ್ಯುವುದು.

ವೈದ್ಯಕೀಯ ತನಿಖೆಯ ಅವಶ್ಯಕತೆ ಇದ್ದಲ್ಲಿ, ಆಸ್ಪತ್ರೆಗಳು ತನಿಖೆಗಳನ್ನು ಕೈಗೊಳ್ಳಲು ನಿರಾಕರಿಸಿದ ಸಂದರ್ಭದಲ್ಲಿ ಪ್ರಕರಣವನ್ನು ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡುವುದು.

ಆಸ್ಪತ್ರೆಗಳು ಕಾನೂನು ರೀತಿಯಲ್ಲಿ ಎಲ್ಲಾ ಸಾಕ್ಷ್ಯಾಧಾರಗಳನ್ನು ಕಾಪಾಡುವುದು ಮತ್ತು ಚಿಕಿತ್ಸಾ ನಿಯಮಗಳನ್ನು ದಾಖಲಿಸುವುದನ್ನು ಖಾತರಿಪಡಿಸಿಕೊಳ್ಳುವುದು. ಪ್ರಕರಣದ ಕುರಿತು ಮುಂದಿನ ಕ್ರಮಗಳನ್ನು ಕೈಗೊಳ್ಳಲು ಅವಶ್ಯಕವಿರುವ ಎಲ್ಲಾ ವೈದ್ಯಕೀಯ–ಕಾನೂನು ಕಾಗದ–ಪತ್ರಗಳನ್ನು ಸಿದ್ಧಪಡಿಸಿಕೊಳ್ಳುವುದು.

**ಹಂತ: 5 ಪೋಷಕರು/ಪಾಲಕರಿಗೆ ತಿಳಿಸುವುದು :**

ಮಗುವಿನ ಸಾಮಾನ್ಯ, ಮಾನಸಿಕ ಮತ್ತು ಭೌತಿಕ ಸ್ಥಿತಿಯ ಮಾಹಿತಿಯನ್ನು ಮಗುವಿನ ಪೋಷಕರು/ಪಾಲಕರಿಗೆ ಕೂಡಲೇ ತಿಳಿಸುವುದು.

ಘಟನೆಗೆ ಸಂಬಂಧಿಸಿದಂತೆ ತ್ವರಿತ ಪ್ರತಿಕ್ರಿಯೆಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಪೋಷಕರು/ಪಾಲಕರಿಗೆ ಪುನರ್‌ಬರವಸೆಯನ್ನು ನೀಡುವುದು.

ಲೈಂಗಿಕ ಅಪರಾಧ ಅಥವಾ ಯಾವುದೇ ಇತರೆ ಸಂಜ್ಞಾತ್ಮಕ ಅಪರಾಧ ಪ್ರಕರಣಗಳಲ್ಲಿ ಪೋಲಿಸ್ ಮತ್ತು ಸಂಬಂಧಿಸಿದ ಪ್ರಾಧಿಕಾರಗಳಿಗೆ ವರದಿ ಮಾಡುವ ಶಿಕ್ಷಣ ಸಂಸ್ಥೆಯ ಕಾನೂನಾತ್ಮಕ ಬದ್ಧತೆಗಳ ಬಗ್ಗೆ ಪೋಷಕರು/ಪಾಲಕರಿಗೆ ಮನವರಿಕೆ ಮಾಡುವುದು. POCSO ಕಾಯಿದೆ, ಭಾರತೀಯ ದಂಡ ಸಂಹಿತೆ ಮತ್ತು ಅನ್ವಯಿಸುವ ಇತರೆ ಕಾನೂನುಗಳಲ್ಲಿರುವ ನಿಯಮಗಳು ಮತ್ತು ಅವಕಾಶಗಳ ಬಗ್ಗೆ ಪೋಷಕರು/ಪಾಲಕರಿಗೆ ವಿವರಿಸುವುದು ಮತ್ತು ಮಗುವಿನ ಗುರುತನ್ನು ಕಾಪಾಡುವಲ್ಲಿ ಹಾಗೂ ಆಂತರಿಕ ತನಿಖೆಗಳಲ್ಲಿ ಶಿಕ್ಷಣ ಸಂಸ್ಥೆಯು ನೀಡುವ ನೆರವಿನ ಬಗ್ಗೆ ತಿಳಿಸುವುದು.

**ಹಂತ: 6 ಸಾಕ್ಷಿಗಳ ಸಂರಕ್ಷಣೆ :**

ಮಗುವಿನ ಮೇಲಿನ ಹಲ್ಲೆ ಪ್ರಕರಣವು ಸಂಭವಿಸಿದ ಮತ್ತು ದೂರು ನೀಡಿದ ದಿನ ಒಂದೇ ಆಗಿದ್ದರೆ, ಶಿಕ್ಷಣ ಸಂಸ್ಥೆಯ ಪ್ರಾಧಿಕಾರ/ಆಡಳಿತವು ಪೂರಕವಾಗಿ ಶಾಲೆಯ ಆವರಣವನ್ನು ಭದ್ರತೆಗೊಳಪಡಿಸುವುದನ್ನು ಮತ್ತು ಯಾವುದೇ ವ್ಯಕ್ತಿಯು ಶಾಲೆಯ ಒಳಗೆ ಬರದಂತೆ ಹಾಗೂ ಶಾಲೆಯಿಂದ ಹೊರಹೋಗದಂತೆ ಎಚ್ಚರವಹಿಸುವುದು. ಘಟನೆ ನಡೆದಿರುವ ನಿರ್ದಿಷ್ಟ ಸ್ಥಳವನ್ನು ಪೋಲಿಸ್ ತನಿಖೆಗೆ ಮತ್ತು ಸಾಕ್ಷಿ ಸಂಗ್ರಹಣೆಗಾಗಿ ರಕ್ಷಿಸಲು ಕಾವಲು ವ್ಯವಸ್ಥೆಯನ್ನು ಕಲ್ಪಿಸುವುದು ಬಹಳ ಮುಖ್ಯವಾಗಿರುತ್ತದೆ.

ಶಿಕ್ಷಣ ಸಂಸ್ಥೆಯ ಪ್ರಾಧಿಕಾರ/ಆಡಳಿತವು ಹೊಡೆದಾಡುವಲ್ಲಿ/ಹಲ್ಲೆಯ ಅವಧಿಯಲ್ಲಿ ಬಳಸಿದ ಬಟ್ಟೆಗಳು ಮತ್ತು ಇತರೆ ವಸ್ತುಗಳನ್ನು ಕಾನೂನು ಪ್ರಕ್ರಿಯೆಗಾಗಿ ಸಂರಕ್ಷಿಸಿಡುವುದನ್ನು ಖಾತರಿಪಡಿಸಿಕೊಳ್ಳುವುದು. ಈ ಎಲ್ಲಾ ಕ್ರಮಗಳನ್ನು ಇತರೆ ವಿದ್ಯಾರ್ಥಿಗಳ ಗಮನಕ್ಕೆ ಬಾರದಂತೆ ಮತ್ತು ಸಂಪೂರ್ಣ ಗೌಪ್ಯತೆಯನ್ನು ಕಾಪಾಡುವ ರೀತಿಯಲ್ಲಿ ಕೈಗೊಳ್ಳುವುದು.

**ಹಂತ: 7 ಮಕ್ಕಳ ರಕ್ಷಣಾ ಸಮಿತಿಯ ಸಭೆಯನ್ನು 24 ಗಂಟೆಯೊಳಗೆ ಆಯೋಜಿಸುವುದು :**

ಮಕ್ಕಳ ರಕ್ಷಣಾ ಅಧಿಕಾರಿಯು ಘಟನೆ ನಡೆದ 24 ಗಂಟೆಯೊಳಗೆ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ಸಮಿತಿಯ ಅಧ್ಯಕ್ಷರೊಂದಿಗೆ ಚರ್ಚಿಸಿ ಮಕ್ಕಳ ರಕ್ಷಣಾ ಸಮಿತಿ ಸಭೆಯನ್ನು ಆಯೋಜಿಸುವುದು.

ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರು, ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ/ಅಧಿಕೃತ ಪ್ರತಿನಿಧಿಗೆ ಸಭೆಯ ವಿವರಗಳ ಬಗ್ಗೆ ಮಾಹಿತಿ ನೀಡುವುದು. ಕಲಂ 4.6 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ತನಿಖೆಯನ್ನು ಆರಂಭಿಸುವುದು.

**ಹಂತ : 8 ಸಂಜ್ಞಾತ್ಮಕ ಅಪರಾಧಗಳನ್ನು ಪೊಲೀಸರಿಗೆ ವರದಿಮಾಡುವುದು.**

ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ/ಅಧಿಕೃತ ಪ್ರತಿನಿಧಿಯು ಸಂಜ್ಞಾತ್ಮಕ ಅಪರಾಧ ಪ್ರಕರಣಗಳು ಘಟಿಸಿದಲ್ಲಿ, ಪ್ರಥಮ ತನಿಖಾ ವರದಿ (FIR) ಯನ್ನು ನೋಂದಾಯಿಸುವುದು ಅಥವಾ ಪೊಲೀಸ್ ಮತ್ತು ಸಂಬಂಧಿಸಿದ ಪ್ರಾಧಿಕಾರಗಳ ಗಮನಕ್ಕೆ ತರುವುದು ಮತ್ತು ದೂರನ್ನು ಸ್ವೀಕರಿಸಿದ ಪ್ರತಿಯನ್ನು ಪೋಷಕರು ಮತ್ತು ಮಕ್ಕಳ ರಕ್ಷಣಾ ಸಮಿತಿಗೆ ನೀಡುವುದು.

ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ವಯಸ್ಕ ಸಿಬ್ಬಂದಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಲು ಪೊಲೀಸ್ ಠಾಣೆಗೆ ಹೋಗಬೇಕಿದ್ದಲ್ಲಿ ಅಥವಾ ನ್ಯಾಯಾಲಯಕ್ಕೆ ಸಾಕ್ಷಿ ಒದಗಿಸಲು ಭೇಟಿ ನೀಡಬೇಕಿದ್ದಲ್ಲಿ ಆತನಿಗೆ ಸಂಸ್ಥೆಯು ವಿಶೇಷ ವೇತನ ಸಹಿತ ರಜೆಯನ್ನು ನೀಡಿ ಸದರಿ ಉದ್ದೇಶಕ್ಕೆ ನಿಯೋಜಿಸುವುದು.

**ಹಂತ: 9 ಪೊಲೀಸರು ಹೇಳಿಕೆಯನ್ನು ದಾಖಲಿಸುವುದು:**

ಮಗುವಿನ ಸುರಕ್ಷತೆಯ ಉಲ್ಲಂಘನೆ/ಹಲ್ಲೆಯು ಸಂಜ್ಞಾತ್ಮಕ ಅಪರಾಧ ಅಥವಾ ಮಗುವಿನ ಮೇಲಿನ ಲೈಂಗಿಕ ಅಪರಾಧದ ಪ್ರಕರಣಗಳಲ್ಲಿ ಮಗುವು ದೈಹಿಕ ಮತ್ತು ಮಾನಸಿಕವಾಗಿ ಅರ್ಹನಿದ್ದಲ್ಲಿ ಮಾತ್ರ ಅವರಿಂದ ಹೇಳಿಕೆಯನ್ನು ಪೊಲೀಸರು ಪಡೆದುಕೊಳ್ಳುವುದು. ಮಗುವನ್ನು ಯಾವುದೇ ಕಾರಣಕ್ಕೂ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗುವಂತಿಲ್ಲ ಮತ್ತು ಪೊಲೀಸರೇ ಶಿಕ್ಷಣ ಸಂಸ್ಥೆ ಅಥವಾ ಮಗುವಿನ ವಾಸಸ್ಥಾನ ಅಥವಾ ಮಗುವು ತನಗೆ ಸೂಕ್ತವೆಂದು ತಿಳಿಸುವ ಯಾವುದೇ ಸ್ಥಳಕ್ಕೆ ಬರುವುದು. ಪೊಲೀಸರು ಸ್ಥಳಕ್ಕೆ ಸಮವಸ್ತ್ರ ಧರಿಸದೆ ಸಾಮಾನ್ಯ ದಿರಿಸಿನಲ್ಲಿ ಬರುವುದು ಸೂಕ್ತ. ವಿಚಾರಣೆಯ ಸಂದರ್ಭದಲ್ಲಿ ಮಕ್ಕಳ ರಕ್ಷಣಾಧಿಕಾರಿ ಮತ್ತು ಪೋಷಕರು/ಪಾಲಕರು ಕಡ್ಡಾಯವಾಗಿ ಉಪಸ್ಥಿತರಿರುವುದು. ಮಗುವಿನ ಹೇಳಿಕೆಯನ್ನು ಹಾಗೆಯೇ ದಾಖಲಿಸುವುದು ಹಾಗೂ ಅವನು/ಅವಳಿಗೆ ಓದಿಹೇಳುವುದು, ಪ್ರಥಮ ತನಿಖಾ ವರದಿಯನ್ನು ನೋಂದಣಿಮಾಡುವುದು ಮತ್ತು ಪೋಷಕರಿಗೆ ಅದರ ಪ್ರತಿಯನ್ನು ನೀಡುವುದು.

ಒಂದು ವೇಳೆ ಮಗು ಮಾನಸಿಕ ಅಥವಾ ದೈಹಿಕ ಆಘಾತದಿಂದ ಸುಸಂಬದ್ಧ ಹೇಳಿಕೆಯನ್ನು ನೀಡುವ ಪರಿಸ್ಥಿತಿಯಲ್ಲಿ ಇಲ್ಲದೇ ಇದ್ದಲ್ಲಿ ಮಗು ಉತ್ತಮವಾಗಿ ಪ್ರತಿಕ್ರಿಯಿಸುವ ಸ್ಥಿತಿಯಲ್ಲಿ ಇರುವಾಗ ಸಂದರ್ಶನ ನಡೆಸುವುದು. ಮಗು ತನ್ನ ಸ್ವಂತ ಕಥೆಯನ್ನು ತಾನೇ ಹೇಳಿಕೊಳ್ಳುವಂತೆ ಪ್ರೋತ್ಸಾಹಿಸುವುದು ಅಥವಾ ಮಗುವು ಇಚ್ಛಿಸದ ಮಾಹಿತಿಯನ್ನು ವಿಚಾರಣೆಗೆ ಒಳಪಡಿಸಿ ಪಡೆಯಬಾರದು. ಮಗುವನ್ನು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುವ ಮೂಲಕ ಯಾವುದೇ ರೀತಿಯ ಕಿರುಕುಳ ನೀಡಬಾರದು. ಮಗುವಿನ ಆರೈಕೆಯ ಕಡೆ ಗಮನ ಹರಿಸುವುದು.

ಘಟನೆಯನ್ನು ನಿರ್ಲಕ್ಷಿಸಿ ವಿಷಯವನ್ನು ಮುಚ್ಚಿಹಾಕುವ ಪ್ರಯತ್ನದಿಂದ ಮಗುವಿಗೆ ಏನೂ ಸಂಭವಿಸಿಲ್ಲ ಎಂದು ಹೇಳಬಾರದು ಅಥವಾ ಮಗುವನ್ನು ನಿರ್ಲಕ್ಷಿಸಬಾರದು. ಶಿಕ್ಷಣ ಸಂಸ್ಥೆಯ ಯಾವುದೇ ಸದಸ್ಯ ಅಥವಾ ಅಪರಾಧಿ ವರದಿಯನ್ನು ನೀಡದಂತೆ ಮಗುವನ್ನು ಬೆದರಿಸದಂತೆ/ಅಪಾಯವಾಗದಂತೆ ನೋಡಿಕೊಳ್ಳುವುದು ಮತ್ತು ಪದೇ ಪದೇ ಪ್ರಕರಣದ ಕುರಿತು ವಿವರಿಸುವಂತೆ ಮಗುವನ್ನು ಒತ್ತಾಯಪಡಿಸಬಾರದು.

4.3 **ಗೌಪ್ಯತೆ:**

ಮಾಧ್ಯಮದವರಿಗೆ ಈ ಮಾಹಿತಿ ನೀಡದಿರುವುದನ್ನು ಅಥವಾ ಅವರು ಬಾರದಂತೆ (ಬಾಲನ್ಯಾಯ ಕಾಯ್ದೆಯ ಅನುಚ್ಛೇಧ 21ರಂತೆ ನಿಷೇಧಿಸಲಾಗಿದೆ) ಖಾತರಿಪಡಿಸಿಕೊಳ್ಳುವುದು. POCSO ಕಾಯ್ದೆಯ ಅನುಚ್ಛೇಧ 23(4) ಮಗುವಿನ ಲೈಂಗಿಕ ಅಪರಾಧದ ಪ್ರಕರಣದಲ್ಲಿ ಮಗುವಿನ ಗುರುತನ್ನು ಪ್ರಚುರಪಡಿಸುವುದನ್ನು ಸಹ ನಿಷೇಧಿಸಿದೆ.

ಮಾಧ್ಯಮಗಳ ಪ್ರವೇಶದಿಂದ ಆಗುವ ತೊಂದರೆ ಮತ್ತು ಪರಿಣಾಮಗಳ ಬಗ್ಗೆ ಪೋಷಕರು/ಪಾಲಕರಿಗೂ ಸಹ ವಿವರಿಸುವುದು. ಎಲ್ಲಾ ಸಿಬ್ಬಂದಿಗಳು ಮತ್ತು ನೌಕರವರ್ಗಕ್ಕೆ ಕಾನೂನಿನ್ವಯ ಜಾರಿಯಲ್ಲಿರುವ ಅಂಶಗಳ ಬಗ್ಗೆ ತಿಳಿಯಪಡಿಸುವುದು. ವಿಷಯವು ಈಗಾಗಲೇ ಪತ್ರಿಕೆ ಮತ್ತು ವಿದ್ಯುನ್ಮಾನ ಮಾಧ್ಯಮಕ್ಕೆ ತಿಳಿದಿದ್ದರೆ, ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಮಾಧ್ಯಮದವರನ್ನು ಬರಮಾಡಿಕೊಂಡು ಸಂಸ್ಥೆಯ ನಿಲುವು, ಬಾದಿತವಾಗಿರುವ ಮಗು ಮತ್ತು ಪೋಷಕರಿಗೆ ನೀಡುವ ಸಹಕಾರ ಮತ್ತು ನೆರವು ಹಾಗೂ ಈ ಪ್ರಕರಣದಲ್ಲಿ ಪೋಲಿಸರು ಹಾಗೂ ಇತರೆ ಪ್ರಾಧಿಕಾರಗಳಿಗೆ ನೀಡುವ ಸಹಕಾರದ ಬಗ್ಗೆ ಮಾಹಿತಿ ನೀಡುವುದು.

**4.5 ವರ್ಗಾವಣೆ ಪ್ರಮಾಣ ಪತ್ರ:** ಹಲ್ಲೆಗೆ ಒಳಗಾದ ಮಗುವನ್ನು ಪೋಷಕರು/ಪಾಲಕರು ಶಾಲೆಯಿಂದ ಬಿಡಿಸಿ ಮತ್ತೊಂದು ಶಾಲೆಗೆ ಪುನರ್ ಪ್ರವೇಶ ಪಡೆಯಲು ಇಚ್ಛಿಸಿ ವರ್ಗಾವಣೆ ಮನವಿಯನ್ನು ಸಲ್ಲಿಸಿದ್ದಲ್ಲಿ, ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಒಂದು ತಿಂಗಳೊಳಗೆ ವರ್ಗಾವಣೆ ಪತ್ರ ನೀಡುವುದು ಮತ್ತು ಶಾಲಾ ಶುಲ್ಕವನ್ನು ಮರುಪಾವತಿಸುವುದು.

ಕ್ಷೇತ್ರ ಶಿಕ್ಷಣ ಅಧಿಕಾರಿ ಮತ್ತು ಸಂಬಂಧಿಸಿದ ಇತರೆ ಪ್ರಾಧಿಕಾರಗಳು ಮತ್ತೊಂದು ಶೈಕ್ಷಣಿಕ ಸಂಸ್ಥೆಯಲ್ಲಿ ಪುನರ್ ಪ್ರವೇಶಪಡೆಯಲು ಸಹಕರಿಸುವುದು.

**4.6 ವಿಚಾರಣಾ ಕಾರ್ಯವಿಧಾನಗಳು ಮತ್ತು ಜರುಗಿಸಬೇಕಾದ ಕ್ರಮ:**

ಮಕ್ಕಳ ರಕ್ಷಣಾ ಅಧಿಕಾರಿಯು, ಘಟನೆಯನ್ನು ವರದಿ ಮಾಡುವ ಮಗು ಅಥವಾ ವಯಸ್ಕರನ್ನು ಮತ್ತು ಇತರೆ ವಯಸ್ಕರು ಮತ್ತು ಮಕ್ಕಳೊಂದಿಗೆ ಭೇಟಿಮಾಡಿ (ಅವಶ್ಯಕವೆನಿಸಿದಲ್ಲಿ) ವಾಸ್ತವಾಂಶಗಳನ್ನು ದಾಖಲಿಸಿ, ಗಮನಿಸಿದ ಅಂಶಗಳು ಮತ್ತು ಅವರ ಅಭಿಪ್ರಾಯಗಳನ್ನು ಘಟನೆ ವರದಿಯಾದ ಮೂರು ಕೆಲಸದ ದಿನಗಳಲ್ಲಿ ಪಡೆಯುವುದು. ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ತನಿಖೆಯಲ್ಲಿ ತೊಡಗಿರುವ ಎಲ್ಲರನ್ನು ದೈನಂದಿನ ಚಟುವಟಿಕೆ/ತರಗತಿಗಳಿಂದ ಬಿಡುಗಡೆಗೊಳಿಸುವುದು.

ಮಕ್ಕಳ ರಕ್ಷಣಾ ಅಧಿಕಾರಿಯು, ಪ್ರಕರಣದ ವಿವರವಾದ ವರದಿಯನ್ನು ಸಿದ್ಧಪಡಿಸಿ ಮಕ್ಕಳ ರಕ್ಷಣಾ ಸಮಿತಿಗೆ ಸಲ್ಲಿಸುವುದು. ಮಕ್ಕಳ ರಕ್ಷಣಾ ಸಮಿತಿಯು ಅಸಂಜ್ಞಾತ್ಮಕ ಅಪರಾಧಗಳನ್ನು ತನಿಖೆಗೆ ಒಳಪಡಿಸುವುದು ಮತ್ತು ವಿಚಾರಣೆಯನ್ನು ಮಾಡುವುದು.

ಒಂದು ವೇಳೆ ಇತರೆ ಮಕ್ಕಳು ಬಾಧಿತರಾಗಿದ್ದಲ್ಲಿ ಸಂಸ್ಥೆಯು ಕೈಗೊಳ್ಳಬೇಕಾಗಿರುವ ಕ್ರಮಗಳು, ಪೊಲೀಸ್/ನ್ಯಾಯಾಲಯದಲ್ಲಿನ ಪ್ರಕರಣದ ಪ್ರಗತಿ ಮತ್ತು ಮಗು/ಇತರೆ ಮಕ್ಕಳು/ಶಿಕ್ಷಣ ಸಂಸ್ಥೆಗೆ ಎದುರಾಗಬಹುದಾದ ಅಪಾಯಗಳ ವಿಶ್ಲೇಷಣೆ ಬಗ್ಗೆ ಚರ್ಚಿಸಲು ಮಕ್ಕಳ ರಕ್ಷಣಾ ಸಮಿತಿಯು ಕೂಡಲೇ ಸಭೆ ಸೇರುವುದು.

1. **ಹಲ್ಲೆ ಮಾಡಿರುವ ಆರೋಪಿಯು ವಯಸ್ಕನಾಗಿದ್ದಲ್ಲಿ:** ಹಲ್ಲೆ ಮಾಡಿರುವ/ನಿಂದಿಸಿರುವ ಆರೋಪಿಯು ಶಿಕ್ಷಣ ಸಂಸ್ಥೆಯ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಯಾಗಿದ್ದಲ್ಲಿ ಅಥವಾ ಶಿಕ್ಷಣ ಸಂಸ್ಥೆಯೊಂದಿಗೆ ಒಡನಾಟ ಹೊಂದಿದ್ದಲ್ಲಿ ವಿಚಾರಣೆ ಪೂರ್ಣಗೊಳ್ಳುವ ತನಕ ಅವರನ್ನು ಅಮಾನತ್ತಿನಲ್ಲಿಡುವುದು ಅಥವಾ ಶಾಲಾ ಆವರಣದಿಂದ ಹೊರಗಿರಿಸುವುದು. ಆರೋಪಿಯು ಮಾಡಿರುವ ಅಪರಾದವು ನ್ಯಾಯಾಲಯದಲ್ಲಿ ಸಾಬೀತಾದಲ್ಲಿ, ಶಿಕ್ಷಣ ಸಂಸ್ಥೆಯು ಅಂಥಹ ವ್ಯಕ್ತಿಯನ್ನು ಔಪಚಾರಿಕವಾಗಿ ಕೆಲಸದಿಂದ ಬಿಡುಗಡೆಗೊಳಿಸುವುದು.

2. **ಹಲ್ಲೆ/ನಿಂದನೆ ಮಾಡಿರುವ ಆರೋಪಿಯು ಮಗುವಾಗಿದ್ದಲ್ಲಿ:** ಒಂದು ವೇಳೆ ಹಲ್ಲೆಮಾಡಿರುವ ಆರೋಪಿಯು ಮಗುವೇ ಆಗಿದ್ದಲ್ಲಿ ಅವನು/ಅವಳನ್ನು ಕಾನೂನಿನೊಡನೆ ಸಂಘರ್ಷಕ್ಕೆ ಒಳಗಾದ ಮಗುವೆಂದು ಪರಿಗಣಿಸುವುದು ಮತ್ತು ಬಾಲ ನ್ಯಾಯ ಕಾಯ್ದೆ 2000 ಮತ್ತು ಕರ್ನಾಟಕ ಬಾಲ ನ್ಯಾಯ ನಿಯಮಗಳು 2010ರಡಿ ಕಡ್ಡಾಯಗೊಳಿಸಿರುವ ಪ್ರಕ್ರಿಯೆಯನ್ವಯ ಕ್ರಮ ಜರುಗಿಸುವುದು.

ಅ. ಇದರೊಂದಿಗೆ ಹೆಚ್ಚುವರಿಯಾಗಿ ಶಿಕ್ಷಣ ಸಂಸ್ಥೆಯು ಕೆಳಕಂಡ ಕ್ರಮಗಳನ್ನು ಅಪರಾಧವು ಸಂಜ್ಞಾತ್ಮಕ ಆಗಿದ್ದಲ್ಲಿ ತೆಗೆದುಕೊಳ್ಳುವುದು.

- ಮಕ್ಕಳ ರಕ್ಷಣಾ ಅಧಿಕಾರಿ/ ಮುಖ್ಯಸ್ಥರು ಮಗುವಿನ ಪೋಷಕರು/ಪಾಲಕರಿಗೆ ತಿಳಿಸಿ ಶಿಕ್ಷಣ ಸಂಸ್ಥೆ ಅಥವಾ ಪೋಲಿಸ್ ಠಾಣೆಗೆ ಕರೆಸಿ ಮಗು ಅಪರಾಧ ಎಸಗಿರುವ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು.
- ಶಿಕ್ಷಣ ಸಂಸ್ಥೆಯು ತನ್ನ ವ್ಯಾಪ್ತಿಗೆ ಬರುವ ಪೋಲಿಸ್ ಠಾಣೆಯಲ್ಲಿ ವರದಿ/ ಪ್ರಕರಣದ ದೂರನ್ನು ದಾಖಲಿಸುವುದು.
- ಆರೋಪ ಎದುರಿಸುತ್ತಿರುವ ಮಗುವನ್ನು ಯಾವುದೇ ರೀತಿಯಲ್ಲಿ ಹೆದರಿಸದಂತೆ ಅಥವಾ ಪದೇ ಪದೇ ಪ್ರಶ್ನಿಸದಂತೆ/ ವಿಚಾರಣೆಗೆ ಒಳಪಡಿಸದೇ ಇರುವುದನ್ನು ಶಿಕ್ಷಣ ಸಂಸ್ಥೆ ಖಚಿತಪಡಿಸಿಕೊಳ್ಳುವುದು.

ಆ. ಆರೋಪ ಎದುರಿಸುತ್ತಿರುವ ಮಗುವನ್ನು ಶಿಕ್ಷಣ ಸಂಸ್ಥೆಯು ಪೋಲೀಸರು ಮತ್ತು ಬಾಲನ್ಯಾಯ ಮಂಡಳಿಯಿಂದ ವಿಚಾರಣೆ ಪ್ರಕ್ರಿಯೆ ಮುಗಿಯುವವರೆಗೆ ಅಮಾನತ್ತಿನಲ್ಲಿಡುವುದು. ಯಾವುದೇ ದುರುಪಯೋಗ ಘಟನೆ ಅಥವಾ ಸುರಕ್ಷತೆ ಉಲ್ಲಂಘನೆಯಾದ ಹೊಡೆದಾಡುವುದು, ನೂಕುವುದು, ಮುಂತಾದ ಸಂದರ್ಭಗಳಲ್ಲಿ ಕೆಳಗಿನ ಕ್ರಮಗಳನ್ನು ಕೈಗೊಳ್ಳುವುದು.

- ಮಕ್ಕಳ ರಕ್ಷಣಾ ಅಧಿಕಾರಿ/ ಮುಖ್ಯಸ್ಥರು ಮಗುವಿಗೆ ಏನಾಯಿತು ಮತ್ತು ಮಗು ಈ ರೀತಿ ವರ್ತಿಸಲು ಕಾರಣಗಳೇನೆಂಬುದನ್ನು ಅರ್ಥಮಾಡಿಕೊಂಡು ಮಗುವಿನೊಂದಿಗೆ ಮಾತನಾಡುವುದು.
- ಯಾವುದೇ ರೀತಿಯಲ್ಲಿ ಮಗುವನ್ನು ಹೆದರಿಸದಂತಹ ಕ್ರಮಗಳನ್ನು ಕೈಗೊಳ್ಳುವುದನ್ನು ಶಿಕ್ಷಣ ಸಂಸ್ಥೆಯು ಖಾತರಿಪಡಿಸಿಕೊಳ್ಳುವುದು.
- ಶಿಕ್ಷಣ ಸಂಸ್ಥೆಯು, ಮಗುವಿನ ಹಿತದೃಷ್ಟಿಯಿಂದ ಪೋಷಕರು/ಪಾಲಕರನ್ನು ಶಿಕ್ಷಣ ಸಂಸ್ಥೆಗೆ ಕರೆದು ಮಾತನಾಡುವುದು, ಆಪ್ತಸಮಾಲೋಚನೆ ನಡೆಸುವುದು ಮತ್ತು ಅಗತ್ಯವಿದ್ದಲ್ಲಿ ಸಹಾಯ ಪಡೆಯುವಂತೆ ತಿಳಿಸುವುದು.
- ವಿಚಾರಣೆ/ಚರ್ಚೆಯ ಅವಧಿಯಲ್ಲಿ ಅವನ/ಅವಳ ಪರವಾಗಿ ವಾದಿಸಲು ಮಗುವು ಇಚ್ಛಿಸಿದ ವ್ಯಕ್ತಿಯನ್ನು ಆಯ್ಕೆಮಾಡಿಕೊಳ್ಳಲು ಸಹಾಯ ಮಾಡುವುದು.
- ಶಿಕ್ಷಣ ಸಂಸ್ಥೆಯು ಮಗು/ಮಕ್ಕಳನ್ನು ಸುಧಾರಣಾ ಪ್ರಕ್ರಿಯೆಗಾಗಿ ಆಪ್ತ ಸಮಾಲೋಚನಾ ಕೇಂದ್ರಕ್ಕೆ ಕಳುಹಿಸುವುದು.
- ಅಪರಾಧಕ್ಕೆ ಅನುಗುಣವಾಗಿ ಸೂಕ್ತ ಶಿಸ್ತು ಕ್ರಮ ಜರುಗಿಸುವುದು.

**ಅನುಸರಣೆ ಮತ್ತು ಪ್ರಕರಣದ ಮುಕ್ತಾಯ :**

ಸಂಸ್ಥೆಯ ಮುಖ್ಯಸ್ಥರು ಪ್ರಕರಣದ ಕುರಿತು ಅಪ್‌ಡೇಟ್ ಆಗಿರುವ ವರದಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗೆ 15 ದಿನಗಳೊಳಗೆ ಸಲ್ಲಿಸುವುದು. ಅಸಂಜ್ಞಾತ್ಮಕ ಅಪರಾಧ ಪ್ರಕರಣದ ಕಡತವನ್ನು 6 ತಿಂಗಳ ಒಳಗೆ ಮುಕ್ತಾಯಗೊಳಿಸುವುದು.

ಮಗುವಿನ ಸಂಜ್ಞಾತ್ಮಕ ಸುರಕ್ಷತೆಯ ಉಲ್ಲಂಘನೆ ಅಥವಾ ಮಗುವಿನ ಲೈಂಗಿಕ ಅಪರಾಧ ಪ್ರಕರಣದ ಕಡತವನ್ನು ನ್ಯಾಯಾಲಯದಿಂದ ಅಂತಿಮ ಆದೇಶವಾಗುವವರೆಗೂ ನಿರ್ವಹಿಸುವುದು.

ಮಗುವಿನ ಮೇಲಿನ ಹಲ್ಲೆ ಮತ್ತು ಸುರಕ್ಷತಾ ಉಲ್ಲಂಘನೆ ಪ್ರಕರಣಗಳ ವರದಿ ಮತ್ತು ನಿವಾರಣಾ ಕ್ರಮಗಳನ್ನು ಕೆಳಕಂಡ ಫ್ಲೋಚಾರ್ಟ್‌ನಲ್ಲಿ ವಿವರಿಸಲಾಗಿದೆ. ಇವುಗಳು ಕಡ್ಡಾಯವಾದ ಕನಿಷ್ಠ ಕ್ರಮಗಳಾಗಿದ್ದು, ಶಿಕ್ಷಣ ಸಂಸ್ಥೆಯು ತನ್ನ ಮಕ್ಕಳ ರಕ್ಷಣಾ ನೀತಿಯಲ್ಲಿ ಅಳವಡಿಸಿ ಪಾಲಿಸುವುದು.

**ಶಿಕ್ಷಣ ಸಂಸ್ಥೆಯಲ್ಲಿ ಮಗು, ಮಗುವಿನ ಸುರಕ್ಷತಾ ಉಲ್ಲಂಘನೆ ಅಥವಾ ಲೈಂಗಿಕ ಅಪರಾಧಗಳ ಕುರಿತು ಬೋಧಕ, ಬೋಧಕೇತರ, ಗುತ್ತಿಗೆ ಸಿಬ್ಬಂದಿ, ಆಪ್ತಸಮಾಲೋಚಕರು ಅಥವಾ ಶಿಕ್ಷಣ ಸಂಸ್ಥೆಯಿಂದ ನೇಮಿಸಲ್ಪಟ್ಟಿರುವ ಇತರೆ ವಯಸ್ಕರಿಗೆ ವರದಿ ಮಾಡುವುದು**

⊕

**ಶಿಕ್ಷಣ ಸಂಸ್ಥೆಯಲ್ಲಿನ ಬೋಧಕ, ಬೋಧಕೇತರ, ಗುತ್ತಿಗೆ ಸಿಬ್ಬಂದಿ, ಆಪ್ತಸಮಾಲೋಚಕರು ಅಥವಾ ಶಿಕ್ಷಣ ಸಂಸ್ಥೆಯಿಂದ ನೇಮಿಸಲ್ಪಟ್ಟಿರುವ ಇತರೆ ವಯಸ್ಕರು ಮಕ್ಕಳ ಸುರಕ್ಷತಾ ಉಲ್ಲಂಘನೆ ಅಥವಾ ಲೈಂಗಿಕ ಅಪರಾಧಗಳ ಕುರಿತು ಶಂಕೆ ವ್ಯಕ್ತಪಡಿಸುವುದು ಅಥವಾ ಸಾಕ್ಷಿ ಹೇಳುವುದು.**

↓

**ಮಕ್ಕಳ ರಕ್ಷಣಾಧಿಕಾರಿ ಅಥವಾ ಅಧ್ಯಕ್ಷರಿಗೆ ತಡಮಾಡದೇ ಕೂಡಲೇ ಮಾಹಿತಿಯನ್ನು ನೀಡುವುದು**

↓

**ಅಪಾಯದ ಗಂಭೀರತೆಯನ್ನು ನಿರ್ಣಯಿಸುವುದು. ಮಗುವು ಅಪಾಯದಲ್ಲಿದ್ದರೆ, ಮಕ್ಕಳ ಕಲ್ಯಾಣ ಸಂಸ್ಥೆಗೆ ಕೂಡಲೇ ಮಾಹಿತಿಯನ್ನು ನೀಡುವುದು ಮತ್ತು ಮಗುವನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಿರುವುದನ್ನು ಖಾತರಿಪಡಿಸುವುದು**

↓

24 ಗಂಟೆಗಳೊಳಗೆ – ಆ ಕೆಲಸದ ಕೆಲಸಮುಗಿಯುವುದರೊಳಗೆ ಮಕ್ಕಳ ರಕ್ಷಣಾಧಿಕಾರಿ ಅಥವಾ ಅಧ್ಯಕ್ಷರು ಕೈಗೊಳ್ಳಬೇಕಾದ ಕ್ರಮಗಳು

- ಅಗತ್ಯವಿದ್ದಲ್ಲಿ ತುರ್ತು ವೈದ್ಯಕೀಯ/ಪ್ರಥಮ ಚಿಕಿತ್ಸೆ ಸೌಲಭ್ಯವನ್ನು ಕಲ್ಪಿಸುವುದು. ಮಕ್ಕಳ ರಕ್ಷಣಾಧಿಕಾರಿ ಅಥವಾ ಮಹಿಳಾ ಶಿಕ್ಷಕಿ ಮಗುವಿನೊಂದಿಗಿರುವುದು.
- ಮಗುವು ಲೈಂಗಿಕ ಹಲ್ಲೆಗೆ ಒಳಗಾಗಿದ್ದಲ್ಲಿ, ಸಿಬ್ಬಂದಿ ಅಥವಾ ಆಡಳಿತ ಮಂಡಳಿ ಮಗುವನ್ನು ದೈಹಿಕವಾಗಿ ಪರೀಕ್ಷಿಸಬಾರದು
- ಪೋಷಕರು /ಪಾಲಕರಿಗೆ ಕೂಡಲೇ ತಿಳಿಸುವುದು
- ಮಗುವಿಗೆ ಆಪ್ತಸಮಾಲೋಚನಾ ಸೇವೆಗಳನ್ನು ಒದಗಿಸುವುದು
- ಆರಂಭಿಕ ಪ್ರಕರಣದ ಮಾಹಿತಿಯನ್ನು ತಯಾರಿಸುವುದು ಮತ್ತು ಲಿಖಿತ ವರದಿಯನ್ನು ಮಕ್ಕಳ ರಕ್ಷಣಾ ಸಮಿತಿಗೆ ಸಲ್ಲಿಸುವುದು. ಮಕ್ಕಳ ರಕ್ಷಣಾ ಸಮಿತಿಯು ಪ್ರಕರಣಕ್ಕೆ ಸಂಬಂಧಿಸಿದಂತೆ ಕೂಡಲೇ ಸಭೆಯನ್ನು ಕರೆಯುವುದು ಮತ್ತು ಆಂತರಿಕ ವಿಚಾರಣಾ ಪ್ರಕ್ರಿಯೆಯನ್ನು ಆರಂಭಿಸುವುದು ಹಾಗೂ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಗೆ ಮಾಹಿತಿಯನ್ನು ನೀಡುವುದು.
- ಮಗುವಿನ ಲೈಂಗಿಕ ಅಪರಾಧ ಪ್ರಕರಣಗಳಲ್ಲಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ತನ್ನ ವ್ಯಾಪ್ತಿಗೆ ಬರುವ ಪೋಲೀಸ್ ಠಾಣೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗೆ ಕಡ್ಡಾಯವಾಗಿ ದೂರು ದಾಖಲಿಸುವುದು
- ಮಕ್ಕಳ ರಕ್ಷಣಾಧಿಕಾರಿಯು ಮಗುವಿನ ಮೇಲಿನ ಲೈಂಗಿಕ ಅಪರಾದ ಅಥವಾ ಸಂಜ್ಞಾತ್ಮಕ ಅಪರಾಧ ಮಗುವಿನ ಹಲ್ಲೆ, ಅಥವಾ ಮಕ್ಕಳ ಸುರಕ್ಷತಾ ಉಲ್ಲಂಘನೆ ಪ್ರಕರಣ ಸಂಭವಿಸಿದಾಗ ಆವರಣವನ್ನು ಭದ್ರತೆಗೊಳಪಡಿಸುವುದು. ಹಲ್ಲೆಯ ಅವಧಿಯಲ್ಲಿ ಬಳಸಿದ ಬಟ್ಟೆಗಳು ಮತ್ತು ಇತರೆ ವಸ್ತುಗಳನ್ನು ಕಾನೂನು ಪ್ರಕ್ರಿಯೆಗಾಗಿ ಸಂರಕ್ಷಿಸಿಡುವುದು ಮತ್ತು ಘಟನೆ ಸಂಭವಿಸಿದ ಸ್ಥಳವನ್ನು ಸಹ ಕಾಪಾಡುವುದು (ಕಾರ್ಡಾನ್).

⇩

ಮಗುವಿನ ಮೇಲಿನ ಲೈಂಗಿಕ ಅಪರಾಧ ಅಥವಾ ಮಗುವಿನ ಸಂಜ್ಞಾತ್ಮಕ ಹಲ್ಲೆ ಅಥವಾ ಮಗುವಿನ ಸುರಕ್ಷತಾ ಉಲ್ಲಂಘನೆ ಪ್ರಕರಣಗಳಲ್ಲಿ ಪೋಷಕರು/ ಪಾಲಕರು ಘಟನೆ ಸಂಭವಿಸಿದ ಅಥವಾ ಮರುದಿನ ಹತ್ತಿರದ ಪೋಲಿಸ್ ಠಾಣೆಯಲ್ಲಿ ಪ್ರಥಮ ತನಿಖಾ ವರದಿಯನ್ನು ದಾಖಲಿಸುವುದು. ಪೋಷಕರಿಗೆ ಅಗತ್ಯವಿರುವ ಎಲ್ಲಾ ಮಾರ್ಗದರ್ಶನ ಮತ್ತು ನೆರವು ನೀಡುವುದು.

⇩

ಸಂಸ್ಥೆಯ ಮುಖ್ಯಸ್ಥರು ಆದಷ್ಟು ಬೇಗನೆ ಪೋಷಕರನ್ನು ಭೇಟಿಮಾಡುವುದು ಮತ್ತು ಸಂಸ್ಥೆಯ ಸಹಕಾರ, ಸಹಾಯ ಮತ್ತು ನೆರವಿನ ಬರವಸೆ ನೀಡುವುದು.

⇩

ಮಕ್ಕಳ ರಕ್ಷಣಾ ಅಧಿಕಾರಿಯು ಘಟನೆಯನ್ನು ವರದಿಮಾಡುವ ಮಗು ಅಥವಾ ವಯಸ್ಕರನ್ನು ಮತ್ತು ಇತರೆ ವಯಸ್ಕರು ಮತ್ತು ಮಕ್ಕಳೊಂದಿಗೆ ಭೇಟಿಮಾಡಿ (ಅವಶ್ಯಕವೆನಿಸಿದಲ್ಲಿ) ವಾಸ್ತವಾಂಶಗಳ ದಾಖಲೆ, ಗಮನಿಸಿದ ಅಂಶಗಳು, ಆ ವ್ಯಕ್ತಿಗಳ ಅಭಿಪ್ರಾಯಗಳನ್ನು ಘಟನೆ ವರದಿಯಾದ ಮೂರು ಕೆಲಸದ ದಿನಗಳೊಳಗೆ ಪಡೆಯುವುದು.

ಮಕ್ಕಳ ರಕ್ಷಣಾ ಅಧಿಕಾರಿಯು ಪ್ರಕರಣದ ವಿವರವಾದ ವರದಿಯನ್ನು ಸಿದ್ಧಪಡಿಸಿ ಮಕ್ಕಳ ರಕ್ಷಣಾ ಸಮಿತಿಗೆ ಸಲ್ಲಿಸುವುದು. ಮಕ್ಕಳ ರಕ್ಷಣಾ ಸಮಿತಿಯು ಅಸಂಜ್ಞಾತ್ಮಕ ಅಪರಾಧಗಳನ್ನು ತನಿಖೆಮಾಡುವುದು ಮತ್ತು ವಿಚಾರಣೆಗೊಳಪಡಿಸುವುದು.

ಒಂದು ವೇಳೆ ಇತರೆ ಮಕ್ಕಳು ಬಾದಿತರಾಗಿದ್ದಲ್ಲಿ ಸಂಸ್ಥೆಯು ಕೈಗೊಳ್ಳಬೇಕಾಗಿರುವ ಕ್ರಮಗಳು, ಪೋಲಿಸ್/ ನ್ಯಾಯಾಲಯದಲ್ಲಿನ ಪ್ರಕರಣದ ಪ್ರಗತಿ ಮತ್ತು ಮಗು/ಇತರೆ ಮಕ್ಕಳು/ಶಿಕ್ಷಣ ಸಂಸ್ಥೆಗೆ ಎದುರಾಗಬಹುದಾದ ಅಪಾಯಗಳ ವಿಶ್ಲೇಷಣೆ ಬಗ್ಗೆ ಚರ್ಚಿಸಲು ಮಕ್ಕಳ ರಕ್ಷಣಾ ಸಮಿತಿಯು ಕೂಡಲೇ ಸಭೆಯಲ್ಲಿ ಚರ್ಚಿಸುವುದು.

⇩

ಘಟನೆ ನಡೆದ 15 ದಿನಗಳೊಳಗಾಗಿ ಸಂಸ್ಥೆಯ ಮುಖ್ಯಸ್ಥರು, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಿಷಯದಡಿ ಅಪ್‌ಡೇಟ್ ಆಗಿರುವ ಪ್ರಗತಿಯ ವರದಿಯನ್ನು ಸಲ್ಲಿಸುವುದು

⇩

ಅಸಂಜ್ಞಾತ್ಮಕ ಅಪರಾಧ ಪ್ರಕರಣದ ವಿಚಾರಣೆಯನ್ನು 06 ತಿಂಗಳೊಳಗೆ ಮುಕ್ತಾಯಗೊಳಿಸುವುದು. ಮಗುವಿನ ಸಂಜ್ಞಾತ್ಮಕ ಸುರಕ್ಷತೆಯ ಉಲ್ಲಂಘನೆ ಅಥವಾ ಮಗುವಿನ ಲೈಂಗಿಕ ಅಪರಾಧ ಪ್ರಕರಣದ ಕಡತವನ್ನು ನ್ಯಾಯಾಲಯದಿಂದ ಅಂತಿಮ ಆದೇಶವಾಗುವವರೆಗೂ ನಿರ್ವಹಿಸುವುದು.

### 4.7 ಮಕ್ಕಳ ಸುರಕ್ಷತಾ ಉಲ್ಲಂಘನೆಯ ಬಾಹ್ಯ ಪರಿಹಾರೋಪಾಯ ವಿಧಾನಗಳು:

ಈ ವಿಭಾಗವು, ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತಾ ಉಲ್ಲಂಘನೆಗೆ ಸಂಬಂದಿಸಿದಂತೆ ರಾಜ್ಯ ಮಕ್ಕಳ ರಕ್ಷಣೆಯ ವಿವಿಧ ಕಾರ್ಯತಂತ್ರಗಳಡಿ ಶಿಕ್ಷಣ ಸಂಸ್ಥೆಯು ಅನುಸರಿಸಬಹುದಾದ ಮತ್ತು ಅನುಸರಿಸಲೇಬೇಕಾದ ವಿಧಾನಗಳ ಬಗೆಗಿನ ಒಟ್ಟಾರೆ ದೃಷ್ಟಿಕೋನವನ್ನು ಒದಗಿಸುವುದು.

ಕೆಳಕಂಡ ಸಂದರ್ಭಗಳಲ್ಲಿ ಮಗುವಿನ ರಕ್ಷಣೆಗೆ ರಾಜ್ಯದ ಕಾರ್ಯತಂತ್ರಗಳು ಪ್ರಮುಖ ಪಾತ್ರ ವಹಿಸುತ್ತವೆ.

ಅ. ಶಿಕ್ಷಣ ಸಂಸ್ಥೆಯಲ್ಲಿ ಮಗುವನ್ನು ರಕ್ಷಿಸಲು ಹಾಗೂ ಸ್ಪಂದಿಸಲು ಇರುವ ವ್ಯವಸ್ಥೆಗಳು ಅಥವಾ ಕಾರ್ಯತಂತ್ರವು ಇಲ್ಲದೇ ಇದ್ದಲ್ಲಿ ಅಥವಾ ವಿಫಲವಾದಲ್ಲಿ,

ಆ. ಹಲ್ಲೆಯ ಗಂಭೀರತೆ ಅಥವಾ ಹಾನಿಯು ಕಾನೂನು ಕ್ರಮ ಕೈಗೊಳ್ಳುವವಷ್ಟು ತೀವ್ರವಾಗಿದ್ದಲ್ಲಿ ಅಥವಾ ಶಿಕ್ಷಣ ಸಂಸ್ಥೆಯ ವ್ಯಾಪ್ತಿಯನ್ನು ಮೀರಿದ್ದಲ್ಲಿ ಮಕ್ಕಳ ಸುರಕ್ಷತೆಯ ಬಾಹ್ಯ ಕಾರ್ಯತಂತ್ರದ ವ್ಯವಸ್ಥೆಯು ಪ್ರಮುಖ ಪಾತ್ರ ವಹಿಸುತ್ತವೆ.

ಅನ್ವಯವಾಗುವ ಯಾವುದೇ ಕಾನೂನಿನಡಿ ಬರುವ ಯಾವುದೇ ಆರೋಪಿಸಿದ ಅಪರಾಧವನ್ನು ಸಂಬಂಧಿಸಿದ ಪೊಲೀಸ್ ಠಾಣೆಗೆ ವರದಿ ಮಾಡುವುದು. ಉದಾ: ಮಗುವಿನ ಮೇಲಿನ ಲೈಂಗಿಕ ಹಲ್ಲೆ, ಮಗು/ಮಕ್ಕಳ ಮರಣ ಅಥವಾ ಶಿಕ್ಷಣ ಸಂಸ್ಥೆಯ ಪ್ರಾಧಿಕಾರಗಳ ಉದಾಸೀನದಿಂದ ಸಂಭವಿಸುವ ಅಪಘಾತಗಳು, ಪ್ರಕರಣವನ್ನು ಮುಚ್ಚಿಹಾಕಲು ಮಾಡುವ ಪ್ರಯತ್ನ, ಶಾಲೆಯ ಆವರಣದಲ್ಲಿ ಬೆಂಕಿ ಅವಗಡಗಳಂತಹ ಸನ್ನಿವೇಶಗಳಲ್ಲಿ ಸ್ಥಳಾಂತರಿಸಲು ಪ್ರಯತ್ನ, ನೈಸರ್ಗಿಕ ವಿಘತ್ತುಗಳಾದ ಪ್ರವಾಹಗಳು, ಚಂಡಮಾರುತಗಳು, ಸ್ಥಳೀಯ ದುಷ್ಕರ್ಮಿಗಳು/ವಿದ್ರೋಹಿಗಳು ಶಾಲಾ ಆವರಣವನ್ನು ಪದೇ ಪದೇ ಸಮಾಜ ವಿರೋಧಿ ಚಟುವಟಿಕೆಗಳಿಗೆ ದುರುಪಯೋಗ ಪಡಿಸಿಕೊಳ್ಳುವುದು ಮುಂತಾದ ಕೆಲವೊಂದು ಸಂಭಾವ್ಯ ಘಟನೆಗಳ ಸಂದರ್ಭದಲ್ಲಿ ಭಾಹ್ಯ ಶಾಸನಬದ್ಧ ಅಥವಾ ಕಾನೂನು ಸಮ್ಮತ ಸಂಸ್ಥೆಗಳು ಮದ್ಯ ಪ್ರವೇಶಿಸಲು ಮತ್ತು ನೆರವಿನ ವ್ಯವಸ್ಥೆಯ ಅಗತ್ಯವಿರುತ್ತದೆ.

#### 4.7.1 ಮಕ್ಕಳ ಕಲ್ಯಾಣ ಸಮಿತಿ (CWC)

ಮಕ್ಕಳ ಕಲ್ಯಾಣ ಸಮಿತಿಯನ್ನು ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ 2000 ಮತ್ತು ತಿದ್ದುಪಡಿ ಕಾಯ್ದೆ 2006 (ಪ್ರಸ್ತುತ ಹೆಸರಿಸಲಾಗಿರುವ ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ 2015ರನ್ವಯ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ರಚನೆಮಾಡುವುದು. ಮಕ್ಕಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನಿಪುಣರಾಗಿರುವ 5 ಸದಸ್ಯರನ್ನು ಒಳಗೊಂಡ ದಂಡಾಧಿಕಾರಿಗಳ ತಂಡ ನ್ಯಾಯಪೀಠವಾಗಿ ಕಾರ್ಯನಿರ್ವಹಿಸುವುದು. ಮಕ್ಕಳ ಕಲ್ಯಾಣ ಸಮಿತಿಯು ಅಪರಾಧ ದಂಡ ಪ್ರಕ್ರಿಯೆ ಸಂಹಿತೆಯನ್ವಯ, ಮಹಾನಗರ ದಂಡಾಧಿಕಾರಿಗಳ ಅಥವಾ ಮೊದಲನೆ ದರ್ಜೆಯ ನ್ಯಾಯಾಂಗ ದಂಡಾಧಿಕಾರಿಯು ಹೊಂದಿರುವ ಅಧಿಕಾರವನ್ನು ಹೊಂದಿರುತ್ತದೆ.

ಆರೈಕೆ, ರಕ್ಷಣೆ ಮತ್ತು ನೆರವಿನ ಅಗತ್ಯರುವ ಮಗುವನ್ನು ಶಿಕ್ಷಣ ಸಂಸ್ಥೆಯ ಪ್ರಾಧಿಕಾರಗಳು, ನೇರವಾಗಿ ಅಥವಾ ಮಕ್ಕಳ ಸಹಾಯವಾಣಿ ಅಥವಾ ಸಂಬಂಧಿಸಿದ ಇತರೆ ವ್ಯಕ್ತಿಯ ಮೂಲಕ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವುದು. ಒಂದು ವೇಳೆ ಮಗುವು ಲೈಂಗಿಕ ದೌಜನ್ಯಕ್ಕೆ ಗುರಿಯಾಗಿದ್ದಲ್ಲಿ (ಕುಟುಂಬದ ಸದಸ್ಯರಿಂದ) ಮಗುವಿಗೆ ಸುರಕ್ಷಿತ ಸ್ಥಳವನ್ನು ಒದಗಿಸುವ ಅಥವಾ ಮಗುವನ್ನು ಪ್ರತಿಕೂಲ ಸಾಕ್ಷಿ ಹೇಳಲು ಬದಲಾಗದಂತೆ ತಡೆಯುವುದನ್ನು ಖಾತರಿಪಡಿಸಿಕೊಳ್ಳಲು ಮಕ್ಕಳ ಕಲ್ಯಾಣ ಸಮಿತಿಗೆ ರವಾನಿಸುವುದು.

### 4.7.2 ಬಾಲ ನ್ಯಾಯ ಮಂಡಳಿ (JJB)

ಬಾಲನ್ಯಾಯ ಮಂಡಳಿಗಳನ್ನು, ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ 2000 ಮತ್ತು ತಿದ್ದುಪಡಿ ಕಾಯ್ದೆ 2006 (ಪ್ರಸ್ತುತ ಹೆಸರಿಸಲಾಗಿರುವ ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ 2015ರನ್ವಯ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ರಚನೆಮಾಡುವುದು. ಬಾಲನ್ಯಾಯ ಮಂಡಳಿಯಲ್ಲಿ ಮಹಾನಗರ ದಂಡಾಧಿಕಾರಿ ಅಥವಾ ಮೊದಲ ದರ್ಜೆಯ ನ್ಯಾಯಾಂಗ ದಂಡಾಧಿಕಾರಿಯು ಪ್ರಧಾನ ದಂಡಾಧಿಕಾರಿಯಾಗಿ ಮತ್ತು ಇಬ್ಬರು ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡ ನ್ಯಾಯಪೀಠವನ್ನು ರಚಿಸುವುದು. 1973 ರ ಅಪರಾಧ ದಂಡ ಸಂಹಿತೆ ಪ್ರಕ್ರಿಯೆಯನ್ವಯ ಇದು ಮೊದಲನೆ ದರ್ಜೆಯ ನ್ಯಾಯಾಂಗ ದಂಡಾಧಿಕಾರಿಯು ಹೊಂದಿರುವ ಅಧಿಕಾರವನ್ನು ಹೊಂದಿರುತ್ತದೆ.

ಆರೋಪಿಸಲಾಗಿರುವ ಮಕ್ಕಳು ಅಥವಾ ಕಾನೂನಿನ್ವಯ ಅಪರಾಧ ಎಸಗಿರುವವರನ್ನು ಬಾಲ ನ್ಯಾಯ ಕಾಯ್ದೆಯಡಿ ಬರುವ ಬಾಲ ನ್ಯಾಯ ಮಂಡಳಿಯ[8] ಮುಂದೆ ಹಾಜರುಪಡಿಸುವುದು. ಮಕ್ಕಳನ್ನು ಸುಧಾರಿಸುವ ಮತ್ತು ಪುನಶ್ಚೇತನಪಡಿಸುವ ಮೂಲಕ, ವಯಸ್ಕರ ನ್ಯಾಯ ಶಾಸ್ತ್ರದಡಿ ಬಲಿಪಶುವಾಗದಂತೆ ತಡೆಗಟ್ಟುವುದನ್ನು ಕಾಯ್ದೆಯ ವಿಧಾನವು ಖಚಿತಪಡಿಸಿಕೊಳ್ಳುತ್ತದೆ. ಶಿಕ್ಷಣ ಸಂಸ್ಥೆಯಲ್ಲಿರುವ ಮಗುವು ಕಾನೂನಿನಡಿ ಸುರಕ್ಷತೆಯ ಉಲ್ಲಂಘನೆ ಅಥವಾ ಹಲ್ಲೆ/ನಿಂಧನೆಯನ್ನು ಎಸಗಿದಲ್ಲಿ, ಆ ಮಗುವನ್ನು ಮಕ್ಕಳ ವಿಶೇಷ ಪೊಲೀಸ್ ಘಟಕ ಅಥವಾ ಸಮೀಪದ ಪೊಲೀಸ್ ಠಾಣೆಯ ಮೂಲಕ ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸುವುದು.

### 4.7.3 ಮಕ್ಕಳ ವಿಶೇಷ ಪೊಲೀಸ್ ಘಟಕ (SJPU)

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು, ರಾಜ್ಯಾದ್ಯಂತ ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ 2000 ಮತ್ತು ತಿದ್ದುಪಡಿ ಕಾಯ್ದೆ 2006 (ಪ್ರಸ್ತುತ ಹೆಸರಿಸಲಾಗಿರುವ ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ 2015 ರ ಅನುಚ್ಛೇದ 106 ಮತ್ತು 107) ರ ಅನ್ವಯ ಕಡ್ಡಾಯಗೊಳಿಸಿದಂತೆ ಮಕ್ಕಳಿಗೆ ಸಂಬಂಧಿಸಿದ ವಿಷಯಗಳಿಗೆ ಸಂವೇದನಾತ್ಮಕವಾಗಿ ಪ್ರತಿಕ್ರಿಯಿಸಲು ವಿಶೇಷ ಮಕ್ಕಳ ಪೊಲೀಸ್ ಘಟಕಗಳನ್ನು ಸ್ಥಾಪಿಸಿದೆ. ಎಲ್ಲಾ 30 ಜಿಲ್ಲೆಗಳಲ್ಲಿ ಸದರಿ ಘಟಕಗಳು ಇದ್ದು, ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ ಮತ್ತು ಗುಲ್ಬರ್ಗಗಳಲ್ಲಿ 04 ಆಯುಕ್ತಾಲಯಗಳು ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ 07 ವಲಯಗಳಲ್ಲಿ ಈ ಘಟಕಗಳಿವೆ. ಜಿಲ್ಲೆಗಳಲ್ಲಿ ಜಿಲ್ಲಾ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿಯವರು ಮತ್ತು ನಗರಗಳಲ್ಲಿ ಸಹಾಯಕ ಪೊಲೀಸ್ ಆಯುಕ್ತರು ಹಿರಿಯ ಮಕ್ಕಳ ಕಲ್ಯಾಣ ಅಧಿಕಾರಿಯಾಗಿದ್ದು, ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಅಪರಾಧಗಳ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಮಕ್ಕಳ ಕಲ್ಯಾಣ ಅಧಿಕಾರಿಯನ್ನಾಗಿ ನಿಯೋಜಿಸಲಾಗಿರುತ್ತದೆ ಮತ್ತು ಇವರು ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಅದರಲ್ಲೂ, ವಿಶೇಷವಾಗಿ ಮಕ್ಕಳ ದುರುಪಯೋಗದ ವಿಷಯಗಳನ್ನು ಸೂಕ್ಷ್ಮವಾಗಿ ನಿಭಾಯಿಸಲು ತರಬೇತಿ ನೀಡಲಾಗಿರುತ್ತದೆ.

---

[8] ಬಾಲನ್ಯಾಯ ಕಾಯ್ದೆ 2000 ಹಾಗೂ ತಿದ್ದುಪಡಿ ಕಾಯ್ದೆ 2006ರ ಅನ್ವಯ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಗಳನ್ನು ಎಲ್ಲಾ 30 ಜಿಲ್ಲೆಗಳಲ್ಲಿ ರಚಿಸಲಾಗಿದೆ ಹಾಗೂ ಇವುಗಳು ಕ್ರಮವಾಗಿ ರಕ್ಷಣೆ & ಪೋಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನ್ಯಾಯಾಧೀಶರುಗಳ ನ್ಯಾಯಾದೇಶದಂತೆ ಕಾರ್ಯನಿರ್ವಹಿಸುತ್ತಿವೆ ವಯಸ್ಕರ ನ್ಯಾಯ ಪದ್ಧತಿಯ ಋಣಾತ್ಮಕ ಅನುಭವದಿಂದ ಮಕ್ಕಳನ್ನು ದೂರವಿರಸಬೇಕು ಎಂಬುದು ಇದರ ಉದ್ದೇಶವಾಗಿರುತ್ತದೆ.

ರಾಜ್ಯದಲ್ಲಿನ ಯಾವುದೇ ಅಪರಾಧ ಅಥವಾ ಆರೋಪಿಸಲಾಗಿರುವ ಕಾನೂನು ಬಾಹಿರ ಚಟುವಟಿಕೆಗಳನ್ನು ಕಡ್ಡಾಯವಾಗಿ ಸಮೀಪದ ಪೊಲೀಸ್ ಠಾಣೆಗೆ ವರದಿ ಮಾಡುವುದು ಮತ್ತು ಸದರಿಯವರು ಮಾರ್ಗದರ್ಶನ ನೀಡುವರು ಮತ್ತು ಕಾನೂನಿನ್ವಯ ಸೂಕ್ತ ಕ್ರಮಕೈಗೊಳ್ಳುವರು.

**ದಂಡ ಪ್ರಕ್ರಿಯೆ ಸಂಹಿತೆಯ ಅನುಚ್ಛೇದ 164 ರ ಪ್ರಕಾರ ಹೇಳಿಕೆಯ ಧ್ವನಿ ಮುದ್ರಣ:**

ದಂಡ ಪ್ರಕ್ರಿಯೆ ಸಂಹಿತೆಯ ಅನುಚ್ಛೇದ 164 ರ ಪ್ರಕಾರ ಹೇಳಿಕೆಯನ್ನು ಧ್ವನಿ ಮುದ್ರಣ ಮಾಡುವುದು ಮತ್ತು ಇದನ್ನು ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಯಾವುದೇ ದಂಡಾಧಿಕಾರಿ ಮಾತ್ರ ತೆಗೆದುಕೊಳ್ಳುವುದು. ಮಗುವಿಗೆ ಆಗುವ ಆಘಾತವನ್ನು ಕಡಿಮೆ ಮಾಡುವುದು ಮತ್ತು ಮತ್ತೊಮ್ಮೆ ಮಗು ಬಲಿಪಶುವಾಗುವುದನ್ನು ತಡೆಯುವುದು ಹಾಗೂ ಮಗು ದೂರದ ಪ್ರದೇಶದಲ್ಲಿದ್ದಲ್ಲಿ, ನ್ಯಾಯಾಂಗ ಸೇವೆಗಳನ್ನು ಪಡೆಯುವ ಸಾಧ್ಯತೆಗಳ ತೊಂದರೆಯನ್ನು ತಪ್ಪಿಸಲು ಈ ರೀತಿ ಮಾಡಲಾಗಿದೆ. ಮಕ್ಕಳ ಸೂಕ್ಷ್ಮ ಸಂವೇದನಾ ಪ್ರಕರಣಗಳಲ್ಲಿ ವಿಶೇಷ ನ್ಯಾಯಾಲಯವು ಸಹ ಅಹವಾಲನ್ನು ಕ್ಯಾಮರ ಮೂಲಕ ಆಲಿಸುವುದು ಮತ್ತು ವಿಚಾರಣೆ ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು.

**ಜಿಲ್ಲಾ ಮಕ್ಕಳ ರಕ್ಷಣಾ ಘಟಕ (DCPU):**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಮಗುವಿನ ಸಂರಕ್ಷಣೆಗೆ ಸಂಬಂಧಿಸಿದ ಎಲ್ಲಾ ಸೇವೆಗಳು, ಯೋಜನೆಗಳು, ಸೌಲಭ್ಯಗಳು ಮತ್ತು ಕಾನೂನುಗಳ ಮೇಲ್ವಿಚಾರಣೆ, ಸಂಯೋಜನೆ ಮತ್ತು ಅನುಷ್ಠಾನಗೊಳಿಸುವ ಸಲುವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸದರಿ ಘಟಕಗಳನ್ನು ಸ್ಥಾಪಿಸಲಾಗಿದ್ದು, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಯು ಈ ಘಟಕದ ಮುಖ್ಯಸ್ಥರಾಗಿರುತ್ತಾರೆ ಮತ್ತು ಇವರಿಗೆ ನೆರವು ನೀಡಲು ಅಧಿಕಾರಿಗಳ ತಂಡವಿರುತ್ತದೆ.

ಮಗುವಿನ ಹಿತದೃಷ್ಟಿಯಿಂದ, ಜಿಲ್ಲೆಯಲ್ಲಿರುವ ಎಲ್ಲಾ ಮಕ್ಕಳ ರಕ್ಷಣಾ ಕಾರ್ಯತಂತ್ರಗಳು ಮತ್ತು ಆಂತರಿಕ ಇಲಾಖೆಗಳೊಂದಿಗೆ ಸಂಬಂಧ ಕಲ್ಪಿಸುವ ಕಾರ್ಯವನ್ನು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕವು ಮಾಡುತ್ತದೆ.

**4.7.4 ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (KSCPCR)**

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ[9] ಕಾಯ್ದೆ 2005 ರನ್ವಯ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ[9]ವನ್ನು ರಚಿಸಲಾಗಿದ್ದು, ಮಕ್ಕಳ ಸುರಕ್ಷತೆಯ ಉಲ್ಲಂಘನೆ/ಹಲ್ಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಪರ್ಕಿಸಬಹುದಾಗಿದೆ. ಈ ಆಯೋಗವು ಸತ್ಯಶೋಧನೆ ನಡೆಸುವ ಅಧಿಕಾರ ಹೊಂದಿದ್ದು, ಘಟನೆಯ ವಿಚಾರಣೆ ಮತ್ತು ಸಂಬಂಧಿಸಿದ ಪ್ರಾಧಿಕಾರಗಳು ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡುವುದು.

**4.7.5 ಮಕ್ಕಳ ಸಹಾಯವಾಣಿ – 1098:**

ಮಕ್ಕಳ ಸಹಾಯವಾಣಿ– 1098ಯನ್ನು ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದಡಿ ರಚಿಸಲಾಗಿದ್ದು, ಆಘಾತದಲ್ಲಿರುವ ಮತ್ತು ತೊಂದರೆಯ ಪರಿಸ್ಥಿತಿಯಲ್ಲಿರುವ ದೇಶದ ಯಾವುದೇ ಭಾಗದಲ್ಲಿರುವ

----------

[9] ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕೃಷಿ ಭವನ, ಹಡ್‌ಸನ್ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು–02 (ದೂರವಾಣಿ: 080–22115291)

ಮಕ್ಕಳು ತುರ್ತು ಸಂದರ್ಭಗಳಲ್ಲಿ ಸಂಪರ್ಕಿಸಬಹುದಾಗಿದೆ. ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಮಕ್ಕಳು ಮತ್ತು ಪೋಷಕರಿಗೆ ತಿಳಿಸಲು ಹೆಚ್ಚು ವ್ಯಾಪಕವಾಗಿ ಪ್ರಚಾರಮಾಡುವುದು ಮತ್ತು ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂತೆ ಪ್ರಕಟಿಸುವುದು.

### 4.7.6 ರಾಜ್ಯಮಟ್ಟದ ಇಲಾಖೆಗಳು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಕ್ಕಳ ರಕ್ಷಣೆ ಮತ್ತು ಶೈಕ್ಷಣಿಕ ಸಂಸ್ಥೆಗಳಾದ, ಪ್ರಾಥಮಿಕ & ಮಾಧ್ಯಮಿಕ ಶಿಕ್ಷಣ ಮತ್ತು ಕಾಲೇಜು ಶಿಕ್ಷಣ ಇಲಾಖೆ, CBSE, CICSE IB, NIOS ಮುಂತಾದವುಗಳಿಗೆ ನೋಡಲ್ ಪ್ರಾಧಿಕಾರವಾಗಿ ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಸ್ಥೆಗಳಲ್ಲಿ ಅನುಪಾಲನಾ ವ್ಯವಸ್ಥೆಗಳ ಸ್ಥಾಪನೆ, ಮಕ್ಕಳ ಸುರಕ್ಷೆ ಮತ್ತು ರಕ್ಷಣೆಯ ಕಾರ್ಯನಿರ್ವಹಿಸುವುದರೊಂದಿಗೆ ವ್ಯವಸ್ಥೆಯನ್ನು ಪರಿಶೀಲಿಸಿ, ಮೇಲ್ವಿಚಾರಣೆ ಮಾಡುವುದು & ಮಗುವಿನ ಸುರಕ್ಷತೆ ಉಲ್ಲಂಘನೆ ಹಾಗೂ ಹಲ್ಲೆ/ನಿಂದನೆ ಪ್ರಕರಣಗಳ ನಿವಾರಣಾ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಸುರಕ್ಷತೆ ಉಲ್ಲಂಘನೆ ಸೇರಿದಂತೆ ಮಗುವಿನ ಮೇಲಿನ ಹಲ್ಲೆಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆಗಳು ಜಿಲ್ಲಾ ಮತ್ತು ಕ್ಷೇತ್ರ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸುವುದು.

## 4.8 ಕಾನೂನು ಪರಿಹಾರೋಪಾಯಗಳು ಮತ್ತು ವರದಿಯ ಕಾರ್ಯವಿಧಾನಗಳು

### 4.8.1 ಲೈಂಗಿಕ ಅಪರಾದಗಳಿಂದ ಮಕ್ಕಳ ರಕ್ಷಣಾ ಕಾಯ್ದೆ (POCSO) ಅಡಿಯಲ್ಲಿ

ಲೈಂಗಿಕ ಅಪರಾದಗಳಿಂದ ಮಕ್ಕಳ ರಕ್ಷಣಾ ಕಾಯ್ದೆ 2012, ಕೇಂದ್ರದ ಕಾಯ್ದೆಯಾಗಿದ್ದು, ಮಕ್ಕಳ ವಿರುದ್ದದ ಲೈಂಗಿಕ ಅಪರಾದವೂ ಸೇರಿದಂತೆ ಲೈಂಗಿಕ ಹಿಂಸೆ, ಲೈಂಗಿಕ ಕಿರುಕುಳ ಮತ್ತು ಅಶ್ಲೀಲ ಚಿತ್ರಗಳ ಪ್ರದರ್ಶನ ಇತ್ಯಾದಿಗಳ ನಿವಾರಣೆ ಮತ್ತು ಅವುಗಳಿಗೆ ಪ್ರಕ್ರಿಯಿಸುವುದಾಗಿದೆ. ಸದರಿ ಕಾಯ್ದೆಯಲ್ಲಿ ಪ್ರತಿಯೊಂದು ದೌರ್ಜನ್ಯ/ಅಪರಾಧವನ್ನು ವ್ಯಾಖ್ಯಾನಿಸುವುದರೊಂದಿಗೆ ಶಿಕ್ಷಾರ್ಹ ಅಪರಾಧಗಳನ್ನು ಗುರುತಿಸಲಾಗಿದೆ ಹಾಗೂ ಪ್ರತಿಯೊಬ್ಬ ಭಾಗೀದಾರರ ಪಾತ್ರಗಳು, ಪ್ರಕ್ರಿಯೆಗಳು ಮತ್ತು ಅವಕಾಶಗಳನ್ನು ಸಹ ಸ್ಪಷ್ಟವಾಗಿ ವಿವರಿಸಲಾಗಿದೆ.

POCSO ಕಾಯ್ದೆಯ ಕಲಂ 19 ರಲ್ಲಿ ಮಗು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಬಗ್ಗೆ ಶಿಕ್ಷಣ ಸಂಸ್ಥೆಯಲ್ಲಿನ ವ್ಯಕ್ತಿಗಳೂ ಸೇರಿದಂತೆ ಯಾವುದೇ ವ್ಯಕ್ತಿಗೆ ತಿಳಿದುಬಂದಲ್ಲಿ ಅಥವಾ ಅನುಮಾನ ಹೊಂದಿದ್ದಲ್ಲಿ ಮಾಹಿತಿಯನ್ನು ಕೂಡಲೇ ಮಕ್ಕಳ ವಿಶೇಷ ಪೊಲಿಸ್ ಘಟಕ (SJPU)ಕ್ಕೆ ಮತ್ತು ಇದರ ಅನುಪಸ್ಥಿತಿಯಲ್ಲಿ ಸಮೀಪದ ಪೊಲೀಸ್ ಠಾಣೆಗೆ ವರದಿ ಮಾಡುವಂತೆ ಕಡ್ಡಾಯಗೊಳಿಸಲಾಗಿದೆ.

ಆದುದರಿಂದ ಸರ್ಕಾರಿ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಅಥವಾ ಯಾವುದೇ ಮಂಡಳಿಯೊಂದಿಗೆ ಸಂಯೋಜಿತವಾಗಿರುವ, ಅನುದಾನಿತ ಅಥವಾ ಅನುದಾನರಹಿತ, ನಿರ್ದಿಷ್ಟ ಧರ್ಮಗಳಿಗೆ ಸೇರಿದ ಟ್ರಸ್ಟ್‌ಗಳು, ಅಲ್ಪಸಂಖ್ಯಾತ ಸಂಸ್ಥೆಗಳು ಮುಂತಾದವುಗಳ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಗಳು ಅಥವಾ ಆಡಳಿತ ಮಂಡಳಿಯು ಶಾಲೆಯ ಒಳಗೆ ಅಥವಾ ಹೊರಗೆ ಯಾವುದೇ ವ್ಯಕ್ತಿ ಮಗುವಿನ ಮೇಲೆ ಲೈಂಗಿಕ ಹಲ್ಲೆ ನಡೆಸಿರುವುದು ತಿಳಿದುಬಂದಲ್ಲಿ ಅಥವಾ ಸಂದೇಹವುಂಟಾದಲ್ಲಿ ಕಡ್ಡಾಯವಾಗಿ ವರದಿ ಮಾಡುವುದು ಅಗತ್ಯವಾಗಿರುತ್ತದೆ.

**A. ವರದಿ ಮಾಡದೇ ಇರುವುದಕ್ಕೆ ದಂಡನೆ:**

POCSO ಕಾಯ್ದೆಯ ಕಲಂ 21(1) ರಲ್ಲಿ ವಿವರಿಸಿರುವಂತೆ ಮಗುವಿನ ವಿರುದ್ದ ಎಸಗಿರುವ ಯಾವುದೇ ರೀತಿಯ ಲೈಂಗಿಕ ಅಪರಾಧವನ್ನು ಆಯೋಗಕ್ಕೆ ವರದಿ ಮಾಡಲು ವಿಫಲವಾದಲ್ಲಿ ಅದಕ್ಕೆ 06 ತಿಂಗಳವರೆಗೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಇವರೆಡನ್ನೂ ವಿಧಿಸಲಾಗುತ್ತದೆ. ಕಾಯ್ದೆಯ ಕಲಂ 21 (2) ರಲ್ಲಿ ವಿವರಿಸಿರುವಂತೆ ಶಿಕ್ಷಣ ಸಂಸ್ಥೆಯ ಪ್ರಭಾರವನ್ನು ಹೊಂದಿರುವ ಯಾವುದೇ ವ್ಯಕ್ತಿ, ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹೊದ್ಯೋಗಿ ಎಸಗಿರುವ ಅಪರಾಧವು ತಪ್ಪು ಎಂದು ತಿಳಿದಿದ್ದಾಗ್ಯೂ, ಆಯೋಗಕ್ಕೆ ವರದಿ ಮಾಡಲು ವಿಫಲವಾದಲ್ಲಿ, ಅವರಿಗೆ ಒಂದು ವರ್ಷದವರೆಗೂ ವಿಸ್ತರಿಸಬಹುದಾದ ಕಾರಾಗೃಹವಾಸದ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುತ್ತದೆ.

**B. ಸುಳ್ಳು ದೂರು ನೀಡುವುದಕ್ಕೆ ದಂಡನೆ:**

POCSO ಕಾಯ್ದೆಯ ಕಲಂ 22(1) ರಲ್ಲಿ ವಿವರಿಸಿರುವಂತೆ ನಿರ್ದಿಷ್ಟ ಲೈಂಗಿಕ ಅಪರಾಧಗಳಿಗೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಯ ವಿರುದ್ಧ ಸುಳ್ಳು ದೂರು ನೀಡುವ ಅಥವಾ ತಪ್ಪು ಮಾಹಿತಿಯನ್ನು ನೀಡುವ ಯಾವುದೇ ವ್ಯಕ್ತಿಗೆ ದಂಡ ಸಹಿತ/ದಂಡ ರಹಿತ 6 ತಿಂಗಳಿಂದ 1 ವರ್ಷದವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ವಿಧಿಸುವುದು. ಯಾವುದೇ ವ್ಯಕ್ತಿಯು ತಪ್ಪು ಎಂದು ತಿಳಿದಿದ್ದಾಗ್ಯೂ, ಉದ್ದೇಶ ಪೂರ್ವಕವಾಗಿ ಮಗುವಿನ ಮೇಲೆ ಲೈಂಗಿಕ ಹಲ್ಲೆ ನಡೆದಿದೆ ಎಂದು ಸುಳ್ಳುದೂರನ್ನು ನೀಡುವುದು ಅಥವಾ ತಪ್ಪು ಮಾಹಿತಿಯನ್ನು ಒದಗಿಸುವ ಮೂಲಕ ಆ ಮಗುವನ್ನು ಬಲಿಪಶುವನ್ನಾಗಿಸುವ ಯಾವುದೇ ವ್ಯಕ್ತಿಗೆ ಈ ಕಾಯ್ದೆಯ ಕಲಂ 22(2)ನ್ವಯ ಒಂದು ವರ್ಷದವರೆಗೆ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಇವೆರಡನ್ನೂ ವಿಧಿಸಲಾಗುತ್ತದೆ.

**C. ಅಪರಾಧ ಎಸಗುವುದಕ್ಕೆ ಪ್ರಚೋದಿಸುವುದು ಮತ್ತು ಪ್ರಯತ್ನಿಸುವುದು:**

POCSO ಕಾಯ್ದೆಯ ಕಲಂ 16ರಲ್ಲಿ ವ್ಯಾಖ್ಯಾನಿಸಿರುವಂತೆ, ಯಾವುದೇ ವ್ಯಕ್ತಿ ಮಗುವಿನ ವಿರುದ್ಧ ಯಾವುದೇ ಲೈಂಗಿಕ ಅಪರಾಧವನ್ನು ಎಸಗಲು ಇತರರೊಂದಿಗೆ ಸೇರಿ ಸಂಚು ರೂಪಿಸಿದರೆ, ಉದ್ದೇಶಪೂರ್ವಕವಾಗಿ ಅಂತಹ ಕೃತ್ಯವನ್ನು ಅಪರಾಧ ಎಸಗುವ ಮೂಲಕ ಬೆಂಬಲಿಸಿದರೆ, ಅಂತಹ ವ್ಯಕ್ತಿಯನ್ನು ಕೃತ್ಯಕ್ಕೆ ಪ್ರಚೋದಿಸಿದವನು ಎಂದು ಭಾವಿಸತಕ್ಕದ್ದು ಮತ್ತು ಕಲಂ 17ರನ್ವಯ, ಆ ಅಪರಾಧಕ್ಕೆ ನಿಗಧಿಪಡಿಸಿರುವ ಶಿಕ್ಷೆಯೊಂದಿಗೆ ದಂಡಿಸತಕ್ಕದ್ದು ಮತ್ತು ಕಲಂ 18ರ ಪ್ರಕಾರ ಅಪರಾಧವನ್ನು ಎಸಗುವುದಕ್ಕೆ ಪ್ರಚೋದಿಸಿದಲ್ಲಿ, ಅದೇ ಅಪರಾಧಕ್ಕೆ ನಿಗಧಿಪಡಿಸಿದ ಶಿಕ್ಷೆಯ ಅರ್ದದಷ್ಟು ಶಿಕ್ಷೆಯನ್ನು ವಿಧಿಸುವುದು.

**4.9 ಮಾಧ್ಯಮ ಮತ್ತು ಮಗುವಿನ ಸಂರಕ್ಷಣೆ**

ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮವು, ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತೆಯ ಉಲ್ಲಂಘನೆಯನ್ನು ಸಾರ್ವಜನಿಕರ ಗಮನ ಸೆಳೆಯುವಲ್ಲಿ, ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಯಲ್ಲಿ ಮತ್ತು ಭಾಗವಹಿಸುವಿಕೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಸಂವೇದನೆಯುಳ್ಳ ಮಾಧ್ಯಮವು ಅಗೋಚರ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ತಿಳುವಳಿಕೆಯನ್ನು ಮೂಡಿಸುವಲ್ಲಿ ಸಕಾರಾತ್ಮಕ ಕ್ರಮವಹಿಸುತ್ತದೆ. ಆದಾಗ್ಯೂ ದೌರ್ಜನ್ಯದ ನಿರ್ದಿಷ್ಟ ಘಟನೆಗಳನ್ನು ವೈಭವೀಕರಿಸುವ ಮೂಲಕ ಮಕ್ಕಳು, ಕುಟುಂಬ ಮತ್ತು ತನಿಖೆಯ ಒಟ್ಟಾರೆ ಪ್ರಕ್ರಿಯೆ ಹಾಗೂ ರಾಜ್ಯದ ಪ್ರತಿಕ್ರಿಯೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ.

ಬಾಲ ನ್ಯಾಯ (ಮಕ್ಕಳ ಪಾಲನೆ & ರಕ್ಷಣೆ) ಕಾಯ್ದೆ 2000 (ಕಲಂ 21) ಮತ್ತು POCSOಕಾಯ್ದೆ 2012 (ಕಲಂ 23, 24) ರಲ್ಲಿ ವಿವರಿಸಿದಂತೆ ಬಲಿಪಶುವಾಗಿರುವ ಮಗು ಮತ್ತು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ರಕ್ಷಣೆಯ ಅವಕಾಶಗಳನ್ನು ಮಾಧ್ಯಮವು ಕಾನೂನು ಬದ್ದವಾಗಿ ಅನುಸರಿಸುವುದು. ಒಂದು ವೇಳೆ ಮಾಧ್ಯಮವು ಸದರಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅವುಗಳ ಮೇಲೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಲಾಗುತ್ತದೆ. ಭಾರತೀಯ ಪತ್ರಿಕಾ ಮಂಡಳಿ ಬಿಡುಗಡೆ ಮಾಡಿರುವ ಪತ್ರಿಕೋದ್ಯಮ ನೀತಿ ಸಂಹಿತೆ ಮತ್ತು ಮಾಧ್ಯಮ ನೀತಿ ಸಂಹಿತೆ (ಅನುಬಂಧ –1) ಯಲ್ಲಿ ವಿವರಿಸಿರುವಂತೆ, ಮಗುವಿನ ಕುರಿತು ವರದಿಯನ್ನು ಪ್ರಸಾರ ಮಾಡುವಾಗ ಮಗುವಿನ ಘನತೆ ಮತ್ತು ಹಕ್ಕುಗಳನ್ನು ರಕ್ಷಿಸುವುದನ್ನು ಪ್ರೋತ್ಸಾಹಿಸುತ್ತದೆ.

# ಅಧ್ಯಾಯ 5:

# ಮೇಲ್ವಿಚಾರಣೆ ಮತ್ತು ಪರಿಶೀಲನೆ

ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಪರಿಣಾಮಕಾರಿ ಮತ್ತು ಯಶಸ್ವಿ ಅನುಷ್ಠಾನಕ್ಕಾಗಿ ನಿಯಮಿತವಾಗಿ ಮೇಲ್ವಿಚಾರಣೆ ಮತ್ತು ಪರಿಶೀಲನೆ ಮಾಡುವುದು. ಅನುಷ್ಠಾನದ ಪರಿಶೀಲನೆಯನ್ನು ಎಲ್ಲಾ ಹಂತಗಳಲ್ಲಿ ಅಂದರೆ, ಆಂತರಿಕವಾಗಿ ಶಾಲೆಗಳ ಒಳಗೆ ಮತ್ತು ಬಾಹ್ಯವಾಗಿ ಪಂಚಾಯ್ತಿ, ವಾರ್ಡ್ ಮತ್ತು ರಾಜ್ಯಮಟ್ಟದಲ್ಲಿ ಮಾಡುವುದು.

## 5.1 ಶಿಕ್ಷಣ ಸಂಸ್ಥೆಯ ಹಂತದಲ್ಲಿ ಮೇಲ್ವಿಚಾರಣೆ ಮತ್ತು ಪರಿಶೀಲನೆ

### 5.1.1 ಸ್ವಯಂ ಮಾಪನ

ಮಕ್ಕಳ ರಕ್ಷಣಾ ಸಮಿತಿಯು, ಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಂಡಿರುವ ಮಕ್ಕಳ ರಕ್ಷಣಾ ನೀತಿಯನ್ನು ಮಕ್ಕಳ ಸುರಕ್ಷತೆಯ ಗಮನಿಕೆಪಟ್ಟಿ (Child Safety Check List) ಯನ್ವಯ ಮೇಲ್ವಿಚಾರಣೆ ಮತ್ತು ಪರಿಶೀಲನೆಯನ್ನು ನಿಯಮಿತವಾಗಿ ನಿರ್ವಹಿಸುವುದು. ಗಮನಿಕೆ ಪಟ್ಟಿಯಲ್ಲಿ ಕಡ್ಡಾಯವೆಂದು ನಮೂದಿಸಿರುವ ಅಂಶಗಳು ಅನುಷ್ಠಾನವಾಗಿರುವ ಬಗ್ಗೆ ಕಟ್ಟುನಿಟ್ಟಾಗಿ ಪರಿಶೀಲಿಸುವುದು. ಗಮನಿಕೆಪಟ್ಟಿಯಲ್ಲಿ ಶಿಫಾರಸ್ಸು ಮಾಡಿರುವ ಅಂಶಗಳನ್ನು ಕಾರ್ಯಗತಗೊಳಿಸಲು ಮಕ್ಕಳ ರಕ್ಷಣಾ ಸಮಿತಿಯು ಹೆಚ್ಚುವರಿಯಾಗಿ ಕ್ರಮಕೈಗೊಳ್ಳುವುದು ಮತ್ತು ಪರಿಶೀಲಿಸುವುದು. ಶಿಕ್ಷಣ ಸಂಸ್ಥೆಯಲ್ಲಿನ ಮಕ್ಕಳ ರಕ್ಷಣಾ ನೀತಿಯ ಮೇಲ್ವಿಚಾರಣೆ ಮತ್ತು ಪರಿಶೀಲನೆಯು ಮಕ್ಕಳ ರಕ್ಷಣಾ ವ್ಯವಸ್ಥೆಗಳು ಪ್ರತಿಕ್ರಿಯಾತ್ಮಕ ಕಾರ್ಯತಂತ್ರಗಳ ಮೂಲಕ ಅನುಷ್ಠಾನದಲ್ಲಿವೆ ಎಂಬುದನ್ನು ಖಾತರಿಪಡಿಸುವುದು.

### 5.1.2 ಮಕ್ಕಳ ರಕ್ಷಣಾ ಸಮಿತಿಯಿಂದ ಪರಿಶೀಲನೆ

ಮಕ್ಕಳ ರಕ್ಷಣಾ ಸಮಿತಿಯು, ಶಿಕ್ಷಣ ಸಂಸ್ಥೆಯಲ್ಲಿನ ಮಕ್ಕಳ ರಕ್ಷಣಾ ನೀತಿಯ ಆಂತರಿಕ ಪರಿಶೀಲನೆ ಮತ್ತು ಮೇಲ್ವಿಚಾರಣಾ ಪ್ರಕ್ರಿಯೆಯ ಪ್ರಮುಖ ಜವಾಬ್ದಾರಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಮಕ್ಕಳ ರಕ್ಷಣಾ ಸಮಿತಿಯು ನಿರ್ವಹಿಸಬೇಕಾಗಿರುವ ಪರಿಶೀಲನಾ ಕಾರ್ಯಗಳು ಕೆಳಗಿನಂತಿವೆ.

ಅ. ಮಕ್ಕಳ ರಕ್ಷಣಾ ಸಮಿತಿಯು, ಪ್ರತಿ 3 ತಿಂಗಳಿಗೊಮ್ಮೆ ಪರಿಶೀಲನೆ ಮತ್ತು ಮೇಲ್ವಿಚಾರಣಾ ಸಭೆಯನ್ನು ನಡೆಸುವುದು. ಸದರಿ ಸಭೆಗಳಲ್ಲಿ ಕೆಳಕಂಡ ಅಂಶಗಳನ್ನು ಸೇರಿಸುವುದು.

- ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ, ಮಗುವಿನ ಸುರಕ್ಷತೆಯ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ಸ್ಥಿತಿ ಮತ್ತು ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿಯನ್ನು ಮಂಡಿಸುವುದು. ಮಕ್ಕಳ ರಕ್ಷಣಾ ಸಮಿತಿಯು ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ, ಶಿಕ್ಷಣ ಸಂಸ್ಥೆಯಲ್ಲಿನ ಮಕ್ಕಳ ರಕ್ಷಣಾ ನೀತಿಯಡಿ ಕೈಗೊಂಡಿರುವ ಕ್ರಮಗಳು, ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳು, ಸಂಪನ್ಮೂಲಗಳ ಹಂಚಿಕೆ ಮತ್ತು ಇತರೆ ಸುರಕ್ಷತಾ ಕ್ರಮಗಳ ಬಗ್ಗೆ ವಿವರಿಸುವುದು.

- ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯನ್ವಯ ಅಪಾಯ ನಿರ್ವಹಣಾ ಪ್ರಕ್ರಿಯೆಯನ್ನು ಮಾಪನ ಮಾಡುವುದು. ಮಕ್ಕಳ ರಕ್ಷಣಾ ವಿಷಯದಲ್ಲಿ ಸಂಭವಿಸಬಹುದಾದ ಅಪಾಯ ಮತ್ತು ಅದರ ನಿರ್ವಹಣೆಯು ಶಿಕ್ಷಣ ಸಂಸ್ಥೆಯು ಮಕ್ಕಳಿಗೆ ಎದುರಾಗುವ ಅಪಾಯಗಳಿಗೆ ಸ್ಪಂದಿಸಲು ಸಹಕಾರಿಯಾಗುತ್ತದೆ.

- ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯು ಮಕ್ಕಳ ರಕ್ಷಣೆಯ ಇತರೆ ಭೌತಿಕ ಅಪಾಯಗಳಾದ ಉದಾ: ಸ್ವಾಭಾವಿಕ ದುರಂತಗಳು ಮತ್ತು ಸಾಮಾಜಿಕ ಪರಿಸರದಂತಹ ಪರಿಸ್ಥಿತಿಗಳನ್ನು ಎದುರಿಸುವಲ್ಲಿ ಸಾಕಷ್ಟು ಶಕ್ತವಾಗಿದೆಯೇ ಎಂಬುದುದನ್ನು ಮಾಪನಮಾಡುವುದು.

- ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯು ಕೈಗೊಂಡಿರುವ ಆಂತರಿಕ ಅನುಸರಣೆ ಮತ್ತು ನಿಯಂತ್ರಣ ವ್ಯವಸ್ಥೆಗಳ ಕಾರ್ಯವಿಧಾನಗಳನ್ನು ಸರಿಯಾಗಿ ಪಾಲಿಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು.

- ಮಕ್ಕಳ ರಕ್ಷಣಾ ಸಮಿತಿಯು, ಪ್ರಸ್ತುತ ಚಾಲ್ತಿಯಲ್ಲಿರುವ ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಗೆ ತಕ್ಷಣದಲ್ಲಿ ಯಾವುದೇ ಮಾರ್ಪಾಟುಗಳ ಅಗತ್ಯವಿದ್ದಲ್ಲಿ, ಅವುಗಳನ್ನು ಸೇರ್ಪಡೆಗೊಳಿಸಲು ಮತ್ತು ಮುಂದಿನ ಕ್ರಮಕೈಗೊಳ್ಳಲು ಸೂಕ್ತ ಕ್ರಮವಹಿಸುವುದು.

ಆ) ಮಕ್ಕಳ ರಕ್ಷಣಾ ಸಮಿತಿಯು, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಮಕ್ಕಳಿಂದ ಸಾಮೂಹಿಕ ಪ್ರತಿಕ್ರಿಯೆಯನ್ನು ಪಡೆಯಲು ಶೈಕ್ಷಣಿಕ ವರ್ಷದಲ್ಲಿ “ತೆರೆದ ಮನೆ’’ (open houses) ಯನ್ನು ಪ್ರತಿ 6 ತಿಂಗಳಿಗೊಮ್ಮೆ ನಡೆಸುವುದು.

ಇ) ಮಕ್ಕಳ ರಕ್ಷಣಾ ಸಮಿತಿಯು, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಪ್ರತಿ 6 ತಿಂಗಳಿಗೊಮ್ಮೆ ಪೋಷಕರು–ಶಿಕ್ಷಕರ ಸಂಘ/ ಶಾಲಾ ನಿರ್ವಹಣಾ ಸಮಿತಿಯ ಅಭಿಪ್ರಾಯವನ್ನು ಪಡೆಯುವುದು.

ಈ) ಮಕ್ಕಳ ರಕ್ಷಣಾ ಸಮಿತಿಯು, ತ್ರೈಮಾಸಿಕ & ಅರ್ಧ ವಾರ್ಷಿಕ ಪರಿಶೀಲನೆಯನ್ವಯ ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಗೆ ಸೂಚಿಸುವ ಶಿಫಾರಸ್ಸುಗಳು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಹೆಚ್ಚುವರಿ ಸಂಪನ್ಮೂಲಗಳ ಅವಶ್ಯಕತೆಯೂ ಸೇರಿದಂತೆ, ವರದಿಯನ್ನು ಶಾಲೆಯ ನಿರ್ವಹಣಾ ತಂಡ/ಮಂಡಳಿ/ಆಡಳಿತ ಮಂಡಳಿಗೆ ಸಲ್ಲಿಸುವುದು.

**5.1.3 ಸಂಸ್ಥೆಯ ಮುಖ್ಯಸ್ಥರಿಂದ ಪರಿಶೀಲನೆ ಮತ್ತು ಮೇಲ್ವಿಚಾರಣೆ.**

ಸಂಸ್ಥೆಯ ಮುಖ್ಯಸ್ಥರು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಒಟ್ಟಾರೆ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿದ್ದು, ಕೆಳಕಂಡಂತೆ ಕಾರ್ಯ ನಿರ್ವಹಿಸುವುದು.

a) ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಮಕ್ಕಳ ರಕ್ಷಣಾ ನೀತಿಯನ್ನು ಅನುಸರಿಸಬೇಕಾಗಿರುವ ಮತ್ತು ಕಡ್ಡಾಯವಾಗಿ ವರದಿ ಮಾಡುವ ಬದ್ಧತೆಯ ಬಗ್ಗೆ ಪರಿಶೀಲನೆ ಮತ್ತು ಮೇಲ್ವಿಚಾರಣೆ ಮಾಡುವುದು.

b) ಮಕ್ಕಳು ಸಲಹಾಪೆಟ್ಟಿಗೆ ಅಥವಾ ಇತರೇ ವಿಧಾನಗಳ ಮೂಲಕ, ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಸಂಬಂಧಿಸಿದಂತೆ ತ್ವರಿತವಾಗಿ ಮತ್ತು ನಿಯಮಾನುಸಾರ ಕೈಗೊಂಡಿರುವ ಕ್ರಮಗಳನ್ನು ಖಾತರಿಪಡಿಸಿಕೊಳ್ಳುವುದು.

c) ಮಕ್ಕಳ ರಕ್ಷಣಾ ಸಮಿತಿಯ ಶಿಫಾರಸ್ಸುಗಳನ್ನು ಶಿಕ್ಷಣ ಸಂಸ್ಥೆಯ ಆಡಳಿತ ಕೌನ್ಸಿಲ್/ ಮಂಡಳಿ ಮತ್ತು ಇತರೆ ಯಾವುದೇ ಪ್ರಾಧಿಕಾರಕ್ಕೆ ಅಗತ್ಯ ಕ್ರಮಕ್ಕಾಗಿ ರವಾನಿಸುವುದು.

d) ಮಕ್ಕಳ ರಕ್ಷಣೆಗೆ ಸಿಂಬಂಧಿಸಿದಂತೆ, ಕಾಲಕಾಲಕ್ಕೆ ಸ್ವೀಕೃತವಾಗಿರುವ ಸರ್ಕಾರಿ ಅಧಿಸೂಚನೆಗಳು ಮತ್ತು ಆದೇಶಗಳ ಬಗ್ಗೆ ಮಕ್ಕಳ ರಕ್ಷಣಾ ಸಮಿತಿ ಮತ್ತು ಆಡಳಿತ ಮಂಡಳಿಗೆ ತಿಳಿಸುವುದು.

e) ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಬದಲಾವಣೆಗೆ ಸಂಬಂಧಿಸಿದ ಶಿಫಾರಸ್ಸುಗಳನ್ನು ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಮುಂಚಿತವಾಗಿ ಅಳವಡಿಸಿಕೊಂಡು, ಅನುಷ್ಠಾನಗೊಳಿಸುವುದನ್ನು ಖಚಿತಪಡಿಸಿಕೊಳ್ಳುವುದು.

**5.2 ಬಾಹ್ಯ ಪರಿಶೀಲನೆ**

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ ಮತ್ತು ಶಿಕ್ಷಣ ಸಂಸ್ಥೆಗಳಿಗೆ ರೂಪಿಸಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳ ಒಟ್ಟಾರೆ ಅನುಷ್ಠಾನದ ಬಗ್ಗೆ ಶಿಕ್ಷಣ ಇಲಾಖೆ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಂಬಂಧಿಸಿದ ಸರ್ಕಾರಿ ಇಲಾಖೆಗಳ ಅಧಿಕಾರಿಗಳು ಸಂಯೋಜಿತ ಬಾಹ್ಯ ಪರಿಶೀಲನೆಯ ಜವಾಬ್ದಾರಿಯನ್ನು ಹೊಂದಿರುವರು. ಬಾಹ್ಯ ಪರಿಶೀಲನೆಯನ್ನು ಪ್ರತಿ 3 ವರ್ಷಗಳಿಗೊಮ್ಮೆ ನಡೆಸುವುದು.

ಸದರಿ ಬಾಹ್ಯ ಪರಿಶೀಲನೆಯು, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ ಮತ್ತು ಶಿಕ್ಷಣ ಸಂಸ್ಥೆಗಳಿಗೆ ರೂಪಿಸಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಚಲನಶೀಲ, ಸಂವೇಧನಾತ್ಮಕ ಮತ್ತು ಚಾಲ್ತಿಯಲ್ಲಿರುವ ವಿಕಸನದ ಪರಿಸರವನ್ನು ಪ್ರತಿಬಿಂಬಿಸುವುದರೊಂದಿಗೆ, ಸಾಮಾಜಿಕ ಮತ್ತು ಕಾನೂನು ಬದಲಾವಣೆಗಳ ಪರಿದಿಗೆ ಒಳಗೊಂಡಿವೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ ಮತ್ತು ಶಿಕ್ಷಣ ಸಂಸ್ಥೆಗಳಿಗೆ ರೂಪಿಸಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳ ರಾಜ್ಯದ ಪ್ರತಿಯೊಂದು ಹಂತದ ಪರಿಶೀಲನೆ ಮತ್ತು ಮೇಲ್ವಿಚಾರಣೆಯನ್ನು ಕೆಳಗಿನ ಕೋಷ್ಠಕದಲ್ಲಿ ವ್ಯಾಖ್ಯಾನಿಸಲಾಗಿದೆ.

| **ಪ್ರಾಧಿಕಾರ** | **ಜವಾಬ್ದಾರಿ** |
|---|---|
| ಗ್ರಾಮ ಪಂಚಾಯತಿ ಮಟ್ಟ (ಗ್ರಾಮೀಣ) | ಕೆಳಗಿನ ಸದಸ್ಯರನ್ನೊಳಗೊಂಡ ಸಮಿತಿಯು, ಶಿಕ್ಷಣ ಸಂಸ್ಥೆಯ ಮಟ್ಟದಲ್ಲಿ ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ, ಮಗುವಿನ ಸುರಕ್ಷತಾ ಉಲ್ಲಂಘನಾ ಪ್ರಕರಣಗಳು ಮಕ್ಕಳ ರಕ್ಷಣಾ ನೀತಿ, ಮಾರ್ಗಸೂಚಿಗಳು ಮತ್ತು ಗಮನಿಕೆ ಪಟ್ಟಿಯನ್ವಯ ಪರಿಶೀಲಿಸುವುದು.<br>• ಶಾಸನಬದ್ಧ ಸಾಮಾಜಿಕ ನ್ಯಾಯ ಸಮಿತಿ.<br>• ಪೊಲೀಸ್ (ಭಾರತೀಯ ದಂಡ ಸಂಹಿತೆಯ ಉಲ್ಲಂಘನೆಗಳ ಪ್ರಕರಣಗಳಲ್ಲಿ).<br>• ಕ್ಷೇತ್ರ ಶಿಕ್ಷಣಾಧಿಕಾರಿ; ಮತ್ತು<br>• ನಾಗರೀಕ ಸಾಮಾಜದ ಸಂಸ್ಥೆಗಳ ಪ್ರತಿನಿಧಿಗಳು (ಸಮುದಾಯ ಆಧಾರಿತ ಸಂಸ್ಥೆಗಳು ಅಥವಾ ಸ್ವಯಂ ಸೇವಾ ಸಂಸ್ಥೆಗಳು)<br>ಈ ಸಮಿತಿಯು ಮಾಸಿಕ ವರದಿಯೊಂದಿಗೆ ಕ್ರಮ ಜರುಗಿಸಿದ ವರದಿಯನ್ನು ಶಾಸನಬದ್ಧವಾಗಿ ತಾಲ್ಲೂಕು ಮಟ್ಟದಲ್ಲಿ ರಚನೆಯಾಗಿರುವ ಸಮಿತಿಯ ಮೇಲ್ವಿಚಾರಣೆಗೆ ಕಳುಹಿಸುವುದು. |
| ವಾರ್ಡ್ ಮಟ್ಟದಲ್ಲಿ | ವಾರ್ಡ್ ಮಟ್ಟದಲ್ಲಿ, ಮಕ್ಕಳ ರಕ್ಷಣಾ ನೀತಿಯಡಿ ಮಕ್ಕಳ ಸುರಕ್ಷತೆಯ ಉಲ್ಲಂಘನೆ ಪ್ರಕರಣಗಳಿಗೆ ನಿಗಧಿಪಡಿಸಿದ ಅನುಪಾಲನೆಯ ನಿಯಮಗಳು ಮತ್ತು ಅಳತೆಗೋಲುಗಳನ್ನು ಕುರಿತು ಮಾಸಿಕ ಪರಿಶೀಲನೆಯನ್ನು ನಡೆಸುವುದು. ವಾರ್ಡ್ ಮಟ್ಟದ ಸಮಿತಿಯು |

| ಪ್ರಾಧಿಕಾರ | ಜವಾಬ್ದಾರಿ |
|---|---|
| | ಕೆಳಕಂಡವರನ್ನು ಒಳಗೊಂಡಿರುತ್ತದೆ.<br>• ಕಾರ್ಪೊರೇಟರ್<br>• ಮುಖ್ಯೋಪಾಧ್ಯಾಯರು<br>• ಕ್ಲಸ್ಟರ್‌ನ ಮುಖ್ಯಸ್ಥರು<br>• ನಾಗರೀಕ ಸಮಾಜ ಸಂಸ್ಥೆಗಳ ಪ್ರತಿನಿಧಿಗಳು (ಸಮುದಾಯ ಆಧಾರಿತ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು).<br>• ಆರೋಗ್ಯ ನಿರೀಕ್ಷಕರು<br>• ರಿಸೀವಿಂಗ್ ಅಧಿಕಾರಿ<br>• ಭಾರತೀಯ ದಂಡ ಸಂಹಿತೆ (IPC)ಉಲ್ಲಂಘನೆಯ ಪ್ರಕರಣಗಳಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕ (SJPU)/ಪೊಲೀಸ್‌ರನ್ನು ಸಮಿತಿಯಲ್ಲಿ ಸೇರಿಸಿಕೊಳ್ಳುವುದು.<br>ಈ ಸಮಿತಿಯು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಮೇಲ್ವಿಚಾರಣೆಗಾಗಿ ರಚಿಸಿರುವ ನಗರ ಮಟ್ಟದ ಸಮಿತಿಗೆ ವರದಿಯನ್ನು ಸಲ್ಲಿಸುವುದು. |
| ನಗರ ಮಟ್ಟ | ಮಕ್ಕಳ ರಕ್ಷಣಾ ನೀತಿಯಡಿ ಮಕ್ಕಳ ರಕ್ಷಣೆಯ ಉಲ್ಲಂಘನೆ ಪ್ರಕರಣಗಳು ಹಾಗೂ ನಿಗಧಿಪಡಿಸಿದ ಅನುಪಾಲನೆಯ ನಿಯಮಗಳು ಮತ್ತು ಅಳತೆಗೋಲುಗಳನ್ನು ಕುರಿತು ತ್ರೈಮಾಸಿಕ ಪರಿಶೀಲನೆಯನ್ನು ನಗರಮಟ್ಟದಲ್ಲಿ ನಡೆಸುವುದು. ಈ ಸಮಿತಿಯು ಕೆಳಕಂಡವರನ್ನು ಒಳಗೊಂಡಿರುತ್ತದೆ.<br>• ಮಹಾಪೌರರು (ಮೇಯರ್)<br>• ಕಾರ್ಪೊರೇಟರ್<br>• ಕ್ಷೇತ್ರ ಶಿಕ್ಷಣಾಧಿಕಾರಿ<br>• ನಾಗರೀಕ ಸಮಾಜದ ಸಂಸ್ಥೆಗಳ ಪ್ರತಿನಿಧಿಗಳು (ಸಮುದಾಯ ಆಧಾರಿತ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು)<br>• ಆರೋಗ್ಯ ನಿರೀಕ್ಷಕರು.<br>• ಶಾಲಾ ವ್ಯವಸ್ಥಾಪಕ ಮಂಡಳಿಗಳ ಪ್ರತಿನಿಧಿಗಳು<br>• ರಿಸೀವಿಂಗ್ ಅಧಿಕಾರಿ, ಮತ್ತು |

| ಪ್ರಾಧಿಕಾರ | ಜವಾಬ್ದಾರಿ |
|---|---|
| | • ಭಾರತೀಯ ದಂಡ ಸಂಹಿತೆ ಉಲ್ಲಂಘನೆ (IPC)ಯ ಪ್ರಕರಣಗಳಲ್ಲಿ ಡೆಪ್ಯೂಟಿ ಕಮೀಷನರ್ ಆಫ್ ಪೊಲೀಸ್ ಮತ್ತು ಮಕ್ಕಳ ವಿಶೇಷ ಪೊಲೀಸ್ ಘಟಕ (SJPU) ದ ಹಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳನ್ನು ಈ ಸಮಿತಿಯಲ್ಲಿ ಸೇರಿಸಿಕೊಳ್ಳುವುದು.<br>ಈ ಸಮಿತಿಯು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಮೇಲ್ವಿಚಾರಣೆಗಾಗಿ ರಚಿಸಲಾಗಿರುವ ರಾಜ್ಯಮಟ್ಟದ ಸಮಿತಿಗೆ ವರದಿಯನ್ನು ಸಲ್ಲಿಸುವುದು. |
| ಕ್ಷೇತ್ರ ಮಟ್ಟದ ಶಿಕ್ಷಣ[10] ಸಂಸ್ಥೆ (ನಗರ ಮತ್ತು ಗ್ರಾಮೀಣ ಪ್ರದೇಶ ಸೇರಿದಂತೆ) | ಕೆಳಗಿನ ಸದಸ್ಯರನ್ನು ಒಳಗೊಂಡು ರಚಿಸಲಾಗಿರುವ ತಾಲ್ಲೂಕು ಮಟ್ಟದ ಸಮಿತಿಯು, ತಾಲ್ಲೂಕಿನಲ್ಲಿರುವ ಶಾಲಾ ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನೊಳಗೊಂಡಂತೆ ಮಕ್ಕಳ ಸುರಕ್ಷತಾ ಉಲ್ಲಂಘನೆಯ ಎಲ್ಲಾ ಪ್ರಕರಣಗಳನ್ನು ಮಕ್ಕಳ ರಕ್ಷಣಾ ನೀತಿ ಮತ್ತು ಮಾರ್ಗಸೂಚಿಗಳು ಹಾಗೂ ಗಮನಿಕೆ ಪಟ್ಟಿಯನ್ವಯ ಪರಿಶೀಲಿಸುವುದು.<br>• ಶಾಸನಬದ್ದ ಸಾಮಾಜಿಕ ನ್ಯಾಯ ಸಮಿತಿ.<br>• ಪೊಲೀಸ್ (ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ (IPC)ಯ ಉಲ್ಲಂಘನೆ)<br>• ಕ್ಷೇತ್ರ ಶಿಕ್ಷಣಾಧಿಕಾರಿ.<br>• ಅಧ್ಯಕ್ಷರು, ತಾಲ್ಲೂಕು ಪಂಚಾಯತಿ.<br>• ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ<br>• ಶಿಶು ಅಭಿವೃದ್ದಿ ಯೋಜನಾ ಅಧಿಕಾರಿ, ಮತ್ತು<br>• ನಾಗರೀಕ ಸಮಾಜ ಸಂಸ್ಥೆಗಳ ಪ್ರತಿನಿಧಿಗಳು (ಸಮುದಾಯ ಆಧಾರಿತ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು)<br>ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿರ್ದಿಷ್ಟಪಡಿಸಿದಂತೆ, ಮಕ್ಕಳ ರಕ್ಷಣೆಯ ಉಲ್ಲಂಘನೆ, ಅನುಪಾಲನಾ ನಿಯಮಗಳು ಮತ್ತು ಅಳತೆಗೋಲುಗಳ ಬಗ್ಗೆ ಮಾಸಿಕವಾಗಿ ಪರಿಶೀಲನೆ ನಡೆಸುವುದು. ಅವಶ್ಯವೆನಿಸಿದಲ್ಲಿ ಕೆಳಗಿನ ಅಧಿಕಾರಿಗಳನ್ನು ಸೇರಿಸಿಕೊಂಡು ಸಮಿತಿ ಸಭೆಗೆ ಆಹ್ವಾನಿಸುವುದು.<br>• ಜಿಲ್ಲಾ ಮಕ್ಕಳ ರಕ್ಷಣಾ ಘಟಕದ (DCPU) ರಕ್ಷಣಾ ಅಧಿಕಾರಿ[11].<br>• ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರು. ತಾಲ್ಲೂಕು ಪಂಚಾಯ್ತಿ<br>• ಭಾರತೀಯ ದಂಡ ಸಂಹಿತೆ (IPC)ಯ ಪ್ರಕರಣಗಳಿದ್ದಲ್ಲಿ, ಸಹಾಯಕ ಪೊಲೀಸ್ ಆಯುಕ್ತರು,<br>• ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳು, ಅಲ್ಪ ಸಂಖ್ಯಾತರು, ಕಾರ್ಮಿಕ, ಬುಡಕಟ್ಟು ವರ್ಗಗಳ ಅಭಿವೃದ್ದಿ ಇಲಾಖೆಗಳ ಅಧಿಕಾರಿಗಳು ಮತ್ತು<br>• ಶಾಲಾ ವ್ಯವಸ್ಥಾಪಕ ಮಂಡಳಿಯ ಪ್ರತಿನಿಧಿಗಳು.<br>ಈ ಸಮಿತಿಯು ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟದಲ್ಲಿ ಶಾಸನ ಬದ್ದವಾಗಿ ರಚಿಸಲಾಗಿರುವ ಸಮಿತಿಗೆ ಮಾಸಿಕವಾಗಿ ವರದಿಯನ್ನು ಸಲ್ಲಿಸುವುದು. |

| ಪ್ರಾಧಿಕಾರ | ಜವಾಬ್ದಾರಿ |
|---|---|
| ಜಿಲ್ಲಾಮಟ್ಟ (ಗ್ರಾಮೀಣ) | ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ, ಮಕ್ಕಳ ಮೇಲಿನ ಹಲ್ಲೆ ಪ್ರಕರಣಗಳು ಹಾಗೂ ಶಾಲಾ ಮಕ್ಕಳ ರಕ್ಷಣಾ ನೀತಿಯಡಿ ನಿಗಧಿಪಡಿಸಿರುವ ಅನುಪಾಲನಾ ನಿಯಮಗಳು ಮತ್ತು ಅಳತೆಗೋಲುಗಳ ಬಗ್ಗೆ ತ್ರೈಮಾಸಿಕ ಪರಿಶೀಲನೆಯನ್ನು ನಡೆಸುವುದು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಭೆಯನ್ನು ನಿರ್ವಹಿಸುವುದು. ಸಭೆಯಲ್ಲಿ ಭಾಗವಹಿಸಬೇಕಾದ ಸದಸ್ಯರುಗಳೆಂದರೆ;<br>• ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (SP) ಮತ್ತು SJPU ನ ಹಿರಿಯ ಮಕ್ಕಳ ಕಲ್ಯಾಣ ಅಧಿಕಾರಿ.<br>• ಅಧ್ಯಕ್ಷರು, ಜಿಲ್ಲಾ ಪಂಚಾಯ್ತಿ,<br>• ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ<br>• ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,<br>• ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು, ಚೈಲ್ಡ್ ಲೈನ್ ನೋಡಲ್ ಸದಸ್ಯರು, ಬಾಲ ನ್ಯಾಯ ಮಂಡಳಿ.<br>• ಇತರೆ ಇಲಾಖೆಗಳಾದ ಸಮಾಜ ಕಲ್ಯಾಣ, ಕಾರ್ಮಿಕ, ನಗರ/ಪುರಸಭೆಗಳ ಅಭಿವೃದ್ಧಿ, ಹಿಂದುಳಿದ ವರ್ಗಗಳು ಮತ್ತು ಅಲ್ಪಾ ಸಂಖ್ಯಾತರು, ಬುಡಕಟ್ಟುಗಳ ಕಲ್ಯಾಣ ಮತ್ತು<br>• ಪ್ರಕರಣಗಳ ಪರಿಶೀಲನೆಯ ಸಂದರ್ಭದಲ್ಲಿ ಅಗತ್ಯವಿದ್ದಲ್ಲಿ ಶಾಲಾ ವ್ಯವಸ್ಥಾಪಕ ಮಂಡಳಿಯ ಪ್ರತಿನಿಧಿಗಳು<br>ಸಂಬಂಧಿಸಿದ ಶಾಲೆ/ವೃತ್ತಿ ತರಬೇತಿ ಮಂಡಳಿಯ ಶಾಲಾ ತಪಾಸಣಾ ಸಮಿತಿಯು, ಮಕ್ಕಳ ರಕ್ಷಣಾ ನೀತಿಗೆ ಬದ್ದವಾಗಿರುವ ಬಗ್ಗೆ ಮಾಪನ ಮಾಡುವುದು ಮತ್ತು ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ತಮ್ಮ ಕಾಳಜಿಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸುವುದು. ಈ ಸಮಿತಿಗಳು ತ್ರೈಮಾಸಿಕ ವರದಿಯನ್ನು ರಾಜ್ಯ ಮಟ್ಟದ ಅಧಿಕಾರಿಗೆ ಸಲ್ಲಿಸುವುದು. |
| ರಾಜ್ಯ ಮಟ್ಟ | **ಪರಿಶೀಲನಾ ನೋಡಲ್ ಸಂಸ್ಥೆ: ಸಮಗ್ರ ಮಕ್ಕಳ ರಕ್ಷಣಾ ಸಮಿತಿ – KSICPS**<br>ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ, ಶಿಕ್ಷಣ ಸಂಸ್ಥೆಗಳಿಗೆ ರೂಪಿಸಿರುವ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಗೆ ಬದ್ಧವಾಗಿ ನಡೆಯುತ್ತಿರುವ ಅನುಸರಿಸುವಿಕೆ ಮತ್ತು ಅನುಪಾಲನೆಯನ್ನು ವಾರ್ಷಿಕವಾಗಿ ಪರಿಶೀಲಿಸುವುದು. ಈ ಸಮಿತಿಯು ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ.<br>• ಶಿಕ್ಷಣ, ಪೊಲೀಸ್, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಆರೋಗ್ಯ, ಸಮಾಜ ಕಲ್ಯಾಣ, ಕಾರ್ಮಿಕ, ನಗರಾಭಿವೃದ್ಧಿ, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರು, ಬುಡಕಟ್ಟು ಕಲ್ಯಾಣ ಇಲಾಖೆಗಳ ಕಾರ್ಯದರ್ಶಿಗಳು. |

| ಪ್ರಾಧಿಕಾರ | ಜವಾಬ್ದಾರಿ |
|---|---|
| | • ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ.<br>• ಇಬ್ಬರು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು; ಮತ್ತು<br>• ಇಬ್ಬರು ಶಾಲಾ ಆಡಳಿತ ಮಂಡಳಿಯ ಪ್ರತಿನಿಧಿಗಳು<br><br>ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಮೂಲಕ ಸಭೆಯನ್ನು ಆಯೋಜಿಸುವುದು ಮತ್ತು ವರದಿಯನ್ನು ಮುಖ್ಯ ಕಾರ್ಯದರ್ಶಿಗಳು ಹಾಗೂ ಮುಖ್ಯಮಂತ್ರಿಗಳಿಗೆ ಸಲ್ಲಿಸುವುದು.<br>**ಅಪರಾಧಗಳ ಮಾಸಿಕ ಪರಿಶೀಲನೆ:**<br>ಮಕ್ಕಳ ಸುರಕ್ಷತಾ ಉಲ್ಲಂಘನೆ ಮತ್ತು ಹಲ್ಲೆಗೆ ಸಂಬಂಧಿಸಿದ ಪ್ರಕರಣಗಳು, ಕೈಗೊಂಡಿರುವ ಕ್ರಮ ಮತ್ತು ಅಗತ್ಯವಿರುವ ಅನುಪಾಲನೆಗಳನ್ನು ಪರಿಶೀಲಿಸಲು ಪೋಲೀಸ್ ವರಿಷ್ಠಾಧಿಕಾರಿ/ ಉಪ ಪೊಲೀಸ್ ಕಮೀಷನರ್/ ಪೊಲೀಸ್ ಕಮೀಷನರ್‌ರವರು ಪ್ರತಿ ತಿಂಗಳು ಅರ್ಧ ದಿನವನ್ನು ಪ್ರತ್ಯೇಕವಾಗಿ ಮೀಸಲಿಡುವುದು. |


ಒಂದು ವೇಳೆ ಅನುಪಾಲನೆಯಾಗದೇ ಇರುವುದು ಕಂಡುಬಂದಲ್ಲಿ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ವ್ಯಕ್ತಿಗಳು/ ಸಂಸ್ಥೆಗಳಿಗೆ ವರದಿ ಮಾಡುವುದು ಮತ್ತು ಅನ್ವಯವಾಗುವ ಕಾನೂನಿನಡಿ ಸೂಕ್ತ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸುವುದು. ಉಲ್ಲಂಘನೆಯ ಸ್ವರೂಪದ ತೀವ್ರತೆಗೆ ಅನುಗುಣವಾಗಿ ಮತ್ತು ಸೇವಾ ನಿಯಮಗಳನ್ನು ಗಮನಿಸಿ ದಂಢನೆಯನ್ನು ವಿಧಿಸಲಾಗುತ್ತದೆ. ಮಕ್ಕಳ ಸುರಕ್ಷತೆಯ ಉಲ್ಲಂಘನೆಯ ಘಟನೆಗಳಿಗೆ ಅಸಮರ್ಪಕ ಸ್ಪಂದನೆಯು ವ್ಯಕ್ತವಾದ ಸಂದರ್ಭಗಳಲ್ಲಿ, ತ್ವರಿತ ಮತ್ತು ಪರಿಣಾಮಕಾರಿ ಕ್ರಮಗಳಿಗಾಗಿ, ಸೂಕ್ತ ವ್ಯಕ್ತಿಗಳು/ವ್ಯವಸ್ಥೆಯ ಗಮನಕ್ಕೆ ತರುವುದು. ಇದಕ್ಕೂ ಸೂಕ್ತ ಪ್ರತಿಕ್ರಿಯೆ ದೊರೆಯದಿದ್ದಲ್ಲಿ, ಉಲ್ಲಂಘನೆಯ ಸ್ವರೂಪದ ತೀವ್ರತೆಗೆ ಅನುಗುಣವಾಗಿ ದಂಡನೆಯನ್ನು ಸಂಸ್ಥೆಯ ಸೇವಾ ನೀತಿ ಮತ್ತು ನಿಯಮಗಳು ಹಾಗೂ ಸಂಬಂಧಿಸಿದ ಕಾನೂನುಗಳನ್ವಯ ವಿಧಿಸಲಾಗುತ್ತದೆ.

---

[10] ಶೈಕ್ಷಣಿಕ ಬ್ಲಾಕ್ ಪಟ್ಟಿಗೆ ಸಿಪಿಐ ವೆಬ್ ಸೈಟ್ ನೋಡುವುದು

[11] ಕ.ರಾ.ಸ.ಮ.ರ. ಸೊಸೈಟಿಯಡಿಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು, ಡಿಸಿಪಿಯು, – ರಕ್ಷಣಾ ಅಧಿಕಾರಿ (ಸಾಂಸ್ಥಿಕ) ರಕ್ಷಣಾ ಅಧಿಕಾರಿ (ಅಸಾಂಸ್ಥಿಕ), ಲೀಗಲ್ ಕಂ ಪ್ರೋಬೇಷನ್ ಅಧಿಕಾರಿ

## ಶಾಲೆಗಳಲ್ಲಿ ಮಕ್ಕಳ ರಕ್ಷಣೆಗೆ ರಾಜ್ಯಮಟ್ಟದಿಂದ ಸ್ಥಳೀಯ ಹಂತದವರೆಗೆ ಸಂಯೋಜಿಸಲಾಗಿರುವ ಇಲಾಖೆಗಳ ರಚನೆಗಳು.



**ಪ್ರಮುಖ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳು ಹಾಗೂ ಅಂತರ್–ಸಂಸ್ಥೆಗಳ ನಡುವಿನ ಸಮನ್ವಯತೆ:**

ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಪ್ರಮುಖ ಇಲಾಖೆಗಳು ನಿರ್ವಹಿಸಬಹುದಾದ ಪಾತ್ರ ಮತ್ತು ಜವಾಬ್ದಾರಿಗಳು ಹಾಗೂ ಅಂತರ್–ಸಂಸ್ಥೆಗಳ ನಡುವಿನ ಸಮನ್ವಯತೆಯನ್ನು ಕೆಳಗಿನ ಕೋಷ್ಠಕದಲ್ಲಿ ವಿವರಿಸಲಾಗಿದೆ.

| ಇಲಾಖೆ | ಮಕ್ಕಳ ಮೇಲಿನ ಹಲ್ಲೆ ಮತ್ತು ಸುರಕ್ಷತೆಯ ಉಲ್ಲಂಘನೆಗಳಿಗೆ ಪ್ರತಿಕ್ರಿಯಾತ್ಮಕ ಕಾರ್ಯತಂತ್ರಗಳು | ನಿಯಂತ್ರಣ ಕಾರ್ಯತಂತ್ರಗಳು |
|---|---|---|
| 1. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | • ಮಕ್ಕಳ ವಿರುದ್ಧದ ಅಪರಾಧಗಳನ್ನು ಶಿಕ್ಷಣ ಇಲಾಖೆ/ಪೊಲೀಸ್/ಮಕ್ಕಳ ವಿಶೇಷ ಪೋಲಿಸ್ ಘಟಕ ಮತ್ತು ಅವಶ್ಯಕತೆಇದ್ದಲ್ಲಿ, ಮಕ್ಕಳ ಸಹಾಯವಾಣಿ ಮತ್ತು ಮಕ್ಕಳ ಕಲ್ಯಾಣ ಸಮಿತಿಗಳ ಸಹಯೋಗದೊಂದಿಗೆ ಕಾರ್ಯವಿಧಾನಗಳು ಮತ್ತು ಶಿಷ್ಟಾಚಾರಗಳಿಗನುಗುಣವಾಗಿ ಸೂಕ್ಷ್ಮವಾಗಿ ನಿರ್ವಹಿಸುವುದನ್ನು ಖಾತರಿಪಡಿಸಿಕೊಳ್ಳುವುದು.<br>• ಮಗು ಅಪರಾಧವನ್ನು ಎಸಗಿರುವ ಸಂದರ್ಭದಲ್ಲಿ, ಪೊಲೀಸ್/ಮಕ್ಕಳ ವಿಶೇಷ ಪೊಲೀಸ್ ಘಟಕ, ಬಾಲನ್ಯಾಯ ಮಂಡಳಿ ಮತ್ತು ಅವಶ್ಯಕತೆಇದ್ದಲ್ಲಿ ಮಕ್ಕಳ ಸಹಾಯ ವಾಣಿಯ ಸಹಯೋಗದೊಂದಿಗೆ ಅಪರಾಧವನ್ನು ಕಾರ್ಯವಿಧಾನಗಳು ಮತ್ತು ಶಿಷ್ಟಾಚಾರಗಳಿಗನುಗುಣವಾಗಿ ಸೂಕ್ಷ್ಮವಾಗಿ ನಿರ್ವಹಿಸುವುದು.<br>• ಅಪರಾಧಿಯು ತಾನೆ ಸ್ವಯಂ ಪ್ರೇರಿತನಾಗಿ (ಸುಮೋಟೋ) ಸಂಜ್ಞೇಯ ಅಪರಾಧ ಪ್ರಕರಣದಲ್ಲಿ, ಪ್ರಥಮ ತನಿಖಾ ವರದಿ ಮತ್ತು ತನಿಖಾ ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಪೊಲೀಸ್ ಇಲಾಖೆಯ ಸಮನ್ವಯತೆಯೊಂದಿಗೆ ಕಾರ್ಯನಿರ್ವಹಿಸುವುದು.<br>• ಆಘಾತದ ನಂತರದ ಮಗುವಿನ ಆರೈಕೆಯ ಸಂವೇಧನೆಯ ಕಾರ್ಯವಿಧಾನಗಳು ಮತ್ತು ಶಿಷ್ಟಚಾರಗಳನ್ನು ಅನುಸರಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• ಶಿಕ್ಷಣ ಇಲಾಖೆಯ ಸಮನ್ವಯತೆಯೊಂದಿಗೆ ಶಿಕ್ಷಣ ಸಂಸ್ಥೆಗಳು ದಾಖಲಾತಿಯ ವಿಧಾನಗಳು | • ಮಕ್ಕಳ ರಕ್ಷಣಾ ನೀತಿಯನ್ನು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇತರೆ ಪ್ರಮುಖ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶಗಳು, ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಹೊರಡಿಸುವುದು.<br>• ನೋಡಲ್ ಇಲಾಖೆಯಾಗಿ ಪ್ರಮುಖ ಇಲಾಖೆಗಳಾದ ಶಿಕ್ಷಣ ಮತ್ತು ಪೊಲೀಸ್ ಇಲಾಖೆಗಳು ಮಕ್ಕಳ ರಕ್ಷಣಾ ನೀತಿಯನ್ನು ಅನುಷ್ಠಾನಗೊಳಿಸುವುದನ್ನು ಖಚಿತಡಿಸುವುದು ಮತ್ತು ಅವಶ್ಯಕತೆನುಗುಣವಾಗಿ ಮಾರ್ಗಸೂಚಿಗಳನ್ನು ಹೊರಡಿಸುವುದು<br>• POCSO ಮತ್ತು ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆಯನ್ವಯ, ಪೋಲಿಸ್ ಇಲಾಖೆಯು ಸಂಬಂಧಿಸಿದ ಅಧಿಕಾರಿಗಳಾದ ಮಕ್ಕಳ ಕಲ್ಯಾಣ ಅಧಿಕಾರಿಗಳು, ಮಕ್ಕಳ ವಿಶೇಷ ಪೋಲಿಸ್ ಘಟಕ ಹಾಗೂ ತನಿಖಾಧಿಕಾರಿಗಳಿಗೆ ಮಾರ್ಗಸೂಚಿಗಳು ಮತ್ತು ತನಿಖಾ ಶಿಷ್ಟಾಚಾರಗಳನ್ನು ನೀಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• POCSO, ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ಮತ್ತು ಸಂಬಂಧಿಸಿದ ಕಾನೂನುಗಳನ್ವಯ ಆಘಾತದ ನಂತರದ ಮಗುವಿನ ಆರೈಕೆಯ ಸಂವೇಧನಾ ಕಾರ್ಯವಿಧಾನಗಳು ಮತ್ತು ಶಿಷ್ಟಾಚಾರಗಳನ್ನು ಮಕ್ಕಳ ಮೇಲಿನ ಲೈಂಗಿಕ ಹಲ್ಲೆ ಪ್ರಕರಣಗಳ ನಿರ್ವಹಣೆ ವ್ಯವಸ್ಥೆಯು ಸಿದ್ಧವಿರುವುದನ್ನು |

| | | |
|---|---|---|
| | ಮತ್ತು ಕಾರ್ಯವಿಧಾನಗಳನ್ನು ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಮಕ್ಕಳ ಕಲ್ಯಾಣ ಸಮಿತಿಗಳು ಮತ್ತು ಬಾಲನ್ಯಾಯ ಮಂಡಳಿಗಳ ಮೂಲಕ ಬಲಿಪಶುವಾಗಿರುವ ಮಗು ಮತ್ತು ಅವನ/ಳ ಕುಟುಂಬಕ್ಕೆ ಸಮಯಕ್ಕೆ ಸರಿಯಾಗಿ ಆರ್ಥಿಕ ಪರಿಹಾರ ಮತ್ತು ಸೂಕ್ತ ಪುನರ್ವಸತಿ ವ್ಯವಸ್ಥೆಯನ್ನು ಕಲ್ಪಿಸುವುದು.<br>• ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು.<br>• ತಪ್ಪುಎಸಗಿರುವ ಸಿಬ್ಬಂದಿಯ ವಿರುದ್ದ ಅಥವಾ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯನಿರ್ವಾಹಕರು ಮತ್ತು ಶಾಸನಬದ್ದ ಮಂಡಳಿಗಳ ಸದಸ್ಯರ ವಿರುದ್ದ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳನ್ವಯ ಸೂಕ್ತ ಕ್ರಮ ಜರುಗಿಸುವುದು.<br>• ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಪ್ರತಿ ತಿಂಗಳೂ ವರದಿಮಾಡುವುದು ಮತ್ತು ಅನುಸರಣೆ ಮತ್ತು ಪರಿಶೀಲನೆಗಾಗಿ ಪೋಲೀಸ್ ಮತ್ತು ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವುದು.<br>• ಪ್ರತಿಕ್ರಿಯಾತ್ಮಕ ಕಾರ್ಯವಿಧಾನಗಳು ಮತ್ತು ಶಿಷ್ಟಾಚಾರಗಳನ್ನು ಅನುಸರಿಸಿರುವ ಬಗ್ಗೆ ಆಗಿಂದಾಗ್ಗೆ ಸಂಬಂಧಿಸಿದ ಇಲಾಖೆಗಳೊಂದಿಗೆ ಪರಿಶೀಲಿಸುವುದು. ಅಗತ್ಯಕ್ಕೆ ತಕ್ಕಂತೆ ಮಧ್ಯಂತರ ತಿದ್ದುಪಡಿಗಳನ್ನು ಮಾಡುವುದು ಹಾಗೂ ಪ್ರಕರಣಗಳ ತ್ವರಿತ ವಿಲೇವಾರಿ ಮಾಡುವುದರೊಂದಿಗೆ ಆಘಾತಗಳು ಮತ್ತು ಮಗು ಬಲಿಪಶುವಾಗುವುದನ್ನು ತಡೆಯುವುದು. | ಖಚಿತಪಡಿಸಿಕೊಳ್ಳುವುದುದ. ಸಂಬಂಧಿಸಿದ ಅಧಿಕಾರಿಗಳಾದ ಮಕ್ಕಳ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ, ಆಪ್ತಸಮಾಲೋಚಕರು ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಮಾರ್ಗಸೂಚಿಗಳನ್ನು ನೀಡುವುದು.<br>• ಮಕ್ಕಳ ಸೂಕ್ಷ್ಮ ಸಂವೇದನಾ ಪ್ರಕರಣಗಳನ್ನು ನಿರ್ವಹಿಸುವಾಗ, ದಂಡಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ, ಸಾರ್ವಜನಿಕ ಅಭಿಯೋಜಕರ ವ್ಯವಸ್ಥೆ ನ್ಯಾಯಾಂಗದ ಸಹಯೋಗದೊಂದಿಗೆ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವುದು.<br>• ಬಾಲನ್ಯಾಯ ವ್ಯವಸ್ಥೆ ಮತ್ತು ICPS ನಲ್ಲಿ ಬರುವ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೋಲಿಸ್ ಘಟಕ, ಮಕ್ಕಳ ಸಹಾಯ ವಾಣಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಸ್ವಯಂಸೇವಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಸಾಮರ್ಥ್ಯ ಅಭಿವೃದ್ಧಿಪಡಿಸುವುದು.<br>• ಪ್ರಮುಖ ಇಲಾಖೆಗಳಾದ ಪೋಲೀಸ್, ಶಿಕ್ಷಣ ಮತ್ತು ನ್ಯಾಯಾಂಗದ ಸಿಬ್ಬಂದಿಗಳಿಗೆ ಮಕ್ಕಳ ರಕ್ಷಣೆ ಮತ್ತು ಉಲ್ಲಂಘನಾ ಪ್ರಕರಣಗಳಿಗೆ ಪ್ರತಿಕ್ರಿಯಿಸುವ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ಅವರ ಸಾಮರ್ಥ್ಯಾಭಿವೃದ್ಧಿಗೊಳಿಸುವುದು.<br>• ಅವಶ್ಯವಿರುವ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಸಂಬಂಧಿಸಿದ ಇಲಾಖೆಗಳ ಜಂಟಿ ಸಹಭಾಗಿತ್ವದೊಂದಿಗೆ ಅಭಿವೃದ್ಧಿಪಡಿಸುವುದು ಮತ್ತು ವಿಶೇಷವಾಗಿ ಮಕ್ಕಳಿರುವೆಡೆ ವ್ಯಾಪಕವಾಗಿ ಪ್ರದರ್ಶಿಸುವುದು.<br>• ಪರಿಸ್ಥಿತಿಗಳ ನಿರಂತರ ಪರಿಶೀಲನೆ ಮತ್ತು ಕುಂದುಕೊರತೆಗಳ ನಿವಾರಣೆಗಾಗಿ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಅಡಿಯಲ್ಲಿ ವಿವಿಧ ಇಲಾಖೆಗಳು ಸಹಯೋಗದೊಂದಿಗೆ ಕಾರ್ಯನಿರ್ವಹಿಸುವುದು. |

| | | |
|---|---|---|
| | | • ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಅನುಷ್ಠಾನದ ಬಗ್ಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ವಾರ್ಷಿಕ ಪರಿಶೀಲನೆಯನ್ನು ಆಯೋಜಿಸುವುದು ಮತ್ತು ಪ್ರತಿ 3 ವರ್ಷಗಳಿಗೊಮ್ಮೆ ನೀತಿಯನ್ನು ಪರಿಶೀಲಿಸುವುದು.<br>• ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯ ಸೇವಾ ನಿಯಮಗಳಿಗೆ ತಿದ್ದುಪಡಿ ಮಾಡಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು. |
| 2. ಶಿಕ್ಷಣ ಇಲಾಖೆ | • ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ಸಮಿತಿಯು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗಧಿಪಡಿಸಿರುವಂತೆ ತ್ವರಿತವಾಗಿ ಕ್ರಮ ಕೈಗೊಳುವುದು ಮತ್ತು ಅವಶ್ಯವಿರುವ ಭಾಗೀದಾರರಿಗೆ ತಿಳಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.<br>• ಸಂಜ್ಞಾತ್ಮಕ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆ ಅಥವಾ ಪೋಷಕರು/ಪಾಲಕರು ಪ್ರಥಮ ತನಿಖಾ ವರದಿ ದಾಖಲಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಶಾಲೆಯಲ್ಲಿನ ಮಕ್ಕಳ ರಕ್ಷಣಾ ಸಮಿತಿಯು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ತಿಳಿಸಿರುವ ಕಾರ್ಯವಿಧಾನಗಳು ಮತ್ತು ಮಾರ್ಗಸೂಚಿಗಳನ್ವಯ ತನಿಖೆ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು.<br>• ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು. | • ಶಿಕ್ಷಣ ಇಲಾಖೆ ಮತ್ತು ಶಿಕ್ಷಣ ಸಂಸ್ಥೆಗಳ ಮೂಲಕ ಮಕ್ಕಳ ರಕ್ಷಣಾ ನೀತಿಯನ್ನು ಜಾರಿಗೊಳಿಸಲು ಸರ್ಕಾರಿ ಆದೇಶಗಳು / ಅಧಿಸೂಚನೆಗಳನ್ನು ಹೊರಡಿಸುವುದು.<br>• ಮಕ್ಕಳ ಸುರಕ್ಷತಾ ಕಾರ್ಯತಂತ್ರದ ವ್ಯವಸ್ಥೆಯನ್ನು ಇಲಾಖೆಯೊಳಗಿನ ಎಲ್ಲಾ ಹಂತಗಳಲ್ಲಿ ಅಂದರೆ ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಬ್ಲಾಕ್ ಹಾಗೂ ಕ್ಲಸ್ಟರ್ ಹಂತಗಳಲ್ಲಿ ಕಾರ್ಯಾಚರಣೆಗೊಳ್ಳುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಪ್ರತಿಯೊಂದು ಶಿಕ್ಷಣ ಸಂಸ್ಥೆ, ಶಿಕ್ಷಣ ಸಂಸ್ಥೆಗಳಿಗಾಗಿ ಅಧಿಸೂಚಿಸಿರುವ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ, ಕಾರ್ಯಚರಣೆಯ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳನ್ವಯ ತನ್ನದೇ ಆದ ಮಕ್ಕಳ ರಕ್ಷಣಾ ನೀತಿಯನ್ನು ಹೊಂದಿರುವುದನ್ನು ಖಾತರಿಪಡಿಸುವುದು.<br>• ಸರ್ಕಾರಿ ಮತ್ತು ಸರ್ಕಾರೇತರ ಶಿಕ್ಷಣ ಸಂಸ್ಥೆಗಳಲ್ಲಿ ತ್ವರಿತ ಲಭ್ಯತೆ ಮತ್ತು ಸಂಪರ್ಕಕ್ಕಾಗಿ ಆಂತರಿಕ ಮೊಬೈಲ್ ಲಿಂಕ್ ವ್ಯವಸ್ಥೆಯನ್ನು ಕಲ್ಪಿಸುವುದು. |

| | | |
|---|---|---|
| | • ಶಿಕ್ಷಣ ಸಂಸ್ಥೆಗಳು ಸರಿಪಡಿಸಿ, ನಿವಾರಿಸುವ ಮತ್ತು ಇತರೆ ಪುನರ್‌ವಸತಿ ಮತ್ತು ಪುನರ್‌ಸಂಯೋಜನಾ ಕ್ರಮಗಳ ಅನುಷ್ಠಾನದ ಅನುಸರಣೆ.<br>• ಸುಧಾರಣಾ ಕ್ರಮಗಳನ್ನು ತರಲು ಎಲ್ಲಾ ಹಂತಗಳಲ್ಲಿ ಮಾಸಿಕ ವರದಿ ಮಾಡುವುದು ಮತ್ತು ಇಲಾಖೆಯು ಅದನ್ನು ಪರಿಶೀಲಿಸುವುದು.<br>• ನಿಯಮಗಳನ್ನು ಉಲ್ಲಂಘಿಸಿ ಮತ್ತು ಕಾನೂನನ್ನು ಗಾಳಿಗೆ ತೂರಿದಲ್ಲಿ ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ, ಅಂತಹ ಶಿಕ್ಷಣ ಸಂಸ್ಥೆಗಳ ಪರವಾನಗಿಯನ್ನು ಕಾನೂನು ಪ್ರಕಾರ ರದ್ದುಗೊಳಿಸುವುದು/ ಅಮಾನ್ಯ ಮಾಡುವುದು.<br>• ಹೊರಗುತ್ತಿಗೆ ಸಂಸ್ಥೆಗಳು ಕಾನೂನನ್ನು ಉಲ್ಲಂಘಿಸಿರುವುದು, ಗಾಳಿಗೆ ತೂರಿರುವುದು, ಕಾರ್ಯವಿಧಾನಗಳು ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ ಅವರ ಪರವಾನಗಿಯನ್ನು ರದ್ದುಪಡಿಸಲು/ ಅಮಾನ್ಯಮಾಡಲು ಶಿಫಾರಸ್ಸು ಮಾಡುವುದು.<br>• ತಪ್ಪನ್ನು ಎಸಗಿರುವ ಸಿಬ್ಬಂದಿ ಅಥವಾ ಇಲಾಖೆಯ ಕಾರ್ಯನಿರ್ವಾಹಕರು ಮತ್ತು ಶಾಸನಾತ್ಮಕ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳ ಅನ್ವಯ ಕ್ರಮ ಜರುಗಿಸುವುದು. | • ಮಕ್ಕಳ ಸಹಾಯವಾಣಿ ಸೌಲಭ್ಯ ಇಲ್ಲದೇ ಇರುವ ಜಿಲ್ಲೆಗಳಲ್ಲಿ ಹಾಟ್‌ಲೈನ್/ ಸಹಾಯವಾಣಿ ವ್ಯವಸ್ಥೆಯನ್ನು ಕಲ್ಪಿಸುವುದು.<br>• ಮಕ್ಕಳ ರಕ್ಷಣೆಗಾಗಿ ರಕ್ಷಣಾ ನೀತಿಯಲ್ಲಿರುವ ಅವಕಾಶಗಳು, ಸೂಕ್ತ ಕಾರ್ಯತಂತ್ರಗಳು ಮತ್ತು ಇತರ ಅಂಶಗಳನ್ನು ಸೇರ್ಪಡೆಗೊಳಿಸಲು ವಾರ್ಷಿಕ ಯೋಜನೆಯನ್ನು ಹಾಕಿಕೊಳ್ಳುವುದು.<br>• ನಾಗರೀಕ ಸಮಾಜದ ಸಂಘ ಸಂಸ್ಥೆಗಳನ್ನು ತೊಡಗಿಸಿಕೊಂಡು ತರಬೇತಿ ಸಾಮಗ್ರಿಗಳನ್ನು ಸಿದ್ಧಪಡಿಸಿ ಎಲ್ಲಾ ಸಿಬ್ಬಂದಿಗಳು, ಶಿಕ್ಷಣ ಸಂಸ್ಥೆಗಳು ಮತ್ತು ಭಾಗೀದಾರರಿಗೆ ಅವಶ್ಯವಿರುವ ತರಬೇತಿಯನ್ನು ನೀಡುವ ಮೂಲಕ ಅವರ ಸಾಮರ್ಥ್ಯ ವೃದ್ಧಿಸುವುದನ್ನು ಖಚಿತಪಡಿಸಿಕೊಳ್ಳುವುದು.<br>• ವೈಯಕ್ತಿಕ ಸುರಕ್ಷತೆ ಮತ್ತು ಆರೋಗ್ಯ ಶಿಕ್ಷಣವನ್ನು ಮಕ್ಕಳ ವಯಸ್ಸು ಮತ್ತು ತರಗತಿಗೆ ಅನುಗುಣವಾಗಿ ಪಠ್ಯದಲ್ಲಿ ಸೇರಿಸುವುದು.<br>• ಶಾಲಾ ನಿರ್ವಹಣಾ ಸಮಿತಿಯ ಬೈಲಾವನ್ನು ಪರಿಶೀಲಿಸುವ ಮೂಲಕ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಅಂಶಗಳು ಮತ್ತು ಶಿಕ್ಷಣ ಸಂಸ್ಥೆಯ ಕಾರ್ಯಚರಣೆಯ ಮಾರ್ಗಸೂಚಿಗಳು ಹಾಗೂ ಕಾರ್ಯವಿಧಾನಗಳನ್ನು ಅದರಲ್ಲಿ ಸೇರಿಸುವುದು.<br>• ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ಜಂಟಿಯಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಮಕ್ಕಳು ಹೆಚ್ಚಾಗಿರುವ ಎಲ್ಲಾ ಸ್ಥಳಗಳಲ್ಲಿ ವ್ಯಾಪಕವಾಗಿ ಪ್ರಚಾರ ಮಾಡುವುದು.<br>• ಶಿಕ್ಷಕರ ಶಿಕ್ಷಣ ಕೋರ್ಸ್‌ಗಳಾದ TCH, Bed & D.Ed ಗಳಲ್ಲಿ ಮಕ್ಕಳ ರಕ್ಷಣೆ, ಸಕಾರಾತ್ಮಕ ಶಿಸ್ತಿನ ಕ್ರಮಗಳು, ಮಕ್ಕಳ ಕಾನೂನುಗಳು ಮುಂತಾದ ವಿಷಯಗಳನ್ನು ಸೇರಿಸುವುದು. |

| | | |
|---|---|---|
| | | • ಶಿಕ್ಷಕರ ನೇಮಕಾತಿ ಮತ್ತು ಸೇವೆಯಲ್ಲಿರುವ ಶಿಕ್ಷಕರಿಗೆ ಬಡ್ತಿ ನೀಡುವ ಅರ್ಹತಾ ಪರೀಕ್ಷೆಗಳಲ್ಲಿ, ಮಕ್ಕಳ ರಕ್ಷಣೆ ಮತ್ತು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಶಿಕ್ಷಣ ಸಂಸ್ಥೆಗಳು, ಮಗುವಿನ ಸುರಕ್ಷತೆಯ ಉಲ್ಲಂಘನೆ ಸೇರಿದಂತೆ ಮಗುವಿನ ಮೇಲಿನ ಹಲ್ಲೆಗಳ ಬಗ್ಗೆ ಶಾಲಾ ನಿರ್ವಹಣಾ ಸಮಿತಿ ಮತ್ತು ಪೋಷಕರು–ಶಿಕ್ಷಕರ ಸಂಘದ ಎಲ್ಲಾ ಸದಸ್ಯರಿಗೆ ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ತರಬೇತಿಯನ್ನು ಆಯೋಜಿಸುವುದು.<br>• ಮಕ್ಕಳ ಭಾಗವಹಿಸುವಿಕೆ ವೇದಿಕೆಗಳಾದ ಮಕ್ಕಳ ಹಕ್ಕುಗಳ ಕ್ಲಬ್‌ಗಳು, ಮಕ್ಕಳ ಗ್ರಾಮ ಸಭೆ ಮುಂತಾದವುಗಳನ್ನು ರಚಿಸುವುದು ಮತ್ತು ಅವುಗಳನ್ನು ಬಲಗೊಳಿಸುವುದು.<br>• DSERT, DIET (ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ) ಮುಂತಾದವುಗಳು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ ಕುರಿತು ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು ಮತ್ತು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಿಗೆ ನಿರಂತರ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದು ಮತ್ತು ರಾಜ್ಯಾದ್ಯಂತ ಸಕಾರಾತ್ಮಕವಾಗಿ ಇದನ್ನು ನಿರ್ವಹಿಸುವುದು. ಬ್ಲಾಕ್ ಸಂಪನ್ಮೂಲ ಕೇಂದ್ರಗಳು/ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು ಮತ್ತು ಇತರೆ ಇಲಾಖೆಗಳ ತರಬೇತಿ ಸಂಸ್ಥೆಗಳು ಖಾಸಗಿ ಶಾಲೆಗಳ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡುವುದು ಮತ್ತು ತರಬೇತಿಗೆ ಶುಲ್ಕವನ್ನು ವಿಧಿಸುವುದು.<br>• ಮಕ್ಕಳ ರಕ್ಷಣೆಯನ್ನು ಬೆಂಬಲಿಸುವ ಶಿಕ್ಷಕರನ್ನು ಬಹುಮಾನ ಮತ್ತು ಇನ್‌ಸೆಂಟೀವ್ಸ್‌ಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸುವುದು. |
| 3. ಪೊಲೀಸ್ ಇಲಾಖೆ | • ಬಾಲನ್ಯಾಯ ಕಾಯ್ದೆ, POCSO, ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಮತ್ತು | • ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತೆಯ ಉಲ್ಲಂಘನೆಗಳ ತನಿಖೆ ಮತ್ತು |

| | | |
|---|---|---|
| | ಅನ್ವಯವಾಗುವ ಇತರ ಕಾನೂನುಗಳಡಿ ತಿಳಿಸಿರುವ ಶಿಷ್ಟಾಚಾರಗಳು ಮತ್ತು ಕಾರ್ಯವಿಧಾನಗಳಂತೆ ಪೊಲೀಸ್/ಮಕ್ಕಳ ವಿಶೇಷ ಪೊಲೀಸ್ ಘಟಕಗಳು ಸ್ಪಂದಿಸುವುದನ್ನು ಮತ್ತು ತನಿಖೆಯನ್ನು ತ್ವರಿತವಾಗಿ ನಡೆಸುವುದನ್ನು ಖಾತರಿಪಡಿಸಿಕೊಳ್ಳುವುದು. ಒಟ್ಟಾರೆ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಮತ್ತು ಮಗುವಿನ ಉತ್ತಮ ಹಿತಾಸಕ್ತಿ ತತ್ವಗಳನ್ವಯ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವುದು.<br>• ಪ್ರತಿಯೊಂದು ಅಪರಾದ ಪ್ರಕರಣದಲ್ಲಿ, ಪ್ರಥಮ ತನಿಖಾ ವರದಿ (FIR) ಯನ್ನು ಕೂಡಲೇ ನೋಂದಾಯಿಸುವುದು. ಒಂದು ವೇಳೆ ಮಗು ಅಪರಾಧವನ್ನು ಎಸಗಿರುವನೆಂದು ಆರೋಪವಿದ್ದಲ್ಲಿ, ಆ ಮಗುವನ್ನು ಬಾಲ ನ್ಯಾಯ ಮಂಡಳಿಯ ಮಂದೆ ಹಾಜರುಪಡಿಸುವುದು.<br>• ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದ ಪ್ರಾಧಿಕಾರಗಳು ಅಥವಾ ಇಲಾಖೆಗಳಿಗೆ ವರದಿಯನ್ನು ದಾಖಲಿಸುವುದು.<br>• ಮ್ಯಾಜಿಸ್ಟ್ರೇಟರ್ ಮುಂದೆ ನೀಡಿರುವ ಅಡಿPC ಕಲಂ 161 ರ ಹೇಳಿಕೆ ಮತ್ತು ಕಲಂ 164 ರ ಹೇಳಿಕೆಯನ್ನು ಖಚಿತಪಡಿಸಿಕೊಳ್ಳುವುದು.<br>• ಸಂಬಂಧಿಸಿದ ಎಲ್ಲಾ ವ್ಯಕ್ತಿಗಳ ಸಹಯೋಗದೊಂದಿಗೆ ಕಾನೂನಿನ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲಾ ಮಾಹಿತಿ, ಸಾಕ್ಷಿಗಳು ಮತ್ತು ದಾಖಲೆಗಳು ಲಭ್ಯವಾಗಿರುವ ಬಗ್ಗೆ ಖಾತರಿಪಡಿಸುವುದು.<br>• ತ್ವರಿತ ನ್ಯಾಯದಾನಕ್ಕೆ 60 ದಿನಗಳ ಒಳಗೆ ಆರೋಪ ಪಟ್ಟಿಯನ್ನು ಸಲ್ಲಿಸುವುದು.<br>• ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು.<br>• ನಿಗಧಿಪಡಿಸಿರುವ ಸುರಕ್ಷತಾ ಕ್ರಮಗಳಿಗೆ ಶಿಕ್ಷಣ ಸಂಸ್ಥೆಯು ಬದ್ಧವಾಗಿರುವ ಬಗ್ಗೆ ಅನುಸರಣೆಯನ್ನು ಕೈಗೊಳ್ಳುವುದು. | ನಿಯಂತ್ರಣಕ್ಕೆ ಮಕ್ಕಳ ಸಂವೇದನಾ ಕಾರ್ಯತಂತ್ರವನ್ನು ಅಳವಡಿಸಲು ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳನ್ನು ಹೊರಡಿಸುವುದು.<br>• ಕೋರಿಕೆಯ ಮೇರೆಗೆ ಶಿಕ್ಷಣ ಸಂಸ್ಥೆಗಳು ನೇಮಿಸಿರುವ ವ್ಯಕ್ತಿಗಳ ಪೂರ್ವಾಪರತೆಗಳನ್ನು ಪರಿಶೀಲಿಸುವ ವ್ಯವಸ್ಥೆಯನ್ನು ಕಲ್ಪಿಸುವುದು.<br>• ಮಕ್ಕಳ ಸುರಕ್ಷತಾ ಉಲ್ಲಂಘನೆ ಸೇರಿದಂತೆ ಮಕ್ಕಳ ಮೇಲಿನ ಹಲ್ಲೆ, ಸಂವೇದನಾ ಕಾರ್ಯನಿಧಾನಗಳು, ಶಿಷ್ಟಾಚಾರಗಳು ಮತ್ತು ಮಾರ್ಗಸೂಚಿಗಳು ಹಾಗೂ ಅಭಿವೃದ್ಧಿಪಡಿಸಲಾದ ತರಬೇತಿ ಸಾಮಗ್ರಿಗಳ ಬಗ್ಗೆ ನಿರ್ದಿಷ್ಟವಾಗಿ ಪೊಲೀಸ್ ಸಿಬ್ಬಂದಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದು.<br>• ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ಜಂಟಿಯಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಪೋಲೀಸ್ ಠಾಣೆಗಳು ಮತ್ತು ಸಮುದಾಯದಲ್ಲಿ ವ್ಯಾಪಕವಾಗಿ ಪ್ರಚಾರ ಮಾಡುವುದು.<br>• ನಿಲುವಳಿ ಆದೇಶ 920ರ ಅನುಷ್ಠಾನ – ಸಮುದಾಯವನ್ನು ತಲುಪುವ (ಔಟ್‌ರೀಚ್) ಕಾರ್ಯಕ್ರಮಗಳು.<br>• ತೆರೆದಮನೆ:– ಕಾರ್ಯಕ್ರಮವನ್ನು ಅಪರಾಧ ಮತ್ತು ಹಿಂಸೆಯನ್ನು ತಡೆಯುವ ಸಲುವಾಗಿ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಪೋಲೀಸರು ಮತ್ತು ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳ ನಡುವೆ ಸಂವಾದವನ್ನು ಆಯೋಜಿಸುವದು.<br>• ಮಹಿಳೆ ಮತ್ತು ಮಕ್ಕಳ ವಿರುದ್ಧದ ಅಪರಾದಗಳ ನಿಯಂತ್ರಣಕ್ಕೆ ಮೊಹಲ್ಲ/ಸಮುದಾಯ ಸಭೆಗಳನ್ನು ಆಯೋಜಿಸುವುದು. |

| | | |
|---|---|---|
| | • ಶಿಕ್ಷಣ ಸಂಸ್ಥೆಗಳು ಭೌತಿಕವಾಗಿ ಮುಚ್ಚಿದ್ದಲ್ಲಿ, ಅವುಗಳ ಮಾನ್ಯತೆ ಅಥವಾ ಪರವಾನಗಿಯನ್ನು ರದ್ದುಪಡಿಸುವುದು. | |
| 4.ಕರ್ನಾಟಕ ನ್ಯಾಯಾಂಗ ಸೇವೆಗಳ ಪ್ರಾಧಿಕಾರ | • ಬಲಿಪಶುವಾಗಿರುವ ಮಗುವಿಗೆ ಅಗತ್ಯವಿರುವ ಕಾನೂನು ಸೇವೆಗಳನ್ನು ಒದಗಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಪರಿಹಾರ ವಿತರಣೆಗೆ ಮಧ್ಯಂತರ ಮತ್ತು ಅಂತಿಮ ಆದೇಶಗಳನ್ನು ಹೊರಡಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. | • POCSO ಕಾಯ್ದೆ, ಬಾಲ ನ್ಯಾಯ ಕಾಯ್ದೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ವಿಶೇಷ ನ್ಯಾಯಾಲಯದ ದಂಡಾಧಿಕಾರಿ ಮತ್ತು ನ್ಯಾಯಾಂಗದ ಸಿಬ್ಬಂದಿಗಳಿಗೆ ಜಾಗೃತಿಯನ್ನು ಮೂಡಿಸುವುದು.<br>• ವಿಶೇಷ ಸಾರ್ವಜನಿಕ ಅಭಿಯೋಜಕರುಗಳಿಗೆ POCSO ಕಾಯ್ದೆ, ಬಾಲ ನ್ಯಾಯ ಕಾಯ್ದೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಕೈಪಿಡಿಯನ್ನು ಅಭಿವೃದ್ಧಿಪಡಿಸುವುದು.<br>• DLSA ಗಳ ಮೂಲಕ ಜಿಲ್ಲಾ ಮಟ್ಟದ ಪ್ರಮುಖ ಕಾರ್ಯನಿರ್ವಾಹಕರುಗಳಿಗೆ POCSO ಕಾಯ್ದೆ, ಬಾಲ ನ್ಯಾಯ ಕಾಯ್ದೆ ಮತ್ತು ಅನುಸರಿಸಬೇಕಾಗಿರುವ ಕಾರ್ಯವಿಧಾನಗಳ ಬಗ್ಗೆ ಜಾಗೃತಿ ಮೂಡಿಸುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ನೆರವಿನೊಂದಿಗೆ ಸಾಮಾನ್ಯ ಅರಿವು ಕಾರ್ಯಕ್ರಮಗಳನ್ನು ನಿರ್ವಹಿಸುವುದು.<br>• POCSO ಕಾಯ್ದೆ, ಬಾಲ ನ್ಯಾಯ ಕಾಯ್ದೆ ಮತ್ತು ಇತರೆ ಕಾನೂನುಗಳ ಬಗ್ಗೆ ಅರ್ಥೈಸಿಕೊಳ್ಳಲು ಮತ್ತು ಜಾರಿಗೊಳಿಸುವಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ವೈದ್ಯಕೀಯ ವಿಧಿ ವಿಜ್ಞಾನ ಹಾಗೂ ತನಿಖಾ ತಜ್ಞರು, ಪ್ರಾಸಿಕ್ಯೂಷನ್ ನಿರ್ದೇಶಕರು, ಪೋಲೀಸ್, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಶಿಕ್ಷಣ ಇಲಾಖೆ ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಾಗರೀಕ ಸಮಾಜ ಸಂಸ್ಥೆಗಳ ಸಹಯೋಗದೊಂದಿಗೆ ವಿಚಾರ ಸಂಕೀರ್ಣಗಳನ್ನು ಆಯೋಜಿಸುವುದು.<br>• ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳು, ಇತರೆ ಹಲ್ಲೆಗಳು ಮತ್ತು ಶಿಕ್ಷಣ |

| | | |
|---|---|---|
| | | ಸಂಸ್ಥೆಗಳಲ್ಲಿನ ಸುರಕ್ಷತಾ ಉಲ್ಲಂಘನೆಗೊಳಗಾಗಿ ಬಲಿಪಶುವಾಗಿರುವ ಮಗುವಿಗೆ ಕಾನೂನು ನೆರವು ನೀಡುವುದು<br>• ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ, ಕಾನೂನಿನ ಪ್ರಕರಣಗಳ ಪ್ರಕಟಣೆ, ಐತಿಹಾಸಿಕ ತೀರ್ಪುಗಳು, ಉತ್ತಮ ಅಭ್ಯಾಸಗಳನ್ನು ಪ್ರಕಟಿಸುವ ಮೂಲಕ ಕಾನೂನು ಜಾಗೃತಿ ಮೂಡಿಸುವುದು. |
| 5. ಪಂಚಾಯತ್ ರಾಜ್ ಸಂಸ್ಥೆಗಳು (ಗ್ರಾಮ ಪಂಚಾಯತಿಗಳು ಮತ್ತು ವಾರ್ಡ್‌ಗಳು ಸೇರಿದಂತೆ | • ಸಂಬಂಧಿಸಿದ ಪ್ರಾಧಿಕಾರ/ ವ್ಯಕ್ತಿಗಳು, ಅಗತ್ಯವಿರುವೆಡೆ ಪ್ರಥಮ ತನಿಖಾ ವರದಿ (FIR)ಯನ್ನು ನೊಂದಾಯಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• ತನಿಖೆ ನಡೆಸುವ ಪ್ರಾಧಿಕಾರಿಗಳಿಗೆ ಸಹಕಾರ ನೀಡುವುದನ್ನು ಖಾತ್ರಿಪಡಿಸಿಕೊಳ್ಳುವುದು ಮತ್ತು ರಾಜಕೀಯ ಹಸ್ತಕ್ಷೇಪದಿಂದ ತನಿಖೆಗೆ ಅಡ್ಡಿಯಾಗದಂತೆ ಎಚ್ಚರ ವಹಿಸುವುದು.<br>• ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಶಿಕ್ಷಣ ಇಲಾಖೆಯ ಸಿಬ್ಬಂದಿಯ ನೆರವಿನೊಂದಿಗೆ ಶಾಲೆಗಳಲ್ಲಿನ ಸುರಕ್ಷತಾ ಉಲ್ಲಂಘನೆಗಳ ವಿರುದ್ಧ ಅಗತ್ಯಕ್ರಮಗಳನ್ನು ಕೈಗೊಳ್ಳುವುದು.<br>• ಸರ್ಕಾರದ ಶಿಕ್ಷಣ ಸಂಸ್ಥೆಗಳಲ್ಲಿ ಸುರಕ್ಷತೆಯ ಉಲ್ಲಂಘನೆಯಾದಲ್ಲಿ, ಸಂಪನ್ಮೂಲದ ಹಂಚಿಕೆ ಮತ್ತು ಅನುಪಾಲನೆ ವ್ಯವಸ್ಥೆಯ ಲಭ್ಯತೆ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು.<br>• ಪೋಲೀಸ್ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಮಗುವಿನ ಮೇಲಿನ ಲೈಂಗಿಕ ಹಲ್ಲೆ ಪ್ರಕರಣಗಳು ಮತ್ತು ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಲು ನೆರವು ನೀಡುವುದು. | • ಪಂಚಾಯತ್‌ರಾಜ್ ಸಂಸ್ಥೆಗಳು, ವಾರ್ಡ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಮಕ್ಕಳ ರಕ್ಷಣೆ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ, ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ನೀಡುವುದು ಮತ್ತು ಸಂಪನ್ಮೂಲ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಎಲ್ಲಾ ಸದಸ್ಯರಿಗೆ ಮಾಹಿತಿಯನ್ನು ನೀಡುವುದು.<br>• ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿ, ವಾರ್ಡ್, ಪಂಚಾಯ್ತಿ, ನಗರ ಸ್ಥಳೀಯ ಸಂಸ್ಥೆಯ ಕಛೇರಿಗಳಲ್ಲಿ ವ್ಯಾಪಕವಾಗಿ ಪ್ರಕಟಿಸುವುದು.<br>• ಶಾಲಾ ನಿರ್ವಹಣಾ ಸಮಿತಿಗಳ ಸಹಕಾರದೊಂದಿಗೆ ಸುರಕ್ಷತಾ ಕ್ರಮಗಳು ಕಾರ್ಯಾಚರಣೆಗೊಳ್ಳುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• ಮಕ್ಕಳ ಸಂರಕ್ಷಣೆ, ಮತ್ತು ಇತರೆ ಸಮಸ್ಯೆಗಳಾದ ಮಕ್ಕಳ ವಿರುದ್ಧದ ಅಪರಾಧಗಳಂತಹ ವಿಷಯಗಳನ್ನು ಉಪಗ್ರಹ ಆಧಾರಿತ ತರಬೇತಿಗಳ ಭಾಗವಾಗಿ ಸೇರ್ಪಡೆಗೊಳಿಸುವುದು ಮತ್ತು ಪರಿಶೀಲನೆ ನಡೆಸುವುದು. |
| 6.ಸಮಾಜ ಕಲ್ಯಾಣ, ಬುಡಕಟ್ಟು, | • ಸಮಾಜ ಕಲ್ಯಾಣ, ಬುಡಕಟ್ಟು ಅಭಿವೃದ್ಧಿ ಮತ್ತು ಹಿಂದುಳಿದ ವರ್ಗಗಳ ಹಾಗೂ | • ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಶಿಕ್ಷಣ ಸಂಸ್ಥೆಗಳು ಮತ್ತು ಕರ್ನಾಟಕ |

| | | |
|---|---|---|
| ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ, | ಅಲ್ಪಸಂಖ್ಯಾತರ ಇಲಾಖೆಗಳ ಅಧೀನದಲ್ಲಿ ಬರುವ ಎಲ್ಲಾ ಶಿಕ್ಷಣ ಸಂಸ್ಥೆಗಳು ಮತ್ತು ವಸತಿ ಶಾಲೆಗಳು ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ವ್ಯಾಖ್ಯಾನಿಸಿರುವ ಕಾರ್ಯವಿಧಾನಗಳು ಮತ್ತು ವರದಿಮಾಡುವ ಶಿಷ್ಟಾಚಾರಗಳನ್ನು ಅನುಸರಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ಸಮಿತಿಯು, ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗಧಿಪಡಿಸಿರುವ ಎಲ್ಲಾ ಕ್ರಮಗಳನ್ನು ಹಾಗೂ ಅವಶ್ಯವಿರುವ ಭಾಗೀದಾರರಿಗೆ ತ್ವರಿತವಾಗಿ ಮಾಹಿತಿ ನೀಡುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• ಸಂಜ್ಞಾತ್ಮಕ ಅಪರಾಧ ಪ್ರಕರಣಗಳಲ್ಲಿ ಶಿಕ್ಷಣ ಸಂಸ್ಥೆ ಅಥವಾ ಪೋಷಕರು /ಪಾಲಕರು ಪ್ರಥಮ ತನಿಖಾ ವರದಿ (FIR) ಯನ್ನು ನೊಂದಾಯಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• ಶಾಲೆಯ ಮಕ್ಕಳ ರಕ್ಷಣಾ ಸಮಿತಿಯು, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ತಿಳಿಸಿರುವಂತಹ ಕಾರ್ಯವಿಧಾನಗಳು ಮತ್ತು ಮಾರ್ಗಸೂಚಿಗಳನ್ವಯ ತನಿಖೆಯನ್ನು ಆರಂಭಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>• ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲ ವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು.<br>• ವಿವಿಧ ಇಲಾಖೆಗಳಡಿ ಬರುವ ಶಿಕ್ಷಣ ಸಂಸ್ಥೆಗಳು ಅನುಷ್ಠಾನಗೊಳಿಸುತ್ತಿರುವ ಸರಿಪಡಿಸಿ, ನಿವಾರಿಸುವ ಮತ್ತು ಇತರೆ ಪುನರ್‌ವಸತಿ ಮತ್ತು ಪುನರ್‌ಸಂಯೋಜನಾ ಕ್ರಮಗಳ ಅನುಸರಣೆ ಮಾಡುವುದು.<br>• ಸುಧಾರಣಾ ಕ್ರಮಗಳನ್ನು ತರುವ ನಿಟ್ಟಿನಲ್ಲಿ ಎಲ್ಲಾ ಹಂತಗಳಲ್ಲಿ ಮಾಸಿಕ ವರದಿ ಮಾಡುವುದು ಮತ್ತು ಇಲಾಖೆಯು ಅದನ್ನು ಪರಿಶೀಲಿಸುವುದು. | ವಸತಿ ಶಿಕ್ಷಣ ಸಂಸ್ಥೆಗಳ ಸೊಸೈಟಿ (KRIES) ಯ ಶಿಕ್ಷಣ ಸಂಸ್ಥೆಗಳಿಗೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ, ಅದರ ಕಾರ್ಯಚಾರಣೆ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳನ್ನು ಅನುಷ್ಠಾನಗೊಳಿಸಲು ಸರ್ಕಾರಿ ಆದೇಶಗಳು, ಅಧಿಸೂಚನೆಗಳು ಹಾಗೂ ಸುತ್ತೋಲೆಗಳನ್ನು ಹೊರಡಿಸುವುದು.<br>• ಮಕ್ಕಳ ರಕ್ಷಣಾ ಕಾರ್ಯತಂತ್ರದ ವ್ಯವಸ್ಥೆಯನ್ನು ಇಲಾಖೆಯೊಳಗಿನ ಎಲ್ಲಾ – ಹಂತಗಳಾದ ರಾಜ್ಯ, ಜಿಲ್ಲೆ, ತಾಲ್ಲೂಕು, ಬ್ಲಾಕ್ ಹಾಗೂ ಕ್ಲಸ್ಟರ್ ಹಂತಗಳಲ್ಲಿ ಕಾರ್ಯನಿರ್ವಹಿಸುವಂತೆ ಮಾಡುವುದು.<br>• ಸಮಾಜ ಕಲ್ಯಾಣ ಇಲಾಖೆಯ ಅಧೀನಲ್ಲಿ ಬರುವ ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಅಧಿಸೂಚಿಸಿರುವ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ ಮತ್ತು ಅದರ ಕಾರ್ಯಾಚರಣೆ ಮಾರ್ಗಸೂಚಿಗಳು ಹಾಗೂ ಕಾರ್ಯವಿಧಾನಗಳಿಗೆ ಅನುಗುಣವಾಗಿ ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯ ಮಾರ್ಗಸೂಚಿಗಳನ್ವಯ ನಿಗಧಿಪಡಿಸಿರುವ ರಾಜಿಮಾಡಿಕೊಳ್ಳಲಾಗದ ಕನಿಷ್ಠ ಮಾನದಂಡಗಳಾದ, ಮಕ್ಕಳ ರಕ್ಷಣಾ ಸಮಿತಿಯಲ್ಲಿ ವಿಧ್ಯಾರ್ಥಿಗಳ ಪ್ರತಿನಿದಿಗಳಿರುವುದು, ಸ್ಥಳೀಯ ನಾಯಕರು ಮತ್ತು ಮಕ್ಕಳ ರಕ್ಷಣಾಧಿಕಾರಿಗಳಿರುವುದು, ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಅವರ ಪೂರ್ವಾಪರಗಳನ್ನು ಪರಿಶಿಲಿಸುವುದು ಹಾಗೂ ಶಾಲೆಯಲ್ಲಿ ಸಲಹಾ ಪೆಟ್ಟಿಗೆಯನ್ನು ಹೊಂದಿರುವುದು ಮುಂತಾದವುಗಳನ್ನು ಕಡ್ಡಾಯವಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳುವುದು. |

| | | |
|---|---|---|
| | • ನಿಯಮಗಳನ್ನು ಉಲ್ಲಂಘಿಸಿ, ಕಾನೂನನ್ನು ಗಾಳಿಗೆ ತೂರಿದಲ್ಲಿ ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ, ಶಿಕ್ಷಣ ಸಂಸ್ಥೆಗಳ ಪರನಾಗಿಯನ್ನು ಕಾನೂನು ಪ್ರಕಾರ ರದ್ದುಗೊಳಿಸುವುದು/ ಅಮಾನ್ಯ ಮಾಡುವುದು.<br>• ಕಾನೂನನ್ನು ಉಲ್ಲಂಘಿಸಿ, ಗಾಳಿಗೆ ತೂರಿರುವುದು, ಕಾರ್ಯವಿಧಾನಗಳು ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ, ಹೊರಗುತ್ತಿಗೆ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸಲು/ ಅಮಾನ್ಯಮಾಡಲು ಶಿಫಾರಸ್ಸು ಮಾಡುವುದು.<br>• ತಪ್ಪನ್ನು ಎಸಗಿರುವ ಸಿಬ್ಬಂದಿ ಅಥವಾ ಇಲಾಖೆಯ ಕಾರ್ಯನಿರ್ವಾಹಕರು ಮತ್ತು ಶಾಸನಾತ್ಮಕ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳ ಅನ್ವಯ ಕ್ರಮ ಜರುಗಿಸುವುದು. | • ಸರ್ಕಾರಿ ಮತ್ತು ಸರ್ಕಾರೇತರ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆಗಳು ತ್ವರಿತವಾಗಿ ಲಭ್ಯವಾಗುವುದಕ್ಕೆ ಮತ್ತು ಸಂಪರ್ಕಕ್ಕಾಗಿ ಆಂತರಿಕ ಮೊಬೈಲ್ ಲಿಂಕ್ ವ್ಯವಸ್ಥೆಯನ್ನು ಕಲ್ಪಿಸುವುದು.<br>• ಶಿಕ್ಷಣ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ತರಬೇತಿ ಸಾಮಾಗ್ರಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಎಲ್ಲಾ ಕಾರ್ಯನಿರ್ವಾಹಕರು, ಶಿಕ್ಷಣ ಸಂಸ್ಥೆಗಳು ಮತ್ತು ಇತರೆ ಭಾಗೀದಾರರಿಗೆ ಮಕ್ಕಳ ಹಕ್ಕುಗಳು, ಮಕ್ಕಳಿಗಾಗಿ ಇರುವ ಶಾಸನಗಳು, ಮಕ್ಕಳ ರಕ್ಷಣಾ ಕಾರ್ಯತಂತ್ರಗಳು ಹಾಗೂ ಕ್ರಮಗಳ ಬಗ್ಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ನೀಡುವುದು.<br>• ವಸತಿ ಗೃಹದ ಸುತ್ತ ಕನಿಷ್ಠ ಭದ್ರತೆಯನ್ನು ಒದಗಿಸುವುದು,<br>• ಶಿಕ್ಷಣ ಇಲಾಖೆಯು, ನಿಗಧಿಪಡಿಸಿರುವಂತೆ ವಯಸ್ಸು ಹಾಗೂ ತರಗತಿಗೆ ಅನುಗುಣವಾಗಿ ವೈಯಕ್ತಿಕ ರಕ್ಷಣೆ ಮತ್ತು ಆರೋಗ್ಯ ಶಿಕ್ಷಣವನ್ನು ಪಠ್ಯದಲ್ಲಿ ಅಳವಡಿಸಿ ಅನುಷ್ಠಾನಗೊಳಿಸುವುದು.<br>• ಮಕ್ಕಳ ಭಾಗವಹಿಸುವಿಕೆಯ ವೇದಿಕೆಗಳಾದ, ಮಕ್ಕಳ ಹಕ್ಕುಗಳ ಕ್ಲಬ್ ಮುಂತಾದವುಗಳನ್ನು ರಚಿಸಿ ಅವುಗಳನ್ನು ಬಲಗೊಳಿಸುವುದು.<br>• ಶಿಕ್ಷಣ ಇಲಾಖೆ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿ ಶಿಕ್ಷಣ ಸಂಸ್ಥೆಯಲ್ಲಿ ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಸ್ಥಳಗಳಲ್ಲಿ ವ್ಯಾಪಕವಾಗಿ ಪ್ರಕಟಿಸುವುದು.<br>• ಶಿಕ್ಷಕರು ಹಾಗೂ ಹಂಗಾಮಿ ಶಿಕ್ಷಕರ ನೇಮಕಾತಿ ಮತ್ತು ಸೇವೆಯಲ್ಲಿರುವ ಶಿಕ್ಷಕರಿಗೆ ಬಡ್ತಿ ನೀಡುವ ಅರ್ಹತಾ ಪರೀಕ್ಷೆಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಗೆ |

| | | |
|---|---|---|
| | | ಸಂಬಂಧಿಸಿದ ಪ್ರಶ್ನೆಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಮಕ್ಕಳಿಗೆ ಅಗತ್ಯವಿರುವ ಸುರಕ್ಷತೆ ಮತ್ತು ಭದ್ರತೆಯನ್ನು ನೀಡಲು ಇತರೆ ಭಾಗೀದಾರರೊಂದಿಗೆ ಸಂಪರ್ಕಸಾಧಿಸುವುದು ಮತ್ತು ಸಮನ್ವತೆಯನ್ನು ಹೊಂದುವುದು.<br>• ಮಕ್ಕಳ ಸುರಕ್ಷತೆಯ ಬಗ್ಗೆ ಪೋಷಕರು/ಪಾಲಕರಿಗೆ ಶಿಕ್ಷಣವನ್ನು ನೀಡುವುದು.<br>• ಮಗುವಿನ ರಕ್ಷಣೆಗೆ ಆಸಕ್ತಿ ತೋರಿಸುವ ಶಿಕ್ಷಕರನ್ನು ಬಹುಮಾನ ನೀಡುವ ಮೂಲಕ ಪ್ರೋತ್ಸಾಹಿಸುವುದು. |
| 7.ಕಾರ್ಮಿಕ ಇಲಾಖೆ | • ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಶಿಕ್ಷಣ ಸಂಸ್ಥೆ (ವೃತ್ತಿ ತರಬೇತಿ ಸಂಸ್ಥೆಗಳು, ಕೈಗಾರಿಕಾ ತರಬೇತಿ ಸಂಸ್ಥೆಗಳು (ITI) ಪಾಲಿಟೆಕ್ನಿಕ್‌ಗಳು, ಅಪ್ರೆಂಟೀಸ್‌ಶಿಪ್ ಘಟಕಗಳು, NCLP & SCLP)ಗಳಲ್ಲಿನ ಮಕ್ಕಳ ರಕ್ಷಣಾ ಸಮಿತಿಯು, ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗದಿಪಡಿಸಿರುವಂತೆ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಅವಶ್ಯವಿರುವ ಭಾಗೀದಾರರಿಗೆ ವಿವರಿಸುವುದನ್ನು ಖಾತರಿಪಡಿಸಿಕೊಳ್ಳುವುದು.<br>• ಸಂಜ್ಞಾತ್ಮಕ ಅಪರಾಧ ಪ್ರಕರಣಗಳಲ್ಲಿ ಶಿಕ್ಷಣ ಸಂಸ್ಥೆ ಅಥವಾ ಪೋಷಕರು/ಪಾಲಕರು ಪ್ರಥಮ ತನಿಖಾ ವರದಿ (FIR)ಯನ್ನು ನೋಂದಾಯಿಸಿರುವುದನ್ನು ಖಚಿಪಡಿಸಿಕೊಳ್ಳುವುದು.<br>• ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ವಿವರಿಸಿರುವ ಕಾರ್ಯಸೂಚಿಗಳು ಮತ್ತು ಮಾರ್ಗಸೂಚಿಗಳನ್ವಯ ಶಾಲೆಯ ಮಕ್ಕಳ ರಕ್ಷಣಾ ಸಮಿತಿಯು ತನಿಖೆಯನ್ನು ಆರಂಭಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು. | • ಎಲ್ಲಾ NCLP & SCLP ಶಾಲೆಗಳು, ವೃತ್ತಿ ತರಬೇತಿ ಕೇಂದ್ರಗಳು/ಕೈಗಾರಿಕಾ ತರಬೇತಿ ಕೇಂದ್ರಗಳು ಮತ್ತು ಇತರೆ ಕೌಶಲ್ಯ ತರಬೇತಿ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಅಳವಡಿಸಿಕೊಳ್ಳುವಂತೆ ಹಾಗೂ ಸದರಿ ನೀತಿಯ ಮಾರ್ಗಸೂಚಿಗಳನ್ವಯ ನಿಗಧಿಪಡಿಸಿರುವ ಕನಿಷ್ಠ ಮಾನದಂಡಗಳಾದ ಮಕ್ಕಳ ರಕ್ಷಣಾ ಸಮಿತಿಯಲ್ಲಿ ವಿದ್ಯಾರ್ಥಿಗಳ ಪ್ರತಿನಿದಿಗಳಿರುವುದು, ಮಕ್ಕಳ ರಕ್ಷಣಾಧಿಕಾರಿಗಳಿರುವುದು, ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಅವರ ಪೂರ್ವಾಪರಗಳನ್ನು ಪರಿಶಿಲಿಸುವುದು ಹಾಗೂ ಶಾಲೆಯಲ್ಲಿ ಸೂಚನಾ ಫಲಕ ವಿರುವುದನ್ನು ಮತ್ತು ಅದರಲ್ಲಿ ಪೊಲೀಸ್, ಮಕ್ಕಳ ಕಲ್ಯಾಣಾಧಿಕಾರಿ, ಎಸ್‌ಜೆಪಿಯು, ಮಕ್ಕಳ ಸಹಾಯವಾಣಿಯ ಸಂಪರ್ಕ ಸಂಖ್ಯೆಗಳ ಮಾಹಿತಿಯನ್ನು ನಮೂದಿಸಿರುವುದನ್ನು ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳನ್ನು ಹೊರಡಿಸುವ ಮೂಲಕ ಖಾತರಿಪಡಿಸುವುದು.<br>• ಮಕ್ಕಳ ರಕ್ಷಣೆ ಮತ್ತು ಇದಕ್ಕೆ ಸಂಬಂಧಿಸಿದ ಕಾರ್ಯವಿಧಾನಗಳ ಬಗ್ಗೆ ಕಾರ್ಮಿಕ ಇಲಾಖೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಸಾಮರ್ಥ್ಯವನ್ನು ವೃದ್ಧಿಪಡಿಸುವುದನ್ನು ಖಚಿತಪಡಿಸಿಕೊಳ್ಳುವುದು. |

| | | |
|---|---|---|
| | • ಬಾಲ ಕಾರ್ಮಿಕರ ಉಲ್ಲಂಘನೆಯಂತಹ ಪ್ರಕರಣಗಳಲ್ಲಿ ಮಗುವಿಗೆ ಕಾನೂನಿನ್ವಯ ದೊರೆಯಬೇಕಾಗಿರುವ ಪರಿಹಾರವನ್ನು ಬಿಡುಗಡೆ ಮಾಡುವುದು.<br><br>• 14 ವರ್ಷ ವಯಸ್ಸಿಗಿಂತ ಮೇಲ್ಪಟ್ಟ ಮಕ್ಕಳು ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಸುರಕ್ಷತೆಯ ಉಲ್ಲಂಘನೆಯಾದಲ್ಲಿ, ಕಾನೂನು ಪ್ರಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುವುದು.<br><br>• ಮಕ್ಕಳನ್ನು ದುಡಿಮೆಗಾಗಿ ಕಳ್ಳಸಾಗಾಣಿಕೆ ಮಾಡಿರುವುದು ಕಂಡು ಬಂದಲ್ಲಿ, ಅಂಥಹ ಮಕ್ಕಳನ್ನು ಸ್ವ ಸ್ಥಳಕ್ಕೆ ಕಳುಹಿಸಿ, ಶಾಲೆಗೆ ಕಳುಹಿಸುವುದು.<br><br>• ಸುಧಾರಣಾ ಕ್ರಮಗಳನ್ನು ತರುವ ನಿಟ್ಟಿನಲ್ಲಿ ಎಲ್ಲಾ ಹಂತಗಳಲ್ಲಿ ಮಾಸಿಕ ವರದಿ ಮಾಡುವುದು ಮತ್ತು ಇಲಾಖೆಯು ಅದನ್ನು ಪರಿಶೀಲಿಸುವುದು.<br><br>• ಮಕ್ಕಳನ್ನು ಶೋಷಿಸುತ್ತಿರುವ ಕೈಗಾರಿಕೆಗಳನ್ನು ಕಪ್ಪುಪಟ್ಟಿಗೆ ಸೇರಿಸುವುದು ಅಥವಾ ಅವುಗಳ ಪರವಾನಗಿಯನ್ನು ರದ್ಧುಪಡಿಸುವುದು.<br><br>• ನಿಯಮಗಳನ್ನು ಉಲ್ಲಂಘಿಸಿ, ಕಾನೂನನ್ನು ಗಾಳಿಗೆ ತೂರಿದಲ್ಲಿ ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ ಶಿಕ್ಷಣ ಸಂಸ್ಥೆಗಳ ಪರನಾಗಿಯನ್ನು ಕಾನೂನು ಪ್ರಕಾರ ರದ್ದುಗೊಳಿಸುವುದು/ ಅಮಾನ್ಯ ಮಾಡುವುದು.<br><br>• ಕಾನೂನನ್ನು ಉಲ್ಲಂಘಿಸಿ, ಗಾಳಿಗೆ ತೂರಿರುವುದು, ಕಾರ್ಯವಿಧಾನಗಳು ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ ಹೊರಗುತ್ತಿಗೆ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸಲು/ ಅಮಾನ್ಯಮಾಡಲು ಶಿಫಾರಸ್ಸು ಮಾಡುವುದು.<br><br>• ತಪ್ಪನ್ನು ಎಸಗಿರುವ ಸಿಬ್ಬಂದಿ ಅಥವಾ ಇಲಾಖೆಯ ಕಾರ್ಯನಿರ್ವಾಹಕ ಮತ್ತು ಶಾಸನಾತ್ಮಕ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳ ಅನ್ವಯ ಕ್ರಮ ಜರುಗಿಸುವುದು. | • ಬಾಲ ಕಾರ್ಮಿಕ ಕಾನೂನುಗಳು, ಮಕ್ಕಳ ರಕ್ಷಣೆಗಾಗಿ ಇರುವ ಇತರೆ ಶಾಸನಗಳು ಮತ್ತು ವಿಧಾನಗಳ ಬಗ್ಗೆ ಎಲ್ಲಾ ಓಅಐಕ ಮತ್ತು SCLP ಶಾಲೆಗಳ ಸಿಬ್ಬಂದಿಗಳು ಮತ್ತು ಮಕ್ಕಳಿಗೆ ಬಿತ್ತಿಪತ್ರಗಳು ಹಾಗೂ ಕಾರ್ಯಾಗಾರಗಳ ಮೂಲಕ ಅರಿವುಮೂಡಿಸುವುದು.<br><br>• ವಸತಿ ಗೃಹಗಳ ಆವರಣದಲ್ಲಿ ಮಾನದಂಡಗಳನ್ವಯ ಕನಿಷ್ಠ ಭದ್ರತೆಯನ್ನು ಒದಗಿಸುವುದು.<br><br>• ಶಿಕ್ಷಣ ಇಲಾಖೆಯು ನಿಗಧಿಪಡಿಸಿರುವಂತೆ ವಯಸ್ಸು ಮತ್ತು ತರಗತಿಗೆ ಅನುಗುಣವಾಗಿ ಸೂಕ್ತ ವೈಯಕ್ತಿಕ ರಕ್ಷಣೆ ಮತ್ತು ಆರೋಗ್ಯ ಶಿಕ್ಷಣದ ಪಠ್ಯವನ್ನು ಅನುಷ್ಠಾನಗೊಳಿಸುವುದು.<br><br>• ಮಕ್ಕಳ ಭಾಗವಹಿಸುವಿಕೆ ವೇದಿಕೆಗಳಾದ ಮಕ್ಕಳ ಹಕ್ಕುಗಳ ಕ್ಲಬ್ಬುಗಳು ಮುಂತಾದವುಗಳನ್ನು ಇಲಾಖೆಯಡಿ ಬರುವ NCLP ಮತ್ತು SCLP ಶಾಲೆಗಳು ಮತ್ತು ಇತರೆ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾಪಿಸಿ ಅವುಗಳನ್ನು ಬಲಗೊಳಿಸುವುದು.<br><br>• ಶಿಕ್ಷಣ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಅಗತ್ಯವಿರುವ ಮಾಹಿತಿ, ಶಿಕ್ಷಣ, ಸಂವಹನ ಸಾಮಾಗ್ರಿಗಳನ್ನು ಅಭಿವೃದ್ಧಿಪಡಿಸಿ ಶಿಕ್ಷಣ ಸಂಸ್ಥೆಗಳು ಮತ್ತು ಮಕ್ಕಳು ಇರುವ ಸ್ಥಳಗಳಲ್ಲಿ ವ್ಯಾಪಕವಾಗಿ ಪ್ರಚಾರ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.<br><br>• ಶಿಕ್ಷಕರು ಹಾಗೂ ಹಂಗಾಮಿ ಶಿಕ್ಷಕರ ನೇಮಕಾತಿ ಮತ್ತು ಸೇವೆಯಲ್ಲಿರುವ ಶಿಕ್ಷಕರಿಗೆ ಬಡ್ತಿ ನೀಡುವ ಅರ್ಹತಾ ಪರೀಕ್ಷೆಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಅಳವಡಿಸುವುದನ್ನು ಖಚಿತಪಡಿಸಿಕೊಳ್ಳುವುದು. |

| | | |
|---|---|---|
| | | • ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ NCLP & SCLP ಶಾಲೆಗಳು ಮಕ್ಕಳಿಗೆ 'ವಯಸ್ಸಿಗೆ ಅನುಗುಣವಾದ ಸೂಕ್ತ ಸುರಕ್ಷತೆ ಮತ್ತು ರಕ್ಷಣೆಯ ಅವಕಾಶಗಳ ಬಗ್ಗೆ ಅದಿವೇಶನಗಳನ್ನು ಹಮ್ಮಿಕೊಳ್ಳುವುದು.<br>• ಶಿಕ್ಷಣ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಅಗತ್ಯವಿರುವ ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿ ಶಿಕ್ಷಣ ಸಂಸ್ಥೆಗಳು ಮತ್ತು ಮಕ್ಕಳಿರುವ ಸ್ಥಳಗಳಲ್ಲಿ ವ್ಯಾಪಕವಾಗಿ ಪ್ರಚಾರಮಾಡುವುದನ್ನು ಖಚಿತಪಡಿಸಿಕೊಳ್ಳುವುದು.<br>• ಶಿಕ್ಷಕರು ಹಾಗೂ ಗುತ್ತಿಗೆ ಶಿಕ್ಷಕರ ನೇಮಕಾತಿ ಮತ್ತು ಸೇವೆಯಲ್ಲಿರುವ ಶಿಕ್ಷಕರಿಗೆ ಭಡ್ತಿ ನೀಡುವ ಅರ್ಹತಾ ಪರೀಕ್ಷೆಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಮಕ್ಕಳ ಭಾಗವಹಿಸುವಿಕೆ ವೇದಿಕೆಗಳಾದ ಮಕ್ಕಳ ಹಕ್ಕುಗಳ ಕ್ಲಬ್ಬುಗಳು ಮುಂತಾದವನ್ನು ಇಲಾಖೆಯಡಿ ಬರುವ NCLP & SCLP ಶಾಲೆಗಳು ಮತ್ತು ಇತರೆ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾಪಿಸಿ ಅವುಗಳನ್ನು ಬಲಗೊಳಿಸುವುದು.<br>• ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಬರುವ NCLP & SCLP ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಮಕ್ಕಳಿಗೆ 'ವಯಸ್ಸಿಗೆ ಅನುಗುಣವಾದ ಸೂಕ್ತ ಸುರಕ್ಷತೆ ಮತ್ತು ರಕ್ಷಣಾ ಅವಕಾಶಗಳ' ಬಗ್ಗೆ ಅಧಿವೇಶನಗಳನ್ನು ಹಮ್ಮಿಕೊಳ್ಳುವುದು. |

| | | |
|---|---|---|
| | | • ಮಕ್ಕಳ ಸುರಕ್ಷತೆಯ ಬಗ್ಗೆ ಪೋಷಕರು/ ಪಾಲಕರಿಗೆ ಶಿಕ್ಷಣವನ್ನು ನೀಡುವುದು.<br>• ಮಕ್ಕಳಿಗೆ ಅಗತ್ಯವಿರುವ ಸುರಕ್ಷತೆ ಮತ್ತು ಭದ್ರತೆಯನ್ನು ನೀಡಲು ಇತರೆ ಭಾಗೀದಾರರೊಂದಿಗೆ ಸಂಪರ್ಕ ಸಧಿಸುವುದು ಮತ್ತು ಸಮನ್ವಯತೆ ಹೊಂದುವುದು.<br>• ಮಕ್ಕಳ ಸುಕ್ಷತೆಯ ಬಗ್ಗೆ ಪೋಷಕರು/ ಪಾಲಕರಿಗೆ ಶಿಕ್ಷಣ ನೀಡುವುದು<br>• ಮಗುವಿನ ರಕ್ಷಣೆಗೆ ಆಸಕ್ತಿ ತೋರಿಸುವ ಶಿಕ್ಷಕರನ್ನು ಬಹುಮಾನ ನೀಡುವ ಮೂಲಕ ಪ್ರೋತ್ಸಾಹಿಸುವುದು. |
| 8.ಜಿಲ್ಲಾ ಆಡಳಿತ | • ಜಿಲ್ಲಾಧಿಕಾರಿಗಳು, ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಮಕ್ಕಳ ಸುರಕ್ಷತಾ ಉಲ್ಲಂಘನೆ ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆಗಳು ಕಾನೂನಿನನ್ವಯ ಹೊರಡಿಸಿರುವ ಶಿಷ್ಟಾಚಾರಗಳು, ಕಾರ್ಯವಿಧಾನಗಳು ಮತ್ತು ಮಾರ್ಗಸೂಚಿಗಳನ್ನು ಅನುಸರಿಸುತ್ತಿರುವ ಬಗ್ಗೆ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ಸಹಯೋಗದೊಂದಿಗೆ ಮೇಲ್ವಿಚಾರಣೆ ಮಾಡುವುದು.<br>• ನಿಗಧಿತ ಸುರಕ್ಷತಾ ಮಾನದಂಡಗಳನ್ನು ಉಲ್ಲಂಘಿಸಿದವರ ವಿರುದ್ದ ಸೂಕ್ತ ಕ್ರಮ ಜರುಗಿಸುವುದನ್ನು ಮತ್ತು ಸಂಬಂಧಿಸಿದ ಇಲಾಖಾ ಪ್ರಾಧಿಕಾರಿಗಳಿಂದ ನಿಯಮಾನುಸಾರ ತನಿಖಾ ವರದಿಯನ್ನು ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು.<br>• ಪ್ರಮುಖ ಇಲಾಖೆಗಳ ಸಮನ್ವಯತೆಯಿಂದ ನಿಯಮಿತ ಪರಿಶೀಲನೆ ಮತ್ತು ರಕ್ಷಣಾ ಕ್ರಮಗಳನ್ನು ಸುಧಾರಿಸಲು ಶಿಪಾರಸ್ಸುಗಳನ್ನು ಮಾಡುವ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡುವುದು.<br>• ಮಕ್ಕಳ ಮೇಲಿನ ಎಲ್ಲಾ ಪ್ರಕರಣಗಳಲ್ಲಿ, ಪ್ರಥಮ ತನಿಖಾ ವರದಿಯನ್ನು ನೋಂದಾಯಿಸುವುದು ಮತ್ತು ತನಿಖೆಯನ್ನು ಕಾನೂನಿನ ಅನ್ವಯ | • ಮಕ್ಕಳ ರಕ್ಷಣಾ ನೀತಿಯನ್ನು ಕಾಲಮಿತಿಯಲ್ಲಿ ಹಾಗೂ ಹಂತ ಹಂತವಾಗಿ ಜಾರಿಗೊಳಿಸಲು ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿಗಳು ಸಂಬಂಧಿಸಿದ ಇಲಾಖೆಗಳಿಗೆ ನಿರ್ದೇಶನಗಳನ್ನು ನಿಡುವುದು.<br>• ಜಿಲ್ಲಾ ಮಕ್ಕಳ ರಕ್ಷಣಾ ಸೊಸೈಟಿ (DCPS)ಯು ಕ್ರಿಯಾಶೀಲವಾಗಿರುವುದನ್ನು ಮತ್ತು ಮಕ್ಕಳ ರಕ್ಷಣಾ ವಿಷಯಗಳಲ್ಲಿ ತೊಡಗಿಸಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನೆರವಿನೊಂದಿಗೆ ಜಿಲ್ಲಾ ಮಕ್ಕಳ ಸಂರಕ್ಷಣಾ ಸೊಸೈಟಿಯ ಮೂಲಕ ವಿವಿಧ ಇಲಾಖೆಗಳ ಅಧೀನದಲ್ಲಿ ಬರುವ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿ ನಿಲಯಗಳು, ಮದರಸಾಗಳು, ಅಶ್ರಮಗಳು ಮತ್ತು NCLP/SCLP ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಕಾಲಮಿತಿಯ ಚೌಕಟ್ಟಿನೊಳಗೆ ತಕ್ಷಣವೇ ಅಳವಡಿಸಿಕೊಂಡು ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಈ ನೀತಿಯಡಿ ರಾಜಿ ಮಾಡಿಕೊಳ್ಳಲಾಗದ ಕನಿಷ್ಟ ಮಾನದಂಡಗಳಾದ ಎಲ್ಲಾ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ಸಮಿತಿ |

| | | |
|---|---|---|
| | ನಿಯಮಾನುಸಾರ ನಡೆಸಲಾಗುತ್ತಿದೆ ಎಂಬುದರ ಮೇಲ್ವಿಚಾರಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯು ನಿರ್ವಹಿಸುವುದು.<br>• ವಿಚಾರಣೆಯ ಪ್ರಕ್ರಿಯೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರಾದ ಪೊಲೀಸ್, ಎಸ್‌ಜೆಪಿಯು, ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಸಮನ್ವಯತೆಯಿಂದ ಕಾರ್ಯವಿದಾನಗಳನ್ನು ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಯ ಸಹಯೋಗದೊಂದಿಗೆ ಮಗುವನ್ನು ರಕ್ಷಿಸಿರುವುದನ್ನು ಮತ್ತು ಅದು ಸುರಕ್ಷಿತ ಸ್ಥಳದಲ್ಲಿರುವುದನ್ನು ಖಚಿತಪಡಿಸುವುದು.<br>• ಹಲ್ಲೆಗೊಳಗಾಗಿರುವ ಮಗುವಿನ ಕುಟುಂಬಕ್ಕೆ ಪರಿಹಾರ ನೀಡಿರುವುದನ್ನು ಮತ್ತು ಅವಶ್ಯವಿರುವೆಡೆ ಅವರ ಸ್ವ-ಸ್ಥಾನಕ್ಕೆ ಕಳುಹಿಸಿಕೊಡುವುದನ್ನು ಖಚಿಪಡಿಸಿಕೊಳ್ಳುವುದು.<br>• ಮಾಧ್ಯಮಗಳಿಂದ ನಿಯಮಗಳ ಉಲ್ಲಂಘನೆಯಾಗಿಲ್ಲವೆಂಬುದನ್ನು ಮತ್ತು ಮಗು/ಕುಟುಂಬದ ಗೌಪ್ಯತೆ, ಏಕಾಂತತೆ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು.<br>• ಸರ್ಕಾರಿ ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳು ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಎಚ್ಚರಿಕೆ ನೀಡುವುದು.<br>• ನಿಯಮಗಳನ್ವಯ, ಸುರಕ್ಷತಾ ಮಾನದಂಡಗಳನ್ನು ಪಾಲಿಸದ ಸಂಸ್ಥೆಗಳ ಮಾನ್ಯತೆಯನ್ನು ರದ್ದು ಮಾಡುವುದು.<br>• ಪೊಲೀಸ್, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ಮತ್ತು ಬುಡಕಟ್ಟು ಕಲ್ಯಾಣ ಇಲಾಖೆಗಳ ಸಮನ್ವಯತೆಯೊಂದಿಗೆ ಸುರಕ್ಷತಾ ನಿಯಮಗಳು, ಮಾನದಂಡಗಳು ಅಥವಾ ಉಲ್ಲಂಘನೆಯ ಕುರಿತು ನಿಯಮಿತ ಪರಿಶೀಲನೆಯನ್ನು ನಡೆಸುವುದು.<br>• ಅವಶ್ಯಕವಿದ್ದಲ್ಲಿ, ಕರ್ನಾಟಕ ಸೇವಾ ನಿಯಮಾವಳಿಗಳನ್ವಯ ಸಿಬ್ಬಂದಿಯ ವಿರುದ್ಧ ಆಂತರಿಕ ಶಿಸ್ತು ಕ್ರಮಕೈಗೊಳ್ಳುವುದು.<br>• ಪರಿಸ್ಥಿತಿಯ ಮಾಪನ ಮಾಡಲು ನಿಯಮಿತ ಮತ್ತು ವಾರ್ಷಿಕ ಪರಿಶೀಲನೆ ಮತ್ತು | ಇರುವುದು, ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳಿರುವುದು, ಸ್ಥಳೀಯ ನೆರೆಹೊರೆಯ ನಾಯಕರ ಸೇರ್ಪಡೆ, ಮಕ್ಕಳ ರಕ್ಷಣಾ ಅಧಿಕಾರಿ ಮತ್ತು ಸಿಬ್ಬಂದಿ ನೇಮಕದಲ್ಲಿ ಅಭ್ಯರ್ಥಿಯ ಪೂರ್ವಾಪರಗಳ ಪರಿಶೀಲನೆ, ಸಲಹಾ ಪೆಟ್ಟಿಗೆ, ಸೂಚನಾ ಫಲಕಗಳಲ್ಲಿ ಪ್ರಮುಖ ಸಂಪರ್ಕ ಸಂಖ್ಯೆಗಳ ನಮೂದಿಸುವಿಕೆ (ಮಾದರಿಯನ್ನು ಅನುಬಂಧದಲ್ಲಿ ನೀಡಲಾಗಿದೆ) ಮುಂತಾದವುಗಳನ್ನು ಅಳವಡಿಸಿಕೊಂಡಿರುವುದನ್ನು ಸಂಬಂಧಿಸಿದ ಇಲಾಖೆಗಳ ಮೂಲಕ ಖಾತರಿಪಡಿಸಿಕೊಳ್ಳುವುದು.<br>• ರಾಜ್ಯ ಸರ್ಕಾರವು ರೂಪಿಸಿದ ಕಾರ್ಯವಿಧಾನಗಳು ಮತ್ತು ಶಿಷ್ಟಾಚಾರಗಳನ್ವಯ ಮಕ್ಕಳ ಮೇಲಿನ ಹಲ್ಲೆ ಪ್ರಕರಣಗಳ ಪರಿಶೀಲನೆಯನ್ನು ಮಾಡುವಾಗ ಜಿಲ್ಲಾ ನ್ಯಾಯಾಧೀಶರು ಮತ್ತು ಕಾನೂನು ಸೇವಾ ಪ್ರಾಧಿಕಾರದ ನೆರವನ್ನು ಪಡೆದುಕೊಳ್ಳುವುದು.<br>• ಮಕ್ಕಳ ಹಕ್ಕುಗಳು, ಮಕ್ಕಳ ಸಂಬಂಧಿ ಕಾನೂನುಗಳು, ಮಕ್ಕಳ ಸುರಕ್ಷತೆ ಮತ್ತು ರಕ್ಷಣಾ ತಂತ್ರಗಳ ಕುರಿತು ತಮ್ಮ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿಗೊಳಿಸಲು ಹಾಗೂ ಮಕ್ಕಳ ಸುರಕ್ಷತೆಯ ಬಗ್ಗೆ ಕೈಪಿಡಿಯನ್ನು ತಯಾರಿಸಿ ದೈನಂಧಿನ ಉಲ್ಲೇಖಕ್ಕಾಗಿ ನೀಡುವಂತೆ ಸಂಬಂಧಿಸಿದ ಇಲಾಖೆಗಳಿಗೆ ನಿರ್ದೇಶನ ನೀಡುವುದು.<br>• ಪೊಲೀಸ್ ವರಿಷ್ಠಾಧಿಕಾರಿಗಳು ರಾಜ್ಯ ಪೋಲಿಸರ ಸಹಯೋಗದೊಂದಿಗೆ ಮುಂದೆ ಸಂಭವಿಸಬಹುದಾದ ಅಪರಾಧಗಳನ್ನು ತಡೆಗಟ್ಟಲು ಹಾಗೂ ನೇಮಕಾತಿ ಅವಧಿಯಲ್ಲಿ ಪೊಲೀಸ್ ಇಲಾಖೆಯ ಮೂಲಕ ಪೂರ್ವಾಪರ ಪರಿಶೀಲನೆಗೆ ಮಾಹಿತಿಯನ್ನು ನೀಡಲು ಅಪರಾಧಿಗಳ ನೋಂದಣಿ ಪುಸ್ತಕವನ್ನು ನಿರ್ವಹಿಸುವುದು.<br>• ಮಕ್ಕಳಿಗೆ ಸೂಕ್ತ ರಕ್ಷಣೆ ಮತ್ತು ಭದ್ರತೆಯನ್ನು ಒದಗಿಸಲು ಮಕ್ಕಳ ಕಲ್ಯಾಣ ಸಮಿತಿ, ಎಸ್‌ಜೆಪಿಯು, ಮಕ್ಕಳ ಸಹಾಯವಾಣಿ, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಇತರೆ ಭಾಗೀದಾರರೊಂದಿಗೆ ಕಾಲಕಾಲಕ್ಕೆ ಪರಿಶೀಲನಾ ಸಭೆಗಳನ್ನು ನಡೆಸುವುದು. |

| | | |
|---|---|---|
| | ಕಾರ್ಯವಿದಾನಗಳು ಅಥವಾ ಅವಶ್ಯವಿರುವ ಬದಲಾವಣೆಗಳು, ಸುಧಾರಿತ ಕ್ರಮಗಳ ನಿರ್ವಹಣೆಯಿಂದ ಮಕ್ಕಳ ಕೇಂದ್ರಿತ, ಮಕ್ಕಳ ಸಂವೇಧಿ ಪ್ರಕ್ರಿಯೆ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದರ ಬಗ್ಗೆ ರಾಜ್ಯ ಇಲಾಖೆಗಳಿಗೆ ವರದಿ ಸಲ್ಲಿಸುವುದು | • ಮಕ್ಕಳ ಮೇಲಿನ ಲೈಂಗಿಕ ಹಲ್ಲೆ,ಗಳನ್ನು ನಿಯಂತ್ರಿಸಲು ಅನುಷ್ಠಾನದಲ್ಲಿರುವ ಮಕ್ಕಳ ರಕ್ಷಣೆ ವಿಧಾನಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಲಭ್ಯವಿರುವ ಮಕ್ಕಳ ರಕ್ಷಣಾ ಕಾರ್ಯತಂತ್ರಗಳಾದ ಮಕ್ಕಳ ಕಲ್ಯಾಣ ಸಮಿತಿ, ಎಸ್‌ಜೆಪಿಯು, ಮಕ್ಕಳ ಸಹಾಯವಾಣಿ, ಸ್ವಯಂ ಸೇವಾ ಸಂಸ್ಥೆಗಳ ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಸೊಸೈಟಿಗಳು ಅರಿವು ಮೂಡಿಸಲು ವ್ಯಾಪಕ ಪ್ರಚಾರ ಮಾಡುವುದನ್ನು ಜಿಲ್ಲಾಧಿಕಾರಿಗಳು ಮೇಲ್ವಿಚಾರಣೆ ಮಾಡುವುದು.<br>• ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳು ಹಾಗೂ ವಾರ್ಡ್ ಸಭಾಗಳ ಸಹಭಾಗಿತ್ವದೊಂದಿಗೆ, ಮಕ್ಕಳ ಗ್ರಾಮ ಸಭೆಗಳ ಆಯೋಜನೆಯೂ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳು ಗ್ರಾಮ ಮತ್ತು ತಾಲ್ಲೂಕುಗಳನ್ನು ತಲುಪಿರುವ ಬಗ್ಗೆ ಖಾತರಿಪಡಿಸುವುದು.<br>• ಮಹಿಳೆ ಮತ್ತು ಮಕ್ಕಳ ರಕ್ಷಣೆ ಹಾಗೂ ಸುರಕ್ಷತೆಯ ಕುರಿತು ವ್ಯಾಪಕವಾಗಿ ಅರಿವು–ಜಾಗೃತಿಯನ್ನು ಮೂಡಿಸಲು ಅಪರಾಧ ತಡೆ ಮಾಸಾಚರಣೆ ಹಾಗೂ ಇತರೆ ಪ್ರಮುಖ ದಿನಗಳನ್ನು ಆಚರಿಸುವುದು. |
| 9. ಸಾರಿಗೆ ಇಲಾಖೆ | • ಮಕ್ಕಳನ್ನು ವಾಹನದಲ್ಲಿ ಕರೆದೊಯ್ಯುವಾಗ ಪ್ರಕರಣಗಳು ಸಂಭವಿಸಿದಲ್ಲಿ, ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಮಕ್ಕಳ ಸುರಕ್ಷತಾ ಉಲ್ಲಂಘನೆ ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆಗಳು ಕಾನೂನಿನನ್ವಯ ಹೊರಡಿಸಿರುವ ಶಿಷ್ಟಾಚಾರಗಳು, ಕಾರ್ಯ ವಿಧಾನಗಳು ಮತ್ತು ಮಾರ್ಗಸೂಚಿಗಳನ್ನು ಅನುಸರಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡುವುದು.<br>• ಎಲ್ಲಾ ಉಲ್ಲಂಘನೆ ಪ್ರಕರಣಗಳಲ್ಲಿ ಪ್ರಥಮ ತನಿಖಾ ವರದಿಯನ್ನು ನೋಂದಾಯಿಸುವುದನ್ನು ಮತ್ತು ತನಿಖೆಯನ್ನು ಕಾನೂನಿನನ್ವಯ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು. | • ಮಕ್ಕಳ ಸುರಕ್ಷತಾ ಮಾನದಂಡಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯದ ಮಾರ್ಗಸೂಚಿಗಳನ್ನು ಜಾರಿಗೊಳಿಸಲು ಆದೇಶ ಮತ್ತು ಸುತ್ತೋಲೆಗಳನ್ನು ಹೊರಡಿಸುವುದು.<br>• ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ವಾಹನಗಳಲ್ಲಿ ಪಾಲಿಸಬೇಕಾದ ಸುರಕ್ಷತಾ ಮಾರ್ಗಸೂಚಿಗಳ ಮತ್ತು ಮಾನದಂಡಗಳ ನಿಯಮಿತ ಪರಿಶೀಲನೆಯನ್ನು ಕೈಗೊಳ್ಳುವುದು.<br>• ಶಾಲೆ ಮತ್ತು ಕಾಲೇಜುಗಳಿಗೆ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಮಕ್ಕಳ ಸಹಾಯವಾಣಿ ಹಾಗೂ ಇತರೆ ತುರ್ತು ಸಂಪರ್ಕ ಸಂಖ್ಯೆಗಳನ್ನು ನಮೂದಿಸುವುದು. |

| | | |
|---|---|---|
| | • ವಾಹನವನ್ನು ಸ್ವಾಧೀನಪಡಿಸಿಕೊಳ್ಳುವುದು ಸೇರಿದಂತೆ, ತ್ವರಿತ ನ್ಯಾಯದಾನಕ್ಕಾಗಿ ತನಿಖೆಯನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ಸಹಕಾರ ನೀಡುವುದನ್ನು ಖಚಿತಪಡಿಸಿಕೊಳ್ಳುವುದು.<br>• ತುರ್ತು ಪರಿಸ್ಥಿತಿಯ ನಿರ್ವಹಣೆಗೆ, ಸೂಕ್ತ ತುರ್ತು ನೆರವಿನ ಸೇವೆಯ ಸೌಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳುವುದು.<br>• ಅವಶ್ಯವಿರುವಲ್ಲಿ, ಯಾವುದೇ ಸಿಬ್ಬಂದಿಯ ವಿರುದ್ಧ ಕರ್ನಾಟಕ ಸೇವಾ ನಿಯಮಗಳನ್ವಯ ಆಂತರಿಕ ಶಿಸ್ತು ಕ್ರಮ ಜರುಗಿಸುವುದು.<br>• ಪೊಲೀಸ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಮಕ್ಕಳ ಮೇಲಿನ ದೌರ್ಜನ್ಯದ ಎಲ್ಲಾ ಪ್ರಕರಣಗಳು ಮತ್ತು ಪ್ರಗತಿಯನ್ನು ನಿಯಮಿತವಾಗಿ ಪರಿಶೀಲನೆ ನಡೆಸುವುದು.<br>• ಕಾನೂನುಗಳು ಉಲ್ಲಂಘನೆ ಅಥವಾ ಕಾನೂನುಗಳು ಮತ್ತು ನಿಯಮಗಳನ್ನು ಗಾಳಿಗೆ ತೂರಿರುವುದು ಅಥವಾ ತನಿಖೆಗೆ ಅಡ್ಡಿಪಡಿಸುವ ಯಾವುದೇ ವಾಹನ ಅಥವಾ ಸಾರಿಗೆ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸುವುದು.<br>• ಕಾನೂನನ್ನು ಉಲ್ಲಂಘಿಸಿ, ಗಾಳಿಗೆ ತೂರಿರುವುದು, ಕಾರ್ಯವಿಧಾನಗಳು ಅಥವಾ ತನಿಖೆಗೆ ಅಡ್ಡಿಪಡಿಸಿದಲ್ಲಿ ಹೊರಗುತ್ತಿಗೆ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸಲು/ ಅಮಾನ್ಯ ಮಾಡಲು ಶಿಫಾರಸ್ಸು ಮಾಡುವುದು.<br>• ತಪ್ಪನ್ನು ಎಸಗಿರುವ ಸಿಬ್ಬಂದಿ ಅಥವಾ ಇಲಾಖೆಯ ಕಾರ್ಯನಿರ್ವಾಹಕರು ಮತ್ತು ಶಾಸನಾತ್ಮಕ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸೇವಾ ನಿಯಮಗಳು ಅಥವಾ ಇತರೆ ಆಡಳಿತಾತ್ಮಕ ಶಾಸನಗಳ ಅನ್ವಯ ಕ್ರಮ ಜರುಗಿಸುವುದು.<br>• ಪರಿಸ್ಥಿತಿಯ ಮಾಪನ ಮಾಡಲು ನಿಯಮಿತ ಮತ್ತು ವಾರ್ಷಿಕ ಪರಿಶೀಲನೆ ಮತ್ತು ಕಾರ್ಯವಿದಾನಗಳು ಅಥವಾ ಅವಶ್ಯವಿರುವ ಬದಲಾವಣೆಗಳು, ಸುಧಾರಿತ ಕ್ರಮಗಳ ನಿರ್ವಹಣೆಯಿಂದ ಮಕ್ಕಳ ಕೇಂದ್ರಿತ, ಮಕ್ಕಳ ಸಂವೇಧಿ ಪ್ರಕ್ರಿಯೆ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದರ ಬಗ್ಗೆ ರಾಜ್ಯ ಇಲಾಖೆಗಳಿಗೆ ವರದಿ ಸಲ್ಲಿಸುವುದು | • ಮಕ್ಕಳ ರಕ್ಷಣೆ ಹಾಗೂ ಸುರಕ್ಷತೆ ಕುರಿತಂತೆ ವಾಹನಗಳ ಚಾಲಕರು ಮತ್ತು ನಿರ್ವಾಹಕರಿಗೆ ಮುಂಜಾಗ್ರತಾ ಕ್ರಮವಾಗಿ ಸಾಮರ್ಥ್ಯಾಭಿವೃದ್ಧಿಗೊಳಿಸುವುದು.<br>• ಸಿಬ್ಬಂದಿಗಳು, ಮಕ್ಕಳು, ಪೋಷಕರು/ ಪಾಲಕರು ಹಾಗೂ ಸಾರ್ವಜನಿಕರಲ್ಲಿ ಮಕ್ಕಳ ಸುರಕ್ಷತೆ ಮತ್ತು ರಕ್ಷಣೆಗೆ ಸಂಬಂಧಿಸಿದ ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಾಮಗ್ರಿಗಳನ್ನು ವಾಹನಗಳಲ್ಲಿ ಪ್ರದರ್ಶಿಸುವುದು.<br>• ಮಗುವಿನ ರಕ್ಷಣೆಗೆ ಆಸಕ್ತಿ ತೋರಿಸುವ ಸಿಬ್ಬಂದಿಗಳನ್ನು ಬಹುಮಾನ ನೀಡುವ ಮೂಲಕ ಪ್ರೋತ್ಸಾಹಿಸುವುದು. |

| | | |
|---|---|---|
| 10. ವಾರ್ತಾ ಇಲಾಖೆ | ▪ ಮಕ್ಕಳು, ಕುಟುಂಬ ಮತ್ತು ಶಾಲೆಯ ಮೇಲೆ ಪರಿಣಾಮ ಬೀರುವ ಅಥವಾ ತೊಂದರೆಯಾಗುವ ತಪ್ಪು ಮಾಹಿತಿಯನ್ನು ಮಾಧ್ಯಮಗಳಲ್ಲಿ ಪ್ರಸಾರಮಾಡದಂತೆ ಖಚಿತಪಡಿಸಿಕೊಳ್ಳುವುದು.<br>▪ ಅವಶ್ಯವಿದ್ದಲ್ಲಿ, ಘಟನೆಗೆ ಕಾರಣವಾಗಿರುವ ಅಪರಾಧಿಯನ್ನು ಪತ್ತೆ ಹಚ್ಚಲು ಅಥವಾ ಬಲಿಪಶುವಾಗಿರುವ ಮಗುವಿನ ಪೋಷಕರು/ಪಾಲಕರನ್ನು ಪತ್ತೆ ಹಚ್ಚಲು ಸರ್ಕಾರಕ್ಕೆ ನೆರವು ನೀಡುವುದು.<br>▪ ಮಕ್ಕಳ ಮತ್ತು ಮಕ್ಕಳಿಗೋಸ್ಕರ ಇರುವ ಕಾನೂನುಗಳು, ನಿಯಮಗಳು, ನಿಯಂತ್ರಣಗಳು ಮತ್ತು ಮಾರ್ಗಸೂಚಿಗಳ ಬಗ್ಗೆ ಆಗಾಗ್ಗೆ ಮಾಹಿತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕ್ಷೇತ್ರ ಪ್ರಚಾರ ನಿರ್ದೇಶನಾಲಯ, ಜಾಹೀರಾತು ಮತ್ತು ದೃಶ್ಯ ಪ್ರಚಾರ ನಿರ್ದೇಶನಾಲಯ (DAVP), ಆಕಾಶವಾಣಿ, ದೂರದರ್ಶನ ಪ್ರಕಟಣೆ ಕಾರ್ಯಕ್ರಮಗಳು ಮತ್ತು ಸಾಕ್ಷ್ಯಚಿತ್ರ ಇತ್ಯಾದಿಗಳ ಮೂಲಕ ಪ್ರಸಾರ ಮಾಡಲು ಹೆಚ್ಚಿನ ಆದ್ಯತೆ ನೀಡುವುದು. | ▪ ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ, ಮಕ್ಕಳ ಸುರಕ್ಷತಾ ಉಲ್ಲಂಘನೆಗಳ ನಿಯಂತ್ರಣಕ್ಕಾಗಿ ನಗರ ಮತ್ತು ಗ್ರಾಮೀಣ ಸಮುದಾಯಗಳು, ಪೋಷಕರು, ಮಕ್ಕಳು ಮುಂತಾದವರುಗಳಿಗೆ ಜಾಗೃತಿಮೂಡಿಸಲು, ಅಪರಾಧಗಳನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳುವ ಕ್ರಮಗಳು ಮತ್ತು ಮಾಧ್ಯಮ ನೀತಿ ಸಂಹಿತೆಯ ಬಗ್ಗೆ ಆದೇಶಗಳು ಹಾಗೂ ಸುತ್ತೋಲೆಗಳನ್ನು ಹೊರಡಿಸಿ ನಿರಂತರ ಪ್ರಚಾರ ಕೈಗೊಳ್ಳುವುದು.<br>▪ ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ, ಮಕ್ಕಳ ಸುರಕ್ಷತಾ ಉಲ್ಲಂಘನೆಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪೊಲೀಸ್, ನ್ಯಾಯಾಂಗ, ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಪೂರ್ವಭಾವಿಯಾಗಿ ಕೈಗೊಳ್ಳಬೇಕಾದ ಕ್ರಮಗಳು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ವ್ಯಾಪಕವಾಗಿ ಪ್ರಚಾರ ಮಾಡುವುದು.<br>▪ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪೊಲೀಸ್, ಶಿಕ್ಷಣ ಇಲಾಖೆ ಹಾಗೂ ಸ್ವಯಂಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಮಾಧ್ಯಮಗಳಿಗೆ ನೈತಿಕ ಮತ್ತು ಸಂವೇದನಾ ವರದಿಗಳ ಪ್ರಸಾರ ಮತ್ತು ಸಂಘಟಿತ ಕ್ರಮಗಳ ಉತ್ತೇಜನಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರಗಳನ್ನು ಆಯೋಜಿಸುವುದು. |

## ಅನುಬಂಧಗಳು

### ಅನುಬಂಧ – 1 : ಮಾಧ್ಯಮಗಳ ನೀತಿ ಸಂಹಿತೆ

ಮಕ್ಕಳು ಗೌರವ, ಘನತೆ ಹಾಗೂ ಖಾಸಗೀತನಕ್ಕೆ ಸಂಬಂಧಿಸಿದ ವಿಶಿಷ್ಟವಾದ ಹಕ್ಕುಗಳನ್ನು ಹೊಂದಿದ್ದು, ಅವರಿಗೆ ಸಂಬಂಧಿಸಿದ ಪ್ರಕರಣಗಳನ್ನು ವರದಿ ಮಾಡುವಾಗ ಮಾಧ್ಯಮಗಳು ಅವರ ಗೌರವಕ್ಕೆ ಧಕ್ಕೆ ಅಥವಾ ಕಳಂಕ ತರಬಾರದು. ಮಕ್ಕಳ ಕುರಿತಾದ ಅದರಲ್ಲೂ ವಿಶೇಷವಾಗಿ ದುರುಪಯೋಗಕ್ಕೊಳಗಾದ ಮಕ್ಕಳ ಪ್ರಕರಣಗಳನ್ನು ವರದಿ ಮಾಡಲು ಮಾಧ್ಯಮಗಳು ಅನುಸರಿಸಬೇಕಾದ ನೀತಿ ಸಂಹಿತೆಯ ಮಾರ್ಗಸೂಚಿಗಳು ಬಾಲನ್ಯಾಯ ಕಾಯ್ದೆ, 2000 ಮತ್ತು ತಿದ್ದುಪಡಿ ಕಾಯ್ದೆ, 2006 ಹಾಗೂ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ, 2012 ರಲ್ಲಿನ ಅವಕಾಶಗಳಿಗನುಗುಣವಾಗಿವೆ.

ಕಾನೂನಿನೊಡನೆ ಸಂಘರ್ಷದಲ್ಲಿರುವ, ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಹಾಗೂ ಕಾಯ್ದೆಯಲ್ಲಿ ಹೇಳಿರುವ ಯಾವುದೇ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಮಗುವಿನ ಹೆಸರನ್ನು ಮಾಧ್ಯಮಗಳಲ್ಲಿ ವರದಿ ಮಾಡುವುದನ್ನು ಬಾಲನ್ಯಾಯ ಕಾಯ್ದೆ, 2000 ದಲ್ಲಿನ 21ನೇ ಕಲಂ ಮತ್ತು ಅದರ ತಿದ್ದುಪಡಿ ಕಾಯ್ದೆ, 2006 ನಿಷೇಧಿಸುತ್ತವೆ. ಇದರೊಂದಿಗೆ ಮಗುವಿನ ಕುರಿತಾದ ವರದಿಗಳು ಮತ್ತು ಭಾವಚಿತ್ರಗಳನ್ನು ಯಾವುದೇ ವೃತ್ತ ಪತ್ರಿಕೆ, ನಿಯತಕಾಲಿಕೆ, ವಾರ್ತಾ ಪತ್ರಿಕೆ ಅಥವಾ ದೃಶ್ಯ ಮಾಧ್ಯಮಗಳಲ್ಲಿ ಪ್ರಕಟಿಸುವುದನ್ನು ಮತ್ತು ಮಗುವನ್ನು ಗುರುತಿಸಲು ಕಾರಣವಾಗುವ ಅದರ ಹೆಸರು, ವಿಳಾಸ, ಶಾಲೆ, ಇನ್ನಿತರೆ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿವೆ. ಮಗುವಿನ ಹಿತರಕ್ಷಣೆಯ ದೃಷ್ಟಿಯಿಂದ ಸಂಬಂಧಿಸಿದ ಪ್ರಾಧಿಕಾರಗಳು ಅನುಮತಿಯನ್ನು ನೀಡಿದಲ್ಲಿ ಮಾತ್ರ ವರದಿಯನ್ನು ಪ್ರಕಟಿಸಬಹುದಾಗಿರುತ್ತದೆ. ಸದರಿ ನಿಯಮವನ್ನು ಉಲ್ಲಂಘಿಸಿದ ಯಾವುದೇ ವ್ಯಕ್ತಿಯನ್ನು ರೂ. 25000.00 ಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಒಳಪಡಿಸುವುದು.

ಲೈಂಗಿಕ ದುರುಪಯೋಗಕ್ಕೆ ಒಳಗಾದ ಮಗುವಿನ ಖಾಸಗಿತನ ಮತ್ತು ಗೌಪ್ಯತೆಯ ಹಕ್ಕನ್ನು ರಕ್ಷಿಸಲು ಮತ್ತು ಮಗುವು ಮರು ಬಲಿಪಶುವಾಗುವುದನ್ನು ತಡೆಗಟ್ಟಲು ಮಾಧ್ಯಮಗಳಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೋ) ಕಾಯ್ದೆ, 2012 ನ್ನು ವ್ಯಾಪಕವಾಗಿ ಪ್ರಚಾರ ಮಾಡಲಾಗುತ್ತಿದೆ. ಪೋಕ್ಸೋ ಕಾಯ್ದೆಯ 23ನೇ ಕಲಂ ಮಗುವನ್ನು ಗುರುತಿಸಲು ಕಾರಣವಾಗುವ ಅದರ ಹೆಸರು, ಕೌಟುಂಬಿಕ ಮಾಹಿತಿ, ಶಾಲೆ, ನೆರೆ–ಹೊರೆಯ ವಿವರ ಅಥವಾ ಇನ್ನಿತರೆ ಯಾವುದೇ ಮಾಹಿತಿಯನ್ನು ಲಿಖಿತ ಅಥವಾ ದೃಶ್ಯ ಮಾಧ್ಯಮಗಳಲ್ಲಿ ಪ್ರಕಟಿಸುವುದನ್ನು ಹಾಗೂ ಅಪೂರ್ಣ ಮತ್ತು ಅಧಿಕೃತವಲ್ಲದ ಮಾಹಿತಿಯನ್ನು ಬಹಿರಂಗಪಡಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ವಿಶೇಷ ನ್ಯಾಯಾಲಯವು ಮಗುವಿನ ಹಿತರಕ್ಷಣೆಯ ದೃಷ್ಟಿಯಿಂದ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಮಾಹಿತಿಯನ್ನು ಪ್ರಕಟಿಸಲು ಅನುಮತಿಯನ್ನು ನೀಡಬಹುದು. ಸದರಿ ನಿಯಮವನ್ನು ಉಲ್ಲಂಘಿಸಿದ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯನ್ನು 6 ತಿಂಗಳಿಗಿಂತ ಕಡಿಮೆಯಿಲ್ಲದ ಮತ್ತು ಒಂದು ವರ್ಷದವರೆಗೆ ವಿಸ್ತಿರಿಸಬಹುದಾದ ಜೈಲು ಶಿಕ್ಷೆ ಹಾಗೂ ದಂಡಕ್ಕೆ ಒಳಪಡಿಸಲಾಗುವುದು.

ಪೋಕ್ಸೋ ಕಾಯ್ದೆಯು ಪೊಲೀಸರೂ ಸಹ ಮಗುವಿನ ಕುರಿತಾದ ಮಾಹಿತಿಯನ್ನು ಬಹಿರಂಗಗೊಳಿಸದಂತೆ ಮಕ್ಕಳಿಗೆ ರಕ್ಷಣೆಯನ್ನು ನೀಡುತ್ತದೆ. ಸದರಿ ಕಾಯ್ದೆಯ 24ನೇ ಕಲಂ ಮಗುವಿನ ಹಿತರಕ್ಷಣೆಯ ದೃಷ್ಟಿಯಿಂದ ವಿಶೇಷ ನ್ಯಾಯಾಲಯವು ಮಾಹಿತಿಯನ್ನು ಬಹಿರಂಗಗೊಳಿಸುವಂತೆ ನೀಡುವ ನಿರ್ದೇಶನದ ಹೊರತು ಕಾಯ್ದೆಯ ವ್ಯಾಪ್ತಿಯಲ್ಲಿ ಬರುವ ಮಗುವಿನ ಗುರುತನ್ನು ಬಹಿರಂಗಗೊಳಿಸದಂತೆ ರಕ್ಷಿಸಲು ಪೊಲೀಸರಿಗೆ

ನಿರ್ದೇಶಿಸುತ್ತದೆ. ಅಂತಿಮವಾಗಿ ಕಾಯ್ದೆಯ 43ನೇ ಕಲಂ ಪೋಕ್ಸೋ ಕಾಯ್ದೆ ಮತ್ತು ಕಾಯ್ದೆಯಲ್ಲಿ ನೀಡಲಾಗಿರುವ ಅವಕಾಶಗಳ ಕುರಿತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದೂರದರ್ಶನ, ರೇಡಿಯೋ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಮಕ್ಕಳು ಮತ್ತು ಪೋಷಕರಿಗೆ ತಲುಪಿಸುವಂತೆ ತಿಳಿಸುತ್ತದೆ.

**ಮಾಧ್ಯಮ ಮಾರ್ಗಸೂಚಿಗಳು:**

ಮಕ್ಕಳ ಕುರಿತಾಗಿ ಮಾಹಿತಿಯನ್ನು ಪ್ರಕಟಿಸುವಾಗ ಮಾಧ್ಯಮಗಳು ಕೆಳಕಂಡ ನಿಯಮಗಳನ್ನು ಪಾಲಿಸುವುದು.

**1. ಮಕ್ಕಳ ಭಾಗವಹಿಸುವಿಕೆ:**

ಮಕ್ಕಳ ಭಾಗವಹಿಸುವಿಕೆ ಎಂದರೆ ಮಾಧ್ಯಮಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವುದು. ಇದು ಮಾಧ್ಯಮದಲ್ಲಿ ಮಕ್ಕಳ ದೃಷ್ಟಿಕೋನ ಹಾಗೂ ಅಭಿಪ್ರಾಯಗಳನ್ನು ಪ್ರಸಾರ ಮಾಡುವುದನ್ನು ಹಾಗೂ ಮಕ್ಕಳನ್ನು ಮಾಧ್ಯಮ ಮತ್ತು ಮಾಧ್ಯಮ ವಿಷಯಗಳ 'ಕ್ರಿಯಾತ್ಮಕ ನಿರ್ಮಾಪಕ'ರಾಗಿ ಗುರುತಿಸುವುದನ್ನು ಒಳಗೊಂಡಿದೆ. ಇದನ್ನು ಮಕ್ಕಳು ತಮ್ಮ ಸುತ್ತಲಿನ ವಾಸ್ತವಾಂಶಗಳು ಹಾಗೂ ಇತರೆ ಅಂಶಗಳ ಕುರಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ವೇದಿಕೆ ಕಲ್ಪಿಸುವುದು ಎಂಬುದಾಗಿ ಅರ್ಥೈಸುವುದು.

**2. ಗೌರವ ನೀಡುವುದು :**

ಮಕ್ಕಳನ್ನು ತಮ್ಮದೇ ಆದ ಅಭಿಪ್ರಾಯ, ಅನಿಸಿಕೆಗಳನ್ನು ಹೊಂದಿರುವ, ವಯಸ್ಸಿಗೆ ಯುಕ್ತವಾದ ಆಯ್ಕೆಗಳನ್ನು ಮಾಡುವ ಸಾಮರ್ಥ್ಯವುಳ್ಳ ಸ್ವತಂತ್ರ್ಯವ್ಯಕ್ತಿಗಳನ್ನಾಗಿ ನೋಡಬೇಕೇ ಹೊರತು 'ಬೌತಿಕ ವಸ್ತು'ಗಳಂತಲ್ಲ. ಮಕ್ಕಳಿಗೆ ಮಾಧ್ಯಮದಲ್ಲಿ ಭಾಗವಹಿಸಲು ಅವಕಾಶ ನೀಡಬೇಕು ಮತ್ತು ತಾವು ಮಾಧ್ಯಮದಲ್ಲಿ ಹೇಗೆ ಕಾಣಿಸಬೇಕೆಂದು ಬಯಸುವರೋ ಅದೇ ರೀತಿಯಲ್ಲಿ ಅವರನ್ನು ತೋರಿಸಬೇಕು. ಮಾಧ್ಯಮದಲ್ಲಿ ಮಕ್ಕಳೊಂದಿಗೆ ಸಂವಹನ ನಡೆಸುವ ಮತ್ತು ಅವರನ್ನು ತೋರಿಸುವ ರೀತಿಯು 'ಮಕ್ಕಳು' ಎಂದೇ ಇರಬೇಕು.

**3. ಮಕ್ಕಳ ಸ್ನೇಹಿ :**

ಮಕ್ಕಳು ತಮಗೆ ಸುಲಭ ಮತ್ತು ಸರಳವಾಗಿ ಗ್ರಹಿಸಲು, ಅರ್ಥಮಾಡಿಕೊಳ್ಳಲು ಹಾಗೂ ವಿವರಿಸುವಂತಹ ಮಾಹಿತಿಯನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.

**4. ಒಳಗೊಳ್ಳುವಿಕೆ :**

ಮಾಧ್ಯಮದಲ್ಲಿ ಮಕ್ಕಳಿಗೆ ಅವಕಾಶ ನೀಡುವಾಗ ಅಥವಾ ಅವರನ್ನು ತೋರಿಸುವಾಗ ಲಿಂಗತ್ವ, ವಯಸ್ಸು, ಭಾಷೆ, ಧರ್ಮ, ಪ್ರದೇಶ, ಜಾತಿ, ವರ್ಗ, ಜನಾಂಗೀಯತೆ ಹಾಗೂ ಸಾಮರ್ಥ್ಯಗಳ ಆಧಾರದ ಮೇಲೆ ತಾರತಮ್ಯ ಮಾಡಬಾರದು. ಮಕ್ಕಳ ದೃಷ್ಟಿಕೋನಗಳು ಸಂದರ್ಭಾನುಸಾರವಾಗಿರುತ್ತವೆ. ಆದುದರಿಂದ ಮಕ್ಕಳು ಮತ್ತು ಅವರ ಬಾಲ್ಯವನ್ನು ಮಾಧ್ಯಮಗಳಲ್ಲಿ ಭಿತ್ತರಿಸುವಾಗ ವೈವಿಧ್ಯತೆಗೆ ಮನ್ನಣೆ ನೀಡುವುದು.

**5. ಸುರಕ್ಷತೆ :**

ಮಕ್ಕಳ ಕುರಿತು ಕಾರ್ಯಕ್ರಮಗಳನ್ನು ಮಾಡುವಾಗ, ವರದಿ ಮಾಡುವಾಗ, ಅವರ ಸಂದರ್ಶನ ಮಾಡುವಾಗ, ಛಾಯಾಚಿತ್ರ ತೆಗೆಯುವಾಗ ಮಕ್ಕಳ ಸಮಸ್ಯೆಗಳು, ಕಥೆಗಳು, ಚಿತ್ರಗಳನ್ನು ನಿರೂಪಿಸುವಾಗ ಮಕ್ಕಳ ಸುರಕ್ಷತೆ, ಘನತೆ, ಗೌರವ, ಖಾಸಗೀತನ ಹಾಗೂ ಬೆಳವಣಿಗೆಯನ್ನು ಉಲ್ಲಂಘಿಸಬಾರದು.

**ಗಮನಿಕೆ ಪಟ್ಟಿ**

ಮಕ್ಕಳ ಮೇಲಿನ ಹಲ್ಲೆಯನ್ನು ತಡೆಗಟ್ಟುವಲ್ಲಿ ಮತ್ತು ರಕ್ಷಣೆಯನ್ನು ಖಾತರಿಪಡಿಸುವಲ್ಲಿ ಮಾಧ್ಯಮದ ಪಾತ್ರ :

- ಮಾಧ್ಯಮವು ಮಕ್ಕಳ ರಕ್ಷಣೆಯ ಕುರಿತ ಮಾಹಿತಿಯನ್ನು ವಿವಿಧ ರೂಪಗಳಲ್ಲಿ ಸರಳ ಭಾಷೆ ಮತ್ತು ಚಿತ್ರಗಳ (ಅನಿಮೇಷನ್ ಅಥವಾ ಕಾರ್ಟೂನ್) ಮೂಲಕ ಪ್ರಸ್ತುತಪಡಿಸುವುದು. ಇದರಿಂದಾಗಿ ಮಕ್ಕಳು ಮಾಹಿತಿಯನ್ನು ಸುಲಭವಾಗಿ ಪಡೆಯಲು, ಗ್ರಹಿಸಲು ಮತ್ತು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.
- ಮಾಧ್ಯಮವು ಮಕ್ಕಳ ರಕ್ಷಣೆ ಮತ್ತು ದೂರು ನೀಡಲು ಇರುವ ವ್ಯವಸ್ಥೆಗಳಾದ ಮಕ್ಕಳ ವಿಶೇಷ ಪೊಲೀಸ್ ಘಟಕ (ಪೊಲೀಸ್ ಠಾಣೆಗಳಲ್ಲಿರುವ ಮಕ್ಕಳ ಕಲ್ಯಾಣಾಧಿಕಾರಿಗಳು), ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ಸಹಾಯವಾಣಿ–1098, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಬಗ್ಗೆ ಮಾಹಿತಿಯನ್ನು ಪ್ರಚಾರ ಮಾಡುವ ಮೂಲಕ  ಮಕ್ಕಳು, ಕುಟುಂಬಗಳು ಹಾಗೂ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸುವುದು.
- ಗ್ರಾಮ ಸಭೆಗಳನ್ನು ಕುರಿತ ಅದರಲ್ಲೂ ವಿಶೇಷವಾಗಿ ಮಕ್ಕಳ ಗ್ರಾಮ ಸಭೆಯನ್ನು ಕುರಿತು ನವೆಂಬರ್ ತಿಂಗಳಲ್ಲಿ ವ್ಯಾಪಕ ಪ್ರಚಾರವನ್ನು ನೀಡುವುದು ಮತ್ತು ಈ ಮೂಲಕ ಮಕ್ಕಳು ತಾವು ಎದುರಿಸಿದ ಸಮಸ್ಯೆಗಳನ್ನು ಹಾಗೂ ರೂಡಿಸಿಕೊಂಡ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತದೆ.
- ಸಮೂಹ ಮಾಧ್ಯಮಗಳನ್ನು ಮಕ್ಕಳ ಹಕ್ಕುಗಳು, ಸಮಸ್ಯೆಗಳು ಮತ್ತು ಮಕ್ಕಳ ರಕ್ಷಣಾ ವ್ಯವಸ್ಥೆಯ ಬಗ್ಗೆ ವ್ಯಾಪಕವಾಗಿ ಜಾಗೃತಿ ಮೂಡಿಸಲು ಬಳಸುವುದು.
- ಮಕ್ಕಳ ರಕ್ಷಣೆಯ ಕುರಿತ ಮತ್ತು ಮಕ್ಕಳು ಬಯಸುವ ಮಾಹಿತಿಯನ್ನು ಮಾಧ್ಯಮದಲ್ಲಿ ಪ್ರಸಾರ ಮಾಡುವುದಕ್ಕೆ ಹೆಚ್ಚು ಆದ್ಯತೆ ನೀಡುವುದು ಹಾಗೂ ಅವಕಾಶ ಕಲ್ಪಿಸುವುದು.

**ಮಕ್ಕಳ ಭಾಗವಹಿಸುವಿಕೆ :**

- ಮಾಧ್ಯಮಗಳು, ಮಕ್ಕಳ ರಕ್ಷಣೆಯನ್ನು ಕುರಿತು ಮಕ್ಕಳು ತಮ್ಮ ಕಾಳಜಿಯನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿದ್ದಾರೆ ಎಂಬುದನ್ನು ಅರಿತು, ಅವರು ತಮ್ಮ ಅಭಿಪ್ರಾಯ, ಅನಿಸಿಕೆ ಮತ್ತು ಸಲಹೆಗಳನ್ನು ಭಾಗವಹಿಸುವಿಕೆಯ ಮೂಲಕ ವ್ಯಕ್ತಪಡಿಸಲು ಅವಕಾಶ ನೀಡುವುದು.
- ಮಕ್ಕಳ ರಕ್ಷಣೆ ಮತ್ತು ಇತರೆ ಸುರಕ್ಷತಾ ಅಂಶಗಳ ಕುರಿತು ತಮ್ಮ ಅಭಿಪ್ರಾಯ, ಅನಿಸಿಕೆಯನ್ನು ವ್ಯಕ್ತಪಡಿಸಲು ಮಾಧ್ಯಮವನ್ನು ಬಳಸಿಕೊಳ್ಳುವ ಕೌಶಲ್ಯವನ್ನು ಬೆಳೆಸಿಕೊಳ್ಳಲು ಮಕ್ಕಳಿಗೆ ಅನುವು ಮಾಡಿಕೊಡುವುದು.
- ಮಕ್ಕಳ ರಕ್ಷಣೆ ಮತ್ತು ಇತರೆ ಸುರಕ್ಷತಾ ಅಂಶಗಳ ಕುರಿತು ತಮ್ಮ ಅಭಿಪ್ರಾಯ, ಅನಿಸಿಕೆಯನ್ನು ವ್ಯಕ್ತಪಡಿಸಲು ಸೂಕ್ತ ಮಾಧ್ಯಮವನ್ನು ಆಯ್ಕೆಮಾಡಿಕೊಳ್ಳಲು ಮಕ್ಕಳಿಗೆ ಅನುವು ಮಾಡಿಕೊಡುವುದು.

**ಮಕ್ಕಳ ರಕ್ಷಣೆಯ ಬಗ್ಗೆ ಮಕ್ಕಳನ್ನು ಸಂದರ್ಶಿಸುವುದು :**

- ವರದಿಗಾರರು ಸಂದರ್ಶನ ನೀಡಲು ಅಥವಾ ಭಾಗವಹಿಸಲು ಅಥವಾ ಭಾವಚಿತ್ರ ತಗೆಸಿಕೊಳ್ಳಲು ನಿರಾಕರಿಸುವ ಮಗುವಿನ ಹಕ್ಕನ್ನು ಗೌರವಿಸುವುದು.

- ಶಿಕ್ಷಣ ಸಂಸ್ಥೆ, ಮಕ್ಕಳ ಪಾಲನಾ ಸಂಸ್ಥೆಗಳು, ಸರ್ಕಾರಿ ಬಾಲ ಮಂದಿರಗಳು, ವಿದ್ಯಾರ್ಥಿ ನಿಲಯಗಳ ಮಕ್ಕಳನ್ನು ಸಂದರ್ಶನ ಮಾಡುವಾಗ ಆ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿ ಅಥವಾ ನೀತಿ ಸಂಹಿತೆಯನ್ನು ಪಾಲಿಸುವುದು.

- ವರದಿಗಾರರು ಮಕ್ಕಳನ್ನು ಸಂದರ್ಶಿಸುವಾಗ ತಾವು ಮಾಧ್ಯಮದವರೆಂದು ಪರಿಚಯಿಸಿಕೊಳ್ಳುವುದು ಮತ್ತು ಸಂದರ್ಶನದ ಸ್ವರೂಪ, ಉದ್ದೇಶಗಳನ್ನು ತಿಳಿಸುವುದರೊಂದಿಗೆ ಅವರಿಗೆ ಅರ್ಥವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

- ಮಗುವಿನ ಸಂದರ್ಶನವನ್ನು ಅಧಿಕೃತ ವಯಸ್ಕರ ಸಮ್ಮುಖದಲ್ಲಿಯೇ ನಡೆಸುವುದು. ವಿಶೇಷ ಅಗತ್ಯವುಳ್ಳ ಮಕ್ಕಳ ಸಂದರ್ಶನದಲ್ಲಿ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.

- ವರದಿಗಾರರು ಮಗುವಿನ ಪರಿಸ್ಥಿತಿಯ ಬಗ್ಗೆ ಹೆಚ್ಚು ಸಂವೇದನಾಶೀಲರಾಗಿರಬೇಕು ಮತ್ತು ಮಗುವಿಗೆ ಹಿತಕರವಾದ ಹಾಗೂ ಭಯಮುಕ್ತ ವಾತಾವರಣದಲ್ಲಿ ಸಂದರ್ಶನವನ್ನು ನಡೆಸುವುದು.

  ಅ. ಸಂದರ್ಶನದ ವೇಳೆಯಲ್ಲಿ ವರದಿಗಾರರು ಮಗುವು ತನಗೆ ಸಂಬಂಧಿಸಿದ ಘಟನೆಯನ್ನು ತನ್ನದೇ ಆದ ರೀತಿಯಲ್ಲಿ ಸಹಜವಾಗಿ ವಿವರಿಸಲು ಸಮಯಾವಕಾಶವನ್ನು ನೀಡುವುದು ಹಾಗೂ ಮಗು ಬೆದರುವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಿ ಅದನ್ನು ಪೀಡಿಸಬಾರದು.

  ಆ. ಮಾಧ್ಯಮದವರು ವರದಿಮಾಡುವಾಗ, ಸಂದರ್ಶನಕಾರರ ಮತ್ತು ಛಾಯಾಚಿತ್ರಗಾರರ ಸಂಖ್ಯೆಯನ್ನು ಮಿತಿಗೊಳಿಸುವುದು ಹಾಗೂ ಮಗುವಿನ ಸ್ಥೈರ್ಯಕುಂದದಂತೆ ನೋಡಿಕೊಳ್ಳುವುದು.

  ಇ. ಸಂದರ್ಶನ ಮಾಡುವಾಗ ವರದಿಗಾರ, ಮಗುವಿನ ಆಘಾತಕಾರಿ ಮತ್ತು ನೋವಿನ ಅನುಭವಗಳಿಗೆ ಸಂವೇದನಾಶೀಲನಾಗಿರಬೇಕು. ತಾನು ಏನನ್ನು ಮತ್ತು ಯಾವಾಗ ಹೇಳಬೇಕೆಂಬುದನ್ನು ಮಗುವೇ ನಿರ್ಧರಿಸಲು ಅನುವುಮಾಡುವುದು.

**ಮಕ್ಕಳ ಸಮಸ್ಯೆಗಳನ್ನು ವರದಿಮಾಡುವುದು :**

1. ಮಕ್ಕಳ ರಕ್ಷಣೆಯ ಬಗ್ಗೆ ಸಾರ್ವಜನಿಕರನ್ನು ಜಾಗೃತರನ್ನಾಗಿಸಲು, ಅವರಿಗೆ ಮಕ್ಕಳ ಸಮಸ್ಯೆಗಳು, ಮಕ್ಕಳ ಕಾನೂನುಗಳು, ಕಠಿಣ ದಂಡನಾ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು.

   - ಮಾಧ್ಯಮವು ಮಕ್ಕಳ ಹಕ್ಕುಗಳ ಉಲ್ಲಂಘನೆ ಮತ್ತು ಹಲ್ಲೆ ಪ್ರಕರಣಗಳನ್ನು ವರದಿ ಮಾಡುವುದು

   - ಮಕ್ಕಳ ರಕ್ಷಣೆ ಕುರಿತ ಉತ್ತಮ ಆಚರಣೆಗಳನ್ನು ವರದಿ ಮಾಡುವುದು.

   - ಮಕ್ಕಳ ಮೇಲಿನ ಲೈಂಗಿಕ ಹಲ್ಲೆ ಅಥವಾ ಇತರೆ ಸ್ವರೂಪದ ಹಲ್ಲೆ ಅಥವಾ ಅಪರಾಧ ಪ್ರಕರಣಗಳಲ್ಲಿ ವಿಧಿಸುವ ಶಿಕ್ಷೆ/ದಂಡನೆಗಳ ಬಗ್ಗೆ ವರದಿ ಮಾಡುವುದು. ಇದು ಅಪರಾಧಿಗಳಲ್ಲಿ ಭಯವನ್ನು ಹುಟ್ಟಿಸಲು ಸಹಕಾರಿಯಾಗುತ್ತದೆ.

2. ಮಕ್ಕಳ ಮೇಲಿನ ಹಲ್ಲೆ ಪ್ರಕರಣಗಳನ್ನು ವರದಿಮಾಡುವಾಗ ಮಗುವಿನ ಗೌಪ್ಯತೆಯನ್ನು ಗೌರವಿಸುವುದು.

   - ಮಾಧ್ಯಮವು ಮಗುವಿನ ಖಾಸಗೀತನವನ್ನು ಎತ್ತಿಹಿಡಿಯುವುದು ಮತ್ತು ಮಗುವಿನ ಹೆಸರು, ಕುಟುಂಬದ ವಿವರಗಳು, ಶಾಲೆ ಅಥವಾ ಕಾಲೇಜು, ನೆರೆ–ಹೊರೆ ಮುಂತಾದ ಗುರುತನ್ನು ಬಹಿರಂಗಗೊಳಿಸುವಂತಹ ಮಾಹಿತಿಯನ್ನು ಪ್ರಕಟಿಸಬಾರದು. ಬದಲಾಗಿ ಮಿಥ್ಯನಾಮಗಳನ್ನು ಬಳಸುವುದು.

- ಮಾಧ್ಯಮಗಳು ಗೌಪ್ಯತೆಯ ಅಂಶಗಳನ್ನು ಉಲ್ಲಂಘಿಸದೇ, ನೈಜ ಸಂಗತಿಗಳನ್ನು ಮಾತ್ರ ವರದಿಮಾಡುವುದು.

- ಮಾಧ್ಯಮವು ಛಾಯಾ ಚಿತ್ರ ಅಥವಾ ಮಾಹಿತಿಯನ್ನು ವರದಿ ಮಾಡುವ ಮೊದಲು ಪೋಷಕರ/ ಪಾಲಕರ ಅಥವಾ ಪರಿಣಾಮಗಳನ್ನು ಅರ್ಥೈಸಿಕೊಳ್ಳುವ ವಯಸ್ಸಿನ ಮಕ್ಕಳ ಅನುಮತಿಯನ್ನು ಪಡೆಯುವುದು.

- ಮಾಧ್ಯಮದಲ್ಲಿ ತಮ್ಮನ್ನು ಹೇಗೆ ತೋರಿಸಬೇಕೆಂದು ಮಕ್ಕಳು ಬಯಸುತ್ತಾರೋ, ಹಾಗೆಯೇ ತೋರಿಸುವುದು. ಮಾಧ್ಯಮವು ಮಕ್ಕಳಿಂದ ಪಡೆದ ಅಭಿಪ್ರಾಯಗಳನ್ನು ಪರಿಶೀಲಿಸುವುದು ಮತ್ತು ಅವರ ಪ್ರತಿಕ್ರಿಯೆಯನ್ನು ಪಡೆಯುವುದು.

3. ಮಕ್ಕಳ ಮೇಲಿನ ಹಲ್ಲೆ ಕುರಿತ ವರದಿ, ಛಾಯಾಚಿತ್ರ ಮತ್ತು ಹೇಳಿಕೆಗಳನ್ನು, ಭಾವನೆಗಳನ್ನು ಕೆರಳಿಸುವ ರೀತಿಯಲ್ಲಿ ಪ್ರಸಾರಮಾಡಬಾರದು. ಅದು ಮಗುವನ್ನು ಮರುಬಲಿಪಶುವನ್ನಾಗಿಸುತ್ತದೆಯಲ್ಲದೇ, ಮಕ್ಕಳ ರಕ್ಷಣೆಯ ಹಕ್ಕಿನ ಉಲ್ಲಂಘನೆಯಾಗುತ್ತದೆ ಮತ್ತು ದಂಡನೆಗೆ ಗುರಿಯಾಗಬೇಕಾಗುತ್ತದೆ.

4. ಮಾಧ್ಯಮವು ಮಕ್ಕಳನ್ನು ಲೈಂಗಿಕ ವಸ್ತುಗಳಂತೆ ಬಿಂಬಿಸಬಾರದು, ಅಶ್ಲೀಲ ಚಿತ್ರಗಳಲ್ಲಿ ಪ್ರದರ್ಶಿಸಬಾರದು ಅಥವಾ ಲೈಂಗಿಕ ಚಿತ್ರ ಮತ್ತು ಘಟನೆಗಳಲ್ಲಿ ತೋರಿಸಬಾರದು. ಇದನ್ನು POCSO ಕಾಯ್ದೆಯಡಿ ಕಠಿಣ ದಂಡನೆಗೆ ಒಳಪಡಿಸಬಹುದಾಗಿದೆ.

5. ಮಕ್ಕಳ ಮೇಲಿನ ಹಲ್ಲೆ, ಮಕ್ಕಳ ಹಕ್ಕುಗಳ ಉಲ್ಲಂಘನೆ ಮತ್ತು ಅವಶ್ಯಕತೆ ಇರುವಲ್ಲಿ ಮಾಧ್ಯಮಗಳು ವರದಿಯನ್ನು ಪ್ರಕಟಿಸುವಾಗ ಸಾಮಾಜಿಕ–ಸಾಂಸ್ಕೃತಿಕ ಸಂಗತಿಗಳು, ರಾಜಕೀಯ ಸಂಚಲನತೆ, ತಾರತಮ್ಯ ಆಚರಣೆಗಳು, ಸಂಘರ್ಷದ ಸ್ಥಿತಿಗಳು ಮುಂತಾದ ಅಂಶಗಳ ಅಡಿಯಲ್ಲಿ ವರದಿಗಳನ್ನು ಪ್ರಕಟಿಸುವುದು. ಈ ರೀತಿಯ ಸಮತೋಲನದಿಂದ ಕೂಡಿದ ವರದಿಯು ಶಾಸನಾತ್ಮಕ ಸುಧಾರಣೆ ಮತ್ತು ಕ್ರಮಗಳ ಪರಿಶೀಲನೆ ಮತ್ತು ನೀತಿಯ ಪರಿಣಾಮಗಳ ಕುರಿತು ಕ್ರಮವಹಿಸಲು ಸಹಕಾರಿಯಾಗುತ್ತದೆ.

# ಅನುಬಂಧ ಸಂಖ್ಯೆ : 2 – ಶಾಲೆಗಳಿಗೆ ಮಾದರಿ ಮಕ್ಕಳ ರಕ್ಷಣಾ ನೀತಿ

## ಸರ್ಕಾರಿ ಶಾಲೆಗಳಿಗೆ ಮಾದರಿ ಮಕ್ಕಳ ರಕ್ಷಣಾ ನೀತಿ

### 1. ನೀತಿಯ ದೃಷ್ಟಿಕೋನ ಮತ್ತು ಗುರಿಯ ವ್ಯಾಖ್ಯೆ:

<ಶಾಲೆಯ ಹೆಸರು ಮತ್ತು ವಿಳಾಸ> ಶಾಲೆಯಲ್ಲಿ ಮಕ್ಕಳಿಗೆ ಸುರಕ್ಷಿತ, ಪೋಷಿಸುವ, ಬೆಂಬಲಯುತ, ಮತ್ತು ಪ್ರತಿಕ್ರಿಯಾತ್ಮಕ ವಾತಾವರಣವಿದ್ದು ಮಕ್ಕಳ ಹಕ್ಕುಗಳು ಮತ್ತು ಘನತೆಯನ್ನು ಎತ್ತಿಹಿಡಿಯಲಾಗುತ್ತದೆ.

ಮಗುವಿಗೆ ಉತ್ತಮ ಕಲಿಕೆಯ ಮತ್ತು ಸುರಕ್ಷಿತ ವಾತಾವರಣವನ್ನು ಕಲ್ಪಿಸುವತ್ತ ಶಾಲೆಯು ಬದ್ಧವಾಗಿದೆ. ಇದನ್ನು ಉತ್ತಮ ನಿಯಂತ್ರಣಾ ವಿಧಾನಗಳು, ತಕ್ಷಣವೇ ಪರಿಹರಿಸುವ ಮತ್ತು ಪ್ರತಿಕ್ರಿಯಾತ್ಮಕ ಕಾರ್ಯತಂತ್ರಗಳನ್ನು ಬಲಗೊಳಿಸುವುದು, ಬೆಂಬಲ ಸೇವೆಗಳು, ಸಂಬಂಧಿಸಿದ ಸಂಸ್ಥೆಗಳೊಂದಿಗೆ ಮತ್ತು ಮಕ್ಕಳ ರಕ್ಷಣಾ ಕಾರ್ಯತಂತ್ರಗಳೊಂದಿಗೆ ಪಾಲುದಾರಿಕೆಯ ಮೂಲಕ ಸಾಧಿಸಲಾಗುತ್ತದೆ.

ನಮ್ಮ ಶಾಲೆಯು ಮಕ್ಕಳ ಮೇಲೆ ಯಾವುದೇ ರೀತಿಯ ಹಲ್ಲೆ ನಡೆಯದಂತೆ ಮತ್ತು ಸುರಕ್ಷತೆಯ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲು ಬದ್ಧವಾಗಿದೆ.

### 2. ಬದ್ಧತೆಯ ವ್ಯಾಖ್ಯಾನ :

ರಾಜ್ಯವು ತನ್ನ ಪ್ರತಿಯೊಂದು ಮಗುವಿನ ರಕ್ಷಣೆ ಮತ್ತು ಸುರಕ್ಷತೆಗೆ ಬದ್ಧವಾಗಿದೆ. ಇದರೊಂದಿಗೆ ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ವಿವರಿಸಿರುವಂತೆ ಮಕ್ಕಳು ನಮ್ಮ ಆರೈಕೆಯಲ್ಲಿ ಬೆಳವಣಿಗೆ ಹೊಂದಲು, ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯಲು, ಸಮಾನತೆ ಮತ್ತು ತಾರತಮ್ಯರಹಿತ ವಾತಾವರಣವನ್ನು ಹುಟ್ಟುಹಾಕಲು ನಾವು ಬದ್ಧರಾಗಿರುತ್ತೇವೆ. ನಾವು ಮಕ್ಕಳ ಮೇಲಿನ ದೈಹಿಕ, ಲೈಂಗಿಕ ಹಲ್ಲೆ ಮತ್ತು ಭಾವನಾತ್ಮಕ ಹಲ್ಲೆ,ಶೋಷಣೆ, ಕಠಿಣ ದೈಹಿಕ ಶಿಕ್ಷೆ ಹಾಗೂ ನಿರ್ಲಕ್ಷ್ಯಗಳನ್ನೊಳಗೊಂಡಂತೆ ಸುರಕ್ಷತಾ ಉಲ್ಲಂಘನೆಯನ್ನು ವಿರೋಧಿಸುತ್ತೇವೆ. ನಮ್ಮ ಎಲ್ಲಾ ಚಟುವಟಿಕೆಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಕಲ್ಯಾಣವು ಪ್ರಮುಖ ಜವಾಬ್ದಾರಿಯಾಗಿದೆ ಎಂಬುದನ್ನು ಖಾತರಿಪಡಿಸುತ್ತೇವೆ.

### 3. ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಎಲ್ಲಾ ಬಗೆಯ ಮಕ್ಕಳ ಸುರಕ್ಷತಾ ಉಲ್ಲಂಘನೆಯನ್ನು ಗುರುತಿಸುವುದು.

ಮಗುವಿನ ಮೇಲಿನ ಹಲ್ಲೆಯು ದೈಹಿಕ, ಭಾವನಾತ್ಮಕ, ಶಾರೀರಿಕ, ಲೈಂಗಿಕ, ನಿರ್ಲಕ್ಷ್ಯ, ಪೀಡಿಸುವುದು, ತಾರತಮ್ಯಗಳೊಂದಿಗೆ ಕೆಳಕಂಡವುಗಳನ್ನೊಳಗೊಂಡಿದೆ ಎಂಬುದಾಗಿ ನಾವು ಗುರುತಿಸುತ್ತೇವೆ.

**ಎ. ಹಾನಿ :** ಸಾಮಾನ್ಯವಾಗಿ ಉದ್ದೇಶಪೂರ್ವಕವಾಗಿ ಮಗುವಿಗೆ ನೋವು, ಆಘಾತ ಅಥವಾ ಗಾಯವನ್ನುಂಟುಮಾಡಬಹುದಾದ ಯಾವುದೇ ಒಂದು ಕೃತ್ಯ ಅಥವಾ ನಡವಳಿಕೆಯಾಗಿದೆ. ಅನೇಕ ಬಾರಿ ಇದು ದೈಹಿಕವಾಗಿರುತ್ತದೆ ಮತ್ತು ಕೆಲವೊಮ್ಮೆ ಇದು ಸ್ವತಃ ಕತ್ತರಿಸಿಕೊಳ್ಳುವುದು, ಸುಟ್ಟಕೊಳ್ಳುವುದು, ವಸ್ತುಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಸಹ ಒಳಗೊಂಡಿರುತ್ತದೆ.

**ಬಿ. ನಿರ್ಲಕ್ಷ್ಯ :** ಮಗುವು ಯಾವುದೇ ಅಪಾಯ ಅಥವಾ ಹಾನಿಗೆ ಒಳಗಾಗುವುದನ್ನು ತಪ್ಪಿಸಲು ವಿಫಲರಾಗಿ ಅದು ಮಗುವಿನ ಬೆಳವಣಿಗೆ ಹಾಗೂ ಆರೋಗ್ಯದ ಮೇಲೆ ಗುರುತಿಸಬಹುದಾದ ಮಾರಕ ಪರಿಣಾಮಗಳನ್ನು ಬೀರುವ ಸ್ಥಿತಿಯಾಗಿದೆ. ನಿರ್ಲಕ್ಷ್ಯವು ಅನೇಕ ಬಾರಿ ದೀರ್ಘಾವಧಿಯದಾಗಿದ್ದು, ಹಸಿವಿನಿಂದ ಬಳಲುವ, ಪೋಷಕಾಂಶಗಳನ್ನು ನೀಡದಿರುವ, ಭಾವನಾತ್ಮಕ ಬೆಂಬಲ ನೀಡದಿರುವ, ಮಗುವನ್ನು ಒಂಟಿಯಾಗಿ ಬಿಡುವುದು ಅಥವಾ ವೈದ್ಯಕೀಯ, ಶಿಕ್ಷಣ ಸೌಲಭ್ಯ ಕಲ್ಪಿಸದಿರುವುದು ಮತ್ತು ಮೂಲಭೂತ ಅವಶ್ಯಕತೆಗಳಾದ ವಸತಿ ಮತ್ತು ಬಟ್ಟೆಯನ್ನು ನೀಡದಿರುವುದನ್ನು ಒಳಗೊಂಡಿದೆ.

**ಸಿ. ಭಾವನಾತ್ಮಕ ಹಲ್ಲೆ :** ಮಗುವನ್ನು ಭಾವನಾತ್ಮಕವಾಗಿ ಸರಿಯಾಗಿ ನೋಡಿಕೊಳ್ಳದಿರುವುದು ಮಗುವಿನ ಭಾವನಾತ್ಮಕ ಬೆಳವಣಿಗೆಯ ಮೇಲೆ ತೀವ್ರವಾದ ಮತ್ತು ದೀರ್ಘಕಾಲ ಉಳಿಯುವ ಪರಿಣಾಮಗಳನ್ನು ಬೀರುತ್ತದೆ. ಇದು ಕೆಳಕಂಡವುಗಳನ್ನೊಳಗೊಂಡಿದೆ.

ಅ. ಅವನು/ಅವಳು ನಿಷ್ಪ್ರಯೋಜಕ, ಪ್ರೀತಿ ವಂಚಿತರು, ಅಸಮರ್ಪಕ ಮತ್ತು ಇತರರ ಅಗತ್ಯಗಳನ್ನು ಪೂರೈಸಿದಲ್ಲಿ ಮಾತ್ರ ಪ್ರಾಧಾನ್ಯತೆಯನ್ನು ನೀಡಲಾಗುವುದು ಎಂಬುದನ್ನು ಮಗುವಿಗೆ ಹೇಳುವುದು.

ಆ. ಮಕ್ಕಳ ಬೆಳವಣಿಗೆಯ ಮೇಲೆ ಸೂಕ್ತವಲ್ಲದ ನಿರೀಕ್ಷೆಗಳನ್ನು ಹೇರುವುದು ಉದಾ : ಮಗುವಿನ ಬೆಳವಣಿಗೆ ಸಾಮರ್ಥ್ಯ, ಅತಿಯಾದ ರಕ್ಷಣೆ, ಕಲಿಕೆ ಮತ್ತು ಪರಿಶೋಧನೆಗೆ ಮಿತಿಯನ್ನು ಹೇರುವುದು, ಸಾಮಾಜಿಕವಾಗಿ ಇತರರೊಂದಿಗೆ ಬೆರೆಯದಂತೆ ತಡೆಯುವುದು.

ಇ. ಮಗುವು ತಾನು ಘೋರ ಅಥವಾ ಅಪಾಯ ಸ್ಥಿತಿಯಲ್ಲಿದ್ದೇನೆ ಎಂದು ಭಾವಿಸುವಂತಾಗುವುದು ಉದಾ : ಅಪರಾದವನ್ನು ನೋಡುವುದು, ಇತರರು ತೊಂದರೆಗೊಳಗಾಗಿರುವುದನ್ನು ನೋಡುವುದು ಅಥವಾ ಕೇಳುವುದು.

ಈ. ಮಗುವಿನ ಶೋಷಣೆ ಅಥವಾ ಭ್ರಷ್ಟಾಚಾರ.

ಉ.ಅನೇಕಬಾರಿ ಬಾವನಾತ್ಮಕ ಹಲ್ಲೆಯೊಂದೇ ಸಂಭವಿಸಬಹುದಾದರೂ, ಕೆಲವೊಮ್ಮೆ ಇದು ಮಕ್ಕಳನ್ನು ಸರಿಯಾಗಿ ನಡೆಸಿಕೊಳ್ಳದಿರುವುದನ್ನು ಸಹ ಒಳಗೊಂಡಿರುತ್ತದೆ.

**ಡಿ. ದೈಹಿಕ ಹಲ್ಲೆ :** ಒಬ್ಬ ವ್ಯಕ್ತಿಯು ಇನ್ನೊಬ್ಬರ ಮೇಲೆ ಎಸಗುವ ದೈಹಿಕ ಹಲ್ಲೆಯನ್ನು ಗಂಭೀರ ಸ್ವರೂಪದ ಅಪರಾಧವೆಂದು ಪರಿಗಣಿಸಲಾಗುತ್ತದೆ. ಉದಾ : ಹೊಡೆಯುವುದು, ಕಪಾಳಮೋಕ್ಷ ಮಾಡುವುದು, ವಸ್ತುವಿನಿಂದ ಹೊಡೆಯುವುದು.

**ಇ. ಲೈಂಗಿಕ ಹಲ್ಲೆ :** ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ 2012 ಮತ್ತು/ಅಥವಾ ಭಾರತೀಯ ದಂಡ ಸಂಹಿತೆ 1860 ರಡಿ ಅಪರಾಧವೆಂದು ಪರಿಗಣಿಸಲ್ಪಡುವ ಯಾವುದೇ ಕೃತ್ಯ ಅಥವಾ ನಡವಳಿಕೆಯಾಗಿದೆ.

**4. ಸುರಕ್ಷತಾ ಕ್ರಮಗಳು :**

ನಮ್ಮ ಶಾಲೆಯು ಕೆಳಕಂಡ ವ್ಯವಸ್ಥೆಯನ್ನು ಮಾಡಲು ಬದ್ಧವಾಗಿದೆ.

**ಅ.ಸುರಕ್ಷಿತ ಮೂಲ ಸೌಕರ್ಯ:**

ರಾಷ್ಟ್ರೀಯ ಕಟ್ಟಡಗಳ ನೀತಿ ಸಂಹಿತೆ, 2005ನ್ನು ಶಿಕ್ಷಣ ಸಂಸ್ಥೆಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಎಲ್ಲಾ ಸಂಸ್ಥೆಗಳು ಒಂದು ಮಾದರಿ ನೀತಿ ಸಂಹಿತೆಯನ್ನಾಗಿ ಅಳವಡಿಸಿಕೊಂಡಿವೆ.[1] ಮಾನವ ಸಂಪನ್ಮೂಲ ಮಂತ್ರಾಲಯದ ದಿನಾಂಕ 09.10.2014[2] ರ ಶಾಲಾ ಸುರಕ್ಷತೆ ಪ್ರಕಟಣೆಯನ್ವಯ ಎಲ್ಲಾ ಹೊಸ ಕಟ್ಟಡಗಳನ್ನು ವಿನ್ಯಾಸಗೊಳಿಸಬೇಕಿದೆ. ವಯಸ್ಕರು ಮತ್ತು ಮಕ್ಕಳಿಂದ ಮಕ್ಕಳ ಮೇಲಾಗುವ ಅಪಾಯಗಳನ್ನು ತಪ್ಪಿಸುವ ನಿಟ್ಟಿನಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ಸ್ಥಳಗಳಲ್ಲಿ ಅಂದರೆ, ಶೌಚಾಲಯಗಳು, ಪ್ರಯೋಗಾಲಯಗಳು, ಕ್ರೀಡಾ ಸಾಮಗ್ರಿಗಳ ಕೊಠಡಿಗಳು, ಸ್ನಾನದ ಕೊಠಡಿಗಳು, ಕಲಾ ಮಂದಿರಗಳು, ಸಮಾಲೋಚನಾ ಕೊಠಡಿಗಳು ಮುಂತಾದವುಗಳಲ್ಲಿ ಸಮರ್ಪಕ ಬೆಳಕಿನ ವ್ಯವಸ್ಥೆ, ವಯಸ್ಕ ಸೇವಕರು, ಸಮಬಲದ ಬೆಂಬಲ ಗುಂಪುಗಳು ಮುಂತಾದವುಗಳನ್ನು ಒದಗಿಸುವ ಮೂಲಕ ಸುರಕ್ಷಾ ಅಭ್ಯಾಸಗಳನ್ನು ಖಾತರಿಪಡಿಸುವುದು.

---

1. The NBC attributes an 'importance factor' to ascertain the structural design of different types of building, depending on te functional use of the structure, characterised by hazardous consequences of its failure, its post-earthquake functional need, historic value, or economic importance. In section 5.3.4., the Code attributes Importance Factor of 1.5 to Schools, higher han all other buildings indicating the importance of schools.

2. D.O. No. 10-11/2014-EE.4

**ಆ. ನಿಯಂತ್ರಣದ ಲಭ್ಯತೆ:**

ನಮ್ಮ ಶಾಲೆಯಲ್ಲಿ, ಶಾಲೆಗೆ ಭೇಟಿ ನೀಡುವವರಿಗೆ ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ನಿಯಮಗಳನ್ನು ಅಭಿವೃದ್ಧಿಪಡಿಸಿ ಅನುಸರಿಸಲು ತಿಳಿಸಲಾಗುವುದು ಹಾಗೂ ಭೇಟಿ ನೀಡುವವರ ರಿಜಿಸ್ಟರನ್ನು ಸರಿಯಾದ ಸ್ಥಳದಲ್ಲಿ ಇಡುವುದು, ಸೇವೆಗಳ ಸರಬರಾಜುದಾರರು, ಸಮಾಲೋಚಕರು, ಮಾರುಕಟ್ಟೆ ಸಿಬ್ಬಂದಿ ಮುಂತಾದವರುಗಳ ಆಗಮನ ಮತ್ತು ನಿರ್ಗಮನದ ದ್ವಾರಗಳ ಮೇಲ್ವಿಚಾರಣೆ ಮಾಡಲಾಗುವುದು. ಶಿಕ್ಷಣ ಸಂಸ್ಥೆಯ ಹೊರಗಿನ ವ್ಯಕ್ತಿಗಳು ಯಾವ ಸಂದರ್ಭಗಳಲ್ಲಿ ಸಂಸ್ಥೆಯ ಒಳಗೆ ಬರಲು ಅವಕಾಶ ನೀಡಲಾಗಿತ್ತು ಎಂಬುದನ್ನು ಖಾತರಿಪಡಿಸಿಕೊಳ್ಳುವುದು.

**ಇ. ಶಾಲೆಯ ಹೊರಗಿನ ಚಟುವಟಿಕೆಗಳ ಮಾರ್ಗಸೂಚಿಗಳು:**

ಸಂಸ್ಥೆಯು ಹೊರಗಿನ ಪ್ರವಾಸಗಳನ್ನು ಕೈಗೊಂಡಾಗ ಅಂದರೆ, ವಿಹಾರಗಳು, ವನಭೋಜನ, ಶೈಕ್ಷಣಿಕ ಪ್ರವಾಸ, ಅರಿವು–ಜಾಗೃತಿ ಶಿಬಿರಗಳು, ಜಾಥಾಗಳು ಮುಂತಾದ ಸಂದರ್ಭಗಳಲ್ಲಿ ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವುದು.

- ಪೋಷಕರು/ಪಾಲಕರಿಂದ ಲಿಖಿತವಾಗಿ ಅನುಮೋದನೆ ಪಡೆಯುವುದು.
- ಹೊರಡುವ ಮುನ್ನ ವಿದ್ಯಾರ್ಥಿಗಳಿಗೆ ಸುರಕ್ಷತೆಯ ಬಗ್ಗೆ ಮಾಹಿತಿ ನೀಡುವುದು,
- ತುರ್ತು ಪರಿಸ್ಥಿತಿಗಳಲ್ಲಿ ಪೋಷಕರನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳನ್ನು ಪಡೆದುಕೊಳ್ಳುವುದು,
- ಪರಿವೀಕ್ಷಣೆಗೆ ವಿದ್ಯಾರ್ಥಿಗಳು ಮತ್ತು ವಯಸ್ಕರ ಅನುಪಾತ ಪಾಲಿಸುವುದು,
- ಮಗುವಿನ ರಕ್ಷಣಾ ನಿಯಮಗಳ ಬಗ್ಗೆ ಕನಿಷ್ಠ ತರಬೇತಿ ಹೊಂದಿರುವ ಒಬ್ಬ ವಯಸ್ಕರು ಇರುವಂತೆ ನೋಡಿಕೊಳ್ಳುವುದು.
- ಪ್ರಥಮ ಚಿಕಿತ್ಸಾ ಪೆಟ್ಟಿಗೆ ಸಿದ್ಧವಿರುವುದು.
- ಹೊರಗಿನ ಪ್ರದೇಶಗಳಲ್ಲಿ ಮುರಿದಿರುವ ಸ್ನಾನ ಗೃಹದ ನಿರ್ವಹಣೆ
- ಸಾರ್ವಜನಿಕ ಸಾರಿಗೆಯ ಬಳಕೆ, ಇತ್ಯಾದಿಗಳು.
- ನಿರ್ದಿಷ್ಟ ಘಟನೆ ಅಥವಾ ಕಾರ್ಯಕ್ರಮಗಳಾದ ಶಾಲಾ ಪ್ರವಾಸ, ಸ್ಪರ್ಧೆಗಳು ನಡೆಯುವ ಸಂದರ್ಭಗಳಲ್ಲಿ ಮಗುವಿನ ರಕ್ಷಣೆಗಾಗಿ ನಿಗಧಿಪಡಿಸಿದ ವ್ಯಕ್ತಿಯನ್ನು ಜವಾಬ್ದಾರರನ್ನಾಗಿಸಿ, ಹೊಣೆಗಾರಿಕೆಯನ್ನು ನಿಗಧಿಪಡಿಸುವುದು.
- ಪ್ರಾಥಮಿಕ ಶಾಲೆಯವರೆಗೆ 1:10 ಮತ್ತು ಪ್ರೌಢಶಾಲೆ ಮತ್ತು ಅದಕ್ಕೆ ಮೇಲ್ಪಟ್ಟ ಶಾಲೆಗಳಿಗೆ 1:20 ರ ಅನುಪಾತವನ್ನು ನಿಗಧಿಗೊಳಿಸುವುದು. ಈ ಕುರಿತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ದಿನಾಂಕ: 28.07.2014[3] ರ ಮಕ್ಕಳ ಪ್ರವಾಸದ ಮಾರ್ಗಸೂಚಿಗಳನ್ನು ಉಲ್ಲೇಖಿಸುವುದು.

3. D.O. No. 32-5/2014-RMSA-I

**ಈ. ಮಾರ್ಗದರ್ಶನ ಮತ್ತು ಆಪ್ತಸಮಾಲೋಚನಾ ಕೇಂದ್ರಗಳು:**

ಶಿಕ್ಷಣ ಸಂಸ್ಥೆಯಲ್ಲಿ ಮಾರ್ಗದರ್ಶನ ಮತ್ತು ಆಪ್ತಸಮಾಲೋಚನಾ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ಅವುಗಳು ಪರಿಣಾಮಕಾರಿ ಹಾಗೂ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಕ್ರಮವಹಿಸುವುದು. ಸದರಿ ಕೇಂದ್ರಗಳಲ್ಲಿ ತರಬೇತಿ ಹೊಂದಿದ ಆಪ್ತಸಮಾಲೋಚಕರನ್ನು ನೇಮಿಸುವುದು ಅಥವಾ ತರಬೇತಿ ಹೊಂದಿದವರ ಸೇವೆಯನ್ನು ಪಡೆಯುವುದು. ಆಪ್ತಸಮಾಲೋಚನಾ ಸೇವೆಗಳನ್ನು ಸಮಯಕ್ಕನುಗುಣವಾಗಿ ಅಧಿವೇಶನಗಳ ಮೂಲಕ ನೀಡುವುದು. ತರಬೇತಿ ಹೊಂದಿದ ಆಪ್ತಸಮಾಲೋಚಕರು ಲಭ್ಯವಿಲ್ಲದಿದ್ದಲ್ಲಿ, ಶಾಲೆಯಲ್ಲಿರುವ ಒಬ್ಬ ಶಿಕ್ಷಕರಿಗೆ ಮಕ್ಕಳ ಆಪ್ತಸಮಾಲೋಚನಾ ಕೌಶಲ್ಯಗಳ ಬಗ್ಗೆ ತರಬೇತಿ ನೀಡಿ ಬಳಸಿಕೊಳ್ಳುವುದು.

## 5. ಶಾಲೆಯಲ್ಲಿ ಮಕ್ಕಳ ರಕ್ಷಣೆ ಮತ್ತು ಮೇಲ್ವಿಚಾರಣೆಯ ಕ್ರಮಗಳು

5.1 ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯ ಗಮನಿಕೆ ಪಟ್ಟಿಯಲ್ಲಿ ತಿಳಿಸಲಾದ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸಲು, ಅವುಗಳನ್ನು ಪಾಲಿಸಲು ಮತ್ತು ಕಾಲಕಾಲಕ್ಕೆ ಪರಿಶೀಲಿಸಲು ನಮ್ಮ ಶಾಲೆಯು ಬದ್ಧವಾಗಿದೆ.

### 5.2 ಮಕ್ಕಳ ರಕ್ಷಣಾ ಸಮಿತಿ (CPC)

ನಮ್ಮ ಶಾಲೆಯು ಕೆಳಕಂಡವರನ್ನೊಳಗೊಂಡ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸುವುದು.

- ಸಂಸ್ಥೆಯ ಮುಖ್ಯಸ್ಥರು ಸಮಿತಿಯ ಅಧ್ಯಕ್ಷರಾಗಿರುವರು
- ಇಬ್ಬರು ಶಿಕ್ಷಕರು, ಒಬ್ಬರನ್ನು ಮಕ್ಕಳ ರಕ್ಷಣಾ ಅಧಿಕಾರಿಯನ್ನಾಗಿ ಗೊತ್ತುಪಡಿಸುವುದು.
- ಇಬ್ಬರು ಪೋಷಕರು, ಇವರಲ್ಲಿ ಒಬ್ಬ ಮಹಿಳೆ ಇರುವುದು. ಒಬ್ಬರು ಶಾಲಾ ನಿರ್ವಹಣಾ ಸಮಿತಿ ಪೋಷಕ ಸದಸ್ಯರು.
- 8ನೇ ತರಗತಿ ಅಥವಾ ಅದಕ್ಕಿಂತ ಉನ್ನತ ತರಗತಿಗಳ ಎರಡು ವಿದ್ಯಾರ್ಥಿಗಳು. ಅದರಲ್ಲಿ ಒಬ್ಬರು ವಿದ್ಯಾರ್ಥಿನಿಯಾಗಿರುತ್ತಾರೆ.

#### 5.2.1 ಮಕ್ಕಳ ರಕ್ಷಣಾ ಸಮಿತಿಯ ಪಾತ್ರ ಮತ್ತು ಜವಾಬ್ದಾರಿಗಳು :

1. ಮಕ್ಕಳ ರಕ್ಷಣಾ ಸಮಿತಿಯು 3 ತಿಂಗಳಿಗೊಮ್ಮೆ ಮತ್ತು ಸುರಕ್ಷತೆಯ ಉಲ್ಲಂಘನೆಯಾಗಿರುವ ಬಗ್ಗೆ ವರದಿಯಾದಾಗ ಸಭೆ ಸೇರುವುದು
2. ತ್ರೈಮಾಸಿಕ ಸಭೆಯಲ್ಲಿ ಹಿಂದಿನ ತ್ರೈಮಾಸಿಕ ಸಬೆಯಲ್ಲಿ ಚರ್ಚಿಸಲಾದ ಕಾರ್ಯಸೂಚಿಯನ್ನು ಪರಿಶೀಲಿಸುವುದು. ಈ ಅವಧಿಯಲ್ಲಿ ಕಂಡುಬಂದ ಯಾವುದೇ ಬೆದರಿಕೆ/ಅಪಾಯಗಳು ಮತ್ತು ಸಂಸ್ಥೆಯಲ್ಲಿ ಮಕ್ಕಳ ರಕ್ಷಣಾ ಕ್ರಮಗಳನ್ನು ಬಲಪಡಿಸಲು ತೆಗೆದುಕೊಳ್ಳಬೇಕಾಗಿರುವ ಹೆಚ್ಚುವರಿ ಕ್ರಮಗಳ ಬಗ್ಗೆ ಚರ್ಚಿಸುವುದು.
3. ಮಕ್ಕಳ ರಕ್ಷಣಾ ಸಮಿತಿಯು ಮಗುವಿನ ಸುರಕ್ಷತಾ ಉಲ್ಲಂಘನೆಗಳು/ದುರುಪಯೋಗಗಳ ಬಗ್ಗೆ ಬಂದಿರುವ ದೂರುಗಳು/ಶಿಫಾರಸ್ಸುಗಳ ಬಗ್ಗೆ ಮಾತ್ರ ಆದ್ಯತೆ ನೀಡಬೇಕೆ ಹೊರತು ಶಿಕ್ಷಣ ಸಂಸ್ಥೆಯ ಯಾವುದೇ ಆಡಳಿತಾತ್ಮಕ ಸಮಸ್ಯೆಗಳಿಗೆ ಗಮನ ನೀಡುವಂತಿಲ್ಲ.
4. ಮಕ್ಕಳ ರಕ್ಷಣಾ ಸಮಿತಿಯು ಕಾಳಜಿಗಳ ಬಗ್ಗೆ ಚರ್ಚಿಸಿ ಅವುಗಳನ್ನು ದಾಖಲಿಸುವುದು ಮತ್ತು ಸೂಕ್ತ ಶಿಫಾರಸ್ಸುಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಸಂಸ್ಥೆಯ ಆಡಳಿತ ಮಂಡಳಿಗೆ ನೀಡುವುದು.

5. ಮಕ್ಕಳ ರಕ್ಷಣಾ ಸಮಿತಿಯು ಗಮನಿಸಿರುವ ಕಾಳಜಿಗಳನ್ನು ಬಗೆಹರಿಸುವುದು ಮತ್ತು ನಿಗದಿತ ಅವದಿಯಲ್ಲಿ ಪೂರ್ಣಗೊಳಿಸುವುದನ್ನು ಖಾತರಿ ಪಡಿಸಿಕೊಳ್ಳುವುದು.
6. ಮಗುವಿನ ರಕ್ಷಣೆ ಮತ್ತು ಸುರಕ್ಷತೆಗೆ ಸಂಬಂದಿಸಿದ ಎಲ್ಲಾ ರಿಜಿಸ್ಟರ್‌ಗಳು, ಕಡತಗಳು, ಕಡತ ಕೋಶ ಮತ್ತು ದಾಖಲೆಗಳನ್ನು ಮಕ್ಕಳ ರಕ್ಷಣಾ ಸಮಿತಿಯು ನಿರ್ವಹಿಸುವುದು.
7. ಅಗತ್ಯವಿರುವಾಗಲೆಲ್ಲಾ ಮಕ್ಕಳ ರಕ್ಷಣಾ ಸಮಿತಿಯು ಬಾಹ್ಯ ನಿಪುಣರ ಸಹಾಯವನ್ನು ಪಡೆಯುವುದು.
8. ಮಕ್ಕಳ ರಕ್ಷಣಾ ಸಮಿತಿಯ ಅವಧಿ 2 ಶೈಕ್ಷಣಿಕ ವರ್ಷಗಳಾಗಿರುತ್ತವೆ. ಖಾಲಿ ಇರುವ ಹುದ್ದೆಯನ್ನು ಒಂದು ತಿಂಗಳೊಳಗೆ ಅಥವಾ ಶೈಕ್ಷಣಿಕ ವರ್ಷದ ಆರಂಭದಲ್ಲಿ ಭರ್ತಿಮಾಡುವುದು. ಇವುಗಳಲ್ಲಿ ಯಾವುದು ಮೊದಲು ಬರುತ್ತದೆಯೋ ಅದನ್ನು ಪರಿಗಣಿಸುವುದು.
9. ಮಕ್ಕಳ ರಕ್ಷಣಾ ಸಮಿತಿಯು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು.

**ಘಟನೆಗೆ ಸಂಬಂಧಿಸಿದಂತೆ ಮಕ್ಕಳ ರಕ್ಷಣಾ ಸಮಿತಿಯ ಪಾತ್ರ ಮತ್ತು ಜವಾಬ್ದಾರಿಗಳು :**

1. ಪ್ರಕರಣ ವರದಿಯಾದಲ್ಲಿ ಮಕ್ಕಳ ರಕ್ಷಣಾ ಸಮಿತಿಯು ಆದಷ್ಟು ಬೇಗನೆ ನಿಯಮಿತ ಅನುಸರಣೆಯೊಂದಿಗೆ ಪ್ರಕರಣ ಅಂತ್ಯಗೊಳ್ಳುವರೆಗೆ ಸಭೆಸೇರುವುದು. ಕಲಂ 5 ರಲ್ಲಿ ಪರಿಶೀಲನಾ ನಿಯಮಾವಳಿಗಳನ್ನು ವಿವರಿಸಲಾಗಿದೆ.
2. ಘಟನೆಯು ವರದಿಯಾದಾಗ ಮಕ್ಕಳ ರಕ್ಷಣಾ ಸಮಿತಿ ಮತ್ತು ಶಿಕ್ಷಣ ಸಂಸ್ಥೆಯ ಆಡಳಿತವು ಮಗುವಿನ ಹಿತಾಸಕ್ತಿಯನ್ನು ಕಾಪಾಡಲು ಅದರ ಸುರಕ್ಷತೆ, ಭದ್ರತೆ, ಗೌಪ್ಯತೆಯ ಹಕ್ಕನ್ನು ಗಮನದಲ್ಲಿಟ್ಟುಕೊಂಡು ತನಿಖೆ ನಡೆಯುವಾಗ ಪೊಲೀಸ್, ನ್ಯಾಯಾಂಗ ಮತ್ತು ಸ್ಥಳೀಯ ಆಡಳಿತದೊಂದಿಗೆ ಕಾನೂನಿನಲ್ಲಿರುವ ಅವಕಾಶದಂತೆ ಸಹಕರಿಸುವುದು.
3. ಮಕ್ಕಳ ರಕ್ಷಣಾ ಸಮಿತಿಯು ಘಟನೆಯಿಂದ ಇತರೆ ಮಕ್ಕಳು, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ವಯಸ್ಕರು ಮತ್ತು ಶಿಕ್ಷಣ ಸಂಸ್ಥೆಯ ಮೇಲಾಗುವ ಪರಿಣಾಮಗಳನ್ನು ನಿರ್ಣಯಿಸುವುದು ಮತ್ತು ಬಗೆಹರಿಸುವುದು.
4. ಮಕ್ಕಳ ರಕ್ಷಣಾ ಸಮಿತಿಯು ತನ್ನ ಅನುಭವದ ಆದಾರದ ವಿಶ್ಲೇಷಣೆಯನ್ನಾಧರಿಸಿ ಮಕ್ಕಳ ಮೇಲಿನ ಹಲ್ಲೆಗೆ ಅಥವಾ ನಿಂದನೆಗೆ ಕಾರಣವಾದ ಅಂಶಗಳನ್ನು ಅರ್ಥಮಾಡಿಕೊಂಡು ತನ್ನ ಜ್ಞಾನದ ಹಿನ್ನೆಲೆಯಲ್ಲಿ ಶಿಕ್ಷಣ ಸಂಸ್ಥೆಗೆ (ವಯಸ್ಕರು, ವಿದ್ಯಾರ್ಥಿಗಳು, ಮಕ್ಕಳು, ಆಡಳಿತ ಮಂಡಳಿ, ಸೇವಾ ಪೂರೈಕೆದಾರರು)ಪುನಶ್ಚೇತನ ತರಬೇತಿಯನ್ನು ಶಿಫಾರಸ್ಸುಮಾಡುವುದು.

**5.2.2 ಅಧ್ಯಕ್ಷರು ಮತ್ತು ಮಕ್ಕಳ ರಕ್ಷಣಾಧಿಕಾರಿಗಳ ಪಾತ್ರ ಮತ್ತು ಜವಾಬ್ದಾರಿಗಳು :**

1. **ಅಧ್ಯಕ್ಷರು** : ಪ್ರಾಂಶುಪಾಲರು/ಮುಖ್ಯೋಪಾದ್ಯಾಯರು/ಸಂಸ್ಥೆಯ ಮುಖ್ಯಸ್ಥರು ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ ಮತ್ತು ಕೆಳಕಂಡ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ.
   - ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶಿಕ್ಷಣ ಸಂಸ್ಥೆಗಳಿಗಾಗಿ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸುವುದು ಮತ್ತು ಸದರಿ ಮಾರ್ಗಸೂಚಿಗಳನ್ನು ಪಾಲಿಸುವುದು.

- ಶಿಕ್ಷಣ ಸಂಸ್ಥೆಯಲ್ಲಿನ ಎಲ್ಲಾ ಸಿಬ್ಬಂದಿಗಳಿಗೆ ಸಹಕರಿಸುವ ಮೂಲಕ, ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತಾ ಉಲ್ಲಂಘನೆಗಳನ್ನು ಅಧಿಕೃತ ನಮೂನೆಯಲ್ಲಿ ದಾಖಲಿಸುವುದು.

- ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಸಾಮಾರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಹಮ್ಮಿಕೊಳ್ಳುವುದು.

- ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸಹಕಾರದೊಂದಿಗೆ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಅನುಷ್ಠಾನದ ವಾರ್ಷಿಕ ಪರಿಶೀಲನೆಯನ್ನು ನಡೆಸುವುದು ಮತ್ತು ಮಕ್ಕಳ ರಕ್ಷಣಾ ಸಮಿತಿ, ಸಂಬಂಧಿಸಿದ ಸಿಬ್ಬಂದಿಗಳು ಮತ್ತು ಸಂಸ್ಥೆಗಳನ್ನು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯೊಂದಿಗೆ ಪ್ರತಿ ಮೂರು ವರ್ಷಗಳಿಗೊಮ್ಮೆ ಪರಿಶೀಲಿಸುವುದು.

2. **ಮಕ್ಕಳ ರಕ್ಷಣಾಧಿಕಾರಿ :** ಶಿಕ್ಷಣ ಸಂಸ್ಥೆಯಲ್ಲಿನ ಬೋಧನಾ ಸಿಬ್ಬಂದಿಯಲ್ಲಿ ಒಬ್ಬರನ್ನು ಮಕ್ಕಳ ರಕ್ಷಣಾಧಿಕಾರಿಯನ್ನಾಗಿ ನೇಮಿಸಲಾಗುತ್ತದೆ ಮತ್ತು ಇವರು ಸಮಿತಿಯ ಅಧ್ಯಕ್ಷರಿಗೆ ಸಹಕಾರವನ್ನು ನೀಡುವುದು. ಮಕ್ಕಳ ರಕ್ಷಣಾಧಿಕಾರಿಯವರು ಸಂಸ್ಥೆಯ ಶಾಶ್ವತ ಸಿಬ್ಬಂದಿಯಾಗಿರಬೇಕು ಮತ್ತು ಮಹಿಳಾ ಸಿಬ್ಬಂದಿಯನ್ನು ನೇಮಿಸಲು ಒತ್ತುನೀಡುವುದು ಹಾಗೂ ಇವರು ಕನಿಷ್ಠ ಐದು ವರ್ಷಗಳ ಅನುಭವವನ್ನು ಹೊದಿರಬೇಕು.

  - ಮೌಖಿಕ ಅಥವಾ ಲಿಖಿತವಾಗಿ ಸ್ವೀಕರಿಸಲಾದ ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ ಮಕ್ಕಳ ಸುರಕ್ಷತಾ ಉಲ್ಲಂಘನೆಯ ಪ್ರಕರಣಗಳನ್ನು ನೋಂದಾಯಿಸಿಕೊಳ್ಳುವುದು ಮತ್ತು ಅದರ ಗೌಪ್ಯತೆಯನ್ನು ಕಾಪಾಡುವುದು.

  - ಪ್ರಕರಣಕ್ಕೆ ಸಂಬಂಧಿಸಿದ ದಾಖಲೆ ಮತ್ತು ಕಡತಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.

  - ಮಗುವಿನ ದುರುಪಯೋಗವೂ ಸೇರಿದಂತೆ ಸುರಕ್ಷತೆಯ ಉಲ್ಲಂಘನೆಯ ಪ್ರಕರಣಗಳನ್ನು ಕಾನೂನು ಸಮ್ಮತವಾಗಿ ವರದಿ ಮಾಡುವುದು, ಪೊಲೀಸ್ ಮತ್ತು ಇತರೆ ಸ್ಥಳೀಯ ಆಡಳಿತದೊಂದಿಗೆ ಸಹಕರಿಸುವುದು ಹಾಗೂ ಘಟನೆಯನ್ನು ಮರೆಮಾಚುವ ಪ್ರಯತ್ನ ಮಾಡುವುದು ಅಥವಾ ಮಕ್ಕಳ ಪೋಷಕರು ಅಥವಾ ಇತರೆ ಪ್ರಾಧಿಕಾರಗಳ ಮೇಲೆ ಪ್ರಭಾವ ಬೀರದಂತೆ ನೋಡಿಕೊಳ್ಳುವುದು.

  - ಶಾಲೆಯ ಮುಖ್ಯಸ್ಥರು ಮತ್ತು ಸಮಿತಿಯ ಅಧ್ಯಕ್ಷರ ವಿರುದ್ಧ ಮಕ್ಕಳ ಸುರಕ್ಷತೆಯ ಉಲ್ಲಂಘನೆ ಅಥವಾ ಮಕ್ಕಳ ದುರುಪಯೋಗದ ಆಪಾದನೆಗಳು ಕಂಡುಬಂದಲ್ಲಿಯೂ ಸಹ ನಿಯಮಗಳ ಅನುಸಾರ ಕ್ರಮಕೈಗೊಳ್ಳುವುದು.

  - ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಸಂಯೋಜಿಸುವುದು.

### 5.2.3. ಶಾಲಾ ನಿರ್ವಹಣಾ ಸಮಿತಿ (SMC)

- ಸೂಕ್ತ ಪ್ರಾಧಿಕಾರದಿಂದ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ವಯ ಶಾಲಾ ನಿರ್ವಹಣಾ ಸಮಿತಿಯನ್ನು ರಚಿಸುವುದು.

- ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲಾ ರಕ್ಷಣಾ ಮತ್ತು ಸುರಕ್ಷತಾ ಅಂಶಗಳು, ಎಲ್ಲಾ ಸಿಬ್ಬಂದಿಗಳ ನಡವಳಿಕೆ ಮತ್ತು ಮನೋಭಾವ, ವಿದ್ಯಾರ್ಥಿಗಳು ಮತ್ತು ಪೋಷಕರ ಸುರಕ್ಷತಾ ಅಂಶಗಳ ಬಗ್ಗೆ ಚರ್ಚಿಸಲು ಶಾಲಾ ನಿರ್ವಹಣಾ ಸಮಿತಿ ನಿಯಮಿತವಾಗಿ ಸಭೆಗಳನ್ನು ನಡೆಸುವುದು.

**6. ಮಕ್ಕಳ/ಸಲಹಾ ಪೆಟ್ಟಿಗೆ**

ಶಿಕ್ಷಣ ಸಂಸ್ಥೆಯು ಮಕ್ಕಳು ತಮ್ಮ ಸಲಹೆ ಅಥವಾ ದೂರುಗಳನ್ನು ಗೌಪ್ಯತೆಯಿಂದ ನೀಡಲು ಶಾಲಾ ಆವರಣದಲ್ಲಿ ಮಕ್ಕಳಿಗೆ ಸುಲಭವಾಗಿ ದೊರೆಯುವಂತೆ ಸಲಹಾ ಪೆಟ್ಟಿಗೆಯನ್ನು ಹೊಂದುವುದು.

- ಸಲಹಾ ಪೆಟ್ಟಿಗೆಯು ಪಾರದರ್ಶಕ ಮತ್ತು ಒಡೆದುಹೋಗದಂತಹ ವಸ್ತುವಿನಿಂದ ಮಾಡಿದ್ದಾಗಿರಬೇಕು.
- ಸಲಹಾ ಪೆಟ್ಟಿಗೆಗೆ ಎರಡು ಬೀಗದ ಕೀಲಿಗಳಿರಬೇಕು. ಅದರಲ್ಲಿ ಒಂದು ಕೀಲಿ ಮಕ್ಕಳ ರಕ್ಷಣಾ ಅಧಿಕಾರಿಯ ಬಳಿ ಹಾಗೂ ಮತ್ತೊಂದು ವಿದ್ಯಾರ್ಥಿಗಳ ಪ್ರತಿನಿಧಿಯ ಹತ್ತಿರ ಇರಬೇಕು.
- ಒಂದುವೇಳೆ ಸಲಹಾ ಪೆಟ್ಟಿಗೆಯ 2ನೇ ಬೀಗದ ಕೀಲಿಯನ್ನು ಹೊಂದಿರುವ ಮಕ್ಕಳ ಪ್ರತಿನಿಧಿಯು ತನ್ನ ಜವಾಬ್ದಾರಿಯನ್ನು ಶ್ರದ್ಧೆಯಿಂದ ನಿರ್ವಹಿಸದೇ ಇದ್ದಲ್ಲಿ, ವಿದ್ಯಾರ್ಥಿಗಳು ಅವರನ್ನು ಜವಾಬ್ದಾರಿಯಿಂದ ಕೆಳಗಿಳಿಸುವ ಮತ್ತು ಅವರ ಪ್ರತಿನಿಧಿಯನ್ನು ಪಾರದರ್ಶಕ ಪ್ರಜಾಪ್ರಭುತ್ವ ರೀತಿಯಲ್ಲಿ ಪುನರ್ ಆಯ್ಕೆಮಾಡಲು ಹಕ್ಕನ್ನು ಹೊಂದಿರುತ್ತಾರೆ.
- ವಿದ್ಯಾರ್ಥಿಗಳ ಪ್ರತಿನಿಧಿ ಮತ್ತು ಮಕ್ಕಳ ರಕ್ಷಣಾ ಸಮಿತಿಯ ಸದಸ್ಯರ ಸಮ್ಮುಖದಲ್ಲಿ ಸಲಹಾ ಪೆಟ್ಟಿಗೆಯನ್ನು ತೆರೆಯುವುದು ಮತ್ತು ಅದರಲ್ಲಿರುವ ವಿಷಯಗಳನ್ನು ಓದುವುದು.
- ಸಲಹಾ ಪೆಟ್ಟಿಗೆಯನ್ನು ಕನಿಷ್ಠ ವಾರಕ್ಕೊಮ್ಮೆ ತೆರೆಯುವುದು ಮತ್ತು ವರದಿ ಮಾಡಿರುವ ವಿಷಯಗಳಿಗೆ ಮಕ್ಕಳ ರಕ್ಷಣಾ ಸಮಿತಿಯು ಪ್ರತಿಕ್ರಿಯೆಯನ್ನು ನೀಡುವುದು.

**ಅ. ಸಲಹಾ ಪೆಟ್ಟಿಗೆಯಲ್ಲಿನ ಶಿಫಾರಸ್ಸುಗಳು/ದೂರುಗಳಿಗೆ ಪ್ರತಿಕ್ರಿಯೆ ನೀಡುವಿಕೆ :**

- ಮಕ್ಕಳ ರಕ್ಷಣಾಧಿಕಾರಿಯು, ಶಿಫಾರಸ್ಸುಗಳು/ದೂರುಗಳನ್ನು ಮಕ್ಕಳ ಪ್ರತಿನಿದಿಯ ಸಮ್ಮುಖದಲ್ಲಿ ಓದುವುದು ಮತ್ತು ಅವುಗಳನ್ನು ಸೂಕ್ತ ಕ್ರಮಕ್ಕಾಗಿ ಸುರಕ್ಷತಾ ಉಲ್ಲಂಘನೆಗಳು ಮತ್ತು ಅಸುರಕ್ಷಿತ ಉಲ್ಲಂಘನೆಗಳೆಂಬುದಾಗಿ ವಿಂಗಡಿಸುವುದು.
- ಮಕ್ಕಳ ರಕ್ಷಣಾಧಿಕಾರಿಯು ಮಗುವಿನ ದುರುಪಯೋಗವು ಸೇರಿದಂತೆ ಮಕ್ಕಳ ಸುರಕ್ಷತೆಯ ಉಲ್ಲಂಘನೆಯ ವಿಷಯಗಳಿದ್ದಲ್ಲಿ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ಹೇಳಿರುವ ಪ್ರಕ್ರಿಯೆಯನ್ನು ಅನುಸರಿಸುವುದು.
- ಮಕ್ಕಳ ರಕ್ಷಣಾಧಿಕಾರಿಯು ಸಲಹೆಗಳ ಪುಸ್ತಕವನ್ನು ನಿರ್ವಹಿಸುವುದು ಮತ್ತು ದೂರುಗಳೊಂದಿಗೆ ಸಲಹೆಗಳು ಮತ್ತು ತೆಗೆದುಕೊಂಡಿರುವ ಕ್ರಮದ ವರದಿಯನ್ನು ಮಕ್ಕಳೊಂದಿಗೆ ವಿನಿಮಯ ಮಾಡಿಕೊಳ್ಳುವುದು ಹಾಗೂ ಇದನ್ನು ಮಕ್ಕಳ ರಕ್ಷಣಾ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲಿಸುವುದು.

**7. ವೃತ್ತಿಪರ ಆಪ್ತಸಮಾಲೋಚನಾ ಸೇವೆಗಳು :**

ದುರುಪಯೋಗ ಮತ್ತು ಹಲ್ಲೆಗೊಳಗಾದ ಮಕ್ಕಳನ್ನು ವೃತ್ತಿಪರ ಆಪ್ತಸಮಾಲೋಚನಾ ಸೇವೆಗಳಿಗೆ ಶಿಫಾರಸ್ಸುಮಾಡುವುದು. ಘಟನೆಯಿಂದ ಒಂದಕ್ಕಿಂತ ಹೆಚ್ಚಿನ ಮಕ್ಕಳು ಬಾದಿತರಾಗಿದ್ದಲ್ಲಿ ಗುಂಪು ಆಪ್ತಸಮಾಲೋಚನಾ ಸೇವೆಯನ್ನು ನೀಡುವುದು.

**8. ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ವೃತ್ತಿಪರ ನೈತಿಕತೆಯ ನೀತಿ ಸಂಹಿತೆ:**

1. ಶಿಕ್ಷಣ ಸಂಸ್ಥೆಯಲ್ಲಿನ ಬೋದಕ, ಬೋಧಕೇತರ ಮತ್ತು ಹೊರಗುತ್ತಿಗೆ ಸಿಬ್ಬಂದಿಗಳಿಗೆ ಅವರ ವರ್ತನೆ ಮತ್ತು ನಡವಳಿಕೆ ಕುರಿತು ಮಾರ್ಗದರ್ಶನ ಮಾಡುವುದಕ್ಕೆ ನೀತಿ ಸಂಹಿತೆಯನ್ನು ರೂಪಿಸಿ, ಪಾಲಿಸಲು ನಮ್ಮ ಶಾಲೆಯು ಬದ್ಧವಾಗಿದೆ.

2. ನಾವು ಸಂಸ್ಥೆಯ ಸಿಬ್ಬಂದಿಗಳನ್ನು ಆದರ್ಶಪ್ರಾಯ ಸ್ಥಾನದಲ್ಲಿ ಗುರುತಿಸಲಾಗುತ್ತಿದ್ದು, ವಿದ್ಯಾರ್ಥಿಗಳು ಮತ್ತು ಸಮುದಾಯದ ಸದಸ್ಯರ ವರ್ತನೆ ಮತ್ತು ನಡವಳಿಕೆಯ ಮೇಲೆ ಪ್ರಭಾವ ಬೀರುವ ಮಾದರಿಯ ವ್ಯಕ್ತಿಗಳಾಗಿದ್ದಾರೆ. ಆದುದರಿಂದ ಸದರಿಯವರ ನಡವಳಿಕೆಯು ಸಮಾಜದಲ್ಲಿನ ಉತ್ತಮ ನಡವಳಿಕೆಗಳಿಗೆ ಉದಾಹರಣೆಯಾಗುವಂತಿರಬೇಕು. ಒಬ್ಬ ನಾಗರೀಕನಾಗಿ ಮತ್ತು ನಮ್ಮ ಶಾಲೆಯ ಸದಸ್ಯನಾಗಿ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶಾಲೆಯ ಒಳಗೆ ಮತ್ತು ಹೊರಗೆ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದರೊಂದಿಗೆ, ಗೌರವ, ಘನತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳುವುದು.

3. ಇದು ಸರ್ಕಾರಿ ಪ್ರಾಥಮಿಕ ಶಾಲೆಯಾಗಿದ್ದು, ಶಾಲೆಯಲ್ಲಿನ ಎಲ್ಲಾ ಸಿಬ್ಬಂದಿಗಳು ಶಿಕ್ಷಣ ಇಲಾಖೆಯ ನೀತಿ ಸಂಹಿತೆಯನ್ನು ಓದಿ, ಅರ್ಥೈಸಿಕೊಂಡಿದ್ದಾರೆ ಮತ್ತು ಬೋಧಕ, ಬೋಧಕೇತರ ಮತ್ತು ಶಾಲೆಗೆ ಸಂಬಂಧಿಸಿದ ಎಲ್ಲಾ ಸಿಬ್ಬಂದಿಗಳು ಇದನ್ನು ಪಾಲಿಸುತ್ತಾರೆ.

4. ನೀತಿ ಸಂಹಿತೆಯ ನಿಯಮಗಳನ್ನು ಅನುಸರಿಸಲು ವಿಫಲರಾದಲ್ಲಿ ಶಿಕ್ಷಣ ಸಂಸ್ಥೆಗಾಗಿ ರೂಪಿಸಿರುವ ರಾಜ್ಯ ಸರ್ಕಾರದ ಸಿಬ್ಬಂದಿಗಳ ಸೇವಾ ನಿಯಮಾವಳಿಗಳಡಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು ಎಂಬ ಅಂಶದ ಬಗ್ಗೆ ನಮಗೆ ಅರಿವಿದೆ ಎಂದು ಪ್ರಮಾಣೀಕರಿಸಿದೆ.

5. ಶಾಲೆಯ ಎಲ್ಲಾ ಸಿಬ್ಬಂದಿಗಳು ಹಾಗೂ ಹೊರಗುತ್ತಿಗೆಯ ಸಂಸ್ಥೆಗಳಿಂದ ನೇಮಿಸಲ್ಪಟ್ಟ ಗುತ್ತಿಗೆ ಸಿಬ್ಬಂದಿಗಳು ಪ್ರಸ್ತುತ ಜಾರಿಯಲ್ಲಿರುವ ಕಾನೂನುಗಳೂ ಸೇರಿದಂತೆ, ಭಾರತೀಯ ದಂಢ ಸಂಹಿತೆಯಡಿ ಒಳಪಟ್ಟಿರುವರು.

**ಮಗುವಿನ ರಕ್ಷಣೆಗೆ ಸಕಾರಾತ್ಮಕ ಉದಾಹರಣೆಯನ್ನು ಸ್ಥಾಪಿಸಲು ನಾವು ಶ್ರಮಿಸುತ್ತೇವೆ.**

- ನಮ್ಮ ಸಿಬ್ಬಂದಿಗಳ ವರ್ತನೆ ಮತ್ತು ನಡವಳಿಕೆಗಳು ಶಾಲೆಯಲ್ಲಿನ ಎಲ್ಲಾ ವಿದ್ಯಾರ್ಥಿಗಳು ಅನುಸರಿಸಲು ಮಾದರಿಯಾಗಿರುತ್ತವೆ.

- ಮಕ್ಕಳಿಗೆ ಸಂಬಂಧಿಸಿದಂತೆ ಮೌಖಿಕ ಮತ್ತು ಅಮೌಖಿಕ ಸಂವಹನವು ಮಕ್ಕಳ ಸಂವೇಧಿ ಮತ್ತು ವಯಸ್ಸಿಗನುಗುಣವಾಗಿರಬೇಕಲ್ಲದೇ, ಯಾವುದೇ ರೀತಿಯಲ್ಲಿಯೂ ಮಗುವಿಗೆ ಹೆದರಿಕೆ, ಭಯ, ಅವಮಾನ ಅಥವಾ ಘನತೆಗೆ ಧಕ್ಕೆ ತರುವಂತಿರಬಾರದು. ಸಂವಹನವು ಮಗುವಿನ ಪೋಷಕರು ಮತ್ತು ಪಾಲಕರನ್ನು ಸಹ ಕಡೆಗಣಿಸುವಂತಿರಬಾರದು.

- ಶಾಲೆಯಲ್ಲಿನ ಸಿಬ್ಬಂದಿಗಳು ತಮ್ಮ ಮೇಲೆ ಯಾವುದೇ ರೀತಿಯ ನಿಂಧನೆ ಮತ್ತು ವೃತ್ತಿಪರವಲ್ಲದ ನಡವಳಿಕೆಯ ಆಪಾದನೆಗಳು ಬರದಂತೆ ನಡೆದುಕೊಳ್ಳುವುದು.

- ನಮ್ಮ ಎಲ್ಲಾ ಸಿಬ್ಬಂದಿಗಳು ಶಾಲೆಯಲ್ಲಿನ ಮಕ್ಕಳು, ವಯಸ್ಕರು ಅಥವಾ ಸಮುದಾಯದಲ್ಲಿನ ಯಾವುದೇ ಮಗುವನ್ನು ವಯಸ್ಸು, ಲಿಂಗತ್ವ, ಜಾತಿ, ವರ್ಗ, ಧರ್ಮ, ವಿಕಲತೆ, ಮುಂತಾದವುಗಳ ಆಧಾರದಲ್ಲಿ

ತಾರತಮ್ಯ ಸಂಭವಿಸದಂತೆ ಖಾತರಿಪಡಿಸುವುದು.ಕೆಲವು ಸನ್ನಿವೇಶಗಳನ್ನು ಹೊರತುಪಡಿಸಿ ಯಾವುದೇ ಮಗುವಿಗೆ ವಿಶೇಷ ಆಧ್ಯತೆಯನ್ನು ಕೊಡದಿರುವುದನ್ನು ಸಹ ಖಾತರಿಪಡಿಸುವುದು.

- ಸಹೋದ್ಯೋಗಿ ಅಥವಾ ಹೊರಗುತ್ತಿಗೆ ಸಂಸ್ಥೆಯ ನೌಕರರಿಂದ ನೀತಿ ಸಂಹಿತೆಯ ಉಲ್ಲಂಘನೆಯ ಬಗ್ಗೆ ಅನುಮಾನ ಅಥವಾ ಮಾಹಿತಿ ಕಂಡುಬಂದಲ್ಲಿ, ತಕ್ಷಣವೇ ಮಕ್ಕಳ ರಕ್ಷಣಾಧಿಕಾರಿಗೆ ವರದಿಮಾಡುವುದು.

**ಮಕ್ಕಳ ರಕ್ಷಣೋಪಚಾರಕ್ಕಾಗಿ ನಾವು ಶ್ರಮಿಸುತ್ತೇವೆ:**

- ನಮ್ಮ ಸಿಬ್ಬಂದಿಗಳು ತಮ್ಮ ಪರಿವೀಕ್ಷಣೆಯಡಿ ವಿದ್ಯಾರ್ಥಿಗಳ ರಕ್ಷಣೆ ಮತ್ತು ಯೋಗಕ್ಷೇಮವನ್ನು ನೋಡಿಕೊಳ್ಳುವರು.

- ಶಾಲೆಯ ಆವರಣ ಮತ್ತು ವಿಸ್ತೃತ ಪರಿಸರದಲ್ಲಿ ಮಗುವಿನ ನಿಂಧನೆಯೂ ಸೇರಿದಂತೆ ಸುರಕ್ಷತೆಯ ಉಲ್ಲಂಘನೆಯಾಗದಂತೆ ಮಗುವನ್ನು ರಕ್ಷಿಸುವ ಕರ್ತವ್ಯ ಮತ್ತು ಜವಾಬ್ದಾರಿ  ಸಿಬ್ಬಂದಿಗಳದ್ದಾಗಿರುತ್ತದೆ ಹಾಗೂ ಸದರಿ ಘಟನೆಗಳು ಸಂಭವಿಸಿದಾಗ ಮಾಹಿತಿಯನ್ನು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾಧಿಕಾರಿ ಅಥವಾ ಸಂಸ್ಥೆಯ ಮುಖ್ಯಸ್ಥರಿಗೆ ವರದಿಮಾಡುವುದನ್ನು ಸಹ ಒಳಗೊಂಡಿರುತ್ತದೆ.

- ಶಾಲೆಯಲ್ಲಿನ ಮಕ್ಕಳನ್ನು ಭಯ, ಆಘಾತ, ಗಾಯ, ಭೌತಿಕ ದಂಡನೆ, ಲೈಂಗಿಕ ಹಲ್ಲೆ, ಮಾನಸಿಕ ಮತ್ತು ಭವನಾತ್ಮಕ ಶೋಷಣೆ ಮುಂತಾದವುಗಳಿಂದ ಕಾಪಾಡುವ ಹೊಣೆ ನಮ್ಮ ಸಂಸ್ಥೆಯ ಸಿಬ್ಬಂದಿಗಳದ್ದಾಗಿರುತ್ತದೆ.

- ನಮ್ಮ ಸಂಸ್ಥೆಯ ಸಿಬ್ಬಂದಿಗಳು, ಮಗುವು ನೀಡಿರುವ ಮಾಹಿತಿ ಅಥವಾ ಮಗುವಿಗೆ ಸಂಬಂಧಿಸಿದ ಘಟನೆಯ ವಿವರಗಳ ಗೌಪ್ಯತೆಯನ್ನು ಕಾಪಾಡುವರು.

- ಸಿಬ್ಬಂದಿಗಳು ಯಾವುದೇ ತೆರನಾದ ದೌರ್ಜನ್ಯ (ಭೌತಿಕ, ಭಾವನಾತ್ಮಕ, ಲೈಂಗಿಕ ಮತ್ತು ನಿರ್ಲಕ್ಷ್ಯ), ಶೋಷಣೆ ಮತ್ತು ಅಧಿಕಾರ ದುರುಪಯೋಗವಾಗದಂತೆ ತೀವ್ರ ನಿಗಾವಹಿಸುವರು ಮತ್ತು ಶೂನ್ಯ ಸಹನೆಯನ್ನು ಹೊಂದಿರುವರು. ಇದು ವಿದ್ಯಾರ್ಥಿಗಳು ಅಥವಾ ವಯಸ್ಕರರು ಬೆದರಿಕೆ ಮತ್ತು ಗೇಲಿಮಾಡುವುದನ್ನು ಸಹ ಒಳಗೊಂಡಿದೆ.

- ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಹೊರಡಿಸಿರುವ ಶಾಲೆಗಳಲ್ಲಿ ದೈಹಿಕ ಶಿಕ್ಷೆಯನ್ನು ನಿರ್ಮೂಲನೆಮಾಡುವ ಮಾರ್ಗಸೂಚಿಗಳಲ್ಲಿ ವ್ಯಾಖ್ಯಾನಿಸಿರುವಂತೆ ಮಕ್ಕಳನ್ನು ಸಕಾರಾತ್ಮಕವಾಗಿ ತೊಡಗಿಸಿಕೊಳ್ಳುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದು ಮತ್ತು ಸಿಬ್ಬಂದಿಗಳು ಯಾವುದೇ ತೆರನಾದ ದೈಹಿಕ ದಂಡನೆಗಳನ್ನು ವಿಧಿಸುವುದರಿಂದ ದೂರವಿರುವರು.

- ಶಾಲೆಯಲ್ಲಿ ಮಕ್ಕಳೊಂದಿಗೆ ವಯಸ್ಕರರು ಸಂಭಾಷಣೆಯನ್ನು ಎಲ್ಲರಿಗೂ ಗೋಚರಿಸುವಂತಹ ವ್ಯವಸ್ಥೆ (ತೆರೆದ ಬಾಗಿಲು/ಕಿಟಕಿ ಅಥವಾ ಪಾರದರ್ಶಕ ಬಾಗಿಲುಗಳನ್ನು ಹೊಂದಿರುವ ಕೋಣೆ)ಯಲ್ಲಿ ನಡೆಸುವುದು ಹಾಗೂ ಆ ಸಂದರ್ಭದಲ್ಲಿ ಕನಿಷ್ಠ ಒಬ್ಬ ಮಗು ಅಥವಾ ವಯಸ್ಕರರು ಹಾಜರಿರುವುದು. ಒಂದು ವೇಳೆ ಬಾಗಿಲು ಮುಚ್ಚಿದ ಕೋಣೆಯಲ್ಲಿ ಮಗುವಿನೊಂದಿಗೆ ಚರ್ಚೆ ಅಥವಾ ಸಭೆ ನಡೆಸಬೇಕಾದಲ್ಲಿ ಅಧಿಕೃತವಾಗಿ ನೇಮಿಸಲಾದ ಸಿಬ್ಬಂದಿ/ಪಾಲಕ/ಪೋಷಕರು ಹಾಜರಿರುವುದನ್ನು ಕಡ್ಡಾಯಗೊಳಿಸಿದೆ.

- ಭೌತಿಕ ಭೇಟಿಯು ಕೇವಲ ಅಗತ್ಯ ಮತ್ತು ಸಂದರ್ಭೋಚಿತವಾಗಿರುವುದು ಮತ್ತು ಪರಿಸ್ಥಿತಿ, ಲಿಂಗತ್ವ, ವಯಸ್ಸು, ಸಾಮರ್ಥ್ಯ, ಬೆಳವಣಿಗೆಯ ಹಂತ, ಮಗುವಿನ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಳ್ಳುವುದು. ಭೇಟಿಯು ಗೌರವಯುತವಾಗಿರಬೇಕು ಮತ್ತು ಮಗುವಿಗೆ ಅಹಿತಕರ, ಬೆದರಿಕೆ, ತನಿಕೆ ಮತ್ತು ಲೈಂಗಿಕತೆ ಎಂದೆನಿಸಬಾರದು.

- ಮಗುವಿನ ವೈಯಕ್ತಿಕ ಚಟುವಟಿಕೆಗಳಾದ ಸ್ನಾನ ಮಡುವುದು, ಬಟ್ಟೆ ಬದಲಿಸುವುದು, ಶೌಚಾಲಯ ಬಳಕೆ ಮತ್ತಿತರ ಸಂದರ್ಭಗಳಲ್ಲಿ ಮಗುವಿನ ಖಾಸಗಿತನವನ್ನು ಖಾತರಿಪಡಿಸುವುದು ಹಾಗೂ ವೈದ್ಯಕೀಯ ತುರ್ತು ಪರಿಸ್ಥಿತಿ ಮತ್ತು ಅವಶ್ಯಕ ಸಂದರ್ಭಗಳಲ್ಲಿ ಮಗುವನ್ನು ಭೇಟಿಮಾಡಿ ಸಹಾಯಮಾಡುವುದು.

- ಸಂಸ್ಥೆಯ ಸಿಬ್ಬಂದಿಗಳು ಸಂಸ್ಥೆಯ ಆಡಳಿತ ಮಂಡಳಿಯ ಅನುಮತಿ ಇಲ್ಲದೆ ಹಾಗೂ ಪೋಷಕರ ಗಮನಕ್ಕೆ ತರದೆ, ಶಾಲಾ ಅವಧಿಯ ನಂತರ ಅಥವಾ ರಜಾದಿನಗಳಲ್ಲಿ ಮಗುವನ್ನು ಹೊರಗಡೆ ಭೇಟಿಮಾಡಬಾರದು.

- ಸಂಸ್ಥೆಯ ಸಿಬ್ಬಂದಿಗಳು ಯಾವುದೇ ಸನ್ನಿವೇಶಗಳಲ್ಲಿ ಯಾವುದೇ ಕಾರಣಕ್ಕೂ, ಮಗುವಿನ/ಮಕ್ಕಳ ಅನಧಿಕೃತ ಛಾಯಾಚಿತ್ರ ಮತ್ತು ವಿಡಿಯೋ ಚಿತ್ರೀಕರಣ ಮಾಡುವುದರಿಂದ ದೂರವುಳಿಯುವುದು.

- ಸಂಸ್ಥೆಯ ಸಿಬ್ಬಂದಿಗಳು ಮಾಹಿತಿ ತಂತ್ರಜ್ಞಾನವನ್ನು ಬಳಸುವಾಗ ಸೈಬರ್ ರಕ್ಷಣಾ ನಿಯಮಗಳನ್ನು ಅನುಸರಿಸುವುದು ಮತ್ತು ಎಚ್ಚರಿಕೆಯಿಂದ ಅಭ್ಯಾಸ ಮಾಡುವುದು. ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಅಪ್ಪಣೆಯಿಲ್ಲದೆ ಯಾವುದೇ ವ್ಯಕ್ತಿಗೆ ಯಾವುದೇ ಮಾಹಿತಿ ಅಥವಾ CCTV ಯಲ್ಲಿನ ಮಾಹಿತಿಯನ್ನು ನೀಡುವುದರಿಂದ ದೂರವಿರುವುದು. ಮೊಬೈಲ್ ಅಪ್ಲಿಕೇಷನ್‌ನಿಂದ ಮಕ್ಕಳು ಮತ್ತು ಪೋಷಕರು/ಪಾಲಕರ ನಡುವಿನ ಸಂವಾದ ಮತ್ತು ಸಂವಹನವು ಶಿಕ್ಷಣ ಸಂಸ್ಥೆಯ ಆಡಳಿತವು ಅನುಮೋದಿಸಿರುವ ಅಪ್ಲಿಕೇಷನ್ಸ್‌ನ ಮೂಲಕವೇ ನಿರ್ವಹಿಸುವುದು.

**ಗೌಪ್ಯತೆ (confidentiatily):**

- ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಅಥವಾ ಗುತ್ತಿಗೆ ಸಿಬ್ಬಂದಿಗಳು, ಮಕ್ಕಳ ಅಥವಾ ಅವರ ಪೋಷಕರು/ಪಾಲಕರಿಗೆ ಸಂಬಂಧಿಸಿದ ಗೌಪ್ಯ ಮಾಹಿತಿಯನ್ನು ಹೊಂದಿದ್ದು, ಸದರಿ ಮಾಹಿತಿಯನ್ನು ಅಧಿಕೃತ ಮತ್ತು ಅರ್ಹರೊಂದಿಗೆ ಮಾತ್ರ ಹಂಚಿಕೊಳ್ಳುವುದು.

- ಸಂಸ್ಥೆಯ ಸಿಬ್ಬಂದಿಗಳು ಇತರೆ ಮಗುವಿನ ಅಸಮರ್ಪಕ ನಡವಳಿಕೆಯನ್ನು ಗಮನಿಸಿದ ಪ್ರಕರಣಗಳಲ್ಲಿ ಉದಾ: ಮಗುವನ್ನು ಇತರೆ ಮಗು ಬೆದರಿಸಿದಲ್ಲಿ, ಸಂಸ್ಥೆಯ ಸಿಬ್ಬಂದಿಯು ಸೂಕ್ತ ನಿಯಮಾವಳಿಗೆ ಅನುಗುಣವಾಗಿ ವರದಿ ಮಾಡುವುದು ಮತ್ತು ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗದಿಪಡಿಸಿರುವಂತೆ ಮಕ್ಕಳ ರಕ್ಷಣಾ ಅಧಿಕಾರಿ/ಮಕ್ಕಳ ರಕ್ಷಣಾ ಸಮಿತಿಗಳು ವ್ಯವಹರಿಸುವುದು. ಸದರಿ ವಿಷಯವನ್ನು ಸಂಸ್ಥೆಯ ಸಿಬ್ಬಂದಿಗಳು ಯಾವುದೇ ಕಾರಣಕ್ಕೂ ಇತರೆ ಸಿಬ್ಬಂದಿಗಳಿಗೆ ತಿಳಿಸಬಾರದು.

**9. ಸುರಕ್ಷತಾ ನೇಮಕಾತಿ ಮತ್ತು ಆಯ್ಕೆಯ ಮಾರ್ಗಸೂಚಿಗಳು**

ಸರ್ಕಾರಿ ಶಾಲೆಗಳಿಗೆ ಶಾಲಾ ಮಟ್ಟದಲ್ಲಿ ಪ್ರತ್ಯೇಕ ಮಾರ್ಗಸೂಚಿಗಳನ್ನು ರೂಪಿಸುವ ಬದಲು ಶಿಕ್ಷಣ ಇಲಾಖೆಯ ನೀತಿಯ ಭಾಗವಾಗಿ ಮಾರ್ಗಸೂಚಿಗಳನ್ನು ರೂಪಿಸುವುದು.

ನಾವು ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣೆಗೆ ಸೂಕ್ತವಾದ ವ್ಯಕ್ತಿಗಳನ್ನು ಗುರುತಿಸಲು, ಆಯ್ಕೆ ಮಾಡಿಕೊಳ್ಳಲು/ಅನರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಮಕ್ಕಳ ರಕ್ಷಣೆಯ ವಿಷಯದಲ್ಲಿ ಅನಾಹುತಗಳಾಗುವುದನ್ನು ತಡೆಯಲು ಶಿಕ್ಷಣ ಇಲಾಖೆಯ ನೀತಿಯಲ್ಲಿ ತಿಳಿಸಿರುವ ಸುರಕ್ಷತಾ ನೇಮಕಾತಿ ಮತ್ತು ಆಯ್ಕೆಯ ಮಾರ್ಗಸೂಚಿಗಳಿಗೆ ಬದ್ಧರಾಗಿದ್ದೇವೆ.

ಕೆಳಕಂಡ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲು ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿ ನಿಯಮಗಳಲ್ಲಿ ತಿದ್ದುಪಡಿಗಳನ್ನು ಮಾಡುವುದು.

**ತಪಾಸಣೆ:**

ಅ. ಸಂಸ್ಥೆಯ ಮುಖ್ಯಸ್ಥರಿಂದ ಹಿಡಿದು ಬೋಧಕ, ಬೋಧಕೇತರ ಸಿಬ್ಬಂದಿ, ಗುತ್ತಿಗೆ ಸಿಬ್ಬಂದಿ ಮತ್ತು ಹೊರ ಗುತ್ತಿಗೆಯ ಸಂಸ್ಥೆಗಳನ್ನು ನೇಮಿಸಿಕೊಳ್ಳುವಾಗ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ, ಹಿಂದೆ ಅವರುಗಳು ಸೇವೆ ಸಲ್ಲಿಸಿದ ಎರಡು ಉದ್ಯೋಗದಾತರಿಂದ ದೃಢೀಕರಣ ಪತ್ರವನ್ನು ಪಡೆದುಕೊಳ್ಳುವುದು ಮತ್ತು ಇದರೊಂದಿಗೆ ಹಿಂದಿನ ಉದ್ಯೋಗದಾತರು ಮತ್ತು ಶಿಫಾರಸ್ಸು ಮಾಡಿರುವವರೊಂದಿಗೆ ಲಿಖಿತ ಮತ್ತು ಮೌಖಿಕವಾಗಿ ಪರಿಶೀಲಿಸುವುದು. ಎಲ್ಲ ರೀತಿಯಿಂದಲೂ ಸೂಕ್ತವಾದ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಮಕ್ಕಳೊಂದಿಗೆ ಕಾರ್ಯನಿರ್ವಹಿಸಲು ತೊಡಗಿಸಿಕೊಳ್ಳುವುದು.

ಆ. ಆಯ್ಕೆಯನ್ನು ಲಿಖಿತವಾಗಿ ಅರ್ಜಿಯನ್ನು ಆಹ್ವಾನಿಸುವುದು ಮತ್ತು ವೈಯಕ್ತಿಕ ಸಂದರ್ಶನ ನಡೆಸುವುದು. ಮಕ್ಕಳ ಸುರಕ್ಷತೆ ಮತ್ತು ಹಲ್ಲೆ ಮುಂತಾದವುಗಳ ಕುರಿತು ಅರ್ಜಿದಾರನ ಮನೋಭಾವವನ್ನು ಪರಿಶೀಲಿಸುವುದು.

ಇ. ಪೊಲೀಸ್ ಇಲಾಖೆಯಿಂದ ಅರ್ಜಿದಾರನ ಹಿನ್ನೆಲೆ ಮತ್ತು ಆತನ ವಿರುದ್ಧ ಯಾವುದಾದರೂ ಬಾಕಿ ಇರುವ ಅಪರಾಧ ಪ್ರಕರಣಗಳಿರುವುದರ ಬಗ್ಗೆ ಮಾಹಿತಿಯನ್ನು ಪಡೆಯುವುದು. ಒಂದುವೇಳೆ ಅಂತಹ ಪ್ರಕರಣವೇನಾದರೂ ನೊಂದಣಿಯಾಗಿದ್ದಲ್ಲಿ, ಅಂತಹ ವ್ಯಕ್ತಿಯನ್ನು ಮಕ್ಕಳೊಂದಿಗೆ ನೇರವಾಗಿ ಸಂಪರ್ಕವಿರುವ ಯಾವುದೇ ಕೆಲಸಕ್ಕೂ ಪರಿಗಣಿಸದಿರುವುದು.

ಈ. ಸಿಬ್ಬಂದಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು, ಸಂದರ್ಶನ ವರದಿಗಳು, ಪ್ರಮಾಣ ಪತ್ರಗಳು ಅವರು ನಿವೃತ್ತರಾಗುವವರೆಗೂ ಶಿಕ್ಷಣ ಸಂಸ್ಥೆ ಮತ್ತು ಆಡಳಿತ ಮಂಡಳಿಯಲ್ಲಿ ಲಭ್ಯವಿರುವುದು.

**ಹೊರ ಗುತ್ತಿಗೆ ಸಿಬ್ಬಂದಿಗಳಿಗಾಗಿ:**

ಶಿಕ್ಷಣ ಸಂಸ್ಥೆಯು ಸಿಬ್ಬಂದಿಗಳನ್ನು ಹೊರಗುತ್ತಿಗೆ ಸಂಸ್ಥೆಯ ಮೂಲಕ ತೆಗೆದುಕೊಂಡಿದ್ದಲ್ಲಿ, ಆ ಸಂಸ್ಥೆಯು ಸಿಬ್ಬಂದಿಗಳ ನೇಮಕಾತಿ ಮತ್ತು ಆಯ್ಕೆಯಲ್ಲಿ ಮೇಲ್ಕಂಡ ನಿಯಮಗಳನ್ನು ಪಾಲಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

**10. ಮಾನವ ಸಂಪನ್ಮೂಲ ನೀತಿ ಮತ್ತು ಸೇವಾ ನಿಯಮಗಳು:**

ಮಾನವ ಸಂಪನ್ಮೂಲ ನೀತಿಯು ಸಂಸ್ಥೆಯಲ್ಲಿನ ಮಕ್ಕಳ ರಕ್ಷಣಾ ನೀತಿಯನ್ನು ಉಲ್ಲೇಖಿಸಿ, ಅದರಲ್ಲಿರುವ ಮಕ್ಕಳ ರಕ್ಷಣಾತ್ಮಕಗಳ ಕ್ರಮಗಳ ಮಾಹಿತಿಯನ್ನು ಅಳವಡಿಸಿಕೊಳ್ಳುವುದು. ಮಕ್ಕಳ ರಕ್ಷಣಾ ನೀತಿಯನ್ನು ಪಾಲಿಸದಿರುವ ಹಾಗೂ ನೀತಿ ಸಂಹಿತೆಗೆ ಬದ್ಧರಾಗದೇ ಇರುವುದರಿಂದೆ ಎದುರಾಗುವ ಪರಿಣಾಮಗಳ ಬಗ್ಗೆ ಸಂಸ್ಥೆಯ ಮಾನವ ಸಂಪನ್ಮೂಲ ನೀತಿಯಲ್ಲಿ ಸ್ಪಷ್ಟವಾಗಿ ನಿರ್ಧಿಷ್ಟಪಡಿಸುವುದು.

ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯನ್ನು ರಾಜ್ಯದ ಸಿಬ್ಬಂದಿಗಳ ನೀತಿಯ ಸೇವಾ ನಿಯಮಗಳಲ್ಲಿ ಸೇರಿಸುವುದು. ಈ ನಿಯಮಗಳು ಗ್ರ್ಯಾಂಟ್‌ಇನ್ ಏಡ್ ಸಂಸ್ಥೆಗಳ ಸೇವಾ ನಿಯಮಗಳು, ಅನುದಾನಿತ ಮತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೂ ಅನ್ವಯವಾಗುತ್ತದೆ

**ನೇಮಕಾತಿ ಮತ್ತು ಸೇವಾ ಅವಧಿಯಲ್ಲಿ ಪಾಲಿಸಬೇಕಾದ ನಿಯಮಗಳು:**

ಅ. ನೇಮಕಾತಿಗೊಂಡ ಸಿಬ್ಬಂದಿಯು ಪಾಲಿಸಬೇಕಾದ ನೀತಿ ಸಂಹಿತೆಗೆ (ಮಾದರಿ ನೀತಿ ಸಂಹಿತೆಯನ್ನು ಅನುಬಂದದಲ್ಲಿ ಲಗತ್ತಿಸಿದೆ) ಒಪ್ಪಿಗೆ ಸೂಚಿಸಿ ಸಹಿ ಮಾಡಿರುವುದನ್ನು ಖಾತರಿ ಪಡಿಸಿಕೊಳ್ಳುವುದು.

ಆ. ಸಿಬ್ಬಂದಿಗಳನ್ನು ಒಂದುವೇಳೆ ಮಕ್ಕಳ ರಕ್ಷಣಾ ನೀತಿಯ ಅಧಿಸೂಚನೆಗೆ ಮುನ್ನ ನೇಮಕಾತಿ ಮಾಡಿಕೊಂಡಿದ್ದಲ್ಲಿ, ಅವರ ಅಪರಾಧ ಹಿನ್ನೆಲೆಯನ್ನು ಪರಿಶೀಲಿಸುವುದು. ಅಂತಹ ಪ್ರತಿಯೊಬ್ಬ ನೌಕರನು ನೀತಿ ಸಂಹಿತೆಯನ್ನು ಒಪ್ಪಿಕೊಳ್ಳುವುದು ಮತ್ತು ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯನ್ನು ಪಾಲಿಸುವುದಾಗಿ ಒಪ್ಪಿಗೆಯನ್ನು ಲಿಖಿತವಾಗಿ ಪಡೆಯುವುದು. ಒಂದುವೇಳೆ ಯಾವುದೇ ಸಿಬ್ಬಂದಿ ಅನುಸರಣೆಗೆ ಬದ್ಧವಾಗಿರದೇ ಇದ್ದಲ್ಲಿ, ಚಾಲ್ತಿಯಲ್ಲಿರುವ ಕಾನೂನಿನನ್ವಯ ಅಥವಾ ಸಂಸ್ಥೆಯ ಮಾನವ ಸಂಪನ್ಮೂಲ ನೀತಿಯಲ್ಲಿ ವ್ಯಾಖ್ಯಾನಿಸಿರುವಂತೆ ಅಥವಾ ಸರ್ಕಾರಿ ಸೇವಾ ನಿಯಮಗಳಡಿ ಸೂಕ್ತ ಕ್ರಮ ಕೈಗೊಳ್ಳುವುದು.

ಇ. ಶಿಕ್ಷಣ ಸಂಸ್ಥೆಯಲ್ಲಿನ ಯಾವುದೇ ಬೋಧಕ ಅಥವಾ ಬೋಧಕೇತರ ಸಿಬ್ಬಂದಿ ಸುರಕ್ಷತೆಯ ಉಲ್ಲಂಘನೆ ಅಥವಾ ಹಲ್ಲೆಗೆ ಸಂಬಂಧಿಸಿದ ತನಿಖೆಗೆ ಒಳಪಟ್ಟಿದ್ದಾಗ ಅವರ ವಿಚಾರಣೆಯನ್ನು ಬಾಕಿ ಇರಿಸಿ, ಅಮಾನತ್ತುಗೊಳಿಸುವುದು.

ಈ. ಶಿಕ್ಷಣ ಸಂಸ್ಥೆಯಲ್ಲಿನ ಯಾವುದೇ ಬೋಧಕ ಅಥವಾ ಬೋದಕೇತರ ಸಿಬ್ಬಂದಿಯು, ಮಕ್ಕಳ ಮೇಲೆ ಹಲ್ಲೆ ಮಾಡಿರುವುದಾಗಿ ಅಥವಾ ಸುರಕ್ಷತೆಯನ್ನು ಉಲ್ಲಂಘನೆ ಮಾಡಿರುವುದಾಗಿ ನ್ಯಾಯಾಲಯದಲ್ಲಿ ಸಾಬೀತಾದಲ್ಲಿ ಅವನು/ಅವಳನ್ನು ತಕ್ಷಣವೇ ಸೇವೆಯಿಂದ ವಜಾಗೊಳಿಸಿ, ಸೇವೆಯನ್ನು ಮುಕ್ತಾಯಗೊಳಿಸಲು ಕಾರಣವಾದ ಅಂಶಗಳನ್ನು ವಜಾಗೊಳಿಸುವ ಪತ್ರದಲ್ಲಿ ದಾಖಲಿಸುವುದು.

ಉ. ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕಾರ್ಯಕ್ಷಮತೆಯಡಿ ಮಕ್ಕಳ ರಕ್ಷಣಾ ನೀತಿಯ ಅನುಸರಣೆಯನ್ನು ಸೇರ್ಪಡೆಗೊಳಿಸುವುದು.

**11. ಸುರಕ್ಷತಾ ಉಲ್ಲಂಘನೆ/ಮಕ್ಕಳ ಮೇಲಿನ ಹಲ್ಲೆಯನ್ನು ವರದಿಮಾಡುವ ವಿಧಾನಗಳು**

ಯಾವುದೇ ದೂರನ್ನು ಸ್ವೀಕರಿಸಿದಾಗ ಅದನ್ನು ಹೇಗೆ ನಿರ್ವಹಿಸಬೇಕೆಂಬ ವಿಧಾನಗಳನ್ನು ನಮ್ಮ ಶಾಲೆಯು ಹೊಂದಿದೆ ಹಾಗೂ ನಮೂನೆಯಲ್ಲಿ ತಿಳಿಸಿರುವಂತೆ ವಿಧಾನಗಳನ್ನು ಅಭಿವೃದ್ಧಿಪಡಿಸಿ ಎಲ್ಲರಿಗೂ ಲಭ್ಯವಾಗುವಂತೆ ಇರಿಸಲಾಗಿದೆ. ಈ ಕುರಿತು ಫ್ಲೋಚಾರ್ಟ್‌ನ್ನು ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳಲ್ಲಿ ನೀಡಲಾಗಿದೆ.

**12. ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ವರದಿಮಾಡುವ ವಿಧಾನಗಳು:**

POCSO ಕಾಯ್ದೆಯ ನಿಯಮಗಳು ಮತ್ತು ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ವರದಿ ಮಾಡುವುದು.

**13. ಸಿಬ್ಬಂದಿಗಳ ಮೇಲಿನ ಅಪರಾಧಗಳು, ಆರೋಪಗಳಿಗೆ ಪ್ರತಿಕ್ರಿಯೆ ನೀಡುವುದು:**

ಶಿಕ್ಷಣ ಇಲಾಖೆಯ ಸೇವಾ ನಿಯಮಗಳು, ಶಿಕ್ಷಣ ಕಾಯ್ದೆಯ ವ್ಯಾಪ್ತಿ ಮತ್ತು ಸಂಬಂಧಿಸಿದ ಇತರೆ ಕಾನೂನುಗಳಲ್ಲಿ ತಿಳಿಸಿರುವ ವಿಧಾನಗಳಿಗನುಗುಣವಾಗಿ ಕ್ರಮ ಕೈಗೊಳ್ಳುವುದು. POCSO ಕಾಯ್ದೆ ಮತ್ತು ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ನಿಯಂತ್ರಣ, ನಿಷೇಧ, ಪರಿಹರಿಸುವುದು) ಕಾಯ್ದೆ 2013 ಮತ್ತು

ನಿಯಮಗಳಲ್ಲಿ ತಿಳಿಸಿರುವ ಕಾರ್ಯವಿದಾನಗಳನ್ನು ಶಾಲೆಯ ಸನ್ನಿವೇಶಕ್ಕೆ ಅನುಗುಣವಾಗಿ ಅಳವಡಿಸಿಕೊಳ್ಳುವುದು.

**14. ಮಕ್ಕಳ ರಕ್ಷಣಾ ನೀತಿಯ ಕುರಿತ ಮತ್ತು ಮಕ್ಕಳಿಗೆ ಸಂಬಂಧಿಸಿದ ಸಂವಹನ:**

ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ಮಕ್ಕಳ ವಯಸ್ಸು ಮತ್ತು ತರಗತಿಗಳಿಗನುಗುಣವಾಗಿ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಸೂಚನಾ ಫಲಕ, ವೆಬ್‌ಸೈಟ್, ಸಭೆಗಳ ಮೂಲಕ ತಿಳಿಸುವುದು. ಪ್ರತಿಯೊಂದು ಮಗು, ಪೋಷಕರು ಮತ್ತು ಸಿಬ್ಬಂದಿಗಳು ಮಕ್ಕಳ ರಕ್ಷಣಾ ನೀತಿಯ ಬಗ್ಗೆ ತಿಳಿದುಕೊಂಡಿರುವುದು. ಒಂದು ವೇಳೆ ಸದರಿ ನೀತಿಯ ಬಗ್ಗೆ ತಿಳಿದುಕೊಂಡಿರದ ವ್ಯಕ್ತಿ ಅಪರಾಧವೆಸಗಿದರೂ, ಆತನಿಗೆ ಬಿಡುಗಡೆ ನೀಡುವುದಿಲ್ಲ.

**15. ಆಡಳಿತ ಮಂಡಳಿ/ಬೋಧಕ ಮತ್ತು ಬೋದಕೇತರ ಸಿಬ್ಬಂದಿಗಳಿಗೆ ತರಬೇತಿಯ ಯೋಜನೆ :**

ನಮ್ಮ ಶಾಲೆಯು ಬೋಧಕ ಮತ್ತು ಬೋದಕೇತರ ಸಿಬ್ಬಂದಿಗಳಿಗೆ ಆಧ್ಯತೆಯ ಮೇರೆಗೆ ಸಾಮರ್ಥ್ಯಾಭಿವೃದ್ಧಿಯನ್ನು ಮಾಡಲು ಬದ್ಧವಾಗಿದೆ. ಮಕ್ಕಳ ಸುರಕ್ಷತಾ ವಿಚಾರಗಳು, ನೀತಿ/ವಿಧಾನಗಳು, ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗಳ ಬಗ್ಗೆ ತರಬೇತಿ ಕಾರ್ಯಾಗಾರಗಳನ್ನು ನಡೆಸಲುತರಬೇತಿ ಕ್ಯಾಲೆಂಡರ್/ಶೈಕ್ಷಣಿಕ ವರ್ಷಕ್ಕೆ ವೇಳಾಪಟ್ಟಿ ತಯಾರಿಸುವುದು.

**16. ಪೋಷಕರು, ಭೇಟಿ ನೀಡುವವರು, ಸಲಹೆಗಾರರು, ಸ್ವಯಂಸೇವಕರು, ಸೇವಾ ಪೂರೈಕೆದಾರರಿಗೆ ಕಾರ್ಯವಿಧಾನಗಳು:**

ನಮ್ಮ ಶಾಲೆಯು ಮಕ್ಕಳ ಸುರಕ್ಷತೆಯನ್ನು ಎಲ್ಲಾ ಸಂದರ್ಭಗಳಲ್ಲಿ ಖಚಿತಪಡಿಸಿಕೊಳ್ಳಲು ಶಾಲೆಗೆ ಭೇಟಿ ನೀಡುವ ಪೋಷಕರು, ಸಲಹೆಗಾರರು, ಸ್ವಯಂ ಸೇವಕರು, ಸೇವಾ ಪೂರೈಕೆದಾರರು ಕಡ್ಡಾಯವಾಗಿ ಪಾಲಿಸಬೇಕಾದ ಕಾರ್ಯವಿಧಾನಗಳನ್ನು ರೂಪಿಸಿದೆ. ಸದರಿ ಕಾರ್ಯವಿಧಾನಗಳನ್ನು ಉಲ್ಲಂಘಿಸಿದಲ್ಲಿ ಕಠಿಣ ದಂಢನೆಯನ್ನು ವಿಧಿಸಲಾಗುತ್ತದೆ. ಸಾಧ್ಯವಿರುವೆಡೆ ಪೋಷಕರು ಮತ್ತು ಶಾಲೆಗೆ ಭೇಟಿನೀಡುವವರಿಗೆ ಗುರುತಿನ ಚೀಟಿಗಳನ್ನು ನೀಡುವುದು ಅಥವಾ ಶಾಲೆಯ ಬೋಧಕೇತರ ಸಿಬ್ಬಂದಿ ಅವರ ಜೊತೆಗಿರುವುದು. ಇದನ್ನು ಜಾರಿಗೊಳಿಸಲು ಸುತ್ತೋಲೆಯನ್ನು ಎಲ್ಲಾ ಸಂಬಂಧಿಸಿದವರಿಗೆ ಕಳುಹಿಸುವುದು.

**17. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಾರ್ಯವಿಧಾನಗಳು:**

ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ನಮ್ಮ ಶಾಲೆಯು ನಿರ್ಧಿಷ್ಟಪಡಿಸಿದ ಶಿಷ್ಟಾಚಾರಗಳನ್ನು ಪಾಲಿಸುತ್ತದೆ. ಸರ್ಕಾರದಿಂದ ನೀಡಲಾದ ಮಕ್ಕಳ ಸುರಕ್ಷತಾ ಕಾರ್ಯತಂತ್ರಗಳ ಮಾಹಿತಿಯನ್ನು ಶಾಲೆಯ ಒಳಗೆ ಮತ್ತು ಹೊರಗೆ ಸುಲಭವಾಗಿ ದೊರೆಯುವಂತೆ ಮಾಡಲಾಗುತ್ತದೆ. ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಆಗಾಗ್ಗೆ ತಪಾಸಣೆ ಮತ್ತು ಪರಿಶೀಲನೆಯನ್ನು ನಡೆಸುವುದು.

**18. ಬೋದಕೇತರ ಸಿಬ್ಬಂದಿಗಳು/ಸಮುದಾಯದ ಸದಸ್ಯರು/ಬೇಟಿ ನೀಡಿದವರು/ಮಾರಾಟಗಾರರು/ ಸ್ವಯಂಸೇವಕರು/ಕುಟುಂಬಸ್ಥರು ಮತ್ತು ಗುತ್ತಿಗೆ ಸಿಬ್ಬಂದಿಗಳ ಆರೋಪಕ್ಕೆ ಪ್ರತಿಕ್ರಿಯೆಯನ್ನು ನೀಡುವುದು**

ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ನೀಡಲಾದ ಮಾರ್ಗಸೂಚಿಯನ್ವಯ ವರದಿಯನ್ನು ತಯಾರಿಸುವುದು ಮತ್ತು ದಾಖಲಿಸುವುದು.

**19. ಸುಳ್ಳು ದೂರುಗಳು ಅಥವಾ ಆರೋಪ:**

ನಮ್ಮ ಶಾಲೆಯು ಯಾವುದೇ ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಅಥವಾ ಕೋಪ, ದ್ವೇಷದಿಂದ ಸುಳ್ಳು ದೂರು ಅಥವಾ ಆರೋಪವನ್ನು ಮಾಡುವ ಮೂಲಕ ಶಾಲೆಯ ಮಕ್ಕಳ ರಕ್ಷಣಾ ನೀತಿಯನ್ನು ದುರುಪಯೋಗ ಮಾಡುವುದನ್ನು ಸಹಿಸುವುದಿಲ್ಲ ಮತ್ತು ಇದನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ. ಇಂತಹ ಪ್ರಕರಣಗಳು ಶಾಲಾ ಶಿಕ್ಷಕರ ಅಮೂಲ್ಯ ಸಮಯವನ್ನು ವ್ಯರ್ಥಮಾಡುವುದಲ್ಲದೇ, ಕೆಟ್ಟ ಪರಿಣಾಮವನ್ನು ಬೀರುತ್ತದೆ.

ಇಂತಹ ಪ್ರಕರಣಗಳು ಸಂಭವಿಸಿದಲ್ಲಿ ಕಾನೂನಾತ್ಮಕ ಕ್ರಮಗಳೊಂದಿಗೆ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

**20. ಶಿಕ್ಷಣ ಸಂಸ್ಥೆಗಳ ನೌಕರರು ನೀಡಬೇಕಾಗಿರುವ ಘೋಷಣೆ:**

ನಾನು ಇದನ್ನು ಓದಿ, ಅರ್ಥಮಾಡಿಕೊಂಡು ಮತ್ತು ನೀತಿ ಸಂಹಿತೆಯಲ್ಲಿ ತಿಳಿಸಿರುವಂತೆ ಅನುಸರಿಸಲು ಒಪ್ಪಿರುತ್ತೇನೆ. ಮಕ್ಕಳ ರಕ್ಷಣೆ, ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ನನ್ನ ಬದ್ಧತೆಗಳು ಮತ್ತು ಜವಾಬ್ದಾರಿಗಳ ಬಗ್ಗೆ ನನಗೆ ಅರಿವಿರುತ್ತದೆ ಮತ್ತು ಶಿಕ್ಷಣ ಸಂಸ್ಥೆಯ ಒಳಗೆ ಮತ್ತು ಹೊರಗೆ ವೃತ್ತಿಪರ ನೈತಿಕತೆಗೆ ಬದ್ಧನಾಗಿರುತ್ತೇನೆ.

ನೌಕರನ ಹೆಸರು : ------------------------------------

ನೌಕರನ ಪದನಾಮ :------------------------------------

ನೌಕರನ ಸಹಿ :------------------------------------

ದಿನಾಂಕ :------------------------------------

ಸ್ಥಳ :------------------------------------

ಕಛೇರಿಯಲ್ಲಿ ನಿರ್ವಹಿಸಲಾಗುವ ಕಡತದಲ್ಲಿ ಇದರ ಪ್ರತಿಯನ್ನು ಇಡುವುದು

## ಅನುಬಂಧ – 03 ಮಕ್ಕಳ ಮೇಲಿನ ಹಲ್ಲೆಯನ್ನು ವರದಿ ಮಾಡುವ ನಮೂನೆ

(ತೇಜಸ್ ಹೋಂ ನಿಂದ ಪಡೆದು ಅಳವಡಿಸಿಕೊಳ್ಳಲಾಗಿದೆ – ಶಿಶುವಿಹಾರಗಳಿಗೆ ಮಾದರಿ ಮಕ್ಕಳ ಮೇಲಿನ ಲೈಂಗಿಕ ಹಲ್ಲೆ ತಡೆಗಟ್ಟುವ ನೀತಿ ಮತ್ತು ತರಬೇತಿ ಕೈಪಿಡಿ)

1. ಮಗುವಿನ ಹೆಸರು :
2. ವಯಸ್ಸು ಮತ್ತು ಹುಟ್ಟಿದ ದಿನ :
3. ಲಿಂಗ :
4. ವಿಳಾಸ :
5. ತರಗತಿ :
6. ಪೋಷಕರ/ಪಾಲಕರ ಹೆಸರು :
7. ಪೋಷಕರ ವಿಳಾಸ (ಬೇರೆ ವಿಳಾಸವಿದ್ದಲ್ಲಿ) :
8. ಮನೆಯ ದೂರವಾಣಿ/ ಮೊಬೈಲ್ ಸಂಖ್ಯೆ :
9. ಪೋಷಕರ ಉದ್ಯೋಗದ ಸ್ಥಳ :
10. ಉದ್ಯೋಗದ ಸ್ಥಳದ ದೂರವಾಣಿ/ ಮೊಬೈಲ್ ಸಂಖ್ಯೆ:
11. ಕಟುಂಬದ ವಿವರ (ಉದಾ: ಮಗುವು ಅಜ್ಜಿ–ತಾತ, : ಸೋದರ ಸಂಬಂಧಿ, ತಂದೆಯ ಸಹೋದರ ಜೊತೆಯಲ್ಲಿ ವಾಸವಿರುವುದು)–
    ವಿಭಕ್ತ/ಅವಿಭಕ್ತ/ವಿಸ್ತೃತ ಕುಟುಂಬ: ಮಾಹಿತಿಯನ್ನು ನಿರ್ಧಿಷ್ಟವಾಗಿ ತಿಳಿಸುವುದು.
12. ಅನ್ವಯವಾಗುವ ಕೆಳಗಿನ ಅಂಶಗಳನ್ನು ಗುರುತಿಸುವುದು : ಮತ್ತು ಹೈಲೈಟ್‌ಮಾಡುವುದು
    - ಮೂಗೇಟು, ರಕ್ತಸ್ರಾವ
    - ಮುರಿತ/ಉಳುಕು
    - ಮೇಲ್ವಿಚಾರಣೆಯ ಕೊರತೆ
    - ಭಾವನಾತ್ಮಕ ನಿರ್ಲಕ್ಷ್ಯ
    - ಬಾಗಿಕೊಂಡ/ಅಲುಗಾಡುವ
    - ಪರಿತ್ಯಕ್ತತೆ
    - ಶೈಕ್ಷಣಿಕ ನಿರ್ಲಕ್ಷ್ಯ

- ಅಪೌಷ್ಟಿಕತೆ
- ಸುಟ್ಟಗಾಯ/ ಬೊಬ್ಬೆ
- ದೈಹಿಕ ನಿರ್ಲಕ್ಷ್ಯ
- ಮೂಲ ವಸ್ತು (Elements)ಗಳಿಗೆ ಒಡ್ಡುವುದು
- ವೈದ್ಯಕೀಯ ನಿರ್ಲಕ್ಷ್ಯ
- ಲೈಂಗಿಕ ಹಲ್ಲೆ

13. ವಿವರಣೆ :
14. ವರದಿಗಾರನಿಗೆ ಮಗುವಿನ ಮೇಲಿರುವ ಕಾಳಜಿಯ ಸಂಕ್ಷಿಪ್ತ ವಿವರ:
15. ಪ್ರಕರಣ ಹೇಗೆ ಸಂಭವಿಸಿತು ಎಂಬುದರ ಬಗ್ಗೆ ವಿವರಣೆ ಮತ್ತು ಸಾಧ್ಯವಿರುವ ಸಾಕ್ಷಿಗಳ ಹೆಸರನ್ನು ನಮೂದಿಸುವುದು:
16. ಮಗು ಅಥವಾ ಒಡಹುಟ್ಟಿದವರ ಮೇಲೆ ನಡೆದಿರಬಹುದಾದ/ಸಂದೇಹಾಸ್ಪದ ಹಲ್ಲೆ ಅಥವಾ ನಿರ್ಲಕ್ಷ್ಯದ ವಿವರಣೆ ನೀಡುವುದು:
17. ಸಂದೇಹಾಸ್ಪದ ಹಲ್ಲೆ ಅಥವಾ ನಿರ್ಲಕ್ಷ್ಯಕ್ಕೆ ಕಾರಣರಾಗಿರುವ ವ್ಯಕ್ತಿಯ (ಗಳ) ಹೆಸರು (ಗಳು), ವಿಳಾಸ(ಗಳು) ಮತ್ತು ಅವರು ಮಗುವಿನೊಂದಿಗೆ ಹೊಂದಿರಬಹುದಾದ ಸಂಬಂಧದ ವಿವರ (ಗೊತ್ತಿದ್ದಲ್ಲಿ):

**ಸ್ಥಳೀಯ ಪೊಲೀಸ್ ಠಾಣೆ/ ಮಕ್ಕಳ ವಿಶೇಷ ಪೊಲೀಸ್ ಘಟಕಕ್ಕೆ ವರದಿ ಸಲ್ಲಿಸುವುದು:**

1. ದಿನಾಂಕ :
2. ವರದಿಮಾಡುವ ವ್ಯಕ್ತಿಯ ಹೆಸರು :
3. ಸಮಯ :
4. ಲಿಖಿತವಾಗಿ ಶಾಲಾ ವರದಿಯನ್ನು ಸಿದ್ಧಪಡಿಸಿದವರ ಹೆಸರು :
5. ಹುದ್ದೆ: (ಉದಾ. ಶಿಕ್ಷಕ, ಪೋಷಕ, ಇತರೆ) :
6. ಶಾಲೆಯ ಶಿಫಾರಸ್ಸುಗಳು :

# ಅನುಬಂಧ – 4 ಮಕ್ಕಳ ರಕ್ಷಣೆಗೆ[4] ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸುವ ಕಾರ್ಯತಂತ್ರಗಳು[5]

(ಶಾಲೆಗಳು ಮಾತ್ರವಲ್ಲದೆ, ಎಲ್ಲರಿಗೂ ನೀಡಲಾಗಿರುವ ಸಾಮಾನ್ಯ ಮಾಹಿತಿಯಾಗಿದೆ)

| ಕ್ರಮ ಸಂಖ್ಯೆ | ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳು | ನಿವಾರಣಾ ಕಾರ್ಯತಂತ್ರ ವ್ಯವಸ್ಥೆ ಮತ್ತು ಕಾರ್ಯವಿಧಾನ | ಷರಾ |
|---|---|---|---|
| 1 | ಮಗು ಕಾಣೆಯಾದಾಗ | ▪ ಸಮೀಪದ ಪೊಲೀಸ್ ಠಾಣೆಯಲ್ಲಿ ಶೀಘ್ರವಾಗಿ ಪ್ರಥಮ ತನಿಖಾ ವರದಿಯನ್ನು ದಾಖಲಿಸುವುದು ಮತ್ತು ಮಕ್ಕಳ ಕಲ್ಯಾಣಾಧಿಕಾರಿಯ[6] ನೆರವನ್ನು ಪಡೆಯುವುದು.<br>▪ ನೆರವಿಗಾಗಿ ಮಕ್ಕಳ ಸಹಾಯವಾಣಿ–1098ನ್ನು ಸಂಪರ್ಕಿಸುವುದು<br>▪ ಪೊಲೀಸರಿಂದ 'ಟ್ರ್ಯಾಕ್ ಚೈಲ್ಡ್'[7] (ಮಗುವಿನ ಜಾಡು ಪತ್ತೆ) ಮೂಲಕ ಮಗುವನ್ನು ಹುಡುಕಲು ಮಾಹಿತಿಯನ್ನು ನೀಡುವುದು ಹಾಗೂ ಕಾಣೆಯಾದ ಮಕ್ಕಳ ಬ್ಯೂರೋ ಇರುವಲ್ಲಿ ಅವುಗಳಿಗೆ ಮಾಹಿತಿಯನ್ನು ನೀಡುವುದು. | ▪ ಮಕ್ಕಳ ಸಹಾಯವಾಣಿ–1098ನ್ನು ಹಾಗೂ ಪೊಲೀಸ್ ಠಾಣೆಯ ಮಕ್ಕಳ ಕಲ್ಯಾಣಾಧಿಕಾರಿಗಳ ದೂರವಾಣಿ ಸಂಖ್ಯೆಗಳನ್ನು ಜನಪ್ರಿಯಗೊಳಿಸುವುದು.<br>▪ ರಾಜ್ಯದ 19 ಜಿಲ್ಲೆಗಳಲ್ಲಿ ಮಕ್ಕಳ ಸಹಾಯವಾಣಿ–1098 ಕ್ರಿಯಾಶೀಲವಾಗಿದೆ. ಜಿಲ್ಲೆಗಳ ಪಟ್ಟಿಯನ್ನು ಸಹಾಯವಾಣಿಯ ವೆಬ್‌ಸೈಟ್‌ನಲ್ಲಿ ನೋಡುವುದು. |
| 2 | ಮಗು ಪತ್ತೆಯಾದಾಗ | ▪ ಮಗುವನ್ನು ಸಮೀಪದ ಪೊಲೀಸ್ ಠಾಣೆಯಲ್ಲಿನ ಮಕ್ಕಳ ಕಲ್ಯಾಣಾಧಿಕಾರಿಗೆ ಒಪ್ಪಿಸುವುದು. ಅವರು ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ[8] ಮುಂದೆ ಹಾಜರುಪಡಿಸುವರು.<br>▪ ಮಕ್ಕಳ ಸಹಾಯವಾಣಿ–1098 ಗೆ ಕರೆಮಾಡುವುದು.<br>▪ ಮುಂದಿನ ಕ್ರಮಕ್ಕಾಗಿ ಮಕ್ಕಳ ಕಲ್ಯಾಣ ಸಮಿತಿಯನ್ನು ಸಂಪರ್ಕಿಸುವುದು.<br>▪ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸುವುದು. | ಮಗು ಕಾಣೆಯಾದ ಬಗ್ಗೆ ಎಲ್ಲಿಯಾದರೂ ವರದಿಯಾಗಬಹುದಾದ್ದರಿಂದ 'ಟ್ರ್ಯಾಕ್ ಚೈಲ್ಡ್'ನಲ್ಲಿ ನೋಂದಾಯಿಸುವಂತೆ ಒತ್ತಾಯಪಡಿಸುವುದು ಮತ್ತು ಮಗು ಪತ್ತೆಯಾದಲ್ಲಿ ಸಮರ್ಥ ಅಧಿಕಾರಿಗಳ ಮೂಲಕ ಪುನಃ ಕುಟುಂಬದೊಂದಿಗೆ ಸೇರಿಸುವುದು. |

4. ಬಾಲ ನ್ಯಾಯ ಕಾಯ್ದೆಯಲ್ಲಿ ವ್ಯಾಖ್ಯಾನಿಸಿರುವಂತೆ 'ಮಗು'ಎಂದರೆ 18 ವರ್ಷದೊಳಗಿನ ಯಾವುದೇ ವ್ಯಕ್ತಿ,

5. ಈ ಪಟ್ಟಿಯು ಜಾರ್ಖಂಡ್ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್‌ನಲ್ಲಿ ನೀಡಲಾದ ಮಾಹಿತಿಯ ಪರಿಷ್ಕೃತ ಮತ್ತು ಸುಧಾರಿತ ಆವೃತ್ತಿಯಾಗಿದೆ.

6. ಇಲಾಖೆಯ ವೆಬ್‌ಸೈಟ್‌ನಲ್ಲಿ (www.dwcd.kar.nic.in) ಪ್ರತಿಯೊಂದು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಮಕ್ಕಳ ಕಲ್ಯಾಣಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಹಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳ ಸಂಪರ್ಕ ಸಂಖ್ಯೆಗಳು ಲಭ್ಯವಿವೆ.

7. ಟ್ರ್ಯಾಕ್‌ಚೈಲ್ಡ್ ವ್ಯವಸ್ಥೆಯು ಪೊಲೀಸ್ ಇಲಾಖೆ ಮತ್ತು ಮಹಿಳೆ ಮತ್ತು ಮಕ್ಕಳ ಇಲಾಖೆಯಿಂದ ಜಂಟಿಯಾಗಿ ನಿರ್ವಹಿಸಲ್ಪಡುತ್ತದೆ ಮತ್ತು ಇದು ರಾಷ್ಟ್ರೀಯ ಟ್ರ್ಯಾಕ್‌ಚೈಲ್ಡ್ ವ್ಯವಸ್ಥೆಯಂತೆ ಕಾಣೆಯಾದ ಹಾಗೂ ಪತ್ತೆಯಾದ ಮಕ್ಕಳ ಮಾಹಿತಿಯನ್ನು ಒಳಗೊಂಡಿರುತ್ತದೆ.

8. ಮಕ್ಕಳ ಕಲ್ಯಾಣ ಸಮಿತಿ (CWC) ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ (DCPU) ಗಳ ಸಂಪರ್ಕ ಸಂಖ್ಯೆಗಳು ಇಲಾಖೆಯ ವೆಬ್‌ಸೈಟ್ (www.dwcd.kar.nic.in)ನಲ್ಲಿ ಲಭ್ಯವಿವೆ.

| | | | |
|---|---|---|---|
| 3 | ಮಕ್ಕಳ ಸುರಕ್ಷತಾ ಉಲ್ಲಂಘನೆ/ ಮಕ್ಕಳ ಮೇಲಿನ ಹಲ್ಲೆ (ದೈಹಿಕ, ಭಾವನಾತ್ಮಕ, ಮೌಖಿಕ) ವರದಿಯಾದಾಗ | ▪ ಮಕ್ಕಳ ಸಹಾಯವಾಣಿ–1098 ಗೆ ಕರೆಮಾಡುವುದು.<br>▪ ಮುಂದಿನ ಕ್ರಮಕ್ಕಾಗಿ ಮಕ್ಕಳ ಕಲ್ಯಾಣ ಸಮಿತಿಯನ್ನು ಸಂಪರ್ಕಿಸುವುದು. ಅಥವಾ<br>▪ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸುವುದು.<br>▪ ಅಗತ್ಯವಿದ್ದಲ್ಲಿ ಪ್ರಥಮ ತನಿಖಾ ವರದಿಯನ್ನು ಸಮೀಪದ ಪೊಲೀಸ್ ಠಾಣೆಯಲ್ಲಿ ದಾಖಲಿಸುವುದು ಮತ್ತು ಮಕ್ಕಳ ಕಲ್ಯಾಣಾಧಿಕಾರಿಯ ನೆರವನ್ನು ಪಡೆಯುವುದು. | ▪ ಸಾಧ್ಯವಾದಷ್ಟು ಬೇಗ ವೈದ್ಯಕೀಯ ಪರೀಕ್ಷೆಗಳನ್ನು ನಡೆಸುವುದು ಮತ್ತು ಸಾಕ್ಷ್ಯಾಧಾರಗಳನ್ನು ರಕ್ಷಿಸುವುದನ್ನು ಖಾತರಿಪಡಿಸುವುದು.<br>▪ ಮಕ್ಕಳ ಸಹಾಯವಾಣಿ–1098ಯ ಮೂಲಕ ಮನೋ–ಸಾಮಾಜಿಕ ಆಪ್ತಸಮಾಲೋಚನೆಯ ನೆರವನ್ನು ಪಡೆಯಬುಹುದಾಗಿದೆ.<br>▪ ಮನೋ–ಸಾಮಾಜಿಕ ಆಪ್ತಸಮಾಲೋಚನೆಯ ನೆರವನ್ನು ನಿಮಾನ್ಸ್/ ರಾಜ್ಯದಲ್ಲಿನ ಹೆಸರಾಂತ ಮತ್ತು ಅಧಿಕೃತ ಮಾನಸಿಕ ಆರೋಗ್ಯ ಸಂಸ್ಥೆಯಿಂದ ಸೇವೆಗಳನ್ನು ಪಡೆಯುವುದು. |
| 4 | ಮಗುವಿನ ಮೇಲೆ ಲೈಂಗಿಕ ದೌರ್ಜನ್ಯವಾದಾಗ | ▪ ತಕ್ಷಣವೇ ಪ್ರಥಮ ತನಿಖಾ ವರದಿಯನ್ನು ಸಮೀಪದ ಪೊಲೀಸ್ ಠಾಣೆಯಲ್ಲಿ ದಾಖಲಿಸುವುದು ಮತ್ತು ಮಕ್ಕಳ ಕಲ್ಯಾಣಾಧಿಕಾರಿಯ ನೆರವನ್ನು ಪಡೆಯುವುದು.<br>▪ ಮಕ್ಕಳ ಸಹಾಯವಾಣಿ–1098ಯನ್ನು ಸಂಪರ್ಕಿಸುವುದು. ಅಥವಾ<br>▪ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸುವುದು. | ▪ ಸಾಧ್ಯವಾದಷ್ಟು ಬೇಗ ವೈದ್ಯಕೀಯ ಪರೀಕ್ಷೆಗಳನ್ನು ನಡೆಸುವುದು ಮತ್ತು ಸಾಕ್ಷ್ಯಾಧಾರಗಳನ್ನು ರಕ್ಷಿಸುವುದನ್ನು ಖಾತರಿಪಡಿಸುವುದು.<br>▪ ಮಕ್ಕಳ ಸಹಾಯವಾಣಿ–1098ಯ ಮೂಲಕ ಮನೋ–ಸಾಮಾಜಿಕ ಆಪ್ತಸಮಾಲೋಚನೆಯ ನೆರವನ್ನು ಪಡೆಯಬಹುದಾಗಿದೆ.<br>▪ ಮನೋ–ಸಾಮಾಜಿಕ ಆಪ್ತಸಮಾಲೋಚನೆಯ |

| | | | |
|---|---|---|---|
| | | | ನೆರವನ್ನು ನಿಮಾನ್ಸ್/ ರಾಜ್ಯದಲ್ಲಿನ ಹೆಸರಾಂತ ಮತ್ತು ಅಧಿಕೃತ ಮಾನಸಿಕ ಆರೋಗ್ಯ ಸಂಸ್ಥೆಯಿಂದ ಸೇವೆಗಳನ್ನು ಪಡೆಯುವುದು. |
| 5 | ಮನೆಯಲ್ಲಿ, ಶಾಲೆಯಲ್ಲಿ ಅಥವಾ ಇತರೆ ಸ್ಥಳಗಳಲ್ಲಿ ಯಾವುದೇ ಬಗೆಯ ಅಪರಾಧ ಅಥವಾ ತುರ್ತು ಪರಿಸ್ಥಿತಿಗಳಿದ್ದಲ್ಲಿ ಅದು ಮಗು/ಮಕ್ಕಳ ಮೇಲೆ ಪ್ರಭಾವ ಬೀರುತ್ತದೆ. | ▪ ಸಮೀಪದ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ, ಮಕ್ಕಳ ಕಲ್ಯಾಣಾಧಿಕಾರಿಯ ನೆರವನ್ನು ಪಡೆಯುವುದು.<br>▪ ಅಗತ್ಯವಿದ್ದಲ್ಲಿ ದೂರನ್ನು ದಾಖಲಿಸುವುದು. ಅಥವಾ<br>▪ ಮಕ್ಕಳ ಸಹಾಯವಾಣಿ–1098ಯನ್ನು ಸಂಪರ್ಕಿಸುವುದು<br>▪ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿಯನ್ನು ನೀಡುವುದು. ಅಥವಾ<br>▪ ನೆರವಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸುವುದು. | ▪ ಸೂಕ್ತ ವ್ಯವಸ್ಥೆಯ ಮೂಲಕ ಮಗುವನ್ನು ಹಿಂಸಾತ್ಮಕ ಸ್ಥಳದಿಂದ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವುದನ್ನು ಖಾತರಿಪಡಿಸುವುದು.<br>▪ ಮಕ್ಕಳ ಸಹಾಯವಾಣಿ–1098ಯ ಮೂಲಕ ಮನೋ–ಸಾಮಾಜಿಕ ಆಪ್ತಸಮಾಲೋಚನೆಯ ನೆರವನ್ನು ಪಡೆಯಬುಹುದಾಗಿದೆ.<br>▪ ಮನೋ–ಸಾಮಾಜಿಕ ಆಪ್ತಸಮಾಲೋಚನೆಯ ನೆರವನ್ನು ನಿಮಾನ್ಸ್/ ರಾಜ್ಯದಲ್ಲಿನ ಹೆಸರಾಂತ ಮತ್ತು ಅಧಿಕೃತ ಮಾನಸಿಕ ಆರೋಗ್ಯ ಸಂಸ್ಥೆಯಿಂದ ಸೇವೆಗಳನ್ನು ಪಡೆಯುವುದು. |
| 6 | ಮಗು ಕಳ್ಳಸಾಗಾಣೆ ಅಥವಾ ಮಾರಾಟಕ್ಕೆ ಬಲಿಯಾದಾಗ | ▪ ಸಮೀಪದ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ, ಮಕ್ಕಳ ಕಲ್ಯಾಣಾಧಿಕಾರಿಯ ನೆರವನ್ನು ಪಡೆಯುವುದು.<br>▪ ಅಗತ್ಯವಿದ್ದಲ್ಲಿ ದೂರನ್ನು ದಾಖಲಿಸುವುದು. ಅಥವಾ<br>▪ ಮಕ್ಕಳ ಸಹಾಯವಾಣಿ–1098ಯನ್ನು ಸಂಪರ್ಕಿಸುವುದು | ▪ ಮಗು ಕಾಣೆಯಾದ ಬಗ್ಗೆ ಎಲ್ಲಿಯಾದರೂ ವರದಿಯಾಗಬಹುದಾದ್ದರಿಂದ 'ಟ್ರ್ಯಾಕ್ ಚೈಲ್ಡ್'ನಲ್ಲಿ ನೋಂದಾಯಿಸುವಂತೆ ಒತ್ತಾಯಪಡಿಸುವುದು<br>▪ ತಕ್ಷಣವೇ ಕುಟುಂಬಕ್ಕೆ ಮಾಹಿತಿ ನೀಡುವುದು. |

| | | | |
|---|---|---|---|
| | | ▪ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿಯನ್ನು ನೀಡುವುದು. ಅಥವಾ<br>▪ ನೆರವಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸುವುದು. | |
| 7 | ಮಗು ಕೆಲಸಮಾಡುತ್ತಿರುವುದು ಅಥವಾ ಮಗುವನ್ನು ಕೆಲಸಕ್ಕೆ ನೇಮಿಸಿರುವುದು ಕಂಡುಬಂದಾಗ (ಬಾಲ ಕಾರ್ಮಿಕತೆ) | ▪ ಸಮೀಪದ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸುವುದು ಮತ್ತು ಮಕ್ಕಳ ಕಲ್ಯಾಣಾಧಿಕಾರಿಯ ನೆರವನ್ನು ಪಡೆಯುವುದು. ಅಥವಾ<br>▪ ಮಕ್ಕಳ ಸಹಾಯವಾಣಿ–1098ಯನ್ನು ಸಂಪರ್ಕಿಸುವುದು<br>▪ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿಯನ್ನು ನೀಡುವುದು. ಅಥವಾ<br>▪ ನೆರವಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸುವುದು. | ▪ 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕೆಲಸಕ್ಕಾಗಿ/ಉದ್ದೇಶಕ್ಕಾಗಿ ನೇಮಿಸಿಕೊಳ್ಳಬಾರದು<br>▪ ಬಾಲ ಕಾರ್ಮಿಕತೆಯಿಂದ ರಕ್ಷಿಸಲಾದ ಮಕ್ಕಳಿಗೆ ಮತ್ತು 14 ವರ್ಷ ವಯಸ್ಸಿಗೆ ಮೇಲ್ಪಟ್ಟ ಮಕ್ಕಳಿಗೆ ಬಾಲನ್ಯಾಯ ಕಾಯ್ದೆ, 2000 ಮತ್ತು ಕನಿಷ್ಠ ವೇತನ ಕಾಯ್ದೆ ಅಡಿಯಲ್ಲಿ ಪರಿಹಾರವನ್ನು ನೀಡುವುದು. |
| 8 | ಮಗು ಬಾಲ್ಯ ವಿವಾಹಕ್ಕೆ ಬಲಿಯಾದಾಗ | ▪ ಸಮೀಪದ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸುವುದು ಮತ್ತು ಮಕ್ಕಳ ಕಲ್ಯಾಣಾಧಿಕಾರಿಯ ನೆರವನ್ನು ಪಡೆಯುವುದು. ಅಥವಾ<br>▪ ಮಕ್ಕಳ ಸಹಾಯವಾಣಿ–1098ಯನ್ನು ಸಂಪರ್ಕಿಸುವುದು. ಅಥವಾ<br>▪ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿಯನ್ನು ನೀಡುವುದು. | ▪ 18 ವರ್ಷದೊಳಗಿನ ಬಾಲಕಿಯರಿಗೆ ಮತ್ತು 21 ವರ್ಷದೊಳಗಿನ ಬಾಲಕರಿಗೆ ವಿವಾಹ ಮಾಡುವುದು ಬಾಲ್ಯ ವಿವಾಹ ಕಾಯ್ದೆ 2006 ರ ಪ್ರಕಾರ ಸಂಜ್ಞೇಯ ಹಾಗೂ ಜಾಮೀನುರಹಿತ ಅಪರಾಧವಾಗುತ್ತದೆ.<br>▪ ಸಿವಿಲ್ ಅಥವಾ ಸೆಶನ್ಸ್ ನ್ಯಾಯಾಲಯದ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ರವರಿಂದ ನ್ಯಾಯಾಲಯದ ತಡೆಯಾಜ್ಞೆ ತರುವುದರ |

| | | | |
|---|---|---|---|
| | | | ಮೂಲಕ ಬಾಲ್ಯ ವಿವಾಹವನ್ನು ತಡೆಯಬಹುದು. |
| 9 | ಮಗು ಕಾನೂನಿನೊಡನೆ ಸಂಘರ್ಷದಲ್ಲಿದ್ದಾಗ (ಕಳ್ಳತನ, ದರೋಡೆ, ಹಲ್ಲೆ ಮುಂತಾದ ಯಾವುದೇ ಅಪರಾಧ ಮಾಡಿರುವನೆಂದು ಕಂಡುಬಂದಿರುವ ಅಥವಾ ಮಾಡಿರುವನೆಂದು ಆರೋಪಿಸಲ್ಪಟ್ಟಿರುವ, ಸಮಾಜಬಾಹಿರ ಶಕ್ತಿಗಳಿಂದ ಶೋಷಣೆಗೊಳಗಾದ ಯಾವುದೇ ಮಗು) | ▪ ಮಗುವನ್ನು ರಕ್ಷಿಸಿ ಸಮೀಪದ ಪೊಲೀಸ್ ಠಾಣೆಯಲ್ಲಿರುವ ಮಕ್ಕಳ ರಕ್ಷಣಾಧಿಕಾರಿಯವರಿಗೆ ಒಪ್ಪಿಸುವುದು. ಅಥವಾ<br>▪ ಮಕ್ಕಳ ಸಹಾಯವಾಣಿ–1098ಯನ್ನು ಸಂಪರ್ಕಿಸುವುದು. ಅಥವಾ<br>▪ ಜಿಲ್ಲೆಯ ಬಾಲನ್ಯಾಯ ಮಂಡಳಿಯ[9] ಸದಸ್ಯರನ್ನು ಸಂಪರ್ಕಿಸುವುದು. | ▪ ಒಂದು ವೇಳೆ ಮಗು ಅಪರಾಧವೆಸಗಿದ್ದರೂ, ಅದನ್ನು ಪೋಲಿಸ್ ಠಾಣೆಯಲ್ಲಿ ಪೀಡನೆ, ದಂಡನೆ, ನಿಂದನಗೆ ಒಳಪಡಿಸಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳುವುದು.<br>▪ ಪೋಷಕರು/ಪಾಲಕರನ್ನು ಸಂಪರ್ಕಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. |

9. ಎಲ್ಲಾ ಜಿಲ್ಲೆಗಳ ಬಾಲನ್ಯಾಯ ಮಂಡಳಿಗಳ ಸಂಪರ್ಕ ಸಂಖ್ಯೆಗಳು ಇಲಾಖೆಯ ವೆಬ್‌ಸೈಟ್ – www.dwcd.kar.nic.in ನಲ್ಲಿ ಲಭ್ಯವಿರುತ್ತದೆ.

# ಅನುಬಂಧ–5 ಆಘಾತ ನಂತರ ಮಕ್ಕಳ ಆರೈಕೆ

**ಎ. ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಕುರಿತ ಕಾರ್ಯವಿಧಾನಗಳು:**

**ಆಘಾತ ನಂತರ ಮಕ್ಕಳ ಆರೈಕೆ**

ಹಲ್ಲೆ ಮತ್ತು ಸುರಕ್ಷತಾ ಉಲ್ಲಂಘನೆಗಳಿಂದ ಬದುಕುಳಿದ ಮಗುವಿನ ಆಘಾತ ನಂತರದ ಆರೈಕೆಯು ಕಾನೂನಾತ್ಮಕ ತನಿಖಾ ಕಾರ್ಯವಿಧಾನಗಳು, ವಿಚಾರಣಾ ಕಾರ್ಯವಿಧಾನಗಳು ಮತ್ತು ಪುನರ್ವಸತಿ ಕಲ್ಪಿಸುವುದನ್ನು ಒಳಗೊಂಡಿದೆ.

**ಆಘಾತ ನಂತರದ ತನಿಖೆ ಮತ್ತು ವಿಚಾರಣಾ ಕಾರ್ಯವಿಧಾನಗಳು**

| ಕ್ರಮ ಸಂಖ್ಯೆ | ಕಾರ್ಯವಿಧಾನಗಳು | ಶಾಸನಸಬದ್ಧ ಅವಕಾಶಗಳು |
|---|---|---|
| 1 | **ಪೊಲೀಸ್ ಠಾಣೆಗೆ ಕರೆದೊಯ್ಯದಿರುವುದು :** ಹಲ್ಲೆಗೊಳಗಾಗಿರುವ ಮಗುವನ್ನು ಸಾಧ್ಯವಾದಷ್ಟು ಪೊಲೀಸ್ ಠಾಣೆಗೆ ಕರೆದೊಯ್ಯದಿರುವುದು | POCSO ಕಾಯ್ದೆಯ ಕಲಂ 24(4)ರ ಪ್ರಕಾರ ದೆಹಲಿ ಮಹಿಳಾ ಆಯೋಗ ಮತ್ತು ದೆಹಲಿ ಪೊಲೀಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಆದೇಶ W.P. (Crl) 696/2008. |
| 2 | **ಹೇಳಿಕೆಯನ್ನು ದಾಖಲಿಸುವ ಸ್ಥಳ :** ಮಗು ಹಿತಕರ ಮತ್ತು ಸುರಕ್ಷಿತವಾಗಿದೆ ಎಂದು ಬಯಸುವ ಸ್ಥಳದಲ್ಲಿ ಹೇಳಿಕೆಯನ್ನು ಪಡೆಯುವುದು. ಹೇಳಿಕೆಯನ್ನು ಮಗುವಿನ ಮನೆ, ಮಕ್ಕಳ ಪಾಲನಾ ಗೃಹಗಳು ಅಥವಾ ಸುರಕ್ಷಿತ ಸ್ಥಳದಲ್ಲಿ ಪಡೆಯುವುದು. | POCSO ಕಾಯ್ದೆಯ ಕಲಂ 24(1) 'ಹಲ್ಲೆಗೆ ಒಳಗಾದವರು ಅಥವಾ ಸಾಕ್ಷಿಗಳು ಯಾವುದೇ ಮುಜುಗರವಿಲ್ಲದೆ, ಪ್ರಕರಣದ ಬಗ್ಗೆ ವಿವರಿಸುವಂತಹ ವಾತಾವರಣವನ್ನು ಕಲ್ಪಿಸುವ ಅಗತ್ಯವಿದೆ'. ಶಶಿ ವಿ. ಯೂನಿಯನ್ ಆಫ್ ಇಂಡಿಯಾ ರಿಟ್ ಅರ್ಜಿ(crl.) 33 of 1997. Para 31. |
| 3 | **ಸಂದರ್ಶನ ಅಥವಾ ಪ್ರಶ್ನೆಗಳನ್ನು ಕೇಳುವುದು :** ತರಬೇತಿಹೊಂದಿದ, ಮಕ್ಕಳ ಸಂವೇದಿ ಪೊಲೀಸರು ಮಾತ್ರ ಮಕ್ಕಳನ್ನು ಸಂದರ್ಶಿಸುವುದು. ಹಲ್ಲೆ ಒಳಗಾಗಿರುವುದು ಹೆಣ್ಣುಮಗು ವಾಗಿದ್ದಲ್ಲಿ, ಮಹಿಳಾ ಅಧಿಕಾರಿ ಸಂದರ್ಶನ ನಡೆಸುವುದು. ಒಂದು ವೇಳೆ ಮಹಿಳಾ ಅಧಿಕಾರಿ ಇಲ್ಲದಿದ್ದಲ್ಲಿ, ಮಹಿಳಾ ಸಮಾಜ ಕಾರ್ಯಕರ್ತೆ ಅಥವಾ ಅಪ್ತಸಮಾಲೋಚಕರ ಸಮ್ಮುಖದಲ್ಲಿ ನಡೆಸುವುದು. | ಶಶಿ ವಿ. ಯೂನಿಯನ್ ಆಫ್ ಇಂಡಿಯಾ ರಿಟ್ ಅರ್ಜಿ(crl.) 33 of 1997. ಪ್ರೇರಣಾ ಮತ್ತು ಮಹಾರಾಷ್ಟ್ರ ರಾಜ್ಯ W.P No.1694 of 2003 ದಿನಾಂಕ : 18.4.2007. |

| | | |
|---|---|---|
| 4 | **ಮರುಬಲಿಪಶುವಾಗಿಸದಿರುವುದು :** ಹಲ್ಲೆಗೊಳಗಾದ ಮಗುವಿನಿಂದ S 161 of CrPC ಅನ್ವಯ ಹೇಳಿಕೆಯನ್ನು ಒಮ್ಮೆ ಮಾತ್ರ ತೆಗೆದುಕೊಳ್ಳುವುದು. ಹೇಳಿಕೆಯನ್ನು ಮಹಿಳಾ ಪೊಲೀಸ್ ಅಧಿಕಾರಿ, ಸಮವಸ್ತ್ರ ಧರಿಸದೇ ಪಡೆಯುವುದು. | POCSO ಕಾಯ್ದೆ, 2012ರ ಕಲಂ 33(5) |
| 5 | **ಹೆಚ್ಚುವರಿ ತನಿಖೆಯ ಸಂದರ್ಭದಲ್ಲಿ ಬೆಂಬಲ ವ್ಯಕ್ತಿ ಜೊತೆಗಿರುವುದು :** ತನಿಖೆಯ ಸಂದರ್ಭದಲ್ಲಿ ಸುರಕ್ಷತಾ ಉಲ್ಲಂಘನೆ ಅಥವಾ ಹಲ್ಲೆಗೊಳಗಾದ ಮಗುವಿಗೆ ಹಿತಕರವೆನಿಸುವ ವಯಸ್ಕ ವ್ಯಕ್ತಿ ಜೊತೆಗಿರುವುದು. ಒಂದು ವೇಳೆ ಮಗು ಲೈಂಗಿಕ ಹಲ್ಲೆಗೊಳಗಾಗಿದ್ದಲ್ಲಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಗುರುತಿಸಿದ ವ್ಯಕ್ತಿಯನ್ನು ಬೆಂಬಲ ವ್ಯಕ್ತಿಯನ್ನಾಗಿ ನೇಮಿಸುವುದು. | ಶಶಿ ವಿ. ಯೂನಿಯನ್ ಆಫ್ ಇಂಡಿಯಾ ರಿಟ್ ಅರ್ಜಿ(crl.) 33 of 1997. Para 27.<br>POCSO ಕಾಯ್ದೆ, 2012ರ ಕಲಂ 26 |
| 6 | **ವೈದ್ಯಕೀಯ ಪರೀಕ್ಷೆಯ ಸಂದರ್ಭದಲ್ಲಿ ಬೆಂಬಲ ವ್ಯಕ್ತಿ ಜೊತೆಗಿರುವುದು :** ವೈದ್ಯಕೀಯ ಪರೀಕ್ಷೆಯ ಮತ್ತು ಇತರೆ ವೈದ್ಯಕೀಯ ಕಾರ್ಯವಿಧಾನಗಳ ಸಂದರ್ಭದಲ್ಲಿ ಹಲ್ಲೆಗೊಳಗಾದ ಮಗುವಿನ ನಂಬುಗೆಯ ವ್ಯಕ್ತಿ ಜೊತೆಗಿರುವುದು. ಆ ವ್ಯಕ್ತಿ ಮಗುವಿನ ಕುಟುಂದವರಾಗಿರಬಹುದು ಅಥವಾ ಒಂದು ವೇಳೆ ಅಪರಾಧವೆಸಗಿದವರು ಮಗುವಿನ ಕುಟುಂಬದವರಾಗಿದ್ದಲ್ಲಿ ಬೆಂಬಲ ವ್ಯಕ್ತಿಯನ್ನು ಪ್ರತ್ಯೇಕವಾಗಿ ನೇಮಿಸುವುದು. | POCSO ಕಾಯ್ದೆ, 2012ರ ಕಲಂ 27 |
| 7 | **ಮಕ್ಕಳ ಸಂವೇಧಿ ವಾತಾವರಣ** : ಕಲಂ 164 of CrPC ರನ್ವಯ ಮಕ್ಕಳ ಸ್ನೇಹಿ ವಾತಾವರಣದಲ್ಲಿ ಸೂಕ್ಷ್ಮ ರೀತಿಯಲ್ಲಿ ಮಗುವಿನಿಂದ ಹೇಳಿಕೆಯನ್ನು ಪಡೆಯುವುದು. ಹೇಳಿಕೆಯನ್ನು ನ್ಯಾಯಾಧೀಶರು ಆಸ್ಪತ್ರೆ ಅಥವಾ ನ್ಯಾಯಾಲಯದ ಆವರಣ ಅಥವಾ ನ್ಯಾಯಾಧೀಶರ ಮನೆಯಲ್ಲಿ ಪಡೆಯುವುದು. | 'ಪ್ರಕರಣಕ್ಕೆ ಬಲಿಯಾಗಿರುವವರು ಅಥವಾ ಸಾಕ್ಷಿಯಾಗಿರುವವರು ಯಾವುದೇ ಮುಜುಗರವಿಲ್ಲದೆ, ಪ್ರಕರಣದ ಬಗ್ಗೆ ಸಂಪೂರ್ಣವಾಗಿ ವಿವರಿಸಲು ಅವಕಾಶ ಕಲ್ಪಿಸುವುದು'<br>'ಶಶಿ ವಿ. ಯೂನಿಯನ್ ಆಫ್ ಇಂಡಿಯಾ ರಿಟ್ ಅರ್ಜಿ(crl.) 33 of 1997. Para 31 |
| 8 | ಪ್ರಕರಣದ ಸಾಮಾಜಿಕ ತನಿಖಾ ವರದಿಯನ್ನು ಸಂಬಂಧಿಸಿದ ಪ್ರಾಧಿಕಾರಗಳು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸುವುದು | ಅನೈತಿಕ ಕಳ್ಳಸಾಗಾಣಿಕೆ ಕಾಯ್ದೆಯ ಕಲಂ 15, ಬಾಲ ನ್ಯಾಯ ಕಾಯ್ದೆ, 2012ರ ಕಲಂ 33. |
| 9 | **ತನಿಖೆ ಸಂದರ್ಭದಲ್ಲಿ ಮಗುವಿನ ಸುರಕ್ಷತೆ ಮತ್ತು ಯೋಗಕ್ಷೇಮ :** | ಬಾಲ ನ್ಯಾಯ ಕಾಯ್ದೆ, 2000ರ ಕಲಂ 31<br>ಬಾಲ ನ್ಯಾಯ ಕಾಯ್ದೆಯಡಿ ಮಕ್ಕಳ |

| | | |
|---|---|---|
| | ಮಕ್ಕಳ ಕಲ್ಯಾಣ ಸಮಿತಿಯು ಮಗುವನ್ನು ಪೋಷಕರು ಅಥವಾ ಪಾಲಕರಿಗೆ ಹಸ್ತಾಂತರಿಸುವುದನ್ನು ಒಳಗೊಂಡಂತೆ, ಮಗುವಿನ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ದೃಷ್ಟಿಯಲ್ಲಿಟ್ಟುಕೊಂಡು ಷರತ್ತುಬದ್ಧ ಆದೇಶವನ್ನು ಹೊರಡಿಸುವುದು. | ಕುರಿತಾದ ಪ್ರಮಾಣೀಕೃತ ಕಾರ್ಯವಿಧಾನಗಳು. |
| 10 | **ಮಕ್ಕಳ ಖಾಸಗೀತನ ಮತ್ತು ಗುರುತನ್ನು ರಕ್ಷಿಸುವುದು :** ಹಲ್ಲೆಗೆ ಒಳಗಾಗಿರುವ ಮಗುವಿನ ಹೆಸರು, ವಿಳಾಸ, ಪೋಷಕರು, ಮನೆ ಇರುವ ಸ್ಥಳ, ಶಾಲೆಗಳ ವಿವರಗಳ ಗೌಪ್ಯತೆಯನ್ನು ಎಲ್ಲಾ ಸಂದರ್ಭಗಳಲ್ಲೂ ಕಾಪಾಡುವುದು. ಇದನ್ನು ಉಲ್ಲಂಘಿಸಿದಲ್ಲಿ, ಬಾಲ ನ್ಯಾಯ ಕಾಯ್ದೆ ಮತ್ತು POCSO ಕಾಯ್ದೆಯಡಿ ಶಿಕ್ಷೆಗೊಳಪಡಿಸುವುದು. | POCSO ಕಾಯ್ದೆ, 2012ರ ಕಲಂ 24(5) ಮತ್ತು 23 |
| 11 | **ವಯಸ್ಸಿನ ಬಗ್ಗೆ ಗೊಂದಲಗಳಿದ್ದಲ್ಲಿ ಅದನ್ನು ಮಗು ಎಂದು ಪರಿಭಾವಿಸುವುದು :** ತೊಂದರೆಗೊಳಗಾದವರ ವಯಸ್ಸಿನ ಪರೀಶೀಲನೆಯ ಸಂದರ್ಭದಲ್ಲಿ ಸಂಶಯಗಳು ಉಂಟಾದಲ್ಲಿ ತೊಂದರೆಗೊಳಗಾದವರನ್ನು ಅಪ್ರಾಪ್ತರೆಂದು ಪರಿಭಾವಿಸುವುದು. ಪ್ರಮಾಣೀಕೃತ ಮತ್ತು ಅಧಿಕೃತ ದಾಖಲಾತಿಗಳ ಅಲಭ್ಯತೆ ಇರುವಾಗ, ವೈದ್ಯಕೀಯ ತಪಾಸಣೆಯ ಮೂಲಕ ವಯಸ್ಸನ್ನು ಖಚಿತಪಡಿಸಿಕೊಳ್ಳುವುದು. | ಬಾಲ ನ್ಯಾಯ ಕಾಯ್ದೆ, 2000ದ ಕಲಂ 49<br>POCSO ಕಾಯ್ದೆ, 2012ರ ಕಲಂ 24(5) |
| 12 | **ಪ್ರಕರಣಗಳ ವಿಚಾರಣೆ :** ಮಕ್ಕಳ ಮೇಲಿನ ಲೈಂಗಿಕ ಹಲ್ಲೆ ಪ್ರಕರಣಗಳ ವಿಚಾರಣೆಯನ್ನು ಲಭ್ಯವಿರುವೆಡೆಯಲ್ಲಿ ಮಹಿಳಾ ನ್ಯಾಯಾಧೀಶರಿಂದ ನಡೆಸುವುದು. ಇದು ಹಲ್ಲೆಗೊಳಗಾದ ಮಗು ಯಾವುದೇ ಆತಂಕವಿಲ್ಲದೆ, ಸುಲಭವಾಗಿ ಪ್ರಕರಣವನ್ನು ವಿವರಿಸಲು ಹಾಗೂ ನ್ಯಾಯಾಲಯವು ಕಟ್ಟುನಿಟ್ಟಿನ ಕ್ರಮಗಳ ಮೂಲಕ ಸತ್ಯ ಬೇಧಿಸಲು ಕಷ್ಟಪಡದೆ, ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಹಕಾರಿಯಾಗುತ್ತದೆ. | ಮತ್ತು ಪಂಜಾಬ್ ರಾಜ್ಯ ಮತ್ತು ಗುರುಮಿತ್ ಸಿಂಗ್ [1996] 2 SCC 384 ರಲ್ಲಿ ದೃಢಪಡಿಸಿರುವಂತೆ ಮತ್ತು ಶಶಿ ವಿ. ಯೂನಿಯನ್ ಆಫ್ ಇಂಡಿಯಾ ರಿಟ್ ಅರ್ಜಿ(crl.) 33 of 1997 ರಲ್ಲಿ ಎತ್ತಿಹಿಡಿದಿರುವಂತೆ. |
| 13 | **ಕ್ರಮ ಕೈಗೊಳ್ಳಲು ಕಾಲ ಮಿತಿ** : ಮಗುವನ್ನು 24 ಘಂಟೆಗಳೊಳಗೆ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸುವುದು. ವೈದ್ಯಕೀಯ ಪರೀಕ್ಷೆ ಮತ್ತು ಎಫ್ಐಆರ್‌ನ್ನು ನಿರ್ಧಿಷ್ಟ ಕಾಲಮಿತಿಯಲ್ಲಿ ಮಾಡುವಂತೆ ಆದೇಶವನ್ನು ಹೊರಡಿಸುವುದು. | ಬಾಲ ನ್ಯಾಯ ಕಾಯ್ದೆ, 2000ರ ಕಲಂ 32 ಮತ್ತು 33ರಲ್ಲಿನ ಅವಕಾಶಗಳು.<br>ಪ್ರೇರಣಾ ಮತ್ತು ಮಹಾರಾಷ್ಟ್ರ ರಾಜ್ಯ W.P No.1694 of 2003 ದಿನಾಂಕ : 18.4.2007. |

**ವಿಚಾರಣಾ ಸಂದರ್ಭದಲ್ಲಿನ ಕಾರ್ಯವಿಧಾನಗಳು :**

| ಕ್ರಮ ಸಂಖ್ಯೆ | ಕಾರ್ಯವಿದಾನಗಳು | ಶಾಸನಸಬದ್ಧ ಅವಕಾಶಗಳು |
|---|---|---|
| 1 | **ಆರೈಕೆ ಮತ್ತು ಆಪ್ತಸಮಾಲೋಚನಾ ಸೇವೆಗಳು :** ಹಲ್ಲೆಗೊಳಗಾದ ಮಗು ಮತ್ತು ಅದರ ಕುಟುಂಬಕ್ಕೆ ವಿಚಾರಣಾ ಸಂದರ್ಭದಲ್ಲಿ, ಅಗತ್ಯವಿರುವಲ್ಲಿ, ಆಪ್ತಸಮಾಲೋಚನೆ ಮತ್ತು ಇತರೆ ಆರೈಕೆ ಸೇವೆಗಳಾದ ಆಹಾರ, ಪ್ರಯಾಣ ಭತ್ಯೆ, ವೈದ್ಯಕೀಯ ಚಿಕಿತ್ಸೆ, ಉಳಿದುಕೊಳ್ಳಲು ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. | |
| 2 | **ಕಾಲ ಮಿತಿ :** ಕಾನೂನಿನಲ್ಲಿ ಸ್ಪಷ್ಟಪಡಿಸಿರುವಂತೆ ನಿಗಧಿತ ಸಮಯದಲ್ಲಿ ವಿಚಾರಣೆಯನ್ನು ಪೂರ್ಣಗೊಳಿಸುವುದು. | POCSO ಕಾಯ್ದೆ, 2012ರ ಕಲಂ 35 |
| 3 | **ಪುನರಾವರ್ತಿತ ಸಾಕ್ಷಿ:** ಹಲ್ಲೆಗೊಳಗಾದ ಮಗು ಪುರಾವೆಗಳನ್ನು ದಾಖಲಿಸಲು ನ್ಯಾಯಾಲಯಕ್ಕೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ. ಮಕ್ಕಳ ಸಾಕ್ಷಿಯನ್ನು ಕ್ಯಾಮೆರಾ ಅಥವಾ ವಿಡಿಯೋ ಕಾನ್ಫರೆನ್ಸ್‌ಗಳ ಮೂಲಕ ದಾಖಲಿಸುವುದು. | POCSO ಕಾಯ್ದೆ, 2012ರ ಕಲಂ 33 |
| 4. | **ಮರು ವಿಚಾರಣೆಯ ಸಂದರ್ಭದಲ್ಲಿ ಸಂವೇಧನಾತ್ಮಕವಾಗಿರುವುದು:** ಹಲ್ಲೆಗೊಳಗಾಗಿರುವ ಮಗುವಿಗೆ ಕೇಳಬೇಕಾಗಿರುವ ಪ್ರಶ್ನೆಗಳನ್ನು ಮೊದಲು ಸಂಬಂಧಿಸಿದ ನ್ಯಾಯಾಧೀಶರಿಗೆ ತೋರಿಸುವುದು. ಪ್ರಶ್ನೆಗಳ ಪ್ರಸ್ತುತತೆಯನ್ನು ತೀರ್ಮಾನಿಸಿದ ನಂತರ ನ್ಯಾಯಾಧೀಶರು ಮಗುವಿಗೆ ಪ್ರಶ್ನೆಯನ್ನು ಕೇಳುವರು. | ಸಾಕ್ಷಿ ಮತ್ತು ಯೂನಿಯನ್ ಆಫ್ ಇಂಡಿಯಾ AIR 2004 SC 3356 ನಲ್ಲಿ ನಿರ್ಧಿಷ್ಟಪಡಿಸಿರುವ ಮಾರ್ಗಸೂಚಿಗಳು. |
| 5. | **ನ್ಯಾಯಾಲಯಕ್ಕೆ ನೀಡಬೇಕಾದ ಭೇಟಿಯನ್ನು ನಿಗಧಿಪಡಿಸುವುದು :** ಮಾಹಿತಿಯ ಸಂಗ್ರಹಣೆಗಾಗಿ ಮಗುವನ್ನು ಆಗಾಗ್ಗೆ ನ್ಯಾಯಾಲಯಕ್ಕೆ ಕರೆಯುವಂತಿಲ್ಲ. ಒಂದು ವೇಳೆ ವಕೀಲರು ಉಪಸ್ಥಿತಿಯಲ್ಲಿಲ್ಲದಿದ್ದಾಗ್ಯೂ, ಹಲ್ಲೆಗೊಳಗಾದ ಮಗು ನ್ಯಾಯಾಲಯದಲ್ಲಿ ಹಾಜರಿರುವಾಗ ಪುರಾವೆಯನ್ನು ದಾಖಲಿಸುವುದು. ಮಗುವಿನ ಉತ್ತಮ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನ್ಯಾಯಾಧೀಶರು ತಮ್ಮ ವಿಶೇಷ ನ್ಯಾಯಾಂಗ ಅಧಿಕಾರಗಳನ್ನು ಬಳಸುವುದು. | POCSO ಕಾಯ್ದೆ, 2012ರ ಕಲಂ 33 (5) |
| 6. | **ರುಜುವಾತುಪಡಿಸುವಾಗ ಮಗು ಆರೋಪಿಯನ್ನು ನೋಡಬಾರದು :** ಆರೋಪಿಯ ಬಗೆಗಿನ ಮಗುವಿನ ದೃಷ್ಟಿಕೋನವನ್ನು ರುಜುವಾತುಪಡಿಸುವಾಗ ಮಗು ಆರೋಪಿಯನ್ನು ನೋಡದಿರುವಂತೆ ವ್ಯವಸ್ಥೆಗಳನ್ನು ಕಲ್ಪಿಸುವುದು. | POCSO ಕಾಯ್ದೆ, 2012ರ ಕಲಂ 36. ಸಾಕ್ಷಿ ಮತ್ತು ಯೂನಿಯನ್ ಆಫ್ ಇಂಡಿಯಾ AIR 2004 SC 3356 ನಲ್ಲಿ ನಿರ್ಧಿಷ್ಟಪಡಿಸಿರುವ ಮಾರ್ಗಸೂಚಿಗಳು. |

| ಕ್ರಮ ಸಂಖ್ಯೆ | ಕಾರ್ಯವಿದಾನಗಳು | ಶಾಸನಸಬದ್ಧ ಅವಕಾಶಗಳು |
|---|---|---|
| 7. | **ಕ್ಯಾಮೆರಾಗಳ ಮೂಲಕ ವಿಚಾರಣೆಯನ್ನು ನಡೆಸುವುದು :** ಕ್ಯಾಮೆರಾಗಳ ಮೂಲಕ ವಿಚಾರಣೆಯನ್ನು ಮಗುವಿನ ಪೋಷಕರು ಮತ್ತು ನ್ಯಾಯಾಲಯದಿಂದ ದೃಢೀಕೃತರ ಸಮ್ಮುಖದಲ್ಲಿ ನಡೆಸುವುದು. | POCSO ಕಾಯ್ದೆ, 2012ರ ಕಲಂ 37. ಸಾಕ್ಷಿ ಮತ್ತು ಯೂನಿಯನ್ ಆಫ್ ಇಂಡಿಯಾ ರಿಟ್ ಅರ್ಜಿ (crl.) 33 of 1997 |
| 8. | **ದಾಖಲಿಸಿಕೊಳ್ಳುವಾಗ ಅರ್ಥನಿರೂಪಕರು ಅಥವಾ ಭಾಷಾಂತರಿಸುವವರ ಸಹಾಯವನ್ನು ಪಡೆಯುವುದು :** ಅವಶ್ಯವಿರುವೆಡೆಯಲ್ಲಿ, ನ್ಯಾಯಾಲಯವು ದಾಖಲಿಸಿಕೊಳ್ಳುವಾಗ ಅರ್ಥನಿರೂಪಕರು ಅಥವಾ ಭಾಷಾಂತರಿಸುವವರ ಸಹಾಯವನ್ನು ಪಡೆಯುವುದು. | POCSO ಕಾಯ್ದೆ, 2012ರ ಕಲಂ 38. |
| 9 | **ಸ್ವಯಂ ಸೇವಾ ಸಂಸ್ಥೆಗಳ ಬೆಂಬಲ :** ಪರಿಣತಿ ಮತ್ತು ತಾಂತ್ರಿಕ ಜ್ಞಾನಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳು ಕಾನೂನಿನನ್ವಯ ಮಗುವಿಗೆ ಬೆಂಬಲ ನೀಡುವುದು. | POCSO ಕಾಯ್ದೆ, 2012ರ ಕಲಂ 39. |

**ಹಲ್ಲೆಗೊಳಗಾದ ಮಗುವಿನ ಪುನರ್ವಸತಿ :**

| ಕ್ರಮ ಸಂಖ್ಯೆ | ಕಾರ್ಯವಿದಾನಗಳು | ಶಾಸನಸಬದ್ಧ ಅವಕಾಶಗಳು |
|---|---|---|
| 1. | **ಪುನರ್ವಸತಿ :** ಮಕ್ಕಳ ಕಲ್ಯಾಣ ಸಮಿತಿಯು ಹಲ್ಲೆಗೊಳಗಾದ ಮಗುವಿನ ಪುನರ್ವಸತಿಯ ಮೇಲ್ವಿಚಾರಣೆಯನ್ನು ಆರಂಭದಿಂದಲೂ ನೋಡಿಕೊಳ್ಳುವುದು ಮತ್ತು ನಿಯಮಿತವಾಗಿ ವರದಿಯನ್ನು ನಿರ್ವಹಿಸುವುದು. | ಬಾಲ ನ್ಯಾಯ ಕಾಯ್ದೆ 2000 ಮಹಾರಾಷ್ಟ್ರ ರಾಜ್ಯದ ಮಕ್ಕಳ ಕಲ್ಯಾಣ ಸಮಿತಿಯ ಪ್ರಾಮಾಣೀಕೃತ ಕಾರ್ಯವಿಧಾನಗಳು. ಇದನ್ನು (http://nlrd.org/wp-content/uploads/2012/02/SOP CWC.pdf) ನಲ್ಲಿ ಪಡೆಯಬಹುದು |
| 2. | **ಮಗುವಿನ ಉತ್ತಮ ಹಿತಾಸಕ್ತಿಯಿಂದ ಆದೇಶವನ್ನು ಹೊರಡಿಸುವುದು :** ಮಕ್ಕಳ ಕಲ್ಯಾಣ ಸಮಿತಿಯು ಹಲ್ಲೆಗೊಳಗಾದ ಮಗುವಿನ ಪುನರ್ವಸತಿಗಾಗಿ, ಮಗುವಿನ ಉತ್ತಮ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಷರತ್ತುಬದ್ಧ ಆದೇಶವನ್ನು ಹೊರಡಿಸುವುದು. | ಬಾಲ ನ್ಯಾಯ ಕಾಯ್ದೆ 2000 ಮಹಾರಾಷ್ಟ್ರ ರಾಜ್ಯದ ಮಕ್ಕಳ ಕಲ್ಯಾಣ ಸಮಿತಿಯ ಪ್ರಾಮಾಣೀಕೃತ ಕಾರ್ಯವಿಧಾನಗಳು. ಇದನ್ನು (http://nlrd.org/wp-content/uploads/2012/02/SOP CWC.pdf) ನಲ್ಲಿ ಪಡೆಯಬಹುದು |

| | | |
|---|---|---|
| 3. | **ಮಗುವನ್ನು ಪುನಃ ಕುಟುಂಬದೊಂದಿಗೆ ಸೇರಿಸುವುದು :** ಮಕ್ಕಳ ಕಲ್ಯಾಣ ಸಮಿತಿಯು ಅಧಿಕೃತ ಆಪ್ತಸಮಾಲೋಚಕರು ಮತ್ತು/ಅಥವಾ ಮನಶಾಸ್ತ್ರಜ್ಞರು ನೀಡುವ ವರದಿಯನ್ನು ಆಧರಿಸಿ ಆದೇಶವನ್ನು ಹೊರಡಿಸುತ್ತದೆ. ಈ ಆದೇಶವು ಆಪ್ತಸಮಾಲೋಚನೆ ಮತ್ತು ಮಗುವನ್ನು ಕುಟುಂಬ/ಪಾಲಕರೊಂದಿಗೆ ಆದಷ್ಟು ಬೇಗ ಸೇರಿಸುವುದನ್ನು ಒಳಗೊಂಡಿರುತ್ತದೆ. | ಬಾಲ ನ್ಯಾಯ ಕಾಯ್ದೆ 2000ದ ಕಲಂ 31.<br>ಮಹಾರಾಷ್ಟ್ರ ರಾಜ್ಯದ ಮಕ್ಕಳ ಕಲ್ಯಾಣ ಸಮಿತಿಯ ಪ್ರಾಮಾಣೀಕೃತ ಕಾರ್ಯವಿಧಾನಗಳು. ಇದನ್ನು (http://nlrd.org/wp-content/uploads/2012/02/SOP CWC.pdf) ನಲ್ಲಿ ಪಡೆಯಬಹುದು |
| 4. | **ಪುನರ್ವಸತಿ :** ಮಕ್ಕಳ ಕಲ್ಯಾಣ ಸಮಿತಿಯು ಹಲ್ಲೆಗೊಳಗಾದ ಮಗು ಮತ್ತು ಕುಟುಂಬದ ಪುನರ್ವಸತಿಗಾಗಿ, ಚಿಕಿತ್ಸೆ ನೀಡುವುದು, ಕೌಶಲ್ಯ ತರಬೇತಿ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಒಳಗೊಂಡಂತೆ ಷರತ್ತುಬದ್ಧ ಆದೇಶವನ್ನು ಹೊರಡಿಸುವುದು. ಪುನರ್ವಸತಿ ಪ್ರಕ್ರಿಯೆಯು ಪರಿಸ್ಥಿತಿಯ ಗಂಭೀರತೆ, ಮಗುವಿನ ಉತ್ತಮ ಹಿತಾಸಕ್ತಿ, ವಯಸ್ಸಿಗನುಗುಣವಾಗಿ ಮತ್ತು ಸಮಗ್ರವಾಗಿರುವುದು. ಮಧ್ಯಸ್ಥಿಕೆ ಕಾರ್ಯಕ್ರಮಗಳನ್ನು ಯೋಜಿಸುವಾಗ ಮಗು ಮತ್ತು ಕುಟುಂಬದ ಹಿನ್ನೆಲೆ ಹಾಗೂ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಳ್ಳುವುದು. ಪ್ರತಿ ಹಂತದಲ್ಲಿ ಮಗುವಿಗೆ ಪ್ರಕ್ರಿಯೆಯ ಬಗ್ಗೆ ವಿವರಿಸುವುದು ಮತ್ತು ಅವನ/ಳ ಅಭಿಪ್ರಾಯ, ಒಪ್ಪಿಗೆಯನ್ನು ಪಡೆಯುವುದು. ಕುಟುಂಬ/ಪಾಲಕರೊಂದಿಗೆ ಸೇರಿಸಲಾದ ಮಗುವಿನ ಅನುಸರಣೆಯನ್ನು ಕನಿಷ್ಠ ಮೂರು ವರ್ಷಗಳ ಕಾಲ ನಡೆಸುವುದು. | |

**ಎ. ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಿಸಿದ ಕಾರ್ಯವಿಧಾನಗಳು**

**ಹಲ್ಲೆಗೈದ/ಅಪರಾಧಗೈದ ಮಗುವಿನ ಪುನರ್ವಸತಿ :**

1. ಪೋಷಕರು/ಪಾಲಕರ ವಶಕ್ಕೆ ನೀಡುತ್ತಿರುವ ಮಗುವಿನ ಜೀವಕ್ಕೆ ಯಾವುದೇ ಬೆದರಿಕೆ ಅಥವಾ ಅಪಾಯವಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
2. ಮಗುವನ್ನು ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದೊಂದಿಗೆ ಸಮಾಜದೊಂದಿಗೆ ಒಂದುಗೂಡಿಸಲು ವಿಶೇಷ ಚಿಕಿತ್ಸೆಯನ್ನು ಕೊಡಿಸುವುದು.
3. ಅಧಿಸೂಚಿತ ಏಳು ವರ್ಷಗಳ ನಂತರ ಪೊಲೀಸ್ ಮತ್ತು ರಾಜ್ಯ ಮಗುವಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಾಶಪಡಿಸುವುದು ಮತ್ತು ವಯಸ್ಕರಾದ ನಂತರ ಅಪರಾಧವೆಸಗಿದಲ್ಲಿ ಅದನ್ನು ಪುನಃ ತೆರೆಯದಿರುವುದು.
4. ಬಾಲ ನ್ಯಾಯ ಮಂಡಳಿಯ ದಂಢಾಧಿಕಾರಿಯವರ ವಿವೇಚನೆಯಂತೆ, ಘೋರ ಅಪರಾಧ ಪ್ರಕರಣಗಳನ್ನು ವಯಸ್ಕರ ನ್ಯಾಯಾಲಯಕ್ಕೆ ವರ್ಗಾಯಿಸುವುದು.

**ಆಘಾತದ ನಂತರ ಮಗುವಿನ ಆರೈಕೆ :**

| ಕ್ರಮ ಸಂಖ್ಯೆ | ಕಾರ್ಯವಿದಾನಗಳು | ಶಾಸಸಬದ್ಧ ಅವಕಾಶಗಳು |
|---|---|---|
| 1. | **ಪೊಲೀಸ್ ಠಾಣೆ/ಬಾಲ ನ್ಯಾಯ ಮಂಡಳಿಗೆ ಕರೆತರುವುದು :** ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವನ್ನು ಪೊಲೀಸ್ ಠಾಣೆಯಲ್ಲಿರುವ ಮಕ್ಕಳ ವಿಶೇಷ ಪೊಲೀಸ್ ಘಟಕಕ್ಕೆ ಕರೆತರುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 10(1). |
| 2 | **ಜಾಮೀನು :** ಬಾಲಾರೋಪಿ ಎಂದು ಸ್ಪಷ್ಟವಾಗಿ ಹೇಳಲಾದ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿಗೆ ನೀಡಲಾಗುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 12(1/2/3/4). |
| 3 | **ಮಾಹಿತಿ :** ಪೋಷಕರು, ಪಾಲಕರು ಅಥವಾ ಪ್ರೊಬೇಷನರಿ ಅಧಿಕಾರಿಗೆ ಮಾಹಿತಿಯನ್ನು ನೀಡುವುದು. | Section 13 (1-i/ii/2) ಬಾಲ ನ್ಯಾಯ ಕಾಯ್ದೆ 2015ರ ಕಲಂ 13(1-i/ii/2) |
| 4 | **ಮರುಬಲಿಪಶುವಾಗುವುದನ್ನು ತಪ್ಪಿಸುವುದು :** ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ವಿಚಾರಣೆಯನ್ನು ಬಾಲ ನ್ಯಾಯ ಮಂಡಳಿ ನಡೆಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 14 ಮತ್ತು 15 (1/2/3/4/5). |
| 5 | **ಬಾಲ ನ್ಯಾಯ ಮಂಡಳಿಯಿಂದ ಘೋರ ಅಪರಾಧಗಳ ಪ್ರಾಥಮಿಕ ಮಾಪನ** : ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಯಾವುದೇ ವಿಚಾರಣಾ ಪ್ರಕ್ರಿಯೆಗಳಲ್ಲಿ, ಅವನು/ಳು ಹಿತಕರವೆಂದು ಭಾವಿಸುವ ವಯಸ್ಕರನ್ನು ಜೊತೆಯಲ್ಲಿರಿಸುವುದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಗುರುತಿಸಲ್ಪಟ್ಟ ವ್ಯಕ್ತಿಯನ್ನು ಮಗುವಿನ ಬೆಂಬಲಕ್ಕಾಗಿ ನೀಡಲಾಗುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 15(1/2). |
| 6 | **ವೈದ್ಯಕೀಯ ಚಿಕಿತ್ಸೆ ಸಂದರ್ಭದಲ್ಲಿ ಬೆಂಬಲ ವ್ಯಕ್ತಿ :** ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ವೈದ್ಯಕೀಯ ಪರೀಕ್ಷೆ ಮತ್ತು ಇತರೆ ಪ್ರಕ್ರಿಯೆಗಳಲ್ಲಿ ಮಗುವಿನ ನಂಬುಗೆಯ ವ್ಯಕ್ತಿ ಮಗುವಿನೊಂದಿಗಿರುವುದು. ಆ ವ್ಯಕ್ತಿ ಮಗುವಿನ ಕುಟುಂಬದ ಸದಸ್ಯ ಅಥವಾ ಬಾಲ ನ್ಯಾಯ ಮಂಡಳಿಯು ನೇಮಿಸಿದ ವ್ಯಕ್ತಿಯಾಗಿರಬಹುದು | ಬಾಲ ನ್ಯಾಯ ಕಾಯ್ದೆ 2015ರ ಕಲಂ 8. |
| 7 | **ಮಕ್ಕಳ ಸಂವೇಧಿ ವಾತಾವರಣ :** ಕಲಂ 164 of CrPC ಅಡಿ ಮಕ್ಕಳ ಹೇಳಿಕೆಯನ್ನು ಮಕ್ಕಳ ಸ್ನೇಹಿ ವಾತಾವರಣದಲ್ಲಿ, ಸಂವೇಧನಾತ್ಮಕವಾಗಿ | ಬಾಲ ನ್ಯಾಯ ಕಾಯ್ದೆ 2015ರ ಕಲಂ 8. |

| | | |
|---|---|---|
| | ಪಡೆಯುವುದು. ದಂಢಾಧಿಕಾರಿಯವರು ಹೇಳಿಕೆಯನ್ನು ನ್ಯಾಯಾಲಯದ ಆವರಣ, ತಮ್ಮ ಮನೆ ಅಥವಾ ಆಸ್ಪತ್ರೆಯಲ್ಲಿ ಪಡೆಯಬಹುದು. | |
| 8 | **ಸಂಬಂಧಿಸಿದ ಪ್ರಾಧಿಕಾರಗಳು ಸಾಮಾಜಿಕ ವರದಿಯನ್ನು ತಯಾರಿಸಿ ಬಾಲ ನ್ಯಾಯ ಮಂಡಳಿಗೆ ಸಲ್ಲಿಸುವುದು** : ಬಾಲ ನ್ಯಾಯ ಮಂಡಳಿಯು ಬಾಲಾಪರಾಧಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿದಾಗ, ಪೋಷಕರು ಅಥವಾ ಪಾಲಕರಿಗೆ ಹಸ್ತಾಂತರಿಸಿದ ಸಂದರ್ಭದಲ್ಲಿ, ಅವರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ದೃಷ್ಟಿಯಲ್ಲಿಟ್ಟುಕೊಂಡು ಷರತ್ತುಬದ್ಧ ಆದೇಶವನ್ನು ಹೊರಡಿಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 8–ಇ |
| 9 | **ಖಾಸಗೀತನ ಮತ್ತು ಗುರುತನ್ನು ರಕ್ಷಿಸುವುದು** : ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಹೆಸರು, ವಿಳಾಸ, ಪೋಷಕರು, ಮನೆ ಇರುವ ಸ್ಥಳ, ಶಾಲೆಗಳ ವಿವರಗಳ ಗೌಪ್ಯತೆಯನ್ನು ಎಲ್ಲಾ ಸಂದರ್ಭಗಳಲ್ಲೂ ಕಾಪಾಡುವುದು. ಇದನ್ನು ಉಲ್ಲಂಘಿಸಿದಲ್ಲಿ, ಬಾಲ ನ್ಯಾಯ ಕಾಯ್ದೆಯಡಿ ಶಿಕ್ಷೆಗೊಳಪಡಿಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 74(1/2/3). |
| 10 | **ಪರೀಕ್ಷೆ ಮತ್ತು ವಿಚಾರಣೆ :** ಘೋರ ಅಪರಾಧ ಪ್ರಕರಣಗಳಲ್ಲಿ ದಂಢಾಧಿಕಾರಿಗಳ ವಿವೇಚನೆಗನುಗುಣವಾಗಿ ವಯಸ್ಕರ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 19. |
| 11 | ಕಾನೂನಿನೊಡನೆ ಸಂಘರ್ಷದಲ್ಲಿರದ ಮಗುವೆಂದು ಕಂಡುಬಂದಲ್ಲಿ/ ಮತ್ತು ಸಂಘರ್ಷದಲ್ಲಿರುವ ಮಗುವೆಂದು ಕಂಡುಬಂದಲ್ಲಿ ಆದೇಶವನ್ನು ಹೊರಡಿಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 17/18 |
| 12 | **ಕ್ರಮ ಕೈಗೊಳ್ಳಲು ಕಾಲ ಮಿತಿ** : ಮಗುವನ್ನು 24 ಘಂಟೆಗಳೊಳಗೆ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸುವುದು. ವೈದ್ಯಕೀಯ ಪರೀಕ್ಷೆ ಮತ್ತು ಎಸ್ಐಆರ್‌ನ್ನು ನಿರ್ಧಿಷ್ಟ ಕಾಲಮಿತಿಯಲ್ಲಿ ಮಾಡುವಂತೆ ಆದೇಶವನ್ನು ಹೊರಡಿಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 10(1/2). |

**ವಿಚಾರಣೆ ಸಂದರ್ಭದಲ್ಲಿನ ಕಾರ್ಯಾಚರಣೆಗಳು :**

| ಕ್ರಮ ಸಂಖ್ಯೆ | ಕಾರ್ಯವಿದಾನಗಳು | ಶಾಸನಬದ್ಧ ಅವಕಾಶಗಳು |
|---|---|---|
| 1 | **ಆರೈಕೆ ಮತ್ತು ಆಪ್ತಸಮಾಲೋಚನಾ ಸೇವೆಗಳು :** ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗು ಮತ್ತು ಅದರ ಕುಟುಂಬಕ್ಕೆ ವಿಚಾರಣಾ ಸಂದರ್ಭದಲ್ಲಿ, ಅಗತ್ಯವಿರುವಲ್ಲಿ, ಆಪ್ತಸಮಾಲೋಚನೆ ಮತ್ತು ಇತರೆ | |

| | | |
|---|---|---|
| | ಆರೈಕೆ ಸೇವೆಗಳಾದ ಆಹಾರ, ಪ್ರಯಾಣ ಭತ್ಯೆ, ವೈದ್ಯಕೀಯ ಚಿಕಿತ್ಸೆ, ಉಳಿದುಕೊಳ್ಳಲು ವ್ಯವಸ್ಥೆಯನ್ನು ಕಲ್ಪಿಸುವುದು | |
| 2 | **ಕಾಲ ಮಿತಿ :** ಕಾನೂನಿನಲ್ಲಿ ಸ್ಪಷ್ಟಪಡಿಸಿರುವಂತೆ ನಿಗಧಿತ ಸಮಯದಲ್ಲಿ ವಿಚಾರಣೆಯನ್ನು ಪೂರ್ಣಗೊಳಿಸುವುದು. | |
| 3 | **ಕಾನೂನಿನ ನೆರವು** : ಕಾನೂನು ಸೇವಾ ಸಂಸ್ಥೆಗಳ ಮೂಲಕ ಮಗುವಿಗೆ ಕಾನೂನಿನ ನೆರವು ದೊರೆಯುತ್ತಿರುವುದನ್ನು ಖಚಿತಪಡಿಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 8–ಸಿ |
| 4 | **ಮರು ವಿಚಾರಣೆಯ ಸಂದರ್ಭದಲ್ಲಿ ಸಂವೇಧನಾತ್ಮಕವಾಗಿರುವುದು:** ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿಗೆ ಕೇಳಬೇಕಾಗಿರುವ ಪ್ರಶ್ನೆಗಳನ್ನು ಮೊದಲು ಸಂಬಂಧಿಸಿದ ನ್ಯಾಯಾಧೀಶರಿಗೆ ತೋರಿಸುವುದು. ಪ್ರಶ್ನೆಗಳ ಪ್ರಸ್ತುತತೆಯನ್ನು ತೀರ್ಮಾನಿಸಿದ ನಂತರ ನ್ಯಾಯಾಧೀಶರು ಮಗುವಿಗೆ ಪ್ರಶ್ನೆಯನ್ನು ಕೇಳುವರು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 15. |
| 5 | **ದಾಖಲಿಸಿಕೊಳ್ಳುವಾಗ ಅರ್ಥನಿರೂಪಕರು ಅಥವಾ ಭಾಷಂತರಿಸುವವರ ಸಹಾಯವನ್ನು ಪಡೆಯುವುದು :** ಅವಶ್ಯವಿರುವೆಡೆಯಲ್ಲಿ, ನ್ಯಾಯಾಲಯವು ದಾಖಲಿಸಿಕೊಳ್ಳುವಾಗ ಅರ್ಥನಿರೂಪಕರು ಅಥವಾ ಭಾಷಾಂತರಿಸುವವರ ಸಹಾಯವನ್ನು ಪಡೆಯುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 8–ಡಿ |
| 6 | **ಸ್ವಯಂ ಸೇವಾ ಸಂಸ್ಥೆಗಳ ಬೆಂಬಲ :** ಪರಿಣತಿ ಮತ್ತು ತಾಂತ್ರಿಕ ಜ್ಞಾನಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳು ಕಾನೂನಿನನ್ವಯ ಮಗುವಿಗೆ ಬೆಂಬಲ ನೀಡುವುದು. | ಬಾಲ ನ್ಯಾಯ ಕಾಯ್ದೆ 2015 |
| 7 | ಅಧಿಸೂಚಿತ ಏಳು ವರ್ಷಗಳ ನಂತರ ಪೊಲೀಸ್ ಮತ್ತು ರಾಜ್ಯ ಮಗುವಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಾಶಪಡಿಸುವುದು ಮತ್ತು ವಯಸ್ಕರಾದ ನಂತರ ಅಪರಾಧವೆಸಗಿದಲ್ಲಿ ಅದನ್ನು ಪುನಃ ತೆರೆಯದಿರುವುದು. | |

**ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಪುನರ್ವಸತಿ :**

| ಕ್ರಮ ಸಂಖ್ಯೆ | ಕಾರ್ಯವಿದಾನಗಳು | ಶಾಸಸಬದ್ಧ ಅವಕಾಶಗಳು |
|---|---|---|
| 1 | **ಪುನರ್ವಸತಿ :** ಬಾಲನ್ಯಾಯ ಮಂಡಳಿಯು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಪುನರ್ವಸತಿಯ ಮೇಲ್ವಿಚಾರಣೆಯನ್ನು ಆರಂಭದಿಂದಲೂ ನೋಡಿಕೊಳ್ಳುವುದು ಮತ್ತು ನಿಯಮಿತವಾಗಿ ವರದಿಯನ್ನು ನಿರ್ವಹಿಸುವುದು. ಕಾನೂನಿನನ್ವಯ ವ್ಯಕ್ತಿಗತ ಆರೈಕೆ | ಬಾಲ ನ್ಯಾಯ ಕಾಯ್ದೆ 2015ರ ಕಲಂ 18 |

| | | |
|---|---|---|
| | ಯೋಜನೆಯನ್ನು ರೂಪಿಸಿ ಪ್ರಗತಿಯನ್ನು ಪರಿಶೀಲಿಸಲು ಆದೇಶವನ್ನು ಹೊರಡಿಸುವುದು. | |
| 2 | **ಮಗುವಿನ ಉತ್ತಮ ಹಿತಾಸಕ್ತಿಯಿಂದ ಆದೇಶವನ್ನು ಹೊರಡಿಸುವುದು :** ಬಾಲನ್ಯಾಯ ಮಂಡಳಿಯು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಪುನರ್ವಸತಿಗಾಗಿ, ಮಗುವಿನ ಉತ್ತಮ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಷರತ್ತುಬದ್ಧ ಆದೇಶವನ್ನು ಹೊರಡಿಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 8 |
| 3 | **ಮಗುವನ್ನು ಪುನಃ ಕುಟುಂಬದೊಂದಿಗೆ ಸೇರಿಸುವುದು :** ಬಾಲ ನ್ಯಾಯ ಮಂಡಳಿಯು ಅಧಿಕೃತ ಆಪ್ತಸಮಾಲೋಚಕರು ಮತ್ತು/ಅಥವಾ ಮನಶಾಸ್ತ್ರಜ್ಞರು ನೀಡುವ ವರದಿಯನ್ನು ಆಧರಿಸಿ ಆದೇಶವನ್ನು ಹೊರಡಿಸುತ್ತದೆ. ಈ ಆದೇಶವು ಆಪ್ತಸಮಾಲೋಚನೆ ಮತ್ತು ಮಗುವನ್ನು ಕುಟುಂಬ/ಪಾಲಕರೊಂದಿಗೆ ಆದಷ್ಟು ಬೇಗ ಸೇರಿಸುವುದನ್ನು ಒಳಗೊಂಡಿರುತ್ತದೆ. | ಬಾಲ ನ್ಯಾಯ ಕಾಯ್ದೆ 2015ರ ಕಲಂ 8 |
| 4 | **ಪುನರ್ವಸತಿ :** ಬಾಲ ನ್ಯಾಯ ಮಂಡಳಿಯು ಹಲ್ಲೆಗೊಳಗಾದ ಮಗು ಮತ್ತು ಕುಟುಂಬದ ಪುನರ್ವಸತಿಗಾಗಿ, ಚಿಕಿತ್ಸೆ ನೀಡುವುದು, ಕೌಶಲ್ಯ ತರಬೇತಿ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಒಳಗೊಂಡು ಷರತ್ತುಬದ್ಧ ಆದೇಶವನ್ನು ಹೊರಡಿಸುವುದು. ಪುನರ್ವಸತಿ ಪ್ರಕ್ರಿಯೆಯು ಪರಿಸ್ಥಿತಿಯ ಗಂಭೀರತೆ, ಮಗುವಿನ ಉತ್ತಮ ಹಿತಾಸಕ್ತಿ, ವಯಸ್ಸಿಗನುಗುಣವಾಗಿ ಮತ್ತು ಸಮಗ್ರವಾಗಿರುವುದು. ಮಧ್ಯಸ್ಥಿಕೆ ಕಾರ್ಯಕ್ರಮಗಳನ್ನು ಯೋಜಿಸುವಾಗ ಮಗು ಮತ್ತು ಕುಟುಂಬದ ಹಿನ್ನೆಲೆ ಹಾಗೂ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಳ್ಳುವುದು. ಪ್ರತಿ ಹಂತದಲ್ಲಿ ಮಗುವಿಗೆ ಪ್ರಕ್ರಿಯೆಯ ಬಗ್ಗೆ ವಿವರಿಸುವುದು ಮತ್ತು ಅವನ/ಳ ಅಭಿಪ್ರಾಯ, ಒಪ್ಪಿಗೆಯನ್ನು ಪಡೆಯುವುದು. ಕುಟುಂಬ/ಪಾಲಕರೊಂದಿಗೆ ಸೇರಿಸಲಾದ ಮಗುವಿನ ಅನುಸರಣೆಯನ್ನು ಕನಿಷ್ಠ ಮೂರು ವರ್ಷಗಳ ಕಾಲ ನಡೆಸುವುದು. | ಬಾಲ ನ್ಯಾಯ ಕಾಯ್ದೆ 2015ರ ಕಲಂ 18 |
| 5 | ಮಗುವನ್ನು ಪೋಷಕರು/ಪಾಲಕರ ವಶಕ್ಕೆನೀಡುವಾಗ ಮಗುವಿನ ಜೀವಕ್ಕೆ ಯಾವುದೇ ಬೆದರಿಕೆ ಅಥವಾ ಅಪಾಯವಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು. | |

## ಸಂಕ್ಷೇಪಣಗಳು :

| | | |
|---|---|---|
| **CBSE** | Central Board of Secondary Education | ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ |
| **CCTV** | Closed Circuit Television | ಕ್ಲೋಸ್ಡ್ ಸರ್ಕ್ಯೂಟ್ ಟೆಲಿವಿಷನ್ |
| **CISCE** | Council for Indian School Certificate Examination | ಕೌನ್ಸಿಲ್ ಫಾರ್ ಇಂಡಿಯನ್ ಸ್ಕೂಲ್ ಸರ್ಟಿಫೀಕೇಟ್ ಎಕ್ಸಾಮಿನೇಷನ್ |
| **CPC** | Child Protection Committee | ಮಕ್ಕಳ ರಕ್ಷಣಾ ಸಮಿತಿ |
| **CPP** | Child Protection Policy | ಮಕ್ಕಳ ರಕ್ಷಣಾ ನೀತಿ |
| **CPO** | Child Protection Officer | ಮಕ್ಕಳ ರಕ್ಷಣಾ ಅಧಿಕಾರಿ |
| **CPR** | Cardio Pulmonary Resuscitation | ಹೃದಯ ಮತ್ತು ಶ್ವಾಸಕೋಶ ಪ್ರಚೋದಕ |
| **CSA** | Child Sexual Abuse | ಮಕ್ಕಳ ಮೇಲಿನ ಲೈಂಗಿಕ ಹಲ್ಲೆ |
| **CWC** | Child Welfare Committee | ಮಕ್ಕಳ ಕಲ್ಯಾಣ ಸಮಿತಿ |
| **DCPO** | District Child Protection Officer | ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ |
| **DCPU** | District Child Protection Unit | ಜಿಲ್ಲಾ ಮಕ್ಕಳ ರಕ್ಷಣಾ ಘಟಕ |
| **DoE** | Department of Education | ಶಿಕ್ಷಣ ಇಲಾಖೆ |
| **DWCD** | Department of Women and Child Development | ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ |
| **EI** | Educational Institution | ಶಿಕ್ಷಣ ಸಂಸ್ಥೆಗಳು |
| **FIR** | First Information Report | ಪ್ರಥಮ ತನಿಖಾ ವರದಿ |
| **GPS** | Global Positioning Satellite System | ಗ್ಲೋಬಲ್ ಪೊಸಿಷನಿಂಗ್ ಸ್ಯಾಟಲೈಟ್ ಸಿಸ್ಟಮ್ |
| **GoK** | Government of Karnataka | ಕರ್ನಾಟಕ ಸರ್ಕಾರ |
| **IB** | International Baccalaureate | ಅಂತರಾಷ್ಟ್ರೀಯ ಬ್ಯಕೆಲೌರಿಯೇಟ್ |
| **ICC** | Internal Complaints Committee | ಆಂತರಿಕ ದೂರುಗಳ ಸಮಿತಿ |
| **ICPS** | Integrated Child Protection Scheme | ಸಮಗ್ರ ಮಕ್ಕಳ ರಕ್ಷಣಾ ಯೋಜನೆ |

| | | |
|---|---|---|
| **IGCSE** | International General Certificate of Secondary Education | ಇಂಟರ್‌ನ್ಯಾಷನಲ್ ಜನರಲ್ ಸರ್ಟಿಫಿಕೇಟ್ ಆಫ್ ಸೆಕೆಂಡರಿ ಎಜುಕೇಷನ್ |
| **IO** | Investigating Officer (Police) | ತನಿಖಾಧಿಕಾರಿ (ಪೊಲೀಸ್) |
| **JJA** | Juvenile Justice (C&PC) Act 2000 and related Amendments | ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ, 2000 ಮತ್ತು ಸಂಬಂಧಿಸಿದ ತಿದ್ದುಪಡಿಗಳು |
| **JJB** | Juvenile Justice Board | ಬಾಲ ನ್ಯಾಯ ಮಂಡಳಿ |
| **KSCPCR** | Karnataka State Commission for Protection of Child Rights | ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ |
| **NGO** | Non-Governmental Organization | ಸರ್ಕಾರೇತರ ಸಂಸ್ಥೆಗಳು |
| **POCSO** | Protection of Children from Sexual Offences Act | ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ |
| **PTA** | Parent Teacher Association | ಪೋಷಕರು–ಶಿಕ್ಷಕರ ಸಂಘ |
| **RTE** | Right to Education Act | ಶಿಕ್ಷಣದ ಹಕ್ಕು ಕಾಯ್ದೆ |
| **SCPP** | State Child Protection Policy | ರಾಜ್ಯ ಮಕ್ಕಳ ರಕ್ಷಣಾ ನೀತಿ |
| **SDMC** | School Development Monitoring Committee | ಶಾಲಾ ಅಭಿವೃದ್ಧಿ ಮೇಲ್ವಿಚಾರಣಾ ಸಮಿತಿ |
| **SJPU** | Special Juvenile Police Unit | ಮಕ್ಕಳ ವಿಶೇಷ ಪೊಲೀಸ್ ಘಟಕ |
| **SSA** | Sarva Sikshana Abhiyana | ಸರ್ವ ಶಿಕ್ಷಣ ಅಭಿಯಾನ |
| **CPP for EI** | Child Protection Policy for Educational Institutions | ಶಿಕ್ಷಣ ಸಂಸ್ಥೆಗಳಿಗಾಗಿ ಮಕ್ಕಳ ರಕ್ಷಣಾ ನೀತಿ |
| **UNCRC** | United Nation Convention on the Rights of the Child | ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆ |

# ಶಿಕ್ಷಣ ಸಂಸ್ಥೆಗಳಿಗೆ ಮಕ್ಕಳ ಸುರಕ್ಷತಾ ಗಮನಿಕೆ ಪಟ್ಟಿ[1]

ಮಕ್ಕಳ ಸುರಕ್ಷತಾ ಗಮನಿಕೆ ಪಟ್ಟಿಯು ಮಕ್ಕಳ ಸುರಕ್ಷತೆಯ ವಿವಿಧ ಆಯಾಮಗಳನ್ನು ಪರಿಗಣಿಸಿ, ಸುರಕ್ಷತೆ ಮತ್ತು ರಕ್ಷಣೆಯ ಪ್ರಮುಖ ವಲಯಗಳ ತಪಾಸಣೆಗೆ ಈ ಮುಂದಿನ ಸೂಚಕಗಳನ್ನು ಒದಗಿಸಿದೆ: ಭೌತಿಕ ಸುರಕ್ಷತೆಯು ಮೂಲಭೂತ ಸೌಕರ್ಯಗಳು, ಆರೋಗ್ಯ ಮತ್ತು ಸಾರಿಗೆಯನ್ನು, ವೈಯಕ್ತಿಕ, ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ, ಸೈಬರ್ ಸುರಕ್ಷತೆ, ತುರ್ತು ಪರಿಸ್ಥಿತಿಗೆ ಸನ್ನದ್ಧತೆ ಹಾಗೂ ವಿಪತ್ತು ನಿರ್ವಹಣೆಯನ್ನು ಒಳಗೊಂಡಿದೆ.

ಮಕ್ಕಳ ಸುರಕ್ಷತೆ ಮತ್ತು ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು, ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತಾ ಉಲ್ಲಂಘನೆಯ ಪ್ರಕರಣಗಳಲ್ಲಿ ವರದಿ ಪ್ರಕ್ರಿಯೆಗಳಿಗೆ ಸಂಬಂಧಿಸಿದ ವ್ಯವಸ್ಥೆಯನ್ನು ಮಾಪನಮಾಡಲು ಕಾರ್ಯವಿಧಾನಗಳನ್ನು ನೀಡಲಾಗಿದೆ.

ಶಿಕ್ಷಣ ಸಂಸ್ಥೆಗಳ ಪ್ರಾಧಿಕಾರವು ಸಿಬ್ಬಂದಿಗಳು, ಪೋಷಕರು, ವಿದ್ಯಾರ್ಥಿಗಳೊಡನೆ ಸಮಾಲೋಚನೆ ನಡೆಸಿ, ಶಾಲೆಯ ಅಗತ್ಯಗಳಿಗನುಗುಣವಾಗಿ ಗಮನಿಕೆ ಪಟ್ಟಿಯನ್ನು ಅಳವಡಿಸಿಕೊಳ್ಳಬಹುದಾಗಿದೆ. ಏನೇ ಆದರೂ, ಕಡ್ಡಾಯವೆಂದು(M) ಗುರುತಿಸಲಾದ ಸೂಚಕಗಳಿಗೆ ಶಿಕ್ಷಣ ಸಂಸ್ಥೆಗಳು ಬದ್ಧವಾಗಿರಬೇಕು.

| ವಿಭಾಗ – 1: ಭೌತಿಕ ಸುರಕ್ಷತೆ – ಮೂಲಭೂತ ಸೌಕರ್ಯ, ಆರೋಗ್ಯ ಮತ್ತು ಸಾರಿಗೆ | | | | |
|---|---|---|---|---|
| ವಿಭಾಗ–1 A ಮೂಲಭೂತ ಸೌಕರ್ಯ[2] | | | | |
| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯವಾದುದು (M)/ ಶಿಫಾರಸ್ಸು ಮಾಡಲಾದುದು (R) |
| 1 | ಶಾಲೆಯು ಕಾಂಪೌಂಡ್ ಗೋಡೆಯನ್ನು ಹೊಂದಿರುವುದು ಅಥವಾ ಕಾಂಪೌಂಡ್ ಗೋಡೆ ಇಲ್ಲದ ಕಡೆ ತಾತ್ಕಾಲಿಕ ವ್ಯವಸ್ಥೆ(ಬೇಲಿ)ಯನ್ನು ಮಾಡಿಕೊಳ್ಳುವುದು. | | ಸಾರ್ವಜನಿಕ ಶಿಕ್ಷಣ ಇಲಾಖೆಯು ಕಾಂಪೌಂಡ್ ಗೋಡೆ ಕಡ್ಡಾಯವೆಂದು 2014ರ ಸುತ್ತೋಲೆಯಲ್ಲಿ ತಿಳಿಸಿದೆ. http://www.schooleducation.kar.nic.in/pdffiles/NewSchRegnAmndmt121114.pdf | M |

1 ಡಾ॥ಸಂಗೀತಾ ಭಾಟಿಯರವರು ನಾರ್ತ್ ವೆಸ್ಟ್ ಚಾಪ್ಟರ್ ಸಹೋದಯ, ದೆಹಲಿ ಸಹಯೋಗದೊಂದಿಗೆ ಬರೆದ ಸುರಕ್ಷತಾ ಗಮನಿಕೆ ಪಟ್ಟಿಯನ್ನು ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯ ತ್ರೈಮಾಸಿಕ ಲಘು ಪ್ರಕಟಣೆಯ Vol 48, No: 2, ಏಪ್ರಿಲ್ – ಜೂನ್ 2009 ರಲ್ಲಿ ಪ್ರಕಟಿಸಿದೆ. ಸದರಿ ಗಮನಿಕೆ ಪಟ್ಟಿಯನ್ನು ಸುರಕ್ಷತಾ ಗಮನಿಕೆ ಪಟ್ಟಿಯಿಂದ ಪಡೆದು, ಕರ್ನಾಟಕ ರಾಜ್ಯದ ಅಗತ್ಯಕ್ಕೆ ತಕ್ಕಂತೆ ಮಾರ್ಪಾಟುಮಾಡಿ ಬಳಸಿಕೊಳ್ಳಲಾಗಿದೆ.

2 ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳ ಮಾನದಂಡಗಳ ಬಗ್ಗೆ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ಮತ್ತು ವಾಣಿಜ್ಯ ಸಂಸ್ಥೆಗಳ ಗುರುತಿಸುವಿಕೆ) ನಿಯಮಗಳು, 1999 (ಕರ್ನಾಟಕ ನಿಯಮಗಳು, 1995) ರಲ್ಲಿನ ಪುಟ ಸಂಖ್ಯೆ 196 ಮತ್ತು ಕರ್ನಾಟಕ ಟ್ಯುಟೋರಿಯಲ್ ಸಂಸ್ಥೆಗಳು (ನೋಂದಣಿ ಮತ್ತು ನಿಯಂತ್ರಣ) ನಿಯಮಗಳು, 2001 ರ ಪುಟ ಸಂಖ್ಯೆ http://www.schooleducation.kar.nic.in/pdffiles/Compendium_Vol1.pdf, ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಸುತ್ತೋಲೆ ://www.schooleducation.kar.nic.in/pdffiles/NewSchRegnAmndmt121114.pdf ಮತ್ತು ಶಿಕ್ಷಣ ಹಕ್ಕು ಕಾಯ್ದೆ 2009 https://www.childlineindia.org.in/CP-CR-Downloads/RTE,2009.pdf ದೊರೆಯುತ್ತದೆ.

| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
|---|---|---|---|---|
| 2 | ಸಂಬಂಧಿಸಿದ ಕಾನೂನುಗಳಲ್ಲಿ ವಿವರಿಸಿರುವಂತೆ ಶಾಲೆಯ ಆವರಣ ಮತ್ತು ತರಗತಿ ಕೊಠಡಿಗಳು ಸಾಕಷ್ಟು ಕಿಟಕಿ ಮತ್ತು ಬಾಗಿಲಗಳು ಹಾಗೂ ಸೂಕ್ತ ಗಾಳಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಹೊಂದಿರಬೇಕು | | ಕನಿಷ್ಠ ನಿರ್ಧಿಷ್ಟತೆಗಳನ್ನು ಕರ್ನಾಟಕ ನಿಯಮಗಳು, 1995 ಮತ್ತು ಶಿಕ್ಷಣ ಹಕ್ಕು ಕಾತ್ಧೆಗಳಲ್ಲಿ ನೀಡಲಾಗಿದೆ: http://www.schooleducation.kar.nic.in/pdffiles/Compendium_Vol1.pdf&https://www.childlineindia.org.in/CP-CR-Downloads/RTE,2009.pdf | **M** |
| 3 | ಕೊಠಡಿಯ ನೆಲಹಾಸು ಗುಂಡಿ ಅಥವಾ ಮುರಿದ ಮೇಲ್ಮೈಯನ್ನು ಹೊಂದಿರಬಾರದು.<br><br>ಮೇಲ್ಛಾವಣಿ ಗಟ್ಟಿಯಾಗಿದ್ದು, ಸೋರುತ್ತಿರಬಾರದು ಮತ್ತು ಮುರಿದಿರಬಾರದು.<br><br>ಮೆಟ್ಟಿಲುಗಳನ್ನು ಹತ್ತಲು ಸೂಕ್ತ ಹಿಡಿಕೆಗಳನ್ನು ಅಳವಡಿಸಿರಬೇಕು ಮತ್ತು ಸುಸ್ಥಿತಿಯಲ್ಲಿರಬೇಕು.<br><br>ಮೇಲ್ಛಾವಣಿ, ನೆಲಹಾಸು ಮತ್ತು ಮೆಟ್ಟಿಲುಗಳು ಯಾವುದೇ ರೀತಿಯಲ್ಲಿ ಹಾಳಾಗಿರಬಾರದು ಮತ್ತು ಅವುಗಳ ಅಂಚುಗಳು ಚಾಚಿಕೊಂಡಿದ್ದು, ಮಕ್ಕಳಿಗೆ ಹಾನಿಯುಂಟು ಮಾಡುವಂತಿರಬಾರದು.<br><br>ಶಾಲೆಯ ಆವರಣದಲ್ಲಿ ಯಾವುದೇ ರೀತಿಯ ಹರಿತವಾದ ವಸ್ತುಗಳು ಹೊರಗೆ ಚಾಚಿಕೊಂಡಿದ್ದು, ಮಕ್ಕಳಿಗೆ ಹಾನಿಯುಂಟು ಮಾಡುವಂತಿರಬಾರದು. | | ಬೆಂಗಳೂರು ಮಹಾನಗರ ಪಾಲಿಕೆಯ ಬಿಲ್ಡಿಂಗ್ ಬೈಲಾ–2003 ರ ಪ್ರಕಾರ ಎಲ್ಲಾ ಶಿಕ್ಷಣ ಸಂಸ್ಥೆಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಕಟ್ಟಡ ಪರವಾನಗಿ, ವಾಸದ ಪ್ರಮಾಣ ಪತ್ರವನ್ನು ಹೊಂದಿರುವುದು: http://bbmp.gov.in/documents/10180/504904/Bangalore-Building-Byelaws-+2003.pdf/95195b55-ef62-4b68-bb9e-dc794344c18a | **M** |

| | | | | |
|---|---|---|---|---|
| 4 | ಕಿಟಕಿಗಳು ಕಬ್ಬಿಣದ ಸರಳುಗಳ ರಕ್ಷಣೆಯನ್ನು ಹೊಂದಿರಬೇಕು. ಕಟ್ಟಡದ ದಂಡೆಗೋಡೆ (parapet) ಮತ್ತು ಮೇಲ್ಛಾವಣಿಗಳು ಸೂಕ್ತ ಎತ್ತರದವರೆಗೆ ಕಂಬಿತಡೆಯನ್ನು ಹೊಂದಿರಬೇಕು.<br>ಮುಖ್ಯದ್ವಾರ ಮತ್ತು ಗೇಟ್‌ಗಳನ್ನು ಸುಸ್ಥಿತಿಯಲ್ಲಿಟ್ಟಿರಬೇಕು. | | ಶಿಕ್ಷಣ ಸಂಸ್ಥೆಗಳು ರಾಷ್ಟ್ರೀಯ ಕಟ್ಟಡಗಳ ಸಂಹಿತೆಯಲ್ಲಿ ವಿವರಿಸಿರುವ ಅಂಶಗಳನ್ನು ಪಾಲಿಸುವುದು. | **M** |
| 5 | ಎಲ್ಲಾ ವಿದ್ಯುತ್ ಸಂಪರ್ಕ ತಂತಿಗಳನ್ನು ಹೊರಗೆ ಕಾಣದಂತೆ ಅಳವಡಿಸಿರುವುದು ಅಥವಾ ಅದನ್ನು ಸುರಕ್ಷತಾ ಪಟ್ಟಿಯಿಂದ ಸುತ್ತಿರಬೇಕು. ಸ್ವಿಚ್ ಪಟ್ಟಿಗೆಗಳನ್ನು ಸೂಕ್ತವಾಗಿ ನಿರ್ವಹಿಸುವುದು ಮತ್ತು ಮಕ್ಕಳಿಗೆ ನಿಲುಕದ ಎತ್ತರದ ಸ್ಥಳದಲ್ಲಿ ಅಳವಡಿಸಿರುವುದು.<br>ವಿದ್ಯುತ್ ಉಪಕರಣಗಳನ್ನು ನಿಯಮಿತವಾಗಿ ಪರಿಶೀಲಿಸುವುದು ಮತ್ತು ನಿರ್ವಹಿಸುವುದು.<br>ಫ್ಯಾನ್‌ಗಳಿಂದ ಮಕ್ಕಳಿಗೆ ಹಾನಿ ಸಂಭವಿಸದಂತೆ ಎತ್ತರದಲ್ಲಿ ಹಾಕಿಸಿರಬೇಕು. | | | **M** |
| 6 | ಬೆಂಚುಗಳು ಮತ್ತು ಡೆಸ್ಕ್‌ಗಳು ಗಟ್ಟಿಮುಟ್ಟಾಗಿರಬೇಕು. ಅವುಗಳು ಮರ, ಪ್ಲಾಸ್ಟಿಕ್, ಲೋಹದಿಂದ ಮಾಡಿದ್ದಾಗಿದ್ದರೂ, ಸಹ ಅವುಗಳ ಅಂಚುಗಳು ದುಂಡಾಗಿರಬೇಕು ಮತ್ತು ಮುರಿದಿರಬಾರದು. | | | **M** |
| 7 | ಶಾಲೆಯಲ್ಲಿರುವ ಚರಂಡಿ, ತೊಟ್ಟಿ, ಕೈಪಂಪು ಮತ್ತು ನೀರು ಶೇಖರಣಾ ಟ್ಯಾಂಕ್‌ಗಳನ್ನು ಮುಚ್ಚಿರಬೇಕು.<br>ಶಾಲೆಯ ಸಮೀಪದಲ್ಲಿರುವ ಚರಂಡಿಗಳನ್ನು ಮುಚ್ಚಿರಬೇಕು.<br>ನೀರು ಶೇಖರಣಾ ಟ್ಯಾಂಕ್‌ಗಳು ಮತ್ತು ನೀರು ಸಂಗ್ರಹಣಾ ತೊಟ್ಟಿಗಳನ್ನು ನಿಯಮಿತವಾಗಿ ಶುಚಿಗೊಳಿಸುವುದು. | | ಮಕ್ಕಳ ಸುರಕ್ಷತೆ ಮತ್ತು ರಕ್ಷಣೆ–ಕೈಪಂಪು ಮತ್ತು ನೀರು ಶೇಖರಣಾ ಟ್ಯಾಂಕ್‌ಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳನ್ನು ಪಾಲಿಸುವುದು.<br>ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಸುತ್ತೋಲೆ: | **M**<br>**R** |

| | | | | |
|---|---|---|---|---|
| | | | http://mhrd.gov.in/sites/upload_files/mhrd/files/upload_document/20141014_131513.pdf ಮತ್ತು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ಬೋರ್‌ವೆಲ್ ಮತ್ತು ಮುಚ್ಚದೇ ಬಿಟ್ಟಿರುವ ಬೋರ್ ವೆಲ್‌ಗಳಿಗೆ ಚಿಕ್ಕ ಮಕ್ಕಳು ಬಿದ್ದು ಸಂಭವಿಸಬಹುದಾದ ಗಂಭಿರ ಆಕಸ್ಮಿಕಗಳನ್ನು ತಡೆಗಟ್ಟುವ ಮಾರ್ಗಸೂಚಿಗಳು:<br>http://www.dmrelief.rajasthan.gov.in/documents/sc110210.pdf<br>ಪರಿಶೀಲನೆಗಾಗಿ ನೀರು ಶೇಖರಣಾ ಟ್ಯಾಂಕ್‌ಗಳು ಮತ್ತು ನೀರು ಸಂಗ್ರಹಣಾ ತೊಟ್ಟಿಗಳನ್ನು ಶುಚಿಗೊಳಿಸಿದ ದಿನಾಂಕವನ್ನು ನಮೂದಿಸುವುದು | R |
| 8 | ಮದ್ಯಾಹ್ನದ ಬಿಸಿಯೂಟ ಕಾರ್ಯಕ್ರಮಕ್ಕಾಗಿ ಸಂಗ್ರಹಣಾ ಸೌಲಭ್ಯದೊಂದಿಗೆ ಪ್ರತ್ಯೇಕ ಅಡುಗೆ ಕೋಣೆಯ ವ್ಯವಸ್ಥೆಯನ್ನು ಹೊಂದಿರಬೇಕು.<br><br>ಅಡುಗೆ ಕೋಣೆ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಹೊಂದಿರಬೇಕು. ಕೀಟಗಳು, ಇಲಿ ಮತ್ತು ಹೆಗ್ಗಣಗಳಿಂದ ಮುಕ್ತವಾಗಿರಬೇಕು.<br><br>ಅಡುಗೆ ಪದಾರ್ಥಗಳನ್ನು ಸ್ವಚ್ಛವಾದ ಡಬ್ಬಗಳಲ್ಲಿ, ನೈರ್ಮಲ್ಯಕರವಾಗಿ ಸಂಗ್ರಹಿಸಿಡಬೇಕು. | | ಮಕ್ಕಳಿಗೆ ನೀಡುವ ಆಹಾರ ಸ್ವಚ್ಛ ಮತ್ತು ನೈರ್ಮಲ್ಯಕರವಾಗಿರಬೇಕು:<br>http://www.schooleducation.kar.nic.in/mms/mmspdfs/cir_cs_gok.pdf | M<br><br>M<br><br>M |

| | | | | |
|---|---|---|---|---|
| 9 | ಕುಡಿಯುವ ನೀರು ಮತ್ತು ನೀರಿನ ಶುದ್ಧೀಕರಣ ಯಂತ್ರಗಳಿರಬೇಕು.<br><br>ನೀರನ್ನು ಸಾಕಷ್ಟು ಸಂಖ್ಯೆಯ ನಲ್ಲಿಗಳ ಮೂಲಕ ಒದಗಿಸಬೇಕು.<br><br>ನೀರನ್ನು ಪೂರೈಸುವ ಜಾಗದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವುದು. | | ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷಿಸುವುದು.<br>ಕರ್ನಾಟಕ ನಿಯಮಗಳು 1985ರ ಪುಟ ಸಂಖ್ಯೆ–115ರ ಪ್ರಕಾರ ಎಲ್ಲಾ ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಕುಡಿಯಲು ಯೋಗ್ಯವಾದ ನೀರನ್ನು ಅನುಕೂಲಕರ ಸ್ಥಳದಲ್ಲಿ ಇಡುವುದು ಮತ್ತು ಸಾಕಷ್ಟು ಪ್ರಮಾಣದಲ್ಲಿ ಪೂರೈಸುವುದು: http://www.schooleducation.kar.nic.in/pdffiles/Compendium_Vol1.pdf<br>ಮತ್ತು ಶಿಕ್ಷಣ ಹಕ್ಕು ಕಾಯ್ದೆಯ ಶೆಡ್ಯೂಲ್: https://www.childlineindia.org.in/CP-CR-Downloads/RTE,2009.pdf | R<br><br>R<br><br>M |
| 10 | ಶಾಲೆಯು ಬಾಲಕರಿಗೆ ಬಳಕೆಯೋಗ್ಯ ಪ್ರತ್ಯೇಕ ಶೌಚಾಲಯವನ್ನು ಹೊಂದಿರಬೇಕು.<br><br>ಶಾಲೆಯು ಬಾಲಕಿಯರಿಗೆ ಬಳಕೆಯೋಗ್ಯ ಪ್ರತ್ಯೇಕ ಶೌಚಾಲಯವನ್ನು ಹೊಂದಿರಬೇಕು<br><br>ಶೌಚಾಲಯಗಳ ಸಂಖ್ಯೆ ವಿದ್ಯಾರ್ಥಿಗಳ ಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿರಬೇಕು.<br>ಶೌಚಾಲಯದಲ್ಲಿ ಸ್ವಚ್ಛತೆಯ ನಿರ್ವಹಣೆ ಮಾಡಿರಬೇಕು.<br>ಎಲ್ಲಾ ಬಗೆಯ ಸೋಂಕು ನಿವಾರಕಗಳು ಮತ್ತು ಶೌಚಾಲಯ ಶುದ್ಧೀಕರಣ ವಸ್ತುಗಳು ಮಕ್ಕಳಿಗೆ ಸಿಗದ ಸ್ಥಳಗಳಲ್ಲಿರಬೇಕು. | | ಸರ್ವ ಶಿಕ್ಷಣ ಅಭಿಯಾನ ಅಥವಾ ಸಕ್ಷಮ ಪ್ರಾಧಿಕಾರದ ನೀತಿಗನುಗುಣವಾಗಿರಬೇಕು.<br>ಕರ್ನಾಟಕ ನಿಯಮಗಳು 1985ರ ಪುಟ ಸಂಖ್ಯೆ 115: http://www.schooleducation.kar.nic.in/pdffiles/Compendium_Vol1.pdf | M<br><br>R<br><br>M<br><br>M |

| | | | | |
|---|---|---|---|---|
| 11 | ಪ್ರತ್ಯೇಕ ಕ್ರೀಡಾ ಕೊಠಡಿಯಿದ್ದಲ್ಲಿ, ಅದು ಸೂಕ್ತ ಗಾಳಿ ಬೆಳಕಿನಿಂದ ಕೂಡಿದ್ದು, ಸುಸಜ್ಜಿತವಾಗಿರಬೇಕು.<br>ತರಬೇತಿ ಹೊಂದಿದ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಸಭಾಂಗಣ ಮತ್ತು ವ್ಯಾಯಾಮ ಶಾಲೆಗಳನ್ನು ಮಕ್ಕಳು ಬಳಸುವುದು.<br>ಶಾಲಾ ಆಟದ ಮೈದಾನಗಳು, ಜೋಕಾಲಿಗಳು, ಜಾರುಬಂಡೆಗಳು, ಸುರಕ್ಷಿತವಾಗಿರಬೇಕು ಮತ್ತು ಅವುಗಳನ್ನು ನಿಯಮಿತವಾಗಿ ನಿರ್ವಹಿಸುವುದು.<br>ಕ್ರೀಡಾ ಸಾಧನಗಳ ಸಮೀಪದಲ್ಲಿ ಅವುಗಳ ಬಳಕೆಯ ಬಗ್ಗೆ ಸೂಚನೆಗಳನ್ನು ಪ್ರಕಟಿಸುವುದು. | | ನಿಯಮಿತವಾಗಿ ನಿರ್ವಹಣಾ ಪ್ರಮಾಣ ಪತ್ರಗಳನ್ನು ಪಡೆಯುವುದು. | **R**<br><br><br><br>**R** |
| 12 | ಮಕ್ಕಳು ತರಬೇತಿ ಹೊಂದಿದ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಕಂಪ್ಯೂಟರ್ ಮತ್ತು ಪ್ರಯೋಗಾಲಯಗಳನ್ನು ಬಳಸುವುದು. | | | **M** |
| 13 | ಎಲ್ಲಾ ಅಪಾಯಕಾರಿ ವಸ್ತುಗಳನ್ನು ಮಕ್ಕಳ ಕೈಗೆಟುಕದಂತೆ ಶೇಖರಿಸುವುದು ಮತ್ತು ಬೀಗಹಾಕುವುದು. | | ಸ್ಫೋಟಕಗಳ ಕಾಯ್ದೆ 1884 ರ ಗ್ಯಾಸ್ ಸಿಲಿಂಡರ್ ನಿಯಮಗಳು, 2004 ರಲ್ಲಿನ 44ನೇ ನಿಯಮದಂತೆ ಕೆಳಕಂಡವುಗಳನ್ನು ಪರವಾನಗಿ ಪಡೆದು ಶೇಖರಿಬಹುದಾಗಿದೆ.<br>1. 100 ಕೇಜಿ ಅಥವಾ ಹೆಚ್ಚಿನ ತೂಕದ ಎಲ್‌ಪಿಜಿ.<br>2. 25 ಸಿಲಿಂಡರ್‌ಗಳು ಅಥವಾ 200 ಕೇಜಿಗಿಂತ ಹೆಚ್ಚಿನ ತೂಕದ (ಆ ಸಂದರ್ಭದಲ್ಲಿ ಯಾವುದು ಕಡಿಮೆ ಇರುತ್ತದೆಯೋ ಅದು) ಉರಿಯಬಹುದಾದ, ಆದರೆ ವಿಷಕಾರಿಯಲ್ಲದ ಅನಿಲ. | **M** |

| | | | | |
|---|---|---|---|---|
| | | | 3. 200 ಅಥವಾ ಹೆಚ್ಚಿನ ಉರಿಯಬಹುದಾದ, ಆದರೆ ವಿಷಕಾರಿಯಲ್ಲದ ಅನಿಲದ ಸಿಲಿಂಡರ್‌ಗಳು.<br>4. 5 ಕ್ಕಿಂತ ಹೆಚ್ಚಿನ ಯಾವುದೇ ವಿಷಕಾರಿ ಅನಿಲದ ಸಿಲಿಂಡರ್‌ಗಳು<br>5. 50 ಕ್ಕಿಂತ ಹೆಚ್ಚಿನ ದ್ರವ ರೂಪದಲ್ಲಿರುವ ಅಸಿಟಿಲೀನ್ ಸಿಲಿಂಡರ್‌ಗಳು | |
| 14 | ಶಾಲೆಯು ಸೂಕ್ತವಾದ ಕಸ ಮತ್ತು ತ್ಯಾಜ್ಯ ವಿಲೇವಾರಿ ವ್ಯವಸ್ಥೆಯನ್ನು ಹೊಂದಿರಬೇಕು.<br><br>ಶಾಲೆಯು ಸೂಕ್ತವಾದ ಒಳಚರಂಡಿ ವ್ಯವಸ್ಥೆಯನ್ನು ಹೊಂದಿರಬೇಕು | | 10 ಕೇಜಿಗಿಂತ ಹೆಚ್ಚು ತ್ಯಾಜ್ಯವನ್ನು ಉತ್ಪಾದಿಸುವ ಶಿಕ್ಷಣ ಸಂಸ್ಥೆಗಳನ್ನು ಬೃಹತ್ ಉತ್ಪಾದಕರೆಂದು BBMPಯ ಮುನಿಸಿಪಲ್ ಘನ ತ್ಯಾಜ್ಯ ಕುರಿತ ಸಾರ್ವಜನಿಕ ಅಧಿಸೂಚನೆಯನ್ವಯ ಪರಿಗಣಿಸಲಾಗುತ್ತದೆ : http://218.248.45.169/download/swm/public notice1.pdf ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ: http://dpal.kar.nic.in/.%5C36%20of%201964%20(E).pdf | **M**<br><br>**R** |
| 15 | ಎಲಿವೇಟರ್ (ಇದ್ದಲ್ಲಿ)ಗಳಿಗೆ, ವಿದ್ಯುತ್ ಪರೀಕ್ಷಾಧಿಕಾರಿ ಇಲಾಖೆಯಿಂದ ಪರವಾನಗಿಯನ್ನು ಪಡೆದಿರಬೇಕು ಮತ್ತು ಕಾನೂನಿನಡಿಯಲ್ಲಿ ಹೇಳಿರುವಂತೆ ನಿರ್ವಹಣೆ ಮತ್ತು ಫಿಟ್‌ನೆಸ್‌ಅನ್ನು ಪೂರೈಸುವುದು. | | ಎಲ್ಲಾ ಸಂದರ್ಭಗಳಲ್ಲಿ ಎಲಿವೇಟರ್‌ಗಳನ್ನು ಜನರೇಟರ್ ಮೂಲಕ ನಡೆಸುವುದು. ಎಲಿವೇಟರ್‌ಗಳನ್ನು ಶಿಕ್ಷಣ ಸಂಸ್ಥೆಗಳು ಪ್ರತಿ ಮೂರು ತಿಂಗಳಿಗೊಮ್ಮೆ | **M** |

| | | | | |
|---|---|---|---|---|
| | ವಾರ್ಷಿಕ ತಪಾಸಣೆ ಮತ್ತು ನಿರ್ವಹಣೆ ವರದಿಗಳನ್ನು ಇನ್ಸ್‌ಪೆಕ್ಟರ್ ಆಫ್ ಲಿಫ್ಟ್ಸ್, ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವಯರ್ಸ್‌ಗೆ ಸಲ್ಲಿಸುವುದು. | | ಪರೀಕ್ಷಿಸುವುದು. ಶಿಕ್ಷಣ ಸಂಸ್ಥೆಗಳು ಸುರಕ್ಷತೆಗೆ ಸಂಬಂಧಿಸಿದಂತೆ ವಾರ್ಷಿಕವಾಗಿ ವರದಿಮಾಡುವ ಜವಾಬ್ದಾರಿಗಳನ್ನು ಹೊಂದಿರುತ್ತವೆ. ನಿರ್ವಹಣೆ ಮಾಡುವ ವ್ಯಕ್ತಿಯು ಚೀಫ್ ಇನ್ಸ್‌ಪೆಕ್ಟರ್ ಆಫ್ ಲಿಫ್ಟ್, ಇನ್ಸ್‌ಪೆಕ್ಟರ್ ಆಫ್ ಲಿಫ್ಟ್ಸ್ ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವಯರ್ಸ್‌ನಲ್ಲಿ ನೊಂದಾಯಿಸಿರಬೇಕು. ಕರ್ನಾಟಕ ಇನ್ಸ್‌ಪೆಕ್ಟರ್ ಆಫ್ ಲಿಫ್ಟ್ಸ್, ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವಯರ್ಸ್ ಕಾಯ್ದೆ, 2012: http://www.dpal.kar.nic.in/pdf_files/9of%202013(E).pdf ಮತ್ತು ಕರ್ನಾಟಕ ಇನ್ಸ್‌ಪೆಕ್ಟರ್ ಆಫ್ ಲಿಫ್ಟ್ಸ್, ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವಯರ್ಸ್ ನಿಯಮಗಳು, 2015: http://www.ksei.gov.in/Acts%20&%20Rules/Karnataka%20LEP%20Rules,2015.pdf ಮತ್ತು ವಿದ್ಯುತ್ ಪರೀಕ್ಷಾಧಿಕಾರಿ ಇಲಾಖೆಯ ಲಿಫ್ಟ್ಸ್ ಅಥವಾ ಎಸ್ಕಲೇಟರ್ಸ್ ಅಥವಾ ಪ್ಯಾಸೆಂಜರ್ ಕನ್ವಯರ್ಸ್‌ನ ನಿರ್ವಹಣೆಗೆ ಸಂಬಂಧಿಸಿದ ಸುತ್ತೋಲೆ: http://www.ksei.gov.in/Lift%20circular.jpg | **M** |
| 16 | ಟ್ರಾನ್ಸ್‌ಫಾರ್ಮರ್, ಜನರೇಟರ್ (ಇದ್ದಲ್ಲಿ) BESCOM ನಿಂದ ಪರವಾನಗಿಯನ್ನು | | ಭಾರತೀಯ ವಿದ್ಯುತ್ ಕಾಯ್ದೆ, 2003ರ ಪ್ರಕಾರ ಪರವಾನಗಿ | **M** |

| | | | | |
|---|---|---|---|---|
| | ಪಡೆಯುವುದು ಮತ್ತು ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಲಿಖಿತ ಒಪ್ಪಿಗೆಯನ್ನು ಪಡೆದು ಅವುಗಳನ್ನು ಸ್ಥಾಪಿಸುವುದು. ಇವುಗಳನ್ನು ಸುರಕ್ಷಿತ ಪ್ರದೇಶದಲ್ಲಿ, ಸೂಕ್ತ ನಿರ್ವಹಣೆಯೊಂದಿಗೆ, ಬೀಗಹಾಕಿರುವ ಪ್ರದೇಶದಲ್ಲಿಡುವುದು. | | ಮತ್ತು ತೆರವನ್ನು ಪಡೆದಿರಬೇಕು: http://aptel.gov.in/pdf/The%20Electricity%20Act_2003.pdf ಕೇಂದ್ರ ವಿದ್ಯುತ್ ಪ್ರಾಧಿಕಾರ (ವಿದ್ಯುತ್ ಪೂರೈಕೆ ಮತ್ತು ಸುರಕ್ಷತಾ ಕ್ರಮಗಳು) ನಿಯಮಗಳು, 2010: :http://www.cea.nic.in/reports/regulation/regulation_elec_safety.pdf Air Act, 1981 ಅಡಿಯಲ್ಲಿ ಹೊರಸೂಸುವಿಕೆ (emission)ಯ ಸ್ವಯಂ ಮೇಲ್ವಿಚಾರಣಾ ವಿಶ್ಲೇಷಣೆಯು ಕಡ್ಡಾಯವಾಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳು: http://mhrd.gov.in/sites/upload_files/mhrd/files/upload_document/EDU.pdf | |
| 17 | ಶಾಲಾ ಪರಿಸರವು ಇಲಾಖೆಯ ಮಾರ್ಗಸೂಚಿ ಮತ್ತು MHRD ಗುಣಮಟ್ಟಗಳಿಗನುಗುಣವಾಗಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಹೊಂದುವ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರೊಂದಿಗೆ, ಅಂಗವೈಕಲ್ಯ ಸ್ನೇಹಿಯಾಗಿರಬೇಕು. ಶಾಲೆಯಲ್ಲಿನ ಸೌಲಭ್ಯಗಳಾದ ತರಗತಿ ಕೊಠಡಿಗಳು, ಆಟದ ಪ್ರದೇಶಗಳು, ಶೌಚಾಲಯಗಳು, ಕುಡಿಯುವ ನೀರು, | | MHRD ಮಾರ್ಗಸೂಚಿಗಳು http://mhrd.gov.in/sites/upload_files/mhrd/files/upload_document/EDU.pdf ರಲ್ಲಿ ಲಭ್ಯವಿದೆ | **M** |

| | | | | |
|---|---|---|---|---|
| | ಪ್ರಯೋಗಾಲಯಗಳು ಮತ್ತು ಎಲ್ಲಾ ಕೊಠಡಿಗಳು ವಿಕಲಚೇತನ ಮಕ್ಕಳಿಗೆ ಲಭ್ಯವಾಗುವಂತಿರಬೇಕು.<br>ಶಾಲೆ ಮತ್ತು ಸಂಬಂಧಿಸಿದ ಅಧಿಕಾರಿಗಳು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ನೀಡಲಾದ ಎಲ್ಲಾ ಸಹಾಯಕ ಸಾಧನಗಳನ್ನು ಸುಸ್ಥಿತಿಯಲ್ಲಿಡುವುದು. | | | |
| 18 | ತುರ್ತು ಸಂದರ್ಭಗಳಲ್ಲಿ ಪ್ರಕಟಣೆಗಳನ್ನು ಮಾಡಲು ಶಾಲೆಯಲ್ಲಿ ಸಾಧ್ಯವಿರುವೆಡೆ Public Addressal ವ್ಯವಸ್ಥೆಯನ್ನು ಮಾಡುವುದು. ಒಂದು ವೇಳೆ ಲಭ್ಯವಿಲ್ಲದಿದ್ದಲ್ಲಿ, ಶಾಲೆಯಲ್ಲಿರುವ ಗಂಟೆಯನ್ನು ಉಪಯೋಗಿಸುವುದು. | | | **M** |
| 19 | ಸಿಗರೇಟ್ ಹಾಗೂ ಇತರೆ ತಂಬಾಕು ಉತ್ಪನ್ನಗಳನ್ನು ಶಿಕ್ಷಣ ಸಂಸ್ಥೆಯಿಂದ 100 ಯಾರ್ಡ್ ವಿಸ್ತೀರ್ಣದೊಳಗೆ ಮಾರಾಟ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ ಎಂಬ ಫಲಕವನ್ನು ಶಿಕ್ಷಣ ಸಂಸ್ಥೆಯಲ್ಲಿ ಹಾಕುವುದು<br><br>ಶಾಲೆಯ ಬಳಿಯಲ್ಲಿ ಯಾವುದೇ ಅಶ್ಲೀಲ ವಸ್ತುಗಳ ಪ್ರದರ್ಶನ ಅಥವಾ ವ್ಯಸನಕಾರಿ ಪದಾರ್ಥಗಳ ಮಾರಾಟ ಮಾಡುವುದು ಕಂಡುಬಂದಲ್ಲಿ ಶಾಲಾ ಆಡಳಿತ ಮಂಡಳಿಯು ಶಿಕ್ಷಣ ಇಲಾಖೆಗೆ ವರದಿಮಾಡುವುದು. | | ಶಿಕ್ಷಣ ಸಂಸ್ಥೆಗಳ ಸುತ್ತ-ಮುತ್ತ ಸಿಗರೇಟ್ ಹಾಗೂ ಇತರೆ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧ ನಿಯಮಗಳು: 2004: http://www.cancerfoundationofindia.org/activities/tobacco-control/notifications/september-1-2004.pdf<br>ಸಿಗರೇಟ್ ಹಾಗೂ ಇತರೆ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ, ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಪೂರೈಕೆ ಮತ್ತು ವಿತರಣೆ ನಿಯಂತ್ರಣ) ಕಾಯ್ದೆ 2003: http://www.who.int/fctc/reporting/Annexthreeindia.pdf | **M**<br><br>**M** |

| ವಿಭಾಗ-1 B ಆರೋಗ್ಯ | | | | |
|---|---|---|---|---|
| ಕ್ರ ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ತುರ್ತು ಚಿಕಿತ್ಸೆಗೆ ಅವಶ್ಯವಿರುವ ಔಷಧಗಳನ್ನೊಳಗೊಂಡ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಹೊಂದುವುದು ಮತ್ತು ಔಷಧಿಗಳ ಅವಧಿ ಮುಕ್ತಾಯವಾಗಿರಬಾರದು. | | | M |
| 2 | ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಖಾಸಗಿ ಸೇವೆಗಳನ್ನು ಒಳಗೊಂಡು ವೈದ್ಯರ, ಆಸ್ಪತ್ರೆಯ, ಆಂಬುಲೆನ್ಸ್‌ಗಳ ದೂರವಾಣಿ ಸಂಖ್ಯೆಗಳನ್ನು ಮುಖ್ಯ ಸ್ಥಳಗಳಲ್ಲಿ ಪ್ರದರ್ಶಿಸುವುದು.<br>1. ವೈದ್ಯರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ<br>2. ಆಸ್ಪತ್ರೆಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ<br>3. ಆಂಬುಲೆನ್ಸ್ ದೂರವಾಣಿ ಸಂಖ್ಯೆ<br>4. ತುರ್ತು ಆಂಬುಲೆನ್ಸ್ ಸಂಖ್ಯೆ 108 | | ವೈದ್ಯರುಗಳು ವರ್ಗಾವಣೆಯಾಗುವುದರಿಂದ, ಮಾಹಿತಿಯನ್ನು ಪ್ರತಿ 3 ತಿಂಗಳಿಗೊಮ್ಮೆ ನವೀಕರಿಸುವುದು. | M |
| 3 | ತುರ್ತು ಸಂದರ್ಭಗಳಲ್ಲಿ ಆಂಬುಲೆನ್ಸ್ ಸೌಲಭ್ಯವನ್ನು ಪಡೆಯಲು ಅವಕಾಶಗಳಿವೆ (ಆಂಬುಲೆನ್ಸ್ ಸಹಾಯ ವಾಣಿ 108). | | | M |
| 4 | ಶಿಕ್ಷಣ ಇಲಾಖೆ (ಡಿ.ಒ.ಇ)ಯು ನಿಗದಿಪಡಿಸಿದ ರೀತಿಯಲ್ಲಿ ಶಾಲೆಯು ನಿಯಮಿತವಾಗಿ ಆರೋಗ್ಯ ತಪಾಸಣೆಯನ್ನು ನಡೆಸುವುದು ಶಾಲೆಯು ಪ್ರತಿ ಮಗುವಿನ ವೈದ್ಯಕೀಯ ದಾಖಲೆಗಳನ್ನು ನಿರ್ವಹಿಸುತ್ತದೆ. | | | R |
| 5 | ನಿರ್ದಿಷ್ಟ ಮತ್ತು ಮಹತ್ವದ ಮಾಹಿತಿ ಉದಾಹರಣೆ ರಕ್ತದ ಗುಂಪು, ಅಲರ್ಜಿ ಹಾಗೂ ಒದಗಿಸಬೇಕಾದ ಅಗತ್ಯ ಔಷದ ಮತ್ತು ಮಕ್ಕಳು ಹೊಂದಿರುವ ನಿರ್ದಿಷ್ಟ ಆರೋಗ್ಯ ಸಮಸ್ಯೆಗಳಾದ ಮೂರ್ಛೆರೋಗ ಮತ್ತು ಮನೋ–ಸಾಮಾಜಿಕ (psycho-social) ಸಮಸ್ಯೆಗಳ ಬಗ್ಗೆ ಮಾಹಿತಿಯನ್ನು ಪೋಷಕರ ನೆರವಿನಿಂದ ಅಪ್‌ಡೇಟ್ ಮಾಡಲಾಗಿದೆ. | | | R |

| | | | | |
|---|---|---|---|---|
| 6 | ತುರ್ತು ಸಂಧರ್ಭದಲ್ಲಿ ಕರೆ ಮಾಡಿದ ತಕ್ಷಣ ಭೇಟಿ ನೀಡುವಂತಹ ಒಬ್ಬ ವೈದ್ಯರು ಇರುವರು. | | | M |
| 7 | ಶಾಲೆಯು ಸ್ಥಳೀಯ ಆಸ್ಪತ್ರೆಯೊಂದಿಗೆ ಟೈ-ಅಪ್ ಮಾಡಿಕೊಂಡಿದೆ. | | | M |
| 8 | ಶಾಲೆಯಲ್ಲಿನ ಕ್ಯಾಂಟೀನ್ ಅಥವಾ ಶಾಲಾ ಆವರಣದಲ್ಲಿರುವ ಆಹಾರ ಪದಾರ್ಥಗಳನ್ನು ಪೂರೈಸುವ ಸ್ಥಳವು ಸಂಬಂಧಿಸಿದ ಕಾನೂನಿನಡಿ ನೋಂದಾಯಿಸಲ್ಪಟ್ಟಿದೆ ಅಥವಾ ಪರವಾನಗಿಯನ್ನು ಹೊಂದಿದೆ. | | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯ ಪ್ರಕಾರ ನೋಂದಣಿ ಅಥವಾ ಪರವಾನಗಿಯನ್ನು ಪಡೆಯುವುದು ಕಡ್ಡಾಯವಾಗಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ನಿಯಮಗಳು http://www.fssai.gov.in/AboutFSSAI/FSSAct.aspx ದೊರೆಯುತ್ತದೆ. ಅಲ್ಲದೇ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಯನ್ನು http://wcd.nic.in/sites/default/files/merged_document_3.pdf.ಗಮನಿಸುವುದು. | M |
| 9 | ಉತ್ತಮ ಗುಣಮಟ್ಟದ ಮಧ್ಯಾಹ್ನದ ಬಿಸಿಯೂಟವನ್ನು ಶಿಕ್ಷಕರ/ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಬಡಿಸುವುದು. | | ಇದು ಮಧ್ಯಾಹ್ನದ ಬಿಸಿಯೂಟವನ್ನು ನೀಡುವ ಶಾಲೆಗಳಿಗೆ ಅನ್ವಯಿಸುತ್ತದೆ. ಸರ್ಕಾರಿ ಶಾಲೆಗಳು ಶಿಕ್ಷಣ ಇಲಾಖೆ ಮೆನುವಿನ ಪ್ರಕಾರ ಊಟವನ್ನು ನೀಡುವುದು. http://www.schooleducation.kar.nic.in/mms/mmspdfs/cir_cs_gok.pdf | M |
| 10 | ಸಮತೋಲನ ಆಹಾರ, ಕಡಿಮೆ ಪೌಷ್ಠಿಕ ಆಹಾರಗಳಿಗೆ ಬದಲಾಗಿ ಪೌಷ್ಠಿಕ ಆಹಾರ ಸೇವನೆ, ನಿಯಮಿತ ಆಹಾರ ಸೇವನೆಯ ಅಭ್ಯಾಸಗಳು, ವೈಯಕ್ತಿಕ ನೈರ್ಮಲ್ಯ ಇತ್ಯಾಧಿಗಳನ್ನೊಳಗೊಂಡ ಆರೋಗ್ಯ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಆರೋಗ್ಯ ಶಿಕ್ಷಣವನ್ನು ನೀಡಲಾಗಿದೆ. | | ಆಹಾರ ಮತ್ತು ಗುಣಮಟ್ಟ ಪ್ರಾಧಿಕಾರದ ಮಾರ್ಗಸೂಚಿಗಳನ್ವಯ ಶಾಲಾ ಕ್ಯಾಂಟೀನ್‌ಗಳು ಆರೋಗ್ಯದಾಯಕ ಮತ್ತು ಪೌಷ್ಠಿಕ ಆಹಾರಗಳನ್ನು ಹೊಂದುವುದು: http://ncpcr.gov.in/showfile.php?lang=1&level=1&&sublinkid=238&lid=456 | R |

| ವಿಭಾಗ–1 C ಸಾರಿಗೆ[3] | | | | |
|---|---|---|---|---|
| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಮೋಟಾರು ವಾಹನ ಕಾಯ್ದೆ 1988ರ ವಿಭಾಗ 74 ರನ್ವಯ ವಾಹನವು ಕಡ್ಡಾಯವಾಗಿ ಪರವಾನಗಿಯನ್ನು ಹೊಂದುವುದು.<br><br>ಶಾಲೆಯು ಹೊಂದಿರುವ ಹಾಗೂ ಶಾಲೆಯಿಂದ ನಿರ್ವಹಿಸಲ್ಪಡುತ್ತಿರುವ, ಮಕ್ಕಳನ್ನು ಶಾಲೆಗೆ ಕರೆತರುವ ಹಾಗೂ ಶಾಲೆಯಿಂದ ಕರೆದೊಯ್ಯುವ ಎಲ್ಲಾ ವಾಹನಗಳಾದ ಬಸ್ಸು, ವ್ಯಾನ್, ಕ್ಯಾಬ್‌ಗಳು RTO ಯಿಂದ ದೃಢತೆಯ ಪ್ರಮಾಣ ಪತ್ರಗಳನ್ನು ಪಡೆಯುವುದು.<br>ವಾಹನವು ನೋಂದಾಯಿತ ದಿನದಿಂದ 15 ವರ್ಷಗಳ ಅವಧಿಯ ಒಳಗಿನದ್ದಾಗಿರಬೇಕು. | | ಚಾಲಕನ ಪರವಾನಗಿ ಮತ್ತು ವಾಹನದ ನಂಬರನ್ನು ಮುಂಬಾಗದಲ್ಲಿ ಪ್ರದರ್ಶಿಸುವುದು. | M |

[3] ಶಾಲೆಯ ಸಾರಿಗೆ ವ್ಯವಸ್ಥೆಯು ಗೌರವಾನ್ವಿಯ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳು ರಿಟ್ ಅರ್ಜಿ (ಸಿವಿಲ್) ಸಂಖ್ಯೆ No.13029/1985 ದಿನಾಂಕ: 20-11-97 ರಿಂದ ನಿಯಂತ್ರಿಸಲ್ಪಟ್ಟಿದೆ. ಇದು http://judis.nic.in/supremecourt/imgs1.aspx?filename=20592,ರಲ್ಲಿ ದೊರೆಯುತ್ತದೆ. ಶಾಲಾ ವಾಹನಗಳಲ್ಲಿನ ರಕ್ಷಣೋಪಚಾರ ಕುರಿತು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: no. SaaRiE 01 SaEPa 2011, ದಿನಾಂಕ: 18-1-2013 ಮತ್ತು ಅಧಿಸೂಚನೆ So.SaaAaa/Initiation-3/PR-197/2005-06 ದಿನಾಂಕ: 22-11-2014 ಮತ್ತು ಪೋಲಿಸ್ ಆಯುಕ್ತರ ಅಧಿಸೂಚನೆ: 157/MAG(1)/others/2014, ದಿನಾಂಕ: 26-07-2014 ಗಳು http://www.bcp.gov.in//upload_press_release/20147298522277/All%20School%20proceedings%20Press%20Note.pdf. ದೊರೆಯುತ್ತವೆ. ಇದರೊಂದಿಗೆ ಮೋಟಾರು ವಾಹನ ಕಾಯ್ದೆ, 1988 http://morth.nic.in/index2.asp?slid=95&_sublinkid=54&lang=1 ಮತ್ತು ಮೋಟಾರು ವಾಹನ ನಿಯಮಗಳು, 1989http://rto.kar.nic.in/Revised%20M.V.%20VEHICLES% 20RULES%20Corrected.pdf (ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳು) ಮತ್ತು ಮೋಟಾರು ವಾಹನಗಳು (ಶಾಲಾ ಮಕ್ಕಳನ್ನು ಕೊಂಡೊಯ್ಯುವಲ್ಲಿ ನಿರತರಾಗಿರುವ ವಾಹನಗಳಿಗೆ ಶರತ್ತುಗಳು) ನಿಯಮಗಳು, 2012.

| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
|---|---|---|---|---|
| 2 | **ವಾಹನದ ಹೊರಭಾಗ:**<br>• ಶಾಲಾ ಬಸ್ಸುಗಳ ಹೊರನೋಟವು RTO ನಿಯಮಗಳಿಗೆ ಅನುಗುಣವಾಗಿರಬೇಕು.<br>• ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳ ಮುಂಬಾಗ ಮತ್ತು ಹಿಂಬಾಗದಲ್ಲಿ 'ಶಾಲಾ ವಾಹನ' ಎಂದು ಶಾಶ್ವತವಾಗಿ ಬರೆಸುವುದು.<br>• ಒಂದು ವೇಳೆ ಬಾಡಿಗೆ ವಾಹನವಾಗಿದ್ದರೆ, 'ಶಾಲಾ ಕರ್ತವ್ಯದ ಮೇರೆಗೆ' ಎಂದು ಶಾಶ್ವತವಾಗಿ ಬರೆಸುವುದು.<br>• ಶಾಲೆಯ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ವಾಹನದ ಮೇಲೆ ಬರೆಸುವುದು. | | (ವಾಹನವು ಹಳದಿ ಬಣ್ಣದ್ದಾಗಿರಬೇಕು ಮತ್ತು ಮಧ್ಯದಲ್ಲಿ ಬಸ್ಸಿನ ಸುತ್ತ 150mm ನ ಹಸಿರು ಬಣ್ಣದ ಗೆರೆಯನ್ನು ಹಾಕಿಸಿರಬೇಕು ಹಾಗೂ ಬಸ್ಸಿನ ನಾಲ್ಕೂ ಭಾಗಗಳಲ್ಲಿ 'ಶಾಲಾ ವಾಹನ' ಎಂದು ಬರೆಸಿರಬೇಕು) | M |
| 3 | **ಚಾಲಕರು:**<br>• ಶಾಲಾ ವಾಹನವನ್ನು ಚಾಲನೆಮಾಡುವ ಚಾಲಕ ಭಾರೀ ವಾಹನಗಳ ಚಾಲನೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವುದು ಅಥವಾ ಲಘು ಮೋಟಾರು ವಾಹನಗಳ ಚಾಲನಾ ಪರವಾನಗಿಯನ್ನು ಹೊಂದಿ ನಾಲ್ಕು ವರ್ಷಗಳಾಗಿರಬೇಕು.<br>• ಚಾಲಕನ ಮೇಲೆ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವ ಅಪರಾಧಗಳು ವರದಿಯಾಗಿರಬಾರದು.<br>• ಚಾಲಕನ ಹಿನ್ನೆಲೆಯನ್ನು ಪರಿಶೀಲನೆ ಮಾಡಲಾಗಿದೆ. | | RTO ನಿಯಮಗಳಿಗೆ ಅನುಗುಣವಾಗಿ ಚಾಲಕನು ಚಾಲನೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವಹೊಂದಿರುವುದು | M |

| | | | | |
|---|---|---|---|---|
| | • ಶಾಲಾ ಕರ್ತವ್ಯದಲ್ಲಿರುವಾಗ ಚಾಲಕ ಮಧ್ಯಸೇವನೆಮಾಡಿಲ್ಲ ಎಂಬುದನ್ನು ಖಾತರಿಪಡಿಸಲು ನಿಯಮಿತವಾಗಿ ತಪಾಸಣೆಯನ್ನು ನಡೆಸುವುದು.<br>• ಚಾಲಕರು ಮತ್ತು ಸಹಾಯಕರಿಗೆ ಶಾಲೆಯಲ್ಲಿ ಮಕ್ಕಳ ರಕ್ಷಣೆ ಮತ್ತು ಕಿರುಕುಳ ನೀತಿಯ ಬಗ್ಗೆ ಜಾಗೃತಿ ಮೂಡಿಸುವುದು.<br>• ಚಾಲಕ ವಾನವನ್ನು ಉತ್ತಮ ಮತ್ತು ಸುರಕ್ಷಿತವಾಗಿ ನಿರ್ವಹಿಸುವುದು. | | | |
| 4 | **ಪರಿಚಾರಕರು/ಸಹಾಯಕರು:**<br>• ಶಾಲಾ ವಾಹನದ ಕೊನೆಯ ನಿಲ್ದಾಣದವರೆಗೆ ವಾಹನದಲ್ಲಿ ಒಬ್ಬ ಶಿಕ್ಷಕ ಅಥವಾ ಪರಿಚಾರಕ (ಹೆಣ್ಣು ಮಕ್ಕಳಿರುವಲ್ಲಿ ಮಹಿಳಾ ಪರಿಚಾರಕರನ್ನು ನೇಮಿಸುವುದು) ರನ್ನು ನೇಮಿಸುವುದು.<br>• ಮಕ್ಕಳನ್ನು ಕರೆತರುವ ಮತ್ತು ಕೊಂಡೊಯ್ಯುವ ಶಾಲಾ ವಾಹಗಳ ಚಲನ–ವಲನಗಳ ಮೇಲ್ವಿಚಾರಣೆಯನ್ನು ಒಬ್ಬ ವ್ಯಕ್ತಿ/ಭದ್ರತಾ ಸಿಬ್ಬಂದಿ ನೋಡಿಕೊಳ್ಳುವುದು. | | ಮಕ್ಕಳ ಸುರಕ್ಷತೆಗಾಗಿ ಶಾಲಾ ವಾಹನದಲ್ಲಿ ಒಬ್ಬ ಸಿಬ್ಬಂದಿಯನ್ನು ನೇಮಿಸುವುದು. | M |
| 5 | **ಆಂತರಿಕ ಕ್ರಮಗಳು:**<br>• ಶಾಲಾ ಬಸ್ಸಿನ ಕಿಟಕಿಗಳಿಗೆ ಸಮತಲ ಕಂಬಿಗಳನ್ನು ಹಾಕಿಸುವುದು.<br>• ಶಾಲಾ ಬಸ್ಸುಗಳು ಪ್ರಥಮ ಚಿಕಿತ್ಸಾ ಪೆಟ್ಟಿಗೆ ಮತ್ತು ಅಗ್ನಿ ಶಾಮಕ ಉಪಕರಣಗಳನ್ನು ಹೊಂದಿರಬೇಕು. | | | M |

| | | | | |
|---|---|---|---|---|
| | • ವಾಹನದ ಬಾಗಿಲುಗಳಿಗೆ ಬೀಗವನ್ನು ಹಾಕುವುದು ಮತ್ತು ಬೀಗವನ್ನು ಸುರಕ್ಷಿತವಾಗಿಡುವುದು.<br>• ವಾಹನದ ತುರ್ತು ನಿರ್ಗಮನಗಳು ಉತ್ತಮವಾಗಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿರಬೇಕು ಮತ್ತು ತುರ್ತು ಸಂದರ್ಭಗಳಲ್ಲಿ ಯಾವುದೇ ಅಡೆತಡೆಗಳಿರದೇ, ಮಕ್ಕಳು ಸುಲಭವಾಗಿ ಚಲಿಸುವಂತಿರಬೇಕು. ತುರ್ತು ನಿರ್ಗಮನವೆಂದು ಎರಡೂ ಕಡೆ ಕೆಂಪು ಬಣ್ಣದಲ್ಲಿ ಬರೆಯುವುದು.<br>• ಶಾಲಾ ಬ್ಯಾಗ್‌ಗಳನ್ನು ಸುರಕ್ಷಿತವಾಗಿಡಲು ಆಸನಗಳ ಕೆಳಗೆ ಸಾಕಷ್ಟು ಸ್ಥಳಾವಕಾಶವಿರಬೇಕು<br>• ಪ್ರತಿ ಘಂಟೆಗೆ 40 ಕಿ.ಮಿ.ಗಳ ವೇಗ ನಿಯಂತ್ರಣವನ್ನು ಅಳವಡಿಸುವುದು.<br>• ಬಸ್ಸಿನಲ್ಲಿ ಎಲ್‌ಪಿಜಿ ಸೌಲಭ್ಯವಿದ್ದಲ್ಲಿ, ಅದನ್ನು ಅಧಿಕೃತ ಪೂರೈಕೆದಾರರಿಂದ ಪಡೆದಿರಬೇಕು ಮತ್ತು ಅಧಿಕೃತ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದಿರಬೇಕು. ಎಲ್‌ಪಿಜಿಯನ್ನು ಆಸನಗಳ ಸಮೀಪ ಇರಿಸಬಾರದು.<br>• ಶಾಲಾ ಮಕ್ಕಳ ವಾಹನದಲ್ಲಿ ಬಣ್ಣದ ಗಾಜುಗಳನ್ನು ಹಾಕಿಸಬಾರದು. | | | |
| 6 | **ಆಸನ ವ್ಯವಸ್ಥೆ:**<br>• ಚಾಲಕನು ವಾಹನದಲ್ಲಿ ನಿಗಧಿತ ಮಕ್ಕಳ ಸಂಖ್ಯೆಯೂ ಸೇರಿದಂತೆ, | | ಶಾಲಾ ವಾಹನವು ನಿಗಧಿತ ಸಂಖ್ಯೆಗಿಂತ ಹೆಚ್ಚಿನ ಮಕ್ಕಳನ್ನು ಕರೆದೊಯ್ಯುವಂತಿಲ್ಲ. | M |

| | | | | |
|---|---|---|---|---|
| | RTO ನವೆಲ್ಲಾ ನಿಯಮಗಳನ್ನು ಪಾಲಿಸುವುದು. | | | |
| 7 | ಸುರಕ್ಷತೆಗೆ ಸಂಬಂಧಿಸಿದ ಸೂಚನೆಗಳನ್ನು ಬಸ್ಸಿನ ಒಳಗೆ ಪ್ರದರ್ಶಿಸುವುದು. | | | M |
| 8 | ಮಕ್ಕಳ ಸುರಕ್ಷತೆಯನ್ನು ಖಾತರಿ ಪಡಿಸಲು ಶಾಲೆಯ ಎರಡೂ ಮುಖ್ಯದ್ವಾರಗಳ ಸಮೀಪ ವೇಗ ನಿಯಂತ್ರಕಗಳನ್ನು ಅಳವಡಿಸುವುದು. ಸಂಚಾರ ದಟ್ಟಣೆ ಇರುವ ರಸ್ತೆಗಳಲ್ಲಿ, ಮುಖ್ಯ ರಸ್ತೆಗಳಲ್ಲಿ ಸಂಚಾರ ಚಿಹ್ನೆಗಳನ್ನು ಬಳಸುವುದು. | | | M |
| 9 | ಆಟೋರಿಕ್ಷಾಗಳು:<br>• ಸಂಬಂಧಿಸಿದ ಅಧಿಕಾರಿಗಳು ಆಟೋಗಳಲ್ಲಿ ಬರುವ ಮಕ್ಕಳ ಸುರಕ್ಷತೆಯನ್ನು ಖಾತರಿಪಡಿಸುವುದು.<br>• ಆಟೋಗಳಲ್ಲಿ ಮಕ್ಕಳನ್ನು ಕಳುಹಿಸುವ ಪೋಷಕರು ಮಕ್ಕಳ ಸಂಖ್ಯೆಗೆ ಸಂಬಂಧಿಸಿದಂತೆ RTO ನಿಯಮಗಳನ್ನು ಪಾಲಿಸುವುದು.<br>• ಆಟೋಗಳನ್ನು ನೊಂದಾಯಿಸಿರಬೇಕು ಮತ್ತು ಚಾಲಕನ ಮಾಹಿತಿಯನ್ನು ಸಮರ್ಪಕವಾಗಿ ನಿರ್ವಹಿಸುವುದು. | | ಶಾಲೆಗೆ ಮಕ್ಕಳನ್ನು ಕರೆತರುವ ಮತ್ತು ಕೊಂಡೊಯ್ಯುವ ಜವಾಬ್ದಾರಿಯು ಚಾಲಕರದಾಗಿದೆ ಎಂಬುದಾಗಿ ಅವರಿಗೆ ಪೋಷಕರು ಮತ್ತು ಶಾಲೆ ಮನವರಿಕೆ ಮಾಡಿಕೊಡುವುದು.<br><br>ಕರ್ನಾಟಕ ಮೋಟಾರು ವಾಹನ ಕಾಯ್ದೆಯ ಪ್ರಕಾರ 12 ವರ್ಷಕ್ಕೆ ಮೇಲ್ಪಟ್ಟ ಮಕ್ಕಳನ್ನು ಒಂದು ಸೀಟು ಎಂದೂ, 12 ವರ್ಷದೊಳಗಿನ ಮಕ್ಕಳನ್ನು ಅರ್ಧ ಸೀಟು ಎಂದೂ ಮತ್ತು 3 ವರ್ಷದೊಳಗಿನ ಮಕ್ಕಳನ್ನು ಸೀಟಿಗೆ ಪರಿಗಣಿಸಬಾರದು. ಸೀಟಿನ ಹಿಂಬಾಗದಲ್ಲಿ ಚಾಲಕನ ಮಾಹಿತಿಯನ್ನು ಪ್ರದರ್ಶಿಸುವುದು. | M<br><br>**M** |

| ವಿಭಾಗ: 2 – ವೈಯಕ್ತಿಕ ಮತ್ತು ಲೈಂಗಿಕ ಸುರಕ್ಷತೆ | | | | |
|---|---|---|---|---|
| ಕ್ರ. ಸಂ. | ಸೂಚಕಗಳು | ಹೌದು / ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಮಕ್ಕಳ ಮೇಲಿನ ಯಾವುದೇ ಹಲ್ಲೆ ಮತ್ತು ಸುರಕ್ಷತಾ ಉಲ್ಲಂಘನೆಗೆ, ಶಾಲೆಯು ಕಟ್ಟುನಿಟ್ಟಿನ ಮಕ್ಕಳ ರಕ್ಷಣಾ ನೀತಿಯನ್ನು ಹೊಂದುವುದು.<br>ಎಲ್ಲಾ ಮಕ್ಕಳಿಗೆ ಒಳ್ಳೆಯ ಮತ್ತು ಕೆಟ್ಟ ಸ್ಪರ್ಷ ಹಾಗೂ ನಡತೆಗಳು ಹಾಗೂ ಒಂದು ವೇಳೆ ಯಾವುದೇ ವ್ಯಕ್ತಿ ವೈಯಕ್ತಿಕ ಸುರಕ್ಷತೆ ನಿಯಮಗಳನ್ನು ಉಲ್ಲಂಸಿದ್ದಲ್ಲಿ ಅದನ್ನು ಯಾರಿಗೆ ವರದಿಮಾಡಬೇಕು ಎಂಬ ಅಂಶಗಳ ಬಗ್ಗೆ ನಿಯಮಿತವಾಗಿ ತಿಳುವಳಿಕೆ ನೀಡುವುದು.<br>ಮಕ್ಕಳ ಮೇಲಿನ ಹಲ್ಲೆ, ಅದನ್ನು ಗುರುತಿಸುವ ವಿಧಾನ, ವಿರೋಧಿಸುವ ಮತ್ತು ದುಷ್ಕರ್ಮಿಗಳ ಕುರಿತು ವರದಿಮಾಡುವ ವಿಧಾನಗಳ ಬಗ್ಗೆ ಪೋಷಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತು ಮಕ್ಕಳಿಗೆ ವಯಸ್ಸಿಗೆ ಅನುಗುಣವಾಗಿ ಅರಿವು–ಜಾಗೃತಿ ಮೂಡಿಸುವುದು.<br>ಶಾಲೆಗಳು ತರಬೇತಿ, ದಿನಾಂಕ, ಸಂಪನ್ಮೂಲ ವ್ಯಕ್ತಿಗಳ ಸಂಪರ್ಕ ವಿವರಗಳ ದಾಖಲೆಯನ್ನು ನಿರ್ವಹಿಸುವುದು. | | ಇದು ಶಾಲೆಯ ಮಕ್ಕಳ ರಕ್ಷಣಾ ನೀತಿಯ ಭಾಗವಾಗಿದೆ.<br><br>ತರಬೇತಿಯನ್ನು ನೀಡಲು ಶಾಲೆಗಳು ಸ್ವ ಸಹಾಯ ಸಂಸ್ಥೆಗಳು ಅಥವಾ ತಜ್ಞರ ಸಹಾಯವನ್ನು ಪಡೆಯುವುದು. | **M** |
| 2 | ಶಾಲೆಯು 1–12 ನೇ ತರಗತಿಯ ಮಕ್ಕಳಿಗೆ ಲಿಂಗ ಸೂಕ್ಷ್ಮತೆ, ಸಹಪಾಠಿಗಳೊಂದಿಗೆ ಗೌರವ ಮತ್ತು ಘನತೆಯಿಂದ ನಡೆದುಕೊಳ್ಳುವುದು, ವಸ್ತುಗಳಿಂದ ಹೊಡೆಯುವುದರಿಂದಾಗುವ ಹಾನಿಕಾರಕ ಪರಿಣಾಮಗಳು, ಕಾನೂನುಬಾಹೀರ ನಡತೆ ಅಥವಾ ಕ್ರಿಯೆ, ಬಾಲ ನ್ಯಾಯ ಮತ್ತು POCSO | | ತರಬೇತಿಯನ್ನು ನೀಡಲು ಶಿಕ್ಷಣ ಇಲಾಖೆಯು ಅಥವಾ ತಜ್ಞರ ಸಹಾಯದಿಂದ ಯಾವುದೇ ಸಂಸ್ಥೆ ಅಭಿವೃದ್ಧಿ ಪಡಿಸಿರುವ ಪಠ್ಯಕ್ರಮವನ್ನು ಬಳಸುವುದು. | **M** |

| | | | | |
|---|---|---|---|---|
| | ಕಾಯ್ದೆಗಳಡಿ ಕೈಗೊಳ್ಳುವ ದಂಢನೆಗಳ ಬಗ್ಗೆ ತರಗತಿ ಮತ್ತು ವಯಸ್ಸಿಗೆ ಅನುಗುಣವಾಗಿ ತರಬೇತಿಯನ್ನು ನಡೆಸುವುದು. | | | |
| 3 | ಶಾಖೆಯು, ಮಕ್ಕಳ ಹಕ್ಕುಗಳ ರಕ್ಷಣೆ, ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ಅಭಿವೃದ್ಧಿ, ಮಕ್ಕಳ ದುರಪಯೋಗ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆ/ವಿಷಯಗಳ ಬಗ್ಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗಕ್ಕೆ ತರಬೇತಿ ನೀಡುವ ವ್ಯವಸ್ಥೆಯನ್ನು ಕೈಗೊಂಡಿದೆ.<br>ಮಕ್ಕಳ ಮೇಲಿನ ಹಲ್ಲೆ ಪ್ರಕರಣಗಳು ವರದಿಯಾದಾಗ, ಹಲ್ಲೆಯ ಚಿಹ್ನೆಗಳನ್ನು ಗುರುತಿಸಲು ಮತ್ತು ಸಂಬಂಧಿಸಿದ ಕಾನೂನುಗಳನ್ವಯ ಸೂಕ್ತ ಕ್ರಮಕೈಗೊಳ್ಳಲು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡುವುದು. | | ಪ್ರತಿಕ್ರಿಯೆ ಮತ್ತು ಚಿಕಿತ್ಸೆಗಳಿಗೆ ಆರಂಭಿಕ ಹಂತದಲ್ಲಿ ಪತ್ತೆಹಚ್ಚುವುದು ವಿಮರ್ಶಾತ್ಮಕವಾಗಿದೆ | **M** |
| 4 | ಮಕ್ಕಳು ಪೂರಕ ಮತ್ತು ಅನುಕೂಲಕರ ಪರಿಸರವನ್ನು ಹೊಂದಿದ್ದಾರೆ ಮತ್ತು ಶಿಕ್ಷಕರೊಂದಿಗೆ ತಮ್ಮ ವೈಯುಕ್ತಿಕ ಸಮಸ್ಯೆಗಳನ್ನು ಗೌಪ್ಯವಾಗಿ ಹಂಚಿಕೊಳ್ಳಲು ಅವರಿಗೆ ಉತ್ತೇಜನ ನೀಡಲಾಗಿದೆ. | | | **R** |
| 5 | ವಾಕ್–ಶ್ರವಣ, ವಿಕಲಚೇತನ ಮಕ್ಕಳೂ ಕೂಡ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಶಿಕ್ಷಕರಿಗೆ ಸಂಕೇತ ಭಾಷೆ ಮತ್ತು ಬ್ರೈಲ್ ಲಿಪಿಯ ಬಗ್ಗೆ ತರಬೇತಿ ನೀಡುವುದು. | | | **R** |

ವಿಭಾಗ IV A, B ಮತ್ತು C ಯಲ್ಲಿ ರಕ್ಷಣೆಯ ಕಾರ್ಯತಂತ್ರಗಳು, ಅಪರಾಧ ಅಥವಾ ಉಲ್ಲಂಘನೆಯ ವರದಿ ಮತ್ತು ವೈಯುಕ್ತಿಕ ಹಾಗೂ ಲೈಂಗಿಕ ವಿಧಾನಗಳನ್ನು ಒದಗಿಸಲಾಗಿದೆ.

| ವಿಭಾಗ III - ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ | | | | |
|---|---|---|---|---|
| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ಶಿಫಾರಸ್ಸು ಮಾಡಲಾದುದು |
| 1 | ಮಕ್ಕಳು ತಮ್ಮ ಭಾವನೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು ಸಮಾನ ವಯಸ್ಕರೊಂದಿಗೆ ಆರೋಗ್ಯಕರ ಸಂಬಂಧಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ, ವಯಸ್ಸಿಗೆ ಅನುಗುಣವಾದ ಸಾಮಾಜಿಕ ಕೌಶಲ್ಯಗಳ ಬಗ್ಗೆ ಮಕ್ಕಳಿಗೆ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.<br>ತರಬೇತಿಯು ವಿಶೇಷ ಅಗತ್ಯವುಳ್ಳ/ವಿಕಲಚೇತನ ಮಕ್ಕಳ ಅಗತ್ಯತೆಗಳನ್ನೂ ಒಳಗೊಂಡಿರುವಂತಿರಬೇಕು. | | | **R** |
| 2 | ವಿದ್ಯಾರ್ಥಿಗಳಿಗೆ ಆತ್ಮಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಬೆಳೆಸುವ, ನಕಾರಾತ್ಮಕ ಒತ್ತಡಗಳನ್ನು ಗುರುತಿಸಲು, ಜೀವನ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು, ಪರೀಕ್ಷೆಗಳಿಗೆ ಸನ್ನದ್ಧರಾಗಲು ಅನುಕೂಲವಾಗುವಂತೆ ತರಬೇತಿಗಳನ್ನು ನೀಡುವ ಮೂಲಕ ಮಕ್ಕಳಲ್ಲಿರುವ ಭಯ, ಸಿಟ್ಟು ಮತ್ತು ಒತ್ತಡವನ್ನು ನಿರ್ವಹಿಸಲು ಹಾಗೂ ತಮ್ಮ ಅಥವಾ ಇತರರ ಮೇಲಾಗುವ ಹಲ್ಲೆ ಮುಂತಾದವುಗಳನ್ನು ತಡೆಯಲು ಅವರನ್ನು ಸಂವೇದನಾಶೀಲನ್ನಾಗಿಸುವುದು. | | | **R** |
| 3 | ಕಳ್ಳತನ, ಗೋಡೆಯ ಮೇಲೆ ಅನಾವಶ್ಯಕವಾಗಿ ಬರೆಯುವುದು, ದೈಹಿಕವಾಗಿ ಅಥವಾ ಭಾವನಾತ್ಮಕವಾಗಿ ಇನ್ನೊಬ್ಬ ವಿದ್ಯಾರ್ಥಿ ಅಥವಾ ವಯಸ್ಕರಿಗೆ ಹಾನಿ ಮಾಡುವುದು ಮತ್ತು ಯಾವುದೇ ಸಮಾಜ ವಿರೋಧಿ ನಡತೆಯನ್ನು | | ಬೆದರಿಕೆ ವಿಚಾರಗಳಿಗೆ ಸಂಬಂಧಿಸಿದಂತೆ ಎನ್‌ಸಿಪಿಸಿಆರ್ ರವರು ಹೊರಡಿಸಿರುವ ಮಾರ್ಗಸೂಚಿಯನ್ನು ಶಾಲೆಗಳು | M |

| | | | | |
|---|---|---|---|---|
| | ಪ್ರದರ್ಶಿಸುವಂತಹ ದುರ್ವರ್ತನೆಗಳನ್ನು ಮತ್ತು ಅನುಚಿತವಲ್ಲದ ಸಾಮಾಜಿಕ ವರ್ತನೆಯನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆಮಾಡುವುದು ಮತ್ತು ಅವುಗಳನ್ನು ಪರಿಹರಿಸಲಾಗಿದೆ. | | ಜಾರಿಗೊಳಿಸುವುದು: http://www.ncpcr.gov.in/view_file.php?fid=108 | |
| 4 | ಆಪ್ತಸಮಾಲೋಚನೆ ಹಾಗೂ ಉಲ್ಲೇಖನ ವ್ಯವಸ್ಥೆಯನ್ನು ರೂಪಿಸುವುದು ಮತ್ತು ಅದರ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು. | | | M |
| 5 | ಮಕ್ಕಳು ಇತರ ಮಕ್ಕಳೊಂದಿಗೆ ಸಂವಾದ ನಡೆಸಲು ಮತ್ತು ಇತರ ಮಕ್ಕಳ ಮೇಲಾಗುವ ಹಲ್ಲೆ/ನಿಂದನೆಗಳನ್ನು ತಡೆಯುವ ಉದ್ದೇಶದಿಂದ ನೀತಿ ಸಂಹಿತೆ (ನಡತೆಯ ಮಾರ್ಗಸೂಚಿ) ಯನ್ನು ಹೊಂದುವುದು ಮತ್ತು ಮಕ್ಕಳಿಗೆ ಅದರ ಬಗ್ಗೆ ಅರಿವು ಮೂಡಿಸುವುದು. | | ಕೆಲವೊಮ್ಮೆ ಹಿರಿಯ ಮಕ್ಕಳು, ಕಿರಿಯ ಮಕ್ಕಳ ಮೇಲೆ ಜಾತಿ, ವರ್ಗ, ವಿಕಲತೆ, ಲಿಂಗತ್ವ ಮುಂತಾದವುಗಳ ಆಧಾರದ ಮೇಲೆ ಹಲ್ಲೆ ನಡೆಸುವರು | M |
| 6 | ವಿದ್ಯಾರ್ಥಿಗಳು ತಮ್ಮ ಅಥವಾ ಇತರರ ಮೇಲಾಗುವ ಹಲ್ಲೆಯ ಬಗ್ಗೆ ವರದಿ ಮಾಡುವಲ್ಲಿ ಸುರಕ್ಷತಾ ಭಾವವನ್ನು ಉಂಟುಮಾಡುವಂತಹ, ಕಾರ್ಯತಂತ್ರಗಳನ್ನು ರೂಪಿಸುವುದು. ಶಾಲೆಯು ಶಿಸ್ತು ಪಾಲನೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿಶ್ಪಕ್ಷಪಾತವಾಗಿ ಬಗೆಹರಿಸುವುದು. | | ಮಾರ್ಗಸೂಚಿಗಳಲ್ಲಿ ಶಿಫಾರಸ್ಸು ಮಾಡಿರುವಂತೆ ಕಾರ್ಯತಂತ್ರಗಳನ್ನು ರೂಪಿಸುವುದು. | M |
| 7 | ವಿದ್ಯಾರ್ಥಿಗಳಿಗೆ ಯೋಗ, ಧ್ಯಾನ ಮತ್ತು ಸ್ವ-ರಕ್ಷಣೆ ಕಾರ್ಯಕ್ರಮಗಳನ್ನು ನಡೆಸುವುದು. | | | R |
| 8 | ಶಾಲೆಯಲ್ಲಿ ಸಕಾರಾತ್ಮಕ ಶಿಸ್ತುಪಾಲನಾ ಮಾರ್ಗ ಮತ್ತು ಕ್ರಮಗಳನ್ನು[4] ಅಳವಡಿಸಿಸುವುದು ಹಾಗೂ ಶಿಕ್ಷಕರು ಮತ್ತು ಶಾಲಾ ಆಡಳಿತ ಅದನ್ನು ಅನುಸರಿಸುವುದು. | | | **R** |
| 9 | ಶಾಲೆಯು ವಿದ್ಯಾರ್ಥಿಗಳ ಗೈರು ಹಾಜರಿಯನ್ನು ತಡೆಗಟ್ಟಲು ಮತ್ತು ಹಾಜರಾತಿ ಪ್ರಮಾಣವನ್ನು ಹೆಚ್ಚಿಸಲು | | ಶಾಲೆಯು ವಿಶೇಷ ಕಲಿಕೆಯ ಅಗತ್ಯವಿರುವ ವಿದ್ಯಾರ್ಥಿಗಳ | **R** |

| | | | | |
|---|---|---|---|---|
| | ನಿಯಮಿತ ಪರಿಶೀಲನೆ ನಡೆಸುವುದು ಮತ್ತು ಸೂಕ್ತ ಕ್ರಮ ಕೈಗೊಳ್ಳುವುದು.<br>ಓದಿನಲ್ಲಿ ಹಿಂದಿರುವ, ವಿಶೇಷ ಅಗತ್ಯವಿರುವ, ಸಂಕಷ್ಟದಲ್ಲಿರುವ ಮತ್ತು ಶಾಲೆ ಬಿಡುವ ಮಕ್ಕಳಿಗೆ ವಿಶೇಷ ಬೆಂಬಲ ವ್ಯವಸ್ಥೆಯನ್ನು ರೂಪಿಸುವುದು ಹಾಗೂ ಅಂಥಹ ಮಕ್ಕಳನ್ನು ಗುರುತಿಸಿ, ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಅವಕಾಶ ನೀಡುವುದು.<br>ರಕ್ಷಣೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಲು ಬೆಂಬಲ ವ್ಯವಸ್ಥೆಗೆ ಸೂಕ್ತ ಉಲ್ಲೇಖವನ್ನು ಕಲ್ಪಿಸುವುದು. | | ಪಟ್ಟಿಯನ್ನು ತಯಾರಿಸುವುದು ಮತ್ತು ನಿಯಮಿತವಾಗಿ ಅಪ್‌ಡೇಟ್ ಮಾಡುವುದು.<br>ಶಾಲೆಯು ಬಂಬೆಲ ಸೌಲಭ್ಯಗಳಿಗೆ ಉಲ್ಲೇಖಿಸಲಾದ ವಿದ್ಯಾರ್ಥಿಗಳ ಮಾಹಿತಿಯನ್ನು ನಿರ್ವಹಿಸುವುದು. | |

[4] ಮಕ್ಕಳ ರಕ್ಷಣಾ ನೀತಿಯ ವಿಭಾಗ 2ರಲ್ಲಿ ಸಕಾರಾತ್ಮಕ ಶಿಸ್ತಿನ ಕಾರ್ಯವಿಧಾನಗಳ ಬಗ್ಗೆ ವಿವರಿಸಿದೆ.

IV A, B ಮತ್ತು C ವಿಭಾಗವು ಒದಗಿಸುವಂತೆ ಯಾಂತ್ರಿಕ ರಕ್ಷಣೆ, ಅಪರಾದ ಅಥವಾ ಉಲ್ಲಂಘನೆಯ ವರದಿ ಮತ್ತು ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ ಇತರೇ ವಿಧಾನಗಳನ್ನು ಖಚಿತಪಡಿಸಿಕೊಳ್ಳುವುದು.

| ವಿಭಾಗ IV – ವೈಯುಕ್ತಿಕ, ಲೈಂಗಿಕ, ಸಾಮಾಜಿಕ ಮತ್ತು ಭಾವನಾತ್ಮಕ ರಕ್ಷಣೆಯ ಕಾರ್ಯವಿಧಾನ ಮತ್ತು ಶಿಷ್ಟಾಚಾರಗಳು | | | | |
|---|---|---|---|---|
| ವಿಭಾಗ IV A- ಮಕ್ಕಳ ರಕ್ಷಣಾ ಕಾರ್ಯತಂತ್ರಗಳು | | | | |
| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸಲು, ಹಲ್ಲೆ, ಹಾನಿ ಅಥವಾ ಶೋಷಣೆಗಳಿಂದ ರಕ್ಷಣೆಯನ್ನು ನೀಡಲು ಶಾಲೆಯಲ್ಲಿ ಸೂಕ್ತ ಮಾರ್ಗಸೂಚಿಗಳು ಮತ್ತು ವರದಿಯ ಕಾರ್ಯತಂತ್ರಗಳನ್ನೊಳಗೊಂಡ ಮಕ್ಕಳ ರಕ್ಷಣಾ ನೀತಿಯನ್ನು ಹೊಂದುವುದು. | | ಶಿಕ್ಷಣ ಸಂಸ್ಥೆಗಳಿಗಾಗಿ ರಾಜ್ಯ ಸರ್ಕಾರದ ಮಕ್ಕಳ ರಕ್ಷಣಾ ನೀತಿಯಲ್ಲಿ ನೀಡಿರುವ ಅನುಬಂಧವನ್ನು ಶಾಲೆಗಳು ಅಳವಡಿಸಿಕೊಳ್ಳುವುದು. | M |
| 2 | ಶಾಲೆಯ ಮಕ್ಕಳ ರಕ್ಷಣಾ ನೀತಿಯು ಕೆಳಕಂಡ ಅಂಶಗಳನ್ನು ದೃಢವಾಗಿ ತಿಳಿಸುತ್ತದೆ.<br>ಬೋಧಕ ಮತ್ತು ಬೋಧಕೇತರ ಸಿಬ್ಬಂಧಿಗಳಿಂದ ವಿಧ್ಯಾರ್ಥಿಗಳಿಗೆ ಆಗುವ ಕಠಿಣ ದೈಹಿಕ ಶಿಕ್ಷೆ ಮತ್ತು ಮಾನಸಿಕ ಶೋಷಣೆಯನ್ನು ನಿಷೇಧಿಸುವುದು.<br>ಶಾಲಾ ಆವರಣದಲ್ಲಿ ಎಲ್ಲಾ ಸ್ವರೂಪದ ಬೆದರಿಕೆ ಹಾಕುವ ಕೃತ್ಯಗಳಾದ ಬೆದರಿಕೆ ಹಾಕುವಿಕೆ, ರ್‍ಯಾಗಿಂಗ್, ಟೀಕೆ, ಒರಟು ಭಾಷೆ ಮತ್ತು ದುರುದ್ದೇಶದಿಂದ ಗಾಳಿಮಾತುಗಳನ್ನು ಹರಡುವುದರಿಂದ ಮಕ್ಕಳು ದೂರವಿರುವಂತೆ ತಡೆಯುವುದು.<br>ಶಾಲೆಗಳು ಮಕ್ಕಳನ್ನು ಧರ್ಮ, ಜಾತಿ, ಲಿಂಗ, ಭಾಷೆ, ಆರ್ಥಿಕ ಸ್ಥಿತಿಗತಿಗಳು, ಅಥವಾ ಅಸಾಮಾರ್ಥ್ಯ ಅಥವಾ ಯಾವುದೇ ಇತರ ಅಂಶದ ಆಧಾರದ ಮೇಲೆ ವಿಧ್ಯಾರ್ಥಿಗಳನ್ನು ಮತ್ತು ತಾರತಮ್ಯ/ಪೂರ್ವಾಗ್ರಹಗಳನ್ನು ಮಾಡುವುದನ್ನು ಶಾಲೆಯು ಸಹಿಸುವುದಿಲ್ಲ. | | ಶಾಲೆಗಳಲ್ಲಿ ಕಠಿಣ ದೈಹಿಕ ಶಿಕ್ಷೆಗಳನ್ನು ನಿಷೇಧಿಸುವ ಎನ್‌ಪಿಸಿಆರ್ ಮಾರ್ಗಸೂಚಿಗಳು: http://ncpcr.gov.in/showfile.php?lang=1&level=1&&sublinkid=234&lid=153<br>ವರದಿಯಾದ ಪ್ರಕರಣ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ದಾಖಲೆ ನಿರ್ವಹಿಸುವುದು. | M |

| | | | | |
|---|---|---|---|---|
| 3 | ಶಾಲೆಯು ಸಂವೇದನಾಶೀಲ ಸಿಬ್ಬಂದಿಯನ್ನು ಮಕ್ಕಳ ರಕ್ಷಣಾಧಿಕಾರಿಯಾಗಿ ನೇಮಿಸುವುದು. ಸದರಿಯವರು ಈ ನಿಟ್ಟಿನಲ್ಲಿ ಸೂಕ್ತ ತರಬೇತಿಯನ್ನು ಹೊಂದಿದ್ದು, ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುವುದು. | | ನೇಮಕಗೊಂಡ ದಿನಾಂಕ ಹಾಗೂ ತರಬೇತಿ ಹೊಂದಿದ ಬಗ್ಗೆ ದಾಖಲೆ ನಿರ್ವಹಣೆ | M |
| 4 | ಕರ್ನಾಟಕ ರಾಜ್ಯ ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯ ಶಿಫಾರಸ್ಸಿನಂತೆ ಶಾಲೆಯಲ್ಲಿ ಮಕ್ಕಳ ರಕ್ಷಣಾ ಸಮಿತಿ[5]ಯನ್ನು ರಚಿಸುವುದು. ಸಮಿತಿಯ ಎಲ್ಲಾ ಸದಸ್ಯರಿಗೆ ಮಕ್ಕಳ ರಕ್ಷಣಾ ನೀತಿ, ಅವರ ಪಾತ್ರ ಮತ್ತು ಜವಾಬ್ದಾರಿಗಳು, ವರದಿಮಾಡುವ ಹಾಗೂ ಪರಿಹಾರ ಕಾರ್ಯತಂತ್ರಗಳ ಬಗ್ಗೆ ತಿಳಿಸುವುದು.<br>ಸದಸ್ಯರುಗಳು ಸಭೆಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವುದು ಮತ್ತು ಸುರಕ್ಷತಾ ಉಲ್ಲಂಘನೆ ಅಥವಾ ಮಕ್ಕಳ ಮೇಲಿನ ಹಲ್ಲೆ ಪ್ರಕರಣಗಳ ಬಗ್ಗೆ ಪ್ರಸ್ತುತ ಜಾರಿಯಲ್ಲಿರುವ ಕಾನೂನುಗಳಿಗನುಗುಣವಾಗಿ ಸಂವೇಧನಾಶೀಲತೆಯಿಂದ ಪ್ರತಿಕ್ರಿಯಿಸುವುದು.<br>ಮಕ್ಕಳ ರಕ್ಷಣಾ ಸಮಿತಿಯಲ್ಲಿ ನೋಂದಾಯಿತ ಪ್ರಕರಣಗಳು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಶಾಲೆಗಳು ಮಾಸಿಕ ವರದಿಯನ್ನು ತಯಾರಿಸುವುದು.<br>ಶಾಲೆಗಳು ಬಾಹ್ಯ ಸಮಿತಿಗಳು ಮತ್ತು ಮಂಡಳಿಗಳಿಗೆ ಸಲ್ಲಿಸುವ ಎಲ್ಲಾ ವರದಿಗಳಲ್ಲಿ ನೋಂದಾಯಿತ ಪ್ರಕರಣಗಳು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುವುದು. | | ಶಾಲೆಯು ಸ್ವಯಂ ಸೇವಾ ಸಂಸ್ಥೆಗಳ ಹಾಗೂ ಸದರಿ ವಿಷಯದಲ್ಲಿ ನುರಿತ ವ್ಯಕ್ತಿಗಳ ಸಹಾಯವನ್ನು ಪಡೆಯುವುದು.<br>ಮಕ್ಕಳ ರಕ್ಷಣಾ ಸಮಿತಿಯು ಎರಡು ವಾರಕ್ಕೊಮ್ಮೆ ಅಥವಾ ಶಾಲಾ ಮಕ್ಕಳ ರಕ್ಷಣಾ ನೀತಿಯಲ್ಲಿ ನಿರ್ದೇಶಿಸಿದಂತೆ ಸಭೆ ಸೇರುವುದು ಮತ್ತು ಅನುಸರಣೆಯ ಮೂಲಕ ನಡವಳಿಯನ್ನು ದಾಖಲಿಸುವುದು.<br>ಶಾಲಾ ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಹಾಗೂ ಇತರೆ ದೌರ್ಜನ್ಯಗಳನ್ನು ನಿಯಂತ್ರಿಸಲು, ಸಾರ್ವಜನಿಕ ಶಿಕ್ಷಣ ಇಲಾಖೆಯು ಹೊರಡಿಸಿರುವ ಸುತ್ತೋಲೆಯನ್ವಯ ಮಕ್ಕಳ ರಕ್ಷಣಾ ಸಮಿತಿಯನ್ನು ಶಾಲೆಯಲ್ಲಿ ರಚಿಸುವುದು: http://www.schooleducation.kar.nic.in/pdffiles/ChildSafetyEng260714.pdf | **M** |

[5] ಮಕ್ಕಳ ರಕ್ಷಣಾ ಸಮಿತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ C7 pra.shi.a/sha.ma.ly.ki/2014-15, ರನ್ವಯ ರಚಿಸಲಾಗಿದೆ. ಅನುಬಂಧದಲ್ಲಿ ನೀಡಿದೆ.

| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
|---|---|---|---|---|
| 5 | ಎಲ್ಲಾ ಬೋಧಕ, ಬೋಧಕೇತರ ಮತ್ತು ಗುತ್ತಿಗೆ ಸಿಬ್ಬಂದಿಗಳು ಹಾಗೂ ಇತರೆ ಸಿಬ್ಬಂದಿಗಳಿಗೆ ಮಕ್ಕಳ ರಕ್ಷಣಾ ನೀತಿ ಮತ್ತು ಮಾರ್ಗಸೂಚಿಗಳು ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಜಾಗೃತಿ ಮೂಡಿಸುವುದು.<br>ಶಾಲೆಯು ತನ್ನ ಎಲ್ಲಾ ಮಾರಾಟಗಾರರು ಮತ್ತು ಗುತ್ತಿಗೆ ಸಂಸ್ಥೆಗಳಿಗೆ ಶಾಲೆಯ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ತಿಳಿಸಿ, ಅವರಿಂದ ಲಿಖಿತವಾಗಿ ತಮ್ಮ ಸಂಸ್ಥೆಗಳಿಂದ ಶಾಲೆಯಲ್ಲಿ ಕೆಲಸಮಾಡುತ್ತಿರುವ ಸಿಬ್ಬಂದಿಗಳು ಶಾಲಾ ಮಕ್ಕಳ ರಕ್ಷಣಾ ನೀತಿಯನ್ನು ಓದಿ, ಅರ್ಥೈಸಿ ಕೊಂಡಿದ್ದಾರೆ, ಮತ್ತು ಅದಕ್ಕೆ ಬದ್ಧರಾಗಿರುತ್ತಾರೆ ಎಂಬ ಒಪ್ಪಿಗೆ ಪತ್ರವನ್ನು ಪಡೆಯುವುದು. | | ಆರಂಭದಲ್ಲಿ ಪ್ರಕ್ರಿಯೆಯನ್ನು ಬಾಹ್ಯ ತಜ್ಞರ ಸಹಾಯದಿಂದ ನಡೆಸುವುದು.<br>ಮಕ್ಕಳ ಸುರಕ್ಷತೆ ಮತ್ತು ಭದ್ರತೆ ಹಾಗೂ ಶಿಕ್ಷಕರಿಗೆ ತರಬೇತಿ ನೀಡುವ ಕುರಿತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳು: http://mhrd.gov.in/sites/upload_files/mhrd/files/upload_document/20141014_131513.pdf | M |
| 6 | ಮಕ್ಕಳ ರಕ್ಷಣಾ ನೀತಿ/ ಮಾರ್ಗಸೂಚಿಗಳು/ ಮಕ್ಕಳ ಕಾನೂನುಗಳು ಮತ್ತು ವರದಿ ಮಾಡುವ ಕಾರ್ಯತಂತ್ರಗಳ ಬಗ್ಗೆ ಎಲ್ಲಾ ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಅರಿವು ನೀಡುವುದು.<br>ಮಕ್ಕಳ ರಕ್ಷಣಾ ನೀತಿಯ ಪ್ರಮುಖ ಅಂಶಗಳನ್ನು ವಿದ್ಯಾರ್ಥಿಗಳು, ಪೋಷಕರು ಮತ್ತು ಶಾಲೆಗೆ ಭೇಟಿ ನೀಡುವವರು ನೋಡುವಂತೆ ಶಾಲೆಯಲ್ಲಿ ಪ್ರದರ್ಶಿಸುವುದು. | | ಶಾಲೆಯು ಪಾಲಕರು/ಪೋಷಕರಿಗೆ ಗಮನಿಸಿ, ಓದಿ, ಸಹಿ ಮಾಡಲು ತಿಳಿಸುವುದು. | M |

| | | | | |
|---|---|---|---|---|
| 7 | ಮಕ್ಕಳ ಜೊತೆ ಕೆಲಸ ನಿರ್ವಹಿಸಲು ಅವಕಾಶ ನೀಡುವ ಮೊದಲು ಭೋಧಕ, ಭೋಧಕೇತರ ಗುತ್ತಿಗೆ, ಸ್ವಯಂ ಸೇವಕರು ಮತ್ತು ಇತರೆ ಸಿಬ್ಬಂದಿಗಳನ್ನು ಪರಿಶೀಲಿಸಿ ನೇಮಕಾತಿ ಮಾಡುವುದು. | | ಸರ್ಕಾರದ ಮಾರ್ಗಸೂಚಿಗಳನ್ವಯ ಪೋಲಿಸ್ ಪರಿಶೀಲನೆಯನ್ನು ನಡೆಸುವುದು. http://www.schooleducation.kar.nic.in/pdffiles/ChildSafetyEng260714.pdf ಅಪರಾಧ ಪ್ರಕರಣಗಳ ಹಿನ್ನೆಲೆಯುಳ್ಳ ಯಾವುದೇ ಸಿಬ್ಬಂದಿಗಳನ್ನು ನೇಮಿಸಿಕೊಳ್ಳದಿರುವುದು. | M |
| 8 | ಶಾಲೆಯು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳವಾಗ, ಮಕ್ಕಳ ಸುರಕ್ಷತೆ ಕುರಿತ ಅವರ ಮನೋಭಾವ, ಮಕ್ಕಳ ಮೇಲಿನ ಹಲ್ಲೆ, ಮಕ್ಕಳು ಮತ್ತು ಅವರ ಹಕ್ಕುಗಳ ಬಗ್ಗೆ ಸಂವೇದನೆ ಮತ್ತು ಮಕ್ಕಳ ಸಮಸ್ಯೆಗಳನ್ನು ಮಾಪನ ಮಾಡುವ ವ್ಯವಸ್ಥೆಯನ್ನು ಹೊಂದುವುದು. | | | R |
| 9 | ಶಾಲೆಯ ಮಕ್ಕಳ ರಕ್ಷಣಾ ನೀತಿಗೆ ಅನುಗುಣವಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಮಕ್ಕಳಿಗೆ ನೀತಿ ಸಂಹಿತೆ (ನಡವಳಿಕೆಯ ಮಾರ್ಗಸೂಚಿ) ಯನ್ನು ಹೊಂದುವುದು. | | ಮಕ್ಕಳ ರಕ್ಷಣಾ ನೀತಿಗೆ ಅನುಗುಣವಾಗಿ ನೀತಿ ಸಂಹಿತೆಯನ್ನು ಹೊಂದುವುದು. | M |
| 10 | ಶಾಲೆಯಲ್ಲಿ ಶಾಲಾ ಮೇಲ್ವಿಚಾರಣಾ ಸಮಿತಿ ಅಥವಾ ಪೋಷಕ–ಶಿಕ್ಷಕರ ಸಂಘವನ್ನು ರಚಿಸುವುದು ಮತ್ತು ನಿಯಮಿತವಾಗಿ ಸಭೆ ನಡೆಸುವುದು. ಸಭೆಯ ಕಾರ್ಯಸೂಚಿಯಲ್ಲಿ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಯ ಅಂಶಗಳನ್ನು ಸೇರಿಸಬೇಕು. ಮಕ್ಕಳ ರಕ್ಷಣಾ ವಿಚಾರಗಳಿಗೆ ಸಂಬಂಧಿಸಿದಂತೆ ಪೋಷಕರೊಂದಿಗೆ ಚರ್ಚೆ ನಡೆಸುವುದು ಮತ್ತು ಅವರ ಸಹಭಾಗತ್ವವನ್ನು ಪ್ರೋತ್ಸಾಹಿಸುವುದು. ಹಲ್ಲೆ ಮತ್ತು ಸುರಕ್ಷತಾ ಉಲ್ಲಮಘನೆ | | ಶಾಲೆಗಳು ಮಕ್ಕಳ ರಕ್ಷಣಾ ಸಮಿತಿ, ಶಾಲಾ ಮೇಲ್ವಿಚಾರಣಾ ಸಮಿತಿ ಅಥವಾ ಪೋಷಕ–ಶಿಕ್ಷಕರ ಸಂಘಗಳು ಮತ್ತು ಜಂಟಿ ಸಮಿತಿಗಳ ಸಭೆಗಳ ದಾಖಲೆಗಳನ್ನು ನಿರ್ವಹಿಸುವುದು. | M |

| | | | | |
|---|---|---|---|---|
| | ಪ್ರಕರಣಗಳನ್ನು ಸಮಿತಿಗೆ ವರದಿಮಾಡುವುದು. | | | |
| 11 | ಶಾಲಾ ಆಡಳಿತವು ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಸಹಾಯವಾಣಿ (1098), ಮಕ್ಕಳ ಕಲ್ಯಾಣ ಸಮಿತಿ (CWC)/ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (KSCPCR) ಗಳಂಥ ಮಕ್ಕಳ ರಕ್ಷಣಾ ಕಾರ್ಯತಂತ್ರ ವ್ಯವಸ್ಥೆಗಳ ಬಗ್ಗೆ ಅರಿವನ್ನು ಹೊಂದುವುದು.<br>ಶಾಲೆಯ ನಿಯೋಜಿತ ಮಕ್ಕಳ ರಕ್ಷಣಾ ಅಧಿಕಾರಿ, ಮಕ್ಕಳ ವಿಶೇಷ ಪೊಲೀಸ್ ಘಟಕ (ಎಸ್‌ಜೆಪಿಯು)ದ ಮಕ್ಕಳ ಕಲ್ಯಾಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸಿಪಿಒ), ಮಕ್ಕಳ ಸಹಾಯವಾಣಿಗಳ ದೂರವಾಣಿ ಸಂಖ್ಯೆಗಳನ್ನು ಪ್ರದರ್ಶಿಸುವಂಥಹ ಪ್ರತ್ಯೇಕ ಮಕ್ಕಳ ಸುರಕ್ಷತಾ ಸೂಚನಾ ಫಲಕವನ್ನು ಹೊಂದುವುದು. | | ಸದರಿ ಮಾಹಿತಿಯನ್ನು ಪೂರ್ವಭಾವಿ ತರಬೇತಿಯ ಭಾಗವಾಗಿ ನೀಡಬೇಕು.<br>ದೂರವಾಣಿ ಸಂಖ್ಯೆಗಳನ್ನು ನಿಯಮಿತವಾ ಪರಿಶೀಲಿಸಿ ಹಾಕುವುದು. ಸಾರ್ವಜನಿಕ ಶಿಕ್ಷಣ ಇಲಾಖೆಯ ಸುತ್ತೋಲೆಯನ್ನು ಗಮನಿಸುವುದು:<br>http://www.schooleducation.kar.nic.in/pdffiles/ChildSafetyEng260714.pdf | M |
| 12 | ಶಾಲೆಯು ತುರ್ತು ಸಂದರ್ಭಗಳಲ್ಲಿ ಅಥವಾ ಅವಶ್ಯವಿದ್ದಲ್ಲಿ ಅರೆಕಾಲಿಕ ಅಥವಾ ಪೂರ್ಣಕಾಲಿಕ ಅಥವಾ ಕರೆಯ ಮೇರೆಗೆ ಬರುವ ಆಪ್ತಸಮಾಲೋಚಕರು ಅಥವಾ ಮನ:ಶಾಸ್ತ್ರಜ್ಞರನ್ನು ನೇಮಕ ಮಾಡಿಕೊಳ್ಳುವುದು<br>ಒಬ್ಬ ಹಿರಿಯ ಶಿಕ್ಷಕರನ್ನು ಸಹ ಆಪ್ತಸಮಾಲೋಚನೆ ನಡೆಸಲು ನೇಮಿಸುವುದು ಮತ್ತು ಅವಶ್ಯವಿದ್ದಲ್ಲಿ ಅವರನ್ನು ಬಳಸಿಕೊಳ್ಳುವುದು. | | ನೇಮಕಾತಿ ಪತ್ರವನ್ನು ಪರಿಶೀಲಿಸುವುದು. ಒಂದು ವೇಳೆ ಶಾಲೆಯು ಅರೆಕಾಲಿಕ ಆಪ್ತಸಮಾಲೋಚಕರನ್ನು ನೇಮಿಸಿಕೊಳ್ಳಲು ಸಾಧ್ಯವಾಗದಿದ್ದಲ್ಲಿ, ಹಿರಿಯ ಶಿಕ್ಷಕರನ್ನು ತರಬೇತಿಗೊಳಿಸುವುದು. | M |
| 13 | ಶಾಲೆಯು ಮಕ್ಕಳ ಸಹಭಾಗಿತ್ವವನ್ನು ಉತ್ತೇಜಿಸಲು, ಸುರಕ್ಷತೆ, ರಕ್ಷಣೆ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ಶಿಕ್ಷಕರು ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಲು ಮತ್ತು | | | M |

| | | | | |
|---|---|---|---|---|
| | ಹಂಚಿಕೊಳ್ಳಲು ವೇದಿಕೆಯನ್ನು ಕಲ್ಪಿಸಿಕೊಡುವಂತಹ ಮಕ್ಕಳ ವೇಧಿಕೆಗಳನ್ನು ಅಥವಾ ಕ್ಲಬ್ಬುಗಳನ್ನು ಹೊಂದುವುದು.<br>ಈ ವೇದಿಕೆಗಳು ಎಲ್ಲಾ ರೀತಿಯ ಹಿನ್ನೆಲೆಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಒಳಗೊಂಡಿರುತ್ತದೆ. | | | |
| 14 | ಶಾಲೆಯ ಪ್ರಮುಖ ಜಾಗಗಳಲ್ಲಿ ಮಕ್ಕಳ ಸುರಕ್ಷತೆಯನ್ನು ಕುರಿತ ಭಿತ್ತಿಪತ್ರಗಳನ್ನು ಪ್ರದರ್ಶಿಸುವುದು. | | ಇದರಿಂದ ಶಾಲೆಯ ಸಂಪರ್ಕದಲ್ಲಿರುವವರಿಗೆಲ್ಲಾ ಮಕ್ಕಳ ರಕ್ಷಣೆಯ ಬಗ್ಗೆ ಸಾಮಾನ್ಯ ಅರಿವು ಮೂಡಿಸುತ್ತದೆ | M |
| 15 | ಮಕ್ಕಳು ಮತ್ತು ಪೋಷಕರು ತಮ್ಮ ದೂರು/ಕುಂದುಕೊರತೆಗಳನ್ನು ಹೇಳಿಕೊಳ್ಳಲು ಶಾಲೆಯಲ್ಲಿ ಸಲಹಾ/ದೂರುಪೆಟ್ಟಿಗೆಯನ್ನು ಇಡುವುದು.<br>ಈ ಸಲಹೆ /ದೂರುಪೆಟ್ಟಿಗೆಗಳನ್ನು ಶಾಲೆಯ ಮಕ್ಕಳ ರಕ್ಷಣಾ ನೀತಿಯ ನಿಯಮಗಳಿಗನುಗುಣವಾಗಿ, ಶಾಲೆಯ ಮಕ್ಕಳ ರಕ್ಷಣಾ ಸಮಿತಿ[6]ಯು ತೆರೆಯುವುದು ಮತ್ತು ಪರಿಶೀಲಿಸುವುದು.<br>ದೂರು ಅಥವಾ ಸಲಹೆ ನೀಡಿದವರನ್ನು ಒಬ್ಬೊಂಟಿ ಮತ್ತು ಕಿರುಕುಳಕ್ಕಳಗಾಗದಂತೆ ಅಥವಾ ಬಲಿಪಶು ಆಗದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>ಶಾಲೆಯು ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಅಥವಾ ಮಕ್ಕಳ ರಕ್ಷಣಾ ಸಮಿತಿಯ ಮುಂದೆ ಬಂದಂತಹ ದೂರುಗಳ ಬಗ್ಗೆ ದಾಖಲೆಯನ್ನು ನಿರ್ವಹಿಸುವುದು ಮತ್ತು ಸದರಿ ದಾಖಲೆಗಳು ಪರಿಶೀಲನೆಗೆ ಲಭ್ಯವಿರುವಂತೆ ನೋಡಿಕೊಳ್ಳುವುದು. | | ಸಾರ್ವಜನಿಕ ಶಿಕ್ಷಣ ಇಲಾಖೆಯು ಹೊರಡಿಸಿರುವ ಸುತ್ತೋಲೆಗೆ ಅನುಗುಣವಾಗಿ ಕ್ರಮ ಕೈಗೊಳ್ಳುವುದು ಮತ್ತು ಸಲಹೆ /ದೂರುಪೆಟ್ಟಿಗೆಗಳನ್ನು ಶಾಲೆಯಲ್ಲಿಡುವುದು:<br>http://www.schooleducation.kar.nic.in/pdffiles/ChildSafetyEng260714.pdf | M |
| 16 | ಸುರಕ್ಷಾ ಆಚರಣೆಗಳು ಮತ್ತು ರಕ್ಷಣಾ ಮಾನದಂಡಗಳನ್ನು ಶಾಲೆಯು ಪಾಲಿಸುವ | | ಶಾಲೆಯನ್ನು ಸುರಕ್ಷಿತ ಮತ್ತು ಮಕ್ಕಳ ಸಂವೇಧಿಯನ್ನಾಗಿಸಲು | M |

| | | | | |
|---|---|---|---|---|
| | ಬಗ್ಗೆ ಮಕ್ಕಳ ಸುರಕ್ಷಾ ಗಮನಿಕೆ ಪಟ್ಟಿಯನ್ನು ನಿಯಮಿತವಾಗಿ ಮಾಪನ ಮಾಡುವುದು. | | ಮತ್ತು ಮಾನದಂಡಗಳನ್ನು ಸುಧಾರಿಸಲು ವಾರ್ಷಿಕ ಮಾಪನವನ್ನು ಮಾಡುವುದು. | |
| 17 | ಯೋಜನೆ ಮತ್ತು ಹೊಸ ಸೌಲಭ್ಯ ಅಥವಾ ಅಸ್ತಿತ್ವದಲ್ಲಿರುವುದನ್ನು ಮಾಪನ ಮಾಡಲು ಮಕ್ಕಳ ಸುರಕ್ಷಾ ಗಮನಿಕೆ ಪಟ್ಟಿ (Check list) ಯನ್ನು ಉಪಯೋಗಿಸುವುದು. | | ಈ ನಿರಂತರ ಪ್ರಕ್ರಿಯೆಯು ಶಾಲೆಯು ಮಕ್ಕಳಿಗೆ ನೀಡುವ ಆರೈಕೆಯ ಗುಣಮಟ್ಟವನ್ನು ಹೆಚ್ಚಿಸುತ್ತದೆ. | M |

[6] ಮಕ್ಕಳ ರಕ್ಷಣಾ ಸಮಿತಿಯ ಸದಸ್ಯರನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ C7 pra.shi.a/sha.ma.ly.ki/2014-15, ರನ್ವಯ ನಾಮಕರಣ ಮಾಡಲಾಗುತ್ತದೆ. ಅನುಬಂಧದಲ್ಲಿ ನೀಡಿದೆ.

| ವಿಭಾಗ IV – ವೈಯಕ್ತಿಕ ಮತ್ತು ಲೈಂಗಿಕ, ಸಾಮಾಜಿಕ ಮತ್ತು ಭಾವನಾತ್ಮಕ ರಕ್ಷಣೆಯ ವಿಧಾನ ಮತ್ತು ಶಿಷ್ಟಾಚಾರಗಳು | | | | |
|---|---|---|---|---|
| ವಿಭಾಗ IV B- ಹಲ್ಲೆ ಅಥವಾ ಸುರಕ್ಷತಾ ಉಲ್ಲಂಘನೆ ಕುರಿತು ವರದಿಯ ವಿಧಾನ | | | | |
| ಕ್ರ. ಸಂ | ಸೂಚಕಗಳು | ಹೌದು /ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡ ಲಾದುದ್ದು |
| 1 | ಶಾಲೆಗೆ ಸಂಬಂಧಿಸಿದ ಬೋಧಕ ಅಥವಾ ಬೋಧಕೇತರ ಅಥವಾ ಇತರೆಯವರಿಂದ ಮಕ್ಕಳ ಮೇಲಿನ ಹಲ್ಲೆ ಅಥವಾ ಸುರಕ್ಷತೆಯ ಉಲ್ಲಂಘನೆಯಾದಲ್ಲಿ, ಶಿಕ್ಷಕರು ಮತ್ತು ಇತರೆ ಸಿಬ್ಬಂದಿಗಳು ಮತ್ತು ಆಡಳಿತ ಮಂಡಳಿಯವರು ಪಾಲಿಸಬೇಕಾದ ಮಾರ್ಗಸೂಚಿಗಳು ಮತ್ತು ವರದಿಯ ವಿಧಾನಗಳನ್ನು ಸ್ಪಷ್ಟವಾಗಿ ರೂಪಿಸಲಾಗಿದೆ.<br>ಸಂಬಂಧಪಟ್ಟ ಮಕ್ಕಳ ರಕ್ಷಣಾಧಿಕಾರಿ, ಮಕ್ಕಳ ರಕ್ಷಣಾ ಸಮಿತಿ ಸದಸ್ಯರು, ಮುಖ್ಯ ಶಿಕ್ಷಕರು/ಮುಖ್ಯಸ್ಥರಿಗೆ ವಿಧಾನಗಳ ಬಗ್ಗೆ ಅರಿವು ಮೂಡಿಸುವುದು. | | ವರದಿಯ ಕಾರ್ಯವಿಧಾನವನ್ನು ರಾಜ್ಯ ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯ ಅನುಸಾರವಾಗಿ ರೂಪಿಸುವುದು.<br>ಇದು ಶಾಲಾ ಮಕ್ಕಳ ರಕ್ಷಣಾ ನೀತಿಯ ಒಂದು ಭಾಗವಾಗಿದೆ. | M |

| | | | | |
|---|---|---|---|---|
| 2 | ಮಗುವಿನ ಮೇಲಿನ ಹಲ್ಲೆ ಸಂದರ್ಭದಲ್ಲಿ, ವರದಿ ಮಾಡುವ ಮತ್ತು ವಿಚಾರಣೆ ನಡೆಸುವಾಗ ಶಾಲಾ ಆಡಳಿತ ವರ್ಗವು ಅಗತ್ಯವಿರುವೆಡೆಗಳಲ್ಲಿ ಮಗುವಿನ ಪರವಾದ ಸಂವೇದನಾಶೀಲ ಪ್ರಕ್ರಿಯೆಯನ್ನು ಕಾನೂನಿಗೆ ಅನುಸಾರವಾಗಿ ಪಾಲಿಸುತ್ತದೆ<br>ವರದಿ ಮತ್ತು ಪರಿಶೀಲನಾ ಪ್ರಕ್ರಿಯೆಯ ಹಂತಗಳಲ್ಲಿ ಮಗು ಯಾವುದೇ ರೀತಿಯಲ್ಲಿ ಆಘಾತಕ್ಕೊಳಗಾಗದ ರೀತಿಯಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಪ್ರಕರಣದ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದು. | | ಕಾರ್ಯವಿಧಾನಗಳನ್ನು ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ವಿವರಿಸಿದೆ.<br><br>ಎಲ್ಲಾ ಪ್ರಕರಣಗಳನ್ನು ದಾಖಲಿಸುವುದು ಮತ್ತು ನಿಯಮಿತವಾಗಿ ಅಪ್‌ಡೇಟ್ ಮಾಡುವುದು. | M |
| 3 | ಲೈಂಗಿಕ ಅಪರಾಧ ಪ್ರಕರಣಗಳಲ್ಲಿ, ಆಪಾದಿತನು ಮಗುವನ್ನು ಬೇಟಿಮಾಡದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು. | | ಆಪಾದಿತನ ವಿರುದ್ಧ ತುರ್ತು ಮತ್ತು ಸೂಕ್ತ ಕ್ರಮ ಕೈಗೊಳ್ಳುವುದು. | M |
| 4 | ಹಲ್ಲೆ/ಉಲ್ಲಂಘನೆ ಬಗ್ಗೆ ಮಕ್ಕಳ ಸುರಕ್ಷಾ ಸಮಿತಿಗೆ ತಿಳಿಸುವುದು ಮತ್ತು ಸಮಿತಿಯ ಸದಸ್ಯರು ಪ್ರಕ್ತಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು | | ಎಲ್ಲಾ ಪ್ರಕರಣಗಳನ್ನು ದಾಖಲಿಸುವುದು ಮತ್ತು ಕೈಗೊಂಡ ಕ್ರಮದ ಬಗ್ಗೆ ನಿಯಮಿತವಾಗಿ ಅಪ್‌ಡೇಟ್ ಮಾಡುವುದು. | M |
| 5 | ಮಕ್ಕಳ ರಕ್ಷಣಾಧಿಕಾರಿ/ಮುಖ್ಯಸ್ಥರು ಎಲ್ಲಾ ಕಾರ್ಯವಿಧಾನಗಳನ್ನು ಅನುಸರಿಸುವುದು ಮತ್ತು ಅಗತ್ಯವಿರುವಾಗ ಪೊಲೀಸ್/ಎಸ್‌ಜೆಪಿಯು/ಮಕ್ಕಳ ಕಲ್ಯಾಣ ಸಮಿತಿಗೆ ತಿಳಿಸುವುದು. | | | M |
| 6. | ಲೈಂಗಿಕ ಅಪರಾಧವು ಸಂಭವಿಸಿದ ಸಂದರ್ಭದಲ್ಲಿ ಶಾಲಾ ಆಡಳಿತ ವರ್ಗವು ಬಾಧಿತ ಮಗುವಿನ/ಮಕ್ಕಳ ಮತ್ತು ಅದರ ಕುಟುಂಬದ ಪುನರ್ವಸತಿಗೆ ಸಹಾಯ/ನೆರವು ನೀಡುತ್ತದೆ ಮಗು ಮತ್ತು ಕುಟುಂಬವನ್ನು ಗೌರವಯುತವಾಗಿ ಮತ್ತು ಸೂಕ್ಷ್ಮವಾಗಿ ನೋಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು. ಶಿಕ್ಷಕರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಮೂಲಕ, ಹಲ್ಲೆಗೊಳಗಾದ ಮಗುವಿನ ಹಿತಕರವಾದ ವಾತಾವರಣವನ್ನು ಕಲ್ಪಿಸಲು ಮತ್ತು ಶಾಲೆಯಲ್ಲಿ ವ್ಯಾಸಂಗವನ್ನು ಮುಂದುವರೆಸಲು ಅನುಕೂಲ ಕಲ್ಪಿಸುವುದು. | | | M<br><br>R |

| | | | | |
|---|---|---|---|---|
| | ಹಲ್ಲೆ ಪ್ರಕರಣವು ಶಾಲೆಯಿಂದ ಹೊರಗಡೆ ಸಂಭವಿಸಿದಾಗಲೂ ಶಾಲೆ ಇದೇ ಬಗೆಯ ಬೆಂಬಲವನ್ನು ನೀಡುವುದು<br>ಕಾನೂನು ಅವಶ್ಯಕತೆಗಳನ್ನು ಪೂರೈಸಲು ಸಹಕಾರವನ್ನು ನೀಡಲಾಗುತ್ತದೆ | | | M |
| 7 | ಹಲ್ಲೆ ಅಥವಾ ಸುರಕ್ಷತಾ ಉಲ್ಲಂಘನೆಯು ಸಂಜ್ಞಾತ್ಮಕ ಸ್ವರೂಪದ್ದಾಗಿರದಿದ್ದಲ್ಲಿ, ಮಕ್ಕಳ ರಕ್ಷಣಾ ಸಮಿತಿ ಮತ್ತು ಶಾಲೆಯ ಆಡಳಿತ ವರ್ಗವು ಶಾಲೆಯ ಮಕ್ಕಳ ರಕ್ಷಣಾ ನೀತಿ ಅಥವಾ ರಾಜ್ಯದ ಶಿಫಾರಸ್ಸಿನಂತೆ ಕೈಗೊಳ್ಳಬಹುದಾದ ಕ್ರಮ ಮತ್ತು ದಂಡನಾತ್ಮಕ ಪರಿಹಾರದ ಕ್ರಮಗಳನ್ನು ನಿರ್ಧರಿಸುವುದು. | | ಪ್ರಕರಣ ಮತ್ತು ಕೈಗೊಂಡ ಕ್ರಮದ ಬಗ್ಗೆ ದಾಖಲಿಸುವುದು | M |
| 8 | ಲೈಂಗಿಕ ಅಪರಾಧದ ಆರೋಪಿಯನ್ನು ಕೋರ್ಟ್‌ನ ವಿಚಾರಣೆ ಮುಗಿಯುವವರೆಗೂ ಅಮಾನತ್ತಿನಲ್ಲಿಡುವುದು ಮತ್ತು ಅಪರಾಧಿ ಎಂದು ಸಾಭೀತಾದಲ್ಲಿ ಸೇವೆಯಿಂದ ವಿಮುಕ್ತಿಗೊಳಿಸುವುದು. | | ಪ್ರಕರಣ ಮತ್ತು ಕೈಗೊಂಡ ಕ್ರಮದ ಬಗ್ಗೆ ದಾಖಲಿಸುವುದು | M |
| 9 | ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯಿಂದ ಅಥವಾ ಶಾಲೆಗೆ ಸಂಬಂಧಿಸಿದ ಇತರೆಯವರಿಂದ ಹಲ್ಲೆ ಸಂಭವಿಸಿದ ಸಂದರ್ಭದಲ್ಲಿ, ಶಾಲೆಯು ಇತರೇ ಮಕ್ಕಳಿಗೆ ಆಪ್ತಸಮಾಲೋಚನೆ ನೀಡುವ ಕಾರ್ಯವಿಧಾನಗಳನ್ನು ಹೊಂದಿರುವುದು. | | ಹೇಳಿಕೆ ಮತ್ತು ಕೈಗೊಂಡ ಕ್ರಮಗಳನ್ನು ದಾಖಲಿಸುವುದು | M |
| 10 | ಶಾಲೆಯು ಮಾಧ್ಯಮದವರಿಗೆ ಮಾಹಿತಿ ನೀಡುವಾಗ ಎಚ್ಚರಿಕೆ ಮತ್ತು ಸೂಕ್ಷ್ಮತೆಯಿಂದ ಮಗು ಮತ್ತು ಕುಟುಂಬದ ಖಾಸಗೀತನ ಹಾಗೂ ಗೌಪ್ಯತೆಯ ಹಕ್ಕನ್ನು ಎತ್ತಿಹಿಡಿಯುವುದು. | | ಬಲಿಪಶುವಾಗಿರುವ ಮಗುವಿನ ಕುರಿತು ವರದಿ ಮಾಡುವಾಗ ನಿಯಮಗಳನ್ನು ಉಲ್ಲಂಘಿಸುವ ಮಾಧ್ಯಮಗಳ ಮೇಲೆ ಕೈಗೊಳ್ಳಬಹುದಾದ ಕ್ರಮಗಳನ್ನು POCSO ಕಾಯ್ದೆಯಲ್ಲಿ ವಿವರಿಸಿದೆ:<br>http://wcd.nic.in/sites/default/files/childprotection31072012.pdf | M |
| 11 | ರಾಜ್ಯ ಮಕ್ಕಳ ರಕ್ಷಣಾ ನೀತಿಯಲ್ಲಿ ಒದಗಿಸಿರವ ಕ್ರಮಗಳನ್ನು ಶಿಕ್ಷಣ ಸಂಸ್ಥೆಗಳು ಅನುಸರಿಸುವುದು. | | | M |

| ವಿಭಾಗ IV – ವೈಯಕ್ತಿಕ ಮತ್ತು ಲೈಂಗಿಕ, ಸಾಮಾಜಿಕ ಮತ್ತು ಭಾವನಾತ್ಮಕ ರಕ್ಷಣೆಯ ವಿಧಾನ ಮತ್ತು ಶಿಷ್ಟಾಚಾರ | | | | |
|---|---|---|---|---|
| ವಿಭಾಗ IV C–ಮಕ್ಕಳ ಸುರಕ್ಷತೆ ಮತ್ತು ರಕ್ಷಣೆಯ ಇತರೆ ಕಾರ್ಯವಿಧಾನಗಳು | | | | |
| ಕ್ರ.ಸಂ | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಶಾಲೆಯ ಆವರಣ ಮತ್ತು ತರಗತಿಗಳನ್ನು ಶಿಕ್ಷಣ ಮತ್ತು ಸಂಬಂಧಿಸಿದ ಚಟುವಟಿಕೆಗಳ ಹೊರತಾಗಿ, ಕಟ್ಟಡ ನಿರ್ಮಾಣ ಅಥವಾ ಇತರೆ ವಸ್ತುಗಳನ್ನು ಸಂಗ್ರಹಿಸಲು ಬಳಸುವಂತಿಲ್ಲ.<br><br>ಶಾಲೆಯ ಆರವಣದಲ್ಲಿ ಯಾವುದೇ ಸಮಾಜ ಘಾತುಕ ಚಟುವಟಿಕೆಗಳು ಉದಾರಣೆಗೆ; ಮದ್ಯಪಾನ ಮಾಡುವುದು, ಜೂಜಾಡುವುದನ್ನು ನಿಷೇಧಿಸಿದೆ. ಒಂದುವೇಳೆ ಶಾಲೆಯಲ್ಲಿ ಅಥವಾ ಸಮೀಪದಲ್ಲಿ ಯಾವುದೇ ಸಮಾಜ ಘಾತುಕ ಸಭೆಗಳು ನಡೆದಲ್ಲಿ ಅದನ್ನು ಪೋಲಿಸರಿಗೆ ವರದಿಮಾಡುವುದು. | | ಮಾಹಿತಿಯನ್ನು ಸಮುದಾಯ/ ನೆರೆಹೊರೆಯವರಿಂದ ಸಹ ಪಡೆಯುವುದು. | R<br><br>M |
| 2 | ಶಾಲಾ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ತರಗತಿಯ ಒಳಗೆ ಮತ್ತು ಹೊರಗೆ ಸಕ್ರಿಯವಾಗಿ ಮೇಲ್ವಿಚಾರಣೆ ನಡೆಸುವುದು. | | | M |
| 3 | ಮಟ್ಟಿಲುಗಳ ಕೆಳಗೆ, ಏಕಾಂತದ ಸಂದಿ–ಮೂಲೆಗಳು, ಕಾರಿಡಾರ್‌ಗಳನ್ನು ಶಾಲಾ ಸಿಬ್ಬಂದಿಯು ಮಕ್ಕಳು ಶಾಲೆಗೆ ಬರುವಾಗ ಮತ್ತು ಶಾಲೆಯಿಂದ ತೆರಳಿದ ನಂತರ ಪರೀಕ್ಷಿಸುವುದು. | | ಅಪಾಯದ ಮನೋಭಾವವನ್ನು ಹೊಂದದಂತೆ ಮಕ್ಕಳಿಗೆ ಅರಿವು ಮೂಡಿಸುವುದು. | M |
| 4 | ಎಲ್ಲಾ ತರಗತಿಗಳು, ಪ್ರಯೋಗಾಲಯಗಳು, ಶೌಚಾಲಯ, | | | M |

| | | | | |
|---|---|---|---|---|
| | ಗ್ರಂಥಾಲಯ, ಸಿಬ್ಬಂದಿ ಕೊಠಡಿ, ಅಡುಗೆ ಮನೆ, ಕ್ರೀಡಾ ಕೊಠಡಿ, ಸಭಾಂಗಣ ಮತ್ತು ಇತರೆ ಸ್ಥಳಗಳನ್ನು ದಿನದ ಅಂತ್ಯದಲ್ಲಿ ಬೀಗ ಹಾಕುವ ಮುನ್ನ ಶಾಲೆಯ ಸಿಬ್ಬಂದಿಯು ಸರಿಯಾಗಿ ಪರಿಶೀಲಿಸುವುದು | | | |
| 5 | ಶಾಲೆಗೆ ಭೇಟಿ ನೀಡುವ ಹೊರಗಿನವರು, ಶಾಲೆಯ ಕಟ್ಟಡವನ್ನು ಪ್ರವೇಶಿಸುವಲ್ಲಿ ನಿಯಂತ್ರಣ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಹೊಂದುವುದು ಮತ್ತು ಸಂದರ್ಶಕರ ನೋಂದಣಿ ಪುಸ್ತಕವನ್ನು ಆಡಳಿತ ಸಿಬ್ಬಂದಿ/ಭದ್ರತಾ ಸಿಬ್ಬಂದಿ ಕಟ್ಟುನಿಟ್ಟಾಗಿ ಮತ್ತು ಶ್ರದ್ಧೆಯಿಂದ ನಿರ್ವಹಿಸುವುದು. | | ಶಾಲೆಯಲ್ಲಿ ಗೊತ್ತುಪಡಿಸಿದ ಸಂದರ್ಶಕರ ಕೊಠಡಿ ಇರತಕ್ಕದ್ದು. ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆ: http://www.school education.kar.nic.in/ pdffiles/ChildSafety Eng260714.pdf | M |
| 6 | ಕುಟುಂಬದ ತುರ್ತು ಸಂದರ್ಭ ಅಥವಾ ಇತರೆ ಅನಿರೀಕ್ಷಿತ ಬಂದ್‌ಗಳ ಸಂದರ್ಭದಲ್ಲಿ, ಮಗುವನ್ನು ಶಾಲೆಯಿಂದ ಕರೆದುಕೊಂಡು ಹೋಗಲು ಪೋಷಕರು/ ಪಾಲಕರು ಖುದ್ದಾಗಿ ಬಂದಿಲ್ಲದಿದ್ದರೆ ಅಥವಾ ಪೋಷಕರು/ಪಾಲಕರು ಮಗುವನ್ನು ಕರೆದೊಯ್ಯಲು ನೀಡಿರುವ ಅಧಿಕೃತ ಪತ್ರ ಇಲ್ಲದಿದ್ದರೆ ಶಾಲೆಯಿಂದ ಹೊರಹೋಗಲು ಯಾವುದೇ ಮಗುವಿಗೆ ಅವಕಾಶ ನೀಡಲಾಗುವುದಿಲ್ಲ.<br>ಸದರಿ ಮಾಹಿತಿಯನ್ನು ಪಾಲಕರು/ ಪೋಷಕರಿಗೆ ತಿಳಿಸುವುದು. | | ಸಂಸ್ಥೆಯ ಮುಖ್ಯಸ್ಥರ ಜವಾಬ್ದಾರಿಗಳ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆ: http://www.school education.kar.nic.in/ pdffiles/ChildSafety Eng260714.pdf | **M** |
| 7 | ಶಾಲೆಯು, ಪೋಷಕರ/ ಪಾಲಕರ ದೂರವಾಣಿ ಸಂಪರ್ಕಗಳು, ವಿಳಾಸದ ಬದಲಾವಣೆ ಮತ್ತು ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ತುರ್ತು ಸಂಪರ್ಕ | | | M |

| | | | | |
|---|---|---|---|---|
| | ಸಂಖ್ಯೆಗಳ ಅಪ್‌ಡೇಟ್ ಮಾಡಲಾದ ಪಟ್ಟಿಯನ್ನು ನಿರ್ವಹಿಸುತ್ತದೆ.<br><br>ಈ ಕುರಿತು ಪೋಷಕರು ಮತ್ತು ಪಾಲಕರಿಗೆ ಮೊಬೈಲ್ ಫೋನ್ ಮೆಸೇಜ್‌ಗಳ ಮೂಲಕ ಮತ್ತು ಇತರೆಗಳ ಮೂಲಕ ನಿಯಮಿತವಾಗಿ ಮಾಹಿತಿಯನ್ನು ಕಳುಹಿಸಲಾಗುವುದು. | | | R |
| 8 | ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಾದ ಚಾಲಕರು, ಭದ್ರತಾ ಸಿಬ್ಬಂದಿ ಮತ್ತು ಪರಿಚಾರಕರುಗಳಿಗೆ ವಿಶೇಷ ಅಗತ್ಯೆಯುಳ್ಳ ಮಕ್ಕಳ ಉದಾಹರಣೆಗೆ: ಗಾಲಿಕುರ್ಚಿಗಳನ್ನು ಬಳಸುವ, ದೃಷ್ಟಿ ದೋಷವುಳ್ಳ, ವಾಕ್-ಶ್ರವಣ ವಿಕಲಚೇತನ ಮಕ್ಕಳ ಜೊತೆ ಸಂವಹನ ನಡೆಸುವುದಕ್ಕೆ ತರಬೇತಿ ನೀಡುವುದು | | ಕೊನೆಯ ಪಕ್ಷ 50% ಸಿಬ್ಬಂದಿಗಳಿಗೆ ಈ ನಿಟ್ಟಿನಲ್ಲಿ ತರಬೇತಿ ನೀಡುವುದು | R |
| 9 | ಶೌಚಾಲಯ ಬಳಸುವ ಸಂದರ್ಭದಲ್ಲಿ, ವಿಶೇಷ ಅಗತ್ಯತೆವುಳ್ಳ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಶಿಕ್ಷಕರು ಅಥವಾ ಪರಿಚಾರಕರು ಅವರ ಜೊತೆಯಲ್ಲಿರುವುದು | | | M |
| 10 | ದೈಹಿಕ ಶಿಕ್ಷಕರು ವಿದ್ಯಾರ್ಥಿಗಳನ್ನು ಕ್ರೀಡೆಗಳಲ್ಲಿ ಅವರ ದೈಹಿಕ ಸಾಮರ್ಥ್ಯ ಮತ್ತು ಆರೋಗ್ಯ ಸಮಸ್ಯೆಗಳನ್ನು ಗಮನಿಸಿ ತೊಡಗಿಸುವುದು.<br><br>ಶಾಲಾ ಪ್ರಾಧಿಕಾರ ಅಥವಾ ತಂದೆತಾಯಿ/ ಪೋಷಕರ ಅನುಮತಿಯಿಲ್ಲದೆ ಶಾಲೆ ಅವಧಿಯಲ್ಲಿ ಅಥವಾ ಮುಗಿದ ನಂತರ ಅಥವಾ ರಜಾ ದಿನಗಳಲ್ಲಿ ಯಾವುದೇ ದೈಹಿಕ ಶಿಕ್ಷಕರು ಅಥವಾ ಇತರೆ ತರಬೇತುದಾರರುಗಳಿಗೆ ಯಾವುದೇ | | ಪಾಲಕರು ಮತ್ತು ಮಕ್ಕಳಿಗೆ ಸದರಿ ವಿಷಯ ಕುರಿತು ಮಾಹಿತಿ/ ಅರಿವು ಮೂಡಿಸುವುದು.<br><br>ಮಕ್ಕಳ ಆರೋಗ್ಯ ಸಮಸ್ಯೆಗಳ ಬಗ್ಗೆ ಪೋಷಕರು ಶಾಲಾ ಆಡಳಿತಕ್ಕೆ ತಿಳಿಸುವುದು. | M |

| | | | | |
|---|---|---|---|---|
| | ಬಾಲಕಿ ಅಥವಾ ಬಾಲಕರಿಗೆ ಒಂಟಿಯಾಗಿ ಕ್ರೀಡಾ ಕೊಠಡಿಯಲ್ಲಿ ತರಬೇತಿ ನೀಡಲು ಅವಕಾಶ ನೀಡತಕ್ಕದಲ್ಲ. | | | |
| 11 | ಶಾಲೆಯು ತನ್ನ ಎಲ್ಲಾ ಮಕ್ಕಳು ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಂಬಿಕೆಯಿಂದ ಹಂಚಿಕೊಳ್ಳಲು ಅವಕಾಶ ನೀಡುತ್ತದೆ. | | ಮಕ್ಕಳು ಶಿಕ್ಷಕರ ಗಮನಕ್ಕೆ ತಂದಿರುವ ತಮ್ಮ ವೈಯಕ್ತಿಕ ಮತ್ತು ಗೌಪ್ಯ ಸ್ವರೂಪದ ಸಮಸ್ಯೆಗಳ ಸಂಖ್ಯೆ ಮತ್ತು ಅವುಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳು. | R |

| ವಿಭಾಗ IV–ಡಿ ತುರ್ತು ಸನ್ನದ್ಧತೆ ಮತ್ತು ವಿಪತ್ತು ನಿರ್ವಹಣೆ | | | | |
|---|---|---|---|---|
| **ಕ್ರ.ಸಂ** | **ಸೂಚಕಗಳು** | **ಹೌದು/ ಇಲ್ಲ** | **ಷರಾ** | **ಕಡ್ಡಾಯ/ ಶಿಫಾರಸ್ಸು ಮಾಡಲಾದುದು** |
| 1 | ತುರ್ತು ಸಂದರ್ಭಗಳಲ್ಲಿ ಪರಿಣಾಮಕಾರಿ ಮತ್ತು ಸ್ಪಷ್ಟ ಸಂವಹನವನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ಮಕ್ಕಳು ಸುಲಭವಾಗಿ ಅರ್ಥಮಾಡಿಕೊಳ್ಳುವ ಶಬ್ದಕೋಶವನ್ನು ಶಾಲೆ ಅಭಿವೃದ್ಧಿ ಪಡಿಸುವುದು ಮತ್ತು ಅದನ್ನು ನಿಯಮಿತವಾಗಿ ನಡೆಯು ತುರ್ತು ಡ್ರಿಲ್‌ಗಳಲ್ಲಿ ಬಳಸುವುದು. | | | R |
| 2 | ಅಪಾಯದ ಸಂದರ್ಭದಲ್ಲಿ ಜನರನ್ನು ತೆರವುಗೊಳಿಸುವ ಯೋಜನೆಯ ರೇಖಾ ಚಿತ್ರವನ್ನು (evacuation plan) ಶಾಲಾ ಕಟ್ಟಡದಲ್ಲಿರುವ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಲಾಗಿದೆ. | | | M |

| | | | | |
|---|---|---|---|---|
| | ವಿಪತ್ತಿನ ಸಂದರ್ಭದಲ್ಲಿ ವಿಕಲಚೇತನ ಮಕ್ಕಳನ್ನು ತೆರವುಗೊಳಿಸಲು ಮತ್ತು ನೂಕುನುಗ್ಗಲನ್ನು ತಡೆಯಲು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತುರ್ತು ತೆರವು ಕವಾಯತು (evacuation drill) ತರಬೇತಿ ಪಡೆದಿದ್ದಾರೆ.<br><br>ವಿಪತ್ತು/ತುರ್ತು ಸಂದರ್ಭಗಳಲ್ಲಿ ಸೇರಬೇಕಾದ ಸ್ಥಳದ (assembly point) ಬಗ್ಗೆ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು. | | | |
| 3 | ಅಗ್ನಿ ದುರಂತ, ಕಟ್ಟಡ ಅಥವಾ ಗೋಡೆ ಕುಸಿತ, ಪ್ರವಾಹ, ವಿದ್ಯುತ್ ಅಪಘಾತ ಇತ್ಯಾದಿ ತುರ್ತು ಸಂದರ್ಭಗಳನ್ನು ಎದುರಿಸಲು ಸಿಬ್ಬಂದಿ ವರ್ಗದವರು ತರಬೇತಿಯನ್ನು ಪಡೆದಿದ್ದಾರೆ. | | ರಾಷ್ಟ್ರೀಯ ವಿಪತ್ತು ನಿರ್ವಹಣಾ ನೀತಿ, 2009ರ ವಿಭಾಗ 10.2.2: ಶಾಲೆಗಳಲ್ಲಿ ವಿಪತ್ತು ನಿರ್ವಹಣಾ ತರಬೇತಿಯನ್ನು ನೀಡಲು ಮಹತ್ವ ನೀಡುವುದು:<br>http://www.ndma.gov.in/images/guidelines/national-dm-policy2009.pdf | M |
| 4 | ನಿಯಮಗಳಿಗೆ ಅನುಸಾರವಾಗಿ, ಸೂಕ್ತ ಸ್ಥಳಗಳಲ್ಲಿ ಸಾಕಷ್ಟು ಅಗ್ನಿಶಾಮಕ ಸಾಧನಗಳನ್ನು ಅಳವಡಿಸಲಾಗಿದೆ ಮತ್ತು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಅವುಗಳನ್ನು ಬಳಸುವ ವಿಧಾನಗಳನ್ನು ಅರಿತಿದ್ದಾರೆ | | ಅಗ್ನಿಶಾಮಕ ಸಾಧನವು ಬಳಸುವ ಸ್ಥಿತಿಯಲ್ಲಿರಬೇಕು ಅಗ್ನಿಶಾಮಕ ಸಾಧನವನ್ನು ನಿಯತಕಾಲಿಕವಾಗಿ ನಿರ್ವಹಣೆ ಮಾಡುವುದರ ಜೊತೆಗೆ ಈ ಹಿಂದೆ ನಿರ್ವಹಣೆ ಮಾಡಿದ ದಿನಾಂಕವನ್ನು ಭಾರತೀಯ ಗುಣಮಟ್ಟ ದಳದ ನಿರ್ದೇಶನ– ಶಾಲೆಗಳಲ್ಲಿ ಅಗ್ನಿ ದುರಂತದ ಸುರಕ್ಷಾ ನೀತಿ ಸಂಹಿತೆಗೆ ಅನುಗುಣವಾಗಿ ನಮೂದಿಸಿರಬೇಕು :<br>https://law.resource.org/pub/in/bis/S03/is.14435.1997.pdf | M |

| | | | | |
|---|---|---|---|---|
| 5 | ಆಡಳಿತ ವರ್ಗದ ಸದಸ್ಯರು, ಶಿಕ್ಷಕರು ಮತ್ತು ಹಿರಿಯ ವಿದ್ಯಾರ್ಥಿಗಳನ್ನು ಒಳಗೊಂಡಿರುವ ಒಂದು **ಶಾಲಾ ವಿಪತ್ತು ಪ್ರತಿಕ್ರಿಯಾ ತಂಡ**ವನ್ನು ಶಾಲೆಯು ಹೊಂದಿದೆ ಮತ್ತು ವಿಪತ್ತು ನಿರ್ವಹಣೆ ಯೋಜನೆಗಳ ಬಗ್ಗೆ ಅವರಿಗೆ ಅರಿವು ನೀಡಲಾಗಿದೆ. | | ಶಾಲಾ ಸುರಕ್ಷತೆಗಾಗಿ ವಿಪತ್ತು ನಿರ್ವಹಣಾ ಸಚಿವಾಲಯವು ಹೊರಡಿಸಿರುವ ಮಾರ್ಗಸೂಚಿಗಳನ್ನು ಶಾಲೆಗಳು ಪಾಲಿಸುವುದು: http://www.ndma.gov.in/images/pdf/SchoolSafety.pdf | R |
| 6 | ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಸಿಪಿಆರ್ (cardio pulmonary resuscilation) ಮತ್ತು ಪ್ರಥಮ ಚಿಕಿತ್ಸಾ ತರಗತಿಗಳನ್ನು ನಡೆಸಲಾಗಿದೆ.<br><br>ತುರ್ತು ದೂರವಾಣಿ ಸಂಖ್ಯೆಗಳಾದ ಪೊಲೀಸ್–100, ಅಗ್ನಿ–101, ಆಂಬುಲೆನ್ಸ್–108 ಗಳನ್ನು ಶಾಲೆಯ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸುವುದು.<br><br>ಶಾಲಾ ಸಿಬ್ಬಂದಿಗಳು ಆಘಾತ/ವಿಪತ್ತಿನ ನಂತರದಲ್ಲಿ ವಹಿಸಬೇಕಾದ ಮಧ್ಯಸ್ಥಿಕೆ ಕ್ರಮಗಳು ಮತ್ತು ಉಲ್ಲೇಖ ವ್ಯವಸ್ಥೆಗಳ ಬಗ್ಗೆ ತರಬೇತಿಯನ್ನು ಹೊಂದಿದ್ದಾರೆ. | | | M<br><br>M<br><br>R |

| ವಿಭಾಗ V–ಸೈಬರ್ ಸುರಕ್ಷತೆ | | | | |
|---|---|---|---|---|
| ಕ್ರ. ಸಂ | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಮಕ್ಕಳು ಕಂಪ್ಯೂಟರ್ ಕೊಠಡಿಗಳನ್ನು ಮತ್ತು ವಿದ್ಯುನ್ಮಾನ ಹಾಗೂ ತಾಂತ್ರಿಕ ಸಾಧನಗಳನ್ನು ಬಳಸುವಾಗ ಶಿಕ್ಷಕರು ಯಾವಾಗಲೂ ಮೇಲ್ವಿಚಾರಣೆ ನಡೆಸುವರು | | ಮಕ್ಕಳ ವಿರುದ್ಧದ ಸೈಬರ್ ಅಪರಾಧಗಳನ್ನು ನಿಯಂತ್ರಿಸುವಲ್ಲಿ ಮತ್ತು ಅವುಗಳ ವಿರುದ್ಧ ಹೋರಾಡಲು ಗೃಹ ಸಚಿವಾಲಯದ ಸಲಹಾ ಮಂಡಳಿಯ ನಿರ್ದೇಶನಗಳು. ಸೈಬರ್ ಅಪರಾಧಗಳ ವಿರುದ್ಧದ ಹೋರಾಟದಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಕ್ರಿಯಾಶೀಲವಾದುದು. *http://www.mha.nic.in/ sites/upload files/mha /files/CS-Adv-160112.pdf* | M |
| 2 | ವಯಸ್ಕರು ಬಳಸುವ ಅಂತರ್ಜಾಲ ಸೈಟ್‌ಗಳನ್ನು ಮಕ್ಕಳು ಬಳಸುವುದನ್ನು ನಿರ್ಬಂಧಿಸುವ ಇಂಟರ್‌ನೆಟ್ ಭದ್ರತಾ ವ್ಯವಸ್ಥೆ ಜಾರಿಯಲ್ಲಿದೆ. ಶಾಲೆಯಲ್ಲಿ ಸಾಮಾಜಿಕ ಜಾಲತಾಣಗಳನ್ನು ಯಾವಾಗಲೂ ನಿರ್ಬಂಧಿಸಲಾಗಿದೆ. | | ಶಾಲೆಯಲ್ಲಿ ಮೊಬೈಲ್ ಫೋನ್ ನಲ್ಲಿ ಅಂತರ್ಜಾಲ ಬಳಸುವುದನ್ನು ನಿಷೇಧಿಸಿರುವ ಬಗ್ಗೆ ಸಿಬ್ಬಂದಿಗೆ ಸೂಚನೆ ನೀಡಿದೆ. | M |
| 3 | ತಂತ್ರಜ್ಞಾನದ ಸುರಕ್ಷಿತ ಬಳಕೆ ಬಗ್ಗೆ ಮತ್ತು ಡಿಜಿಟಲ್ ನಾಗರಿಕ–ಮೊಬೈಲ್, ಎಸ್‌ಎಂಎಸ್, ಇಂಟರ್‌ನೆಟ್, ಇ–ಮೇಲ್ ಅಥವಾ ನೆಟ್ ಚ್ಯಾಟ್‌ಗಳ ಬಳಕೆ, ಅಶ್ಲೀಲ ಚಿತ್ರಗಳ ಬಳಕೆಯ ಪರಿಣಾಮ ಮತ್ತು ಅಸುರಕ್ಷಿತ ಮತ್ತು ಅಪಾಯಕಾರಿ ವರ್ತನೆಗಳನ್ನು ಮಾಡುವಾಗ ಇರಬೇಕಾದ ಜವಾಬ್ದಾರಿ ಮತ್ತು ಸಂವೇಧನಾ ಶೀಲತೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಶಿಕ್ಷಣ ನೀಡಲಾಗಿದೆ. | | ಆರಂಭಿಕ ಹಂತದಲ್ಲಿ ತರಬೇತಿಯನ್ನು ನೀಡಲು ತಜ್ಞರನ್ನು ಸಂಪರ್ಕಿಸುವುದು ಮತ್ತು ತರಬೇತಿ ದಿನಾಂಕದ ದಾಖಲೆಯನ್ನು ನಿರ್ವಹಿಸುವುದು.<br><br>ಶಾಲೆಯಲ್ಲಿ ಬೆದರಿಕೆ ಹಾಕುವುದು ಮತ್ತು ರ್‍ಯಾಗಿಂಗ್ ಕುರಿತ CBSE ಮಾರ್ಗಸೂಚಿಗಳು (ಸೈಬರ್ ಬೆದರಿಕೆಯನ್ನು, ಬೆದರಿಕೆ ಹಾಕುವುದರ ಅಡಿಯಲ್ಲಿ ಪರಿಗಣಿಸಲಾಗುತ್ತದೆ.) http://ptlb.in/ccici/wp-content/uploads/2015/03/CBSE-Guidelines-For-Prevention-Of- | M |

| | | | | |
|---|---|---|---|---|
| 4 | ವಿದ್ಯಾರ್ಥಿಗಳಿಂದ ಇತರ ವಿದ್ಯಾರ್ಥಿಗಳ ಮೇಲೆ ಅಥವಾ ವಯಸ್ಕರ ಮೇಲೆ ಆಗುವ ಸೈಬರ್ ದುರುಪಯೋಗ, ಬೆದರಿಕೆ ಹಾಕುವುದು, ಕಿರುಕುಳಗಳ ಪರಿಣಾಮ ಮತ್ತು ಇವುಗಳನ್ನು ತಡೆಯಲು ಮಾಹಿತಿ ತಂತ್ರಜ್ಞಾನ ಕಾಯ್ದೆ, ಬಾಲ ನ್ಯಾಯ ಕಾಯ್ದೆ, ಐಪಿಸಿ ಸೆಕ್ಷನ್ಸ್ ಗಳಡಿ ವಿಧಿಸಲಾಗುವ ದಂಢನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗಿದೆ | | Bullying-And-Ragging-In-Schools-9th-March-2015-Circular-No.-Acad.-17-2015.pdf | M |
| 5 | ಶಾಲೆಯಲ್ಲಿ ಸೈಬರ್ ಹಲ್ಲೆ ಅಥವಾ ಅಪರಾಧ ಪ್ರಕರಣಗಳನ್ನು ನಿರ್ವಹಿಸುವ ಕಾರ್ಯವಿಧಾನಗಳ ಬಗ್ಗೆ ಆಡಳಿತ ಮಂಡಳಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು. | | ಶಾಲೆಯು ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆ ಸೈಬರ್ ಅಪರಾಧ ವಿಭಾಗವನ್ನು ಸಂಪರ್ಕಿಸುವುದು (ಮಾಹಿತಿ ಮತ್ತು ತಂತ್ರಜ್ಞಾನ ಕಾಯ್ದೆ 2000 ಹಾಗೂ ಅದರ ತಿದ್ದುಪಡಿ ಕಾಯ್ದೆ 2008 ರಲ್ಲಿನ ಅವಕಾಶಗಳ ಬಗ್ಗೆ ಅರಿವನ್ನು ಹೊಂದುವುದು ಸೂಕ್ತ) | M |
| 6 | ತಂತ್ರಜ್ಞಾನ, ಅಂತರ್ಜಾಲ, ವಿದ್ಯಾರ್ಥಿಗಳ ಅಪಾಯಕಾರಿ ವರ್ತನೆಗಳ ನಿಯಂತ್ರಣ ಮತ್ತು ಪರಿಹಾರಕ್ಕೆ ಕಾರ್ಯತಂತ್ರಗಳು, ಮುಂತಾದವುಗಳ ಬಗ್ಗೆ ಪೋಷಕರಿಗೆ ಅರಿವು ಮೂಡಿಸುವುದು. | | ಈ ಮಾಹಿತಿಯನ್ನು ಪೋಷಕರಿಗೆ ಕರಪತ್ರದ ಮೂಲಕ ನೀಡಿ ಸಹಿ ಪಡೆಯುವುದು. | R |
| 7 | ಸೈಬರ್ ಅಪರಾಧ/ಕಿರುಕುಳ ಪ್ರಕರಣಗಳನ್ನು ಸೂಕ್ಷ್ಮಸಂವೇದನೆ ಮತ್ತು ಗೌಪ್ಯತೆಯಿಂದ ನಿರ್ವಹಿಸುವುದು.<br>ಶಾಲೆಯು ಇಂತಹ ಪ್ರಕರಣಗಳ ದಾಖಲಾತಿಯನ್ನು ನಿರ್ವಹಿಸುವುದು. | | ಮಕ್ಕಳು, ಶಾಲೆ ಮತ್ತು ಕುಟುಂಬಗಳಿಗೆ ಆಗುವ ಹಾನಿಯನ್ನು ಕಡಿಮೆ ಮಾಡಲು ಇದು ಮುಖ್ಯವಾಗಿದೆ. | M |
| 8 | ಶಾಲೆಯು ಇ–ತ್ಯಾಜ್ಯವನ್ನು ಸರಿಯಾಗಿ ನಿರ್ವಹಿಸುತ್ತಿದೆ ಮತ್ತು ವಿದ್ಯಾರ್ಥಿಗಳಿಗೆ ಈ ಕುರಿತು ತರಬೇತಿಯನ್ನು ನೀಡಲಾಗಿದೆ | | ಇ–ತ್ಯಾಜ್ಯ ನಿರ್ವಹಣೆ ನಿಯಮಗಳು 2011ರ ಪ್ರಕಾರ ಶಾಲೆಗಳು ಇ–ತ್ಯಾಜ್ಯವೂ ಸೇರಿದಂತೆ ಇತರೆ ತ್ಯಾಜ್ಯಗಳ ನಿರ್ವಹಣೆಗೆ ಬದ್ಧವಾಗಿವೆ. ಈ ಕುರಿತು ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ | M |

| | | | | |
|---|---|---|---|---|
| | | | ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳ ಸಹಾಯವನ್ನು ಪಡೆಯುವುದು. ಈ ಕುರಿತ ಮಾಹಿತಿ: http://www.moef.nic.in/downloads/rules-and-regulations/1035e_eng.pdf ರಲ್ಲಿ ಲಭ್ಯವಿದೆ. | |

ಆನ್‌ಲೈನ್ ಶೋಷಣೆಯ ಬಗ್ಗೆ ಹೇಗೆ ವ್ಯವಸಹರಿಸಬೇಕೆಂಬುದರ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಕೆಳಗೆ ಒದಗಿಸಲಾದ ಸಂಪರ್ಕಕೊಂಡಿಯ ವಿಳಾಸವನ್ನು ದಯವಿಟ್ಟು ನೋಡಿ

**"ಆನ್‌ಲೈನ್ ಶೋಷಣೆಯಿಂದ ಸುರಕ್ಷಿತವಾಗಿರಿ" (ಮಕ್ಕಳಿಗಾಗಿ)**

**ECPAT** ಅವರಿಂದ http://ecpat.net/sites/default/files/Guide%20protectiononline layout%203 home 2014Oct31 ONLINE.pdf

## ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದೊಯ್ಯುವ ವಿವಿಧ ಬಗೆಯ ಒಪ್ಪಂದದ ವಾಹನಗಳಾದ ಮೋಟಾರು ಕ್ಯಾಬ್/ ಮ್ಯಾಕ್ಸಿ ಕ್ಯಾಬ್/ ಓಮಿನಿ ಬಸ್‌ಗಳು ಕಡ್ಡಾಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳು

ಭಾರತದ ಗೌರವಾನ್ವಿತ ಸರ್ವೋಚ್ಛ ನ್ಯಾಯಾಯಲವು ರಿಟ್ ಅರ್ಜಿ ಸಂಖ್ಯೆ (Civil) 13029 of 1985 ರಲ್ಲಿ ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದೊಯ್ಯುವ ಶಾಲಾ ವಾಹನಗಳಲ್ಲಿ ವಹಿಸಬೇಕಾದ ಕ್ರಮಗಳ ಬಗ್ಗೆ ವಿಸ್ತಾರವಾದ ಸೂಚನೆಗಳನ್ನು ನೀಡಿದೆ. ಭಾರತದ ಗೌರವಾನ್ವಿತ ಸರ್ವೋಚ್ಛ ನ್ಯಾಯಾಯಲದ ಆದೇಶದನ್ವಯ ಶಾಲಾ ಮಕ್ಕಳನ್ನು ಕರೆದೊಯ್ಯುವ ವಿವಿಧ ಬಗೆಯ ಒಪ್ಪಂದದ ವಾಹನಗಳಾದ ಮೋಟಾರು ಕ್ಯಾಬ್/ ಮ್ಯಾಕ್ಸಿ ಕ್ಯಾಬ್/ ಓಮಿನಿ ಬಸ್‌ಗಳು ಕಡ್ಡಾಯವಾಗಿ ಪಾಲಿಸಲು, ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1. ವಾಹನವು 'ಪ್ರಯಾಣಿಕರ ಸಾರಿಗೆ ವಾಹನ' ಎಂಬುದಾಗಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಸೂಕ್ತ ಪರವಾನಗಿಯನ್ನು ಹೊಂದಿರಬೇಕು.
2. ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳ ಮುಂಬಾಗ ಮತ್ತು ಹಿಂಬಾಗದಲ್ಲಿ 'ಶಾಲಾ ಕರ್ತವ್ಯದ ಮೇರೆಗೆ' ಎಂದು ಶಾಶ್ವತವಾಗಿ ಬರೆಸುವುದು.
3. ಶಾಲಾ ವಾಹನವು ಪರವಾನಗಿ ನೀಡಲಾದ ಆಸನ ಸಾಮರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಕರೆದೊಯ್ಯತಕ್ಕದ್ದಲ್ಲ. ಯಾವುದೇ ಮಗು ಬೇರೆಯವರ ತೊಡೆಯ ಮೇಲೆ ಕೂರದಂತೆ ನೋಡಿಕೊಳ್ಳುವುದು.
4. ವಾಹನದಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡುವುದು.
5. ಸಾಧ್ಯವಿರುವೆಡೆ ಆಸನ ಬೆಲ್ಟ್‌ಗಳನ್ನು ಕಡ್ಡಾಯವಾಗಿ ಜೋಡಿಸುವುದು.
6. ವಾಹನದಲ್ಲಿ ಶಾಲೆಯ ಹೆಸರು ಮತ್ತು ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂಧಿಸುವುದು.
7. ಶಾಲಾ ವಾಹನವನ್ನು ಚಾಲನೆಮಾಡುವ ಚಾಲಕ ಅಂತಹ ವಾಹನಗಳ ಚಾಲನೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವಹೊಂದಿರುವುದು ಮತ್ತು ಆತನ ಮೇಲೆ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವ ಅಪರಾಧಗಳು ವರದಿಯಾಗಿರಬಾರದು.
8. ಶಾಲಾ ಮಕ್ಕಳನ್ನು ಕರೆದೊಯ್ಯುವ ಒಪ್ಪಂದದ ವಾಹನಗಳನ್ನು ಬಳಸುವಾಗ, ವಾಹನದ ಮಾಲೀಕರು ವಾಹನ ಚಾಲಕನ ಹೆಸರು ಮತ್ತು ವಾಹನದ ವಿವರಗಳನ್ನು ಸ್ಥಳೀಯ ಪೋಲಿಸ್ ಠಾಣೆಯ ಪಿ.ಸಿ ಮತ್ತು ಡಿಸಿ (ಟ್ರಾಫಿಕ್)/ ಜಿಲ್ಲೆಯ ಎಸ್‌ಪಿರವರಿಗೆ ನೀಡುವುದು.
9. ಮಕ್ಕಳು ಸುರಕ್ಷಿತವಾಗಿ ಪ್ರಯಾಣಿಸುವಂತೆ ನೋಡಿಕೊಳ್ಳಲು ಮತ್ತು ಅವರು ಕ್ಷೇಮವಾಗಿ ವಾಹನವನ್ನು ಹತ್ತುವುದಕ್ಕೆ ಮತ್ತು ಇಳಿಯುವುದಕ್ಕೆ ನೆರವು ನೀಡಲು ವಾಹನದಲ್ಲಿ ಒಬ್ಬರು ಸಹಾಯಕರನ್ನು ನೇಮಿಸುವುದು.

*****

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ **ಮಕ್ಕಳ ರಕ್ಷಣಾ ನೀತಿ 2016ನ್ನು** ರಚಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 358 ಪಿಜಿಸಿ 2014, ದಿನಾಂಕ: 11.11.2014.
2. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಪತ್ರ ಸಂಖ್ಯೆ: ಕೆ.ಎಸ್.ಐ.ಸಿ.ಪಿ.ಎಸ್/ಆಡಳಿತ/ಸಿಪಿಪಿ/42/2014–15, ದಿ: 22.11.2014, 08.12.2014, 02.12.2014, 29.12.2014, 03.03.2015,
3. ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ: ಸಿ/168/2016, ದಿನಾಂಕ: 20.04.2016.

**ಪ್ರಸ್ತಾವನೆ:**

ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ರಚಿಸಲಾಗಿರುವ ಉನ್ನತ ಅಧಿಕಾರಿಗಳ ಸಮಿತಿ ಸಭೆಯು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 11.11.2014ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ತಯಾರಿಸಿರುವ Draft Child Protection Policy for School Safety in Karnataka ನ್ನು ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನೊಳಗೊಂಡ ವರದಿಯನ್ನು ಸಲ್ಲಿಸುವಂತೆ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಶಿಕ್ಷಣ ಇಲಾಖೆಯ ಪತ್ರದಲ್ಲಿ ಕೋರಲಾಗಿತ್ತು.

ಕರ್ನಾಟಕ ರಾಜ್ಯದ ಬೆಂಗಳೂರು ನಗರ ಮತ್ತು ಇತರೆ ಸ್ಥಳಗಳಲ್ಲಿನ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಶೋಷಣೆ ಮತ್ತು ದುರುಪಯೋಗಕ್ಕೊಳಗಾಗುವ ಪ್ರಕರಣಗಳು ಹೆಚ್ಚುತ್ತಿರುವ ಸಂಗತಿ ಬೆಳಕಿಗೆ ಬಂದಿವೆ. ಇದನ್ನು ಮನಗಂಡು ರಾಜ್ಯ ಸರ್ಕಾರ ಸದರಿ ಪ್ರಕರಣಗಳಲ್ಲಿ ನೊಂದವರಿಗೆ ಅಲ್ಪಾವಧಿ ಪರಿಹಾರದ ಬದಲು ಪ್ರಕರಣಗಳು ಮರುಕಳಿಸದಂತೆ ಕ್ರಮ ವಹಿಸಲು ಶಾಶ್ವತ ಕಾರ್ಯವಿಧಾನವನ್ನು ಅಳವಡಿಸುವ ನಿಟ್ಟಿನಲ್ಲಿ, ಅದರಲ್ಲೂ ವಿಶೇಷವಾಗಿ ಶಾಲೆಗಳಲ್ಲಿ ಮಕ್ಕಳು ಶೋಷಣೆಗೊಳಗಾಗುವುದನ್ನು ತಪ್ಪಿಸಲು, ಕಡ್ಡಾಯವಾಗಿ ಅನುಸರಿಸಬೇಕಾದ ಕ್ರಮಗಳನ್ನೊಳಗೊಂಡ ನೀತಿಯನ್ನು ರೂಪಿಸಲು ಯೋಜಿಸಿದೆ.

ಈ ಉದ್ದೇಶಕ್ಕಾಗಿ ವಿಶೇಷ ತಜ್ಞರನ್ನು ಹಾಗೂ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಕಾರ್ಯನಿರತ ಗುಂಪು ಮಾರ್ಗಸೂಚಿಗಳನ್ನು ಒಳಗೊಂಡ ಕರಡು ನೀತಿಯನ್ನು ಸಿದ್ಧಪಡಿಸಿ ದಿನಾಂಕ:17.10.2014ರಂದು ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಸಮಾಲೋಚನಾ ಸಭೆಯಲ್ಲಿ ಮಂಡಿಸಿದೆ. ಸದರಿ ಸಮಾಲೋಚನಾ ಸಭೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂದಿನ ಪ್ರಧಾನ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ನಡೆದಿದ್ದು, ಯುನಿಸೆಫ್‌ನ ಮಕ್ಕಳ ರಕ್ಷಣಾ ಘಟಕ, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಬಾಲನ್ಯಾಯ ಕಾಯ್ದೆಯ ಅನುಷ್ಠಾನದಲ್ಲಿ ಕಾರ್ಯನಿರತವಾಗಿರುವ ಅಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿರುತ್ತಾರೆ.

ಮಕ್ಕಳ ಹಿತದೃಷ್ಟಿಯಿಂದ ಹಾಗೂ ಮಕ್ಕಳ ರಕ್ಷಣೆಯನ್ನು ನಿಜವಾದ ಅರ್ಥದಲ್ಲಿ ಕಾರ್ಯರೂಪಕ್ಕೆ ತರಲು ಸಮಗ್ರ ಮಾರ್ಗಸೂಚಿಯನ್ನು ಈ ನೀತಿಯು ಒಳಗೊಂಡಿದ್ದು, ಇದರಲ್ಲಿ ಭಾಗವಹಿಸುವ ಎಲ್ಲಾ ಪಾಲುದಾರರು, ಸಹಭಾಗಿದಾರರು (ಸ್ಟೇಕ್ ಹೋಲ್ಡರ್ಸ್) ಗಳಿಗೆ ನಿರ್ದೇಶನ ಮತ್ತು ಕಾನೂನುಗಳು, ಯೋಜನೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಮಾರ್ಗದರ್ಶನವನ್ನು ಒಳಗೊಂಡಿರುತ್ತದೆ.

ಸದರಿ ಮಕ್ಕಳ ರಕ್ಷಣಾ ನೀತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ತನ್ನ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಅಳವಡಿಸಲಾಗಿತ್ತು.

ತದನಂತರ, ನೀತಿಯ ಮಾರ್ಗಸೂಚಿಗಳು ಹಾಗೂ ಸ್ವಯಂ ಮೌಲ್ಯಮಾಪನೆಗಾಗಿ ಪರಿಶೀಲನಾ ಪಟ್ಟಿ ಮುಂತಾದ ಸದರಿ ನೀತಿಯ ಎಲ್ಲಾ ಅಂಶಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಡಿ.ಎಸ್.ಇ.ಆರ್.ಟಿ., ಸಂಸ್ಥೆಯು ಏರ್ಪಡಿಸಿದ್ದ ತಜ್ಞರ ಸಭೆಯಲ್ಲಿ ತೀವ್ರವಾಗಿ ಸಮಾಲೋಚಿಸಲಾಗಿರುತ್ತದೆ. ತರುವಾಯ, ಬಿ–ಪ್ಯಾಕ್ ಸಂಸ್ಥೆಯು ಶಾಲೆಗಳ ಮಕ್ಕಳೊಂದಿಗೆ, ಇನ್‌ವೆಂಚರ್ ಅಕಾಡೆಮಿ ಮತ್ತು ಕನ್ಸರ್ನ್ಡ್‌ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ವಿವಿಧ ಹಿನ್ನೆಲೆಯುಳ್ಳ ಮಕ್ಕಳೊಂದಿಗೆ, ಎನ್‌ಫೋಲ್ಡ್ ಸಂಸ್ಥೆಯ ವಿಶೇಷ ಅಗತ್ಯವುಳ್ಳ ಮಕ್ಕಳೊಂದಿಗೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯು ಆಯೋಜಿಸಿದ 700 ಸರ್ಕಾರ/ಸರ್ಕಾರೇತರ/ಅನುಧಾನಿತ/ಶಾಲೆಗಳ ಪ್ರತಿನಿಧಿಗಳೊಂದಿಗೆ ಸದರಿ ನೀತಿಯನ್ನು ಅಂತಿಮಗೊಳಿಸುವ ಮುನ್ನ ಚರ್ಚೆಗೆ ಒಳಪಡಿಸಲಾಗಿದೆ. ದಿನಾಂಕ:09.12.2014ರಂದು ಮಕ್ಕಳ ಸುರಕ್ಷಾ ನೀತಿ ಕುರಿತು ಕಾರ್ಯನಿರತ ಗುಂಪಿನವರು (ಕರಡು ನೀತಿ ರಚನಾ ಸಮಿತಿ) ವಿವಿಧ ಇಲಾಖೆಗಳೊಂದಿಗೆ, ಸ್ವಯಂ ಸೇವಾ ಸಂಸ್ಥೆ, ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರು ಮತ್ತು ನಿಮಾನ್ಸ್ ಸಂಸ್ಥೆಯ ತಜ್ಞರೊಂದಿಗೆ ಅಂತಿಮ ಸುತ್ತಿನ ಚರ್ಚೆ ನಡೆಸಿರುತ್ತಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ, ಪೊಲೀಸ್, ನ್ಯಾಯಾಂಗ, ಜಿಲ್ಲಾಡಳಿತ, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆ, ಸಾರಿಗೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಪರಿಶಿಷ್ಟ ಜಾತಿ/ಪಂಗಡ ಇಲಾಖೆಗಳಂತಹ ಪ್ರಮುಖ ಇಲಾಖೆಗಳು ನಿರ್ವಹಿಸಬೇಕಾದ ಪಾತ್ರಗಳು ಮತ್ತು ಜವಾಬ್ದಾರಿಗಳು ಹಾಗೂ ಘಟನೆ ನಂತರ ವಹಿಸಬೇಕಾದ ಕ್ರಮಗಳು ಮತ್ತು ನೀಡಬೇಕಾದ ದಂಡನೆ/ಶಿಕ್ಷೆಯ ಪ್ರಮಾಣವನ್ನು ಒಳಗೊಂಡಂತೆ, ಮೇಲ್ಕಾಣಿಸಿದ ಎಲ್ಲಾ ಸಭೆಗಳಿಂದ ಹೊರಹೊಮ್ಮಲಾದ ಶಿಫಾರಸ್ಸುಗಳು ಹಾಗೂ ಸಲಹೆಗಳನ್ನು ಒಳಗೊಂಡಂತೆ, ಅಂತಿಮ ಕರಡು ನೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಪ್ರತಿಯೊಂದು ಶಾಲೆಯೂ, ಅಂದರೆ ಅದು ಸರ್ಕಾರಿ ಶಾಲೆಯೇ ಆಗಿರಲಿ, ಅನುದಾನಿತ ಶಾಲೆಯೇ ಆಗಿರಲಿ, ಖಾಸಗಿ ಶಾಲೆಯೇ ಆಗಿರಲಿ, ಯಾವುದೇ ಮಂಡಳಿಗಳು ಅಥವಾ ಟ್ರಸ್ಟ್ ಮೂಲಕ ನಡೆಸುತ್ತಿರುವ ಶಾಲೆಯೇ ಆಗಿರಲಿ, ಸುರಕ್ಷೆ ಕುರಿತಂತೆ ಮಕ್ಕಳು/ಪೋಷಕರು ಮತ್ತು ಸರ್ಕಾರಕ್ಕೆ ಜವಾಬ್ದಾರರಾಗಿಸಲು, ಅಲ್ಲದೆ, ಏಕಕಾಲಿಕವಾಗಿ ತಕ್ಷಣದ ಶಿಶು ಸಂವೇದಿತ ಪ್ರತಿಕ್ರಿಯಾತ್ಮಕ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಕೈಗೊಳ್ಳಲು ನೆರವಾಗುವಂತೆ ಸಕಾಲಕ್ಕೆ ಸ್ಪಂದಿಸುವ ಹಾಗೂ ದೂರು ನಿವಾರಣೆ ವ್ಯವಸ್ಥೆಯನ್ನು ಸಮನ್ವಯಾತ್ಮಕ ಕ್ರಮಗಳ ಮೂಲಕ ಜಾರಿಗೆ ತರುವ ಕುರಿತು ಖಚಿತಪಡಿಸಿಕೊಳ್ಳಲು ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ಮಕ್ಕಳಿಗಾಗಿ ಸುರಕ್ಷಾ ನೀತಿಯು ಶ್ರಮಿಸುತ್ತದೆ.

ಕರ್ನಾಟಕ ಶಾಲೆಗಳಲ್ಲಿನ ಮಕ್ಕಳ ಸುರಕ್ಷಾ ನೀತಿಯನ್ನು ಪ್ರತಿ ವರ್ಷ ಪರಿಶೀಲನೆ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇವರು ನೋಡಲ್ ಅಧಿಕಾರಿಯಾಗಿರುತ್ತಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಸಾರ್ವಜನಿಕ ಶಿಕ್ಷಣ ಆಯುಕ್ತರು ಈ ಪರಿಶೀಲನೆಗೆ ಅನುವು ಮಾಡಿಕೊಡುವರು.

ಸಂಬಂಧಿಸಿದ ಸರ್ಕಾರಿ ಇಲಾಖೆಗಳು, ಶಿಕ್ಷಣ ಸಂಸ್ಥೆಗಳು, ಇತರ ಶಾಸನಬದ್ಧ ರಚನೆಗಳು, ವಿವಿಧ ಶಾಸನಗಳಡಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳು ಶಾಲೆಗಳಲ್ಲಿ ಮಕ್ಕಳ ಸುರಕ್ಷಾ ನೀತಿ ಕುರಿತಂತೆ ಕಾರ್ಯ

ವಿಧಾನಗಳು ಮತ್ತು ಸುರಕ್ಷಾ ಕ್ರಮಗಳನ್ನು ವ್ಯವಸ್ಥೆಯಲ್ಲಿ ಹಂತ ಹಂತವಾಗಿ ಅಳವಡಿಸಲು ಕ್ರಮ ಕೈಗೊಳ್ಳುವುದು. ಶಾಲೆಗಳಲ್ಲಿ ಸುರಕ್ಷಾ ಕ್ರಮಗಳ ಕುರಿತ ಸೂಚನೆಗಳನ್ನು ಪಾಲಿಸದೆ ಇರುವ ಸಂದರ್ಭಗಳಲ್ಲಿ ಉಚ್ಚ ನ್ಯಾಯಾಲಯದ ನಿರ್ದೇಶನಗಳ ಮೇರೆಗೆ ರಚಿಸಲಾಗಿರುವ ಉನ್ನತಾಧಿಕಾರಿ ಸಮಿತಿಯ ಅನುಮೋದನೆ ಪಡೆದು ದಂಡನೆ/ಶಿಕ್ಷೆಯ ಕ್ರಮಗಳನ್ನು ಅನುಷ್ಠಾನಗೊಳಿಸಲು ಕರಡು ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ ಈ ರೀತಿಯ ದಂಡನೆ ಅಥವಾ ಶಿಸ್ತು ಕ್ರಮ ಅಥವಾ ಇತರ ಯಾವುದೇ ಕ್ರಮಗಳನ್ನು ಕೈಗೊಂಡ ಸಂದರ್ಭಗಳಲ್ಲಿ ಮಕ್ಕಳಿಗೆ ತೊಂದರೆಯಾಗದಂತೆ, ಶಿಕ್ಷಣಕ್ಕೆ ಅಡಚಣೆಯಾಗದಂತೆ, ಮಗು ಸಂಕಷ್ಟ ಪರಿಸ್ಥಿತಿಗೆ ಒಳಗಾಗದಂತೆ ಖಚಿತಪಡಿಸಿಕೊಳ್ಳುವುದು.

ಮಕ್ಕಳ ಸ್ನೇಹಿ ಒಡನಾಟವನ್ನಾಧರಿಸಿದ ಒಂದು ಸಮಗ್ರ ನೀತಿಯು ರಾಜ್ಯದಲ್ಲಿನ ಮಕ್ಕಳ ರಕ್ಷಣೆಗೆ ತಳಪಾಯವಾಗಿದ್ದು, ಮಕ್ಕಳ ಹಿತದೃಷ್ಟಿಯಿಂದ ಈ ನೀತಿಯ ಅನುಷ್ಠಾನಕ್ಕೆ ತೊಡಗಿಸಿಕೊಂಡ ಸರ್ಕಾರಿ ಇಲಾಖೆಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ಒಳಗೊಂಡಂತೆ ಹಲವಾರು ಸಹಭಾಗಿದಾರರಿಗೆ ನಿರ್ದೇಶನಗಳನ್ನು ಒದಗಿಸಲು ಹಾಗೂ ಕಾನೂನು, ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ರಾಜ್ಯಕ್ಕೆ ಮಾರ್ಗದರ್ಶನ ನೀಡುವಂತಹ ಮಕ್ಕಳ ಸುರಕ್ಷತೆ ಕುರಿತ ಒಂದು ಸಮಗ್ರ ದೃಷ್ಟಿಕೋನವು ಮಕ್ಕಳ ಸಂರಕ್ಷಣೆಯನ್ನು ಸಾಕಾರಗೊಳಿಸಲು ಅತ್ಯಗತ್ಯವಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಶಿಕ್ಷಣ ಸಂಸ್ಥೆಗಳಿಗಾಗಿ ಕರ್ನಾಟಕ ಮಕ್ಕಳ ಸುರಕ್ಷತಾ ನೀತಿ 2016ನ್ನು ರೂಪಿಸಿದೆ.

ಕರ್ನಾಟಕ ರಾಜ್ಯದ ಶಾಲೆಗಳಲ್ಲಿ **"ಮಕ್ಕಳ ಸುರಕ್ಷತಾ ನೀತಿ, 2016"ನ್ನು** ರಚಿಸುವ ಬಗ್ಗೆ ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆ, ಶಿಕ್ಷಣ ಇಲಾಖೆಗಳಿಂದ ಅಭಿಪ್ರಾಯ ಪಡೆಯಲಾಗಿದೆ. ಹಾಗೂ ಒಳಾಡಳಿತ ಇಲಾಖೆ ಮತ್ತು ಸಾರಿಗೆ ಇಲಾಖೆಯಿಂದ ಕೆಲವೊಂದು ಸಲಹೆಗಳನ್ನು ಪಡೆಯಲಾಗಿದೆ.

ಮಕ್ಕಳ ಸುರಕ್ಷ ನೀತಿಯ ಬಗ್ಗೆ ದಿನಾಂಕ: 27.11.2015ರಂದು ರಾಜ್ಯ ಮಟ್ಟದಲ್ಲಿ ಮುಕ್ತ ಸಂವಾದವನ್ನು ಏರ್ಪಡಿಸಲು ನಿರ್ಣಯಿಸಿ ಸದರಿ ಸಂವಾದ ಕುರಿತು ವ್ಯಾಪಕ ಪ್ರಚಾರವನ್ನು ಹೆಚ್ಚು ಪ್ರಚಲಿತದಲ್ಲಿರುವ ವಿಜಯವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ: 23.11.2015ರಂದು ಮತ್ತು ದಿ ಹಿಂದೂ ಪತ್ರಿಕೆಯಲ್ಲಿ ದಿನಾಂಕ: 25.11.2015, ದಿ ಟೈಮ್ಸ್ ಆಫ್ ಇಂಡಿಯಾ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ಪ್ರಕಟಿಸುವ ಮೂಲಕ ಮೇಲಿನ ಕರಡು ನೀತಿ ಕುರಿತು ಸಾರ್ವಜನಿಕರಿಗೆ/ಶಿಕ್ಷಣ ಸಂಸ್ಥೆಗಳಿಗೆ ಮುಕ್ತ ಆಹ್ವಾನ ನೀಡಲಾಗಿತ್ತು. ಅದರಂತೆ 1000 ಜನ ಆಹ್ವಾನಿತರು ಭಾಗವಹಿಸಿದ್ದ ಈ ಸಂವಾದ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ, ಸ್ವಯಂ ಸೇವಾ ಸಂಸ್ಥೆಗಳ ಶಾಲಾ ಅಭಿವೃದ್ಧಿ ಸಮಿತಿಗಳ ಪ್ರತಿನಿಧಿಗಳು ಭಾಗವಹಿಸಿದ್ದು, ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ನೀಡಿರುತ್ತಾರೆ.

ಅಲ್ಲದೆ ಈ ಸಾರ್ವಜನಿಕ ಮುಕ್ತ ಸಂವಾದದ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳು ದಿನಾಂಕ: 30.11.2015ರಿಂದ 07.12.2015ರವರೆಗೆ ಸಾರ್ವಜನಿಕ ಸಮಾಲೋಚನೆ ಸಭೆ ನಡೆಸಿ ಭಾಗವಹಿಸಿದವರಿಂದ ಕರಡು ನೀತಿಯ ಬಗ್ಗೆ ಮಾಹಿತಿಯನ್ನು ಪಡೆಯಲಾಗಿದೆ.

ಸದರಿ ಸಂವಾದದ ನಂತರ ಸಾರ್ವಜನಿಕರ ಅಭಿಪ್ರಾಯ ಹಾಗೂ ವಿಷಯ ತಜ್ಞರ ಅಭಿಪ್ರಾಯದಂತೆ ಕರಡು ನೀತಿಯನ್ನು ಮಾರ್ಪಡಿಸಲಾಗಿದೆ.

ಪರಿಷ್ಕೃತ ಕರಡು ನೀತಿಯಲ್ಲಿ 2 ಭಾಗಗಳಿದ್ದು, ಭಾಗ–1 ಮತ್ತು ಭಾಗ–2 ಒಳಗೊಂಡಿರುತ್ತದೆ.

ಪರಿಷ್ಕೃತ ಕರಡು ನೀತಿಯ ಭಾಗ–1 :ಇದನ್ನು **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ"** ಎಂದು ಕರೆಯಲಾಗುವುದು. ಇದು ರಾಜ್ಯದಲ್ಲಿ ಯಾವುದೇ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ, ಮಕ್ಕಳ ರಕ್ಷಣೆಗಾಗಿ ಕಾರ್ಯ ನಿರ್ವಹಿಸುವವರಿಗೆ ಮಾರ್ಗಸೂಚಿಯಾಗಿರುತ್ತದೆ. ಈ ಭಾಗದಲ್ಲಿ ನೀತಿಯ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿದೆ.

ಪರಿಷ್ಕೃತ ಕರಡು ನೀತಿಯ ಭಾಗ–2: ಇದನ್ನು **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣೆ ನೀತಿಯಡಿ ಶಿಕ್ಷಣ ಸಂಸ್ಥೆಗಳಿಗೆ ಕಾರ್ಯಾಚರಣೆ ಮಾರ್ಗಸೂಚಿಗಳು ಮತ್ತು ವಿಧಾನಗಳು"** ಎಂದು ಕರೆಯಲಾಗಿದೆ.

ಶಾಲೆಗಳು ತಮ್ಮದೇ ಆದ ಮಕ್ಕಳ ಸುರಕ್ಷಾ ಕ್ರಮ/ನೀತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹ ಕರಡು ಸುರಕ್ಷಾ ನೀತಿಯು ಅವಕಾಶ ಕಲ್ಪಿಸಿರುತ್ತದೆ.

ಕರ್ನಾಟಕದ ಶೈಕ್ಷಣಿಕ ಸಂಸ್ಥೆಗಳಲ್ಲಿನ ಆಡಳಿತ ಮಂಡಳಿಗಳು, ಶಿಕ್ಷಕರು ಮತ್ತು ಪೋಷಕರಿಗೆ ಮಕ್ಕಳ ಸುರಕ್ಷೆ ಮತ್ತು ರಕ್ಷಣೆ ಕುರಿತಂತೆ ಜವಾಬ್ದಾರಿ ಹಂಚಿಕೆಯ ಅಂಶವನ್ನು ಮಕ್ಕಳ ಸುರಕ್ಷಾ ನೀತಿಯು ಪರಿಗಣಿಸುತ್ತದೆ.

ಕರಡು ನೀತಿಯಲ್ಲಿ ವಿವಿಧ ಭಾಗಿದಾರ ಇಲಾಖೆಗಳು ಹಾಗೂ ವಾರ್ತಾ ಇಲಾಖೆಗಳಂತಹ **ಪ್ರಮುಖ ಇಲಾಖೆಗಳು ನಿರ್ವಹಿಸಬೇಕಾದ ಪಾತ್ರಗಳು ಮತ್ತು ಜವಾಬ್ದಾರಿಗಳು, ಮಾಧ್ಯಮದ ನೀತಿ ಸಂಹಿತೆ ಹಾಗೂ ಘಟನೆ ನಂತರ ವಹಿಸಬೇಕಾದ ಕ್ರಮಗಳು, ಮೇಲ್ವಿಚಾರಣೆ ಹಾಗೂ ಮಾಹಿತಿ ಸಂಗ್ರಹಣೆಗಾಗಿ ಅವಶ್ಯಕ ಉಪಕರಣಗಳ ಅಳವಡಿಕೆ, ಮತ್ತು ದಂಡನೆ/ಶಿಕ್ಷೆಯ ಕ್ರಮಗಳ ಬಗ್ಗೆ ತಿಳಿಸಲಾಗಿದೆ.**

ಒಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳಿಂದ ಸಕಾರಾತ್ಮಕ ಅಭಿಪ್ರಾಯ ಬಂದಿರುತ್ತದೆ. ಹಾಗೂ ಈ ನೀತಿಯ ಅನುಷ್ಠಾನ ಮಾಡುವ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ಸಲಹೆ ನೀಡಿರುತ್ತಾರೆ. ಸಂವಿಧಾನದಲ್ಲಿ ಉಲ್ಲೇಖಿಸಿರುವ ಮಕ್ಕಳ ಹಕ್ಕುಗಳ ರಕ್ಷಣೆ ಸರ್ಕಾರದ ಮತ್ತು ಸಮಾಜದ ಜವಾಬ್ಧಾರಿಯಾಗಿರುವುದರಿಂದ ಮಕ್ಕಳ ರಕ್ಷಣೆಗಾಗಿ ಒಂದು ಸಮಗ್ರ ನೀತಿಯನ್ನು ರಚಿಸಲು ಸರ್ಕಾರ ಬದ್ದವಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮಮಇ 259 ಮಭಾಬ 2014, ಬೆಂಗಳೂರು, ದಿನಾಂಕ: 30.04.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ** 2016ನ್ನು ಅನುಬಂಧದಲ್ಲಿ ಇರುವಂತೆ ರಚಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ<br>ಮತ್ತು ಅವರ ಹೆಸರಿನಲ್ಲಿ<br>(ಸಂಧ್ಯಾ ಎಲ್. ನಾಯಕ್)<br>ಸರ್ಕಾರದ ಅಧೀನ ಕಾರ್ಯದರ್ಶಿ–1,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ<br>ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ<br>ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಕೆಂಗೇರಿ ಪೋಸ್ಟ್, ಬೆಂಗಳೂರು–ಮುಂದಿನ ರಾಜ್ಯ ಪತ್ರದಲ್ಲಿ ಇದನ್ನು ಪ್ರಕಟಿಸಿ 2000 ಪ್ರತಿಗಳನ್ನು ಈ ಇಲಾಖೆಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನಸೌಧ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನಸೌಧ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ.
6. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
8. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.
9. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
10. ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಯುಕ್ತರ ಮುಖಾಂತರ)
11. ಎಲ್ಲಾ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು (ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಮುಖಾಂತರ.)
12. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕೃಷಿಭವನ, ನೃಪತುಂಗ ರಸ್ತೆ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು.
14. ವಾರ್ತಾಧಿಕಾರಿ, ವಾರ್ತಾ ಇಲಾಖೆ.
15. ಎಲ್ಲಾ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.(ನಿರ್ದೇಶಕರ ಮುಖಾಂತರ)
16. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಕಾವಲು ಸಮಿತಿಗಳ ಎಲ್ಲಾ ಸದಸ್ಯರು (ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರ ಮುಖಾಂತರ.)
17. ಶಾಖಾರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

**1.** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

**2.** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತಕಾರ್ಯದರ್ಶಿ.

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಕಾ.ಸೂ. 008 – ಪ್ರತಿಗಳು–100–ಪಿ2